UNIVERSAL LIBRARY
OU_202100
UNIVERSAL LIBRARY

# ಶಿಕ್ಷಣದ ಮೂಲತತ್ತ್ವಗಳು.

202010

ಶ. ನಾ. ಅಮೀನಭಾವಿ

MANOHARA GRANTHA BHANDAR
DHARWAR.

ಪ್ರಾಥಮಿಕ ಶಿಕ್ಷಣ ಮಾಲೆ, ಪುಷ್ಪ ೧.

# ಶಿಕ್ಷಣದ ಮೂಲತತ್ತ್ವಗಳು

★

ಲೇಖಕರು :

**ತಮ್ಮಾಜಿ ನಾರಾಯಣ ಅಮೀನಭಾವಿ**

ಪೆನಶನರ, ಉಪಶಿಕ್ಷಕ ಹೆಣ್ಣುಮಕ್ಕಳ ಟ್ರೇನಿಂಗ ಕಾಲೇಜ, ಧಾರವಾಡ.

ಪ್ರಕಾಶಕರು :

**ಪ್ರಾಥಮಿಕ ಶಿಕ್ಷಣ ಪ್ರಸಾರ ಮಂಡಲ, ಧಾರವಾಡ**

೧೦೦೦ ಪ್ರತಿಗಳು]        ೧೯೩೯        [ ಬೆಲೆ ೧-೦-೦

ಮುದ್ರಕರು :
ಖಂ. ರಾ. ಭಿಸೆ,
ಕರ್ನಾಟಕ ಪ್ರಿಂಟಿಂಗ ವರ್ಕ್ಸ,
ಧಾರವಾಡ.

ಪ್ರಕಾಶಕರು :
ಜೆ. ಪಿ. ನಾಯಿಕ, ಬಿ. ಎ. (ಆನರ್ಸ)
ಆನರರಿ ಸೆಕ್ರೆಟರಿ ಪ್ರಾ. ಶಿ. ಪ್ರಸಾರಕರ ಮಂಡಳ
ಆಫೀಸ, ಧಾರವಾಡ.

## ವೈ. ಜಿ. ಅಮೀನಭಾವಿ ನಾರಾಯಣರಾಯರು, B. Sc., B. E.

ಸುಪರವಾಯಿಝರ ಸಕ್ಕರ ಬರಾಜ, ಜಿಲ್ಲಾ ಲಾರಖಾನಾ, ಸಿಂಧ



ಜನ್ಮ
೬ನೆಯ ನೊವೆಂಬರ ೧೯೦೩ ]

ಮರಣ
[ ೧೯ನೆಯ ಸಪ್ಟಂಬರ ೧೯೪೩.

# ಅರ್ಪಣಪತ್ರಿಕೆ

ಪರಪ್ರಾಂತಗಳಲ್ಲಿ ತಮ್ಮ ತಾಯ್ನಾಡಿನ ಕೀರ್ತಿಯನ್ನು ಬೆಳಗಲು ಸಾಹಸಪಟ್ಟವರಲ್ಲಿ ನನ್ನ ಹಿರಿಯಮಗ, ವೈ. ಚಿ. ಅಮ್ಮಿನಭಾವಿ ನಾರಾಯಣರಾಯನು ಒಬ್ಬನು. ಈತನು ಅನೇಕ ಪ್ರಕಾರದ ಕಷ್ಟಗಳನ್ನು ಅನುಭವಿಸಿ ವಿದ್ಯಾಭ್ಯಾಸಮಾಡಿ B. SC. & B. E. ಪರೀಕ್ಷೆಗಳಲ್ಲಿ ತೇರ್ಗಡೆಹೊಂದಿ ಸಿಂಧಪ್ರಾಂತದ ಸಕ್ಕರ ಬರಾಜದಲ್ಲಿ ಸುಪರವಾಯಿಝುರನಾಗಿ ನೇಮಿಸಲ್ಪಟ್ಟಿದ್ದನು. ಅಲ್ಲಿ ತನ್ನ ಕೆಲಸವನ್ನು ಉತ್ತಮ ರೀತಿಯಿಂದ ಮಾಡಿ ಮಾನ್ಯತೆಯನ್ನು ಪಡೆದಿದ್ದನು. ಆದರೆ ನಮ್ಮ ದುರ್ದೈವದಿಂದ ಕರ್ನಾಟಕ ಮಾತೆಯ ಸೇವೆಗೆ ತಿರಗಿ ಬಾರದೆ ೩೦ ವರ್ಷದ ಚಿಕ್ಕವಯಸ್ಸಿನಲ್ಲಿಯೇ ವಿಷಮಜ್ವರದ ಬಾಯಿಗೆ ತುತ್ತಾಗಿ ನಮ್ಮೆಲ್ಲರಿಗೆ ಚಿರದುಃಖವನ್ನುಂಟುಮಾಡಿದನು; ಈಶ್ವರೇಚ್ಛೆಯನ್ನು ಮೀರುವವರಾರು !! ಮುಂದೆ ಆತನು ತೋರಿಸಿದ ಸಾಹಸದ ಮಾರ್ಗವನ್ನೇ ಅವನ ತಮ್ಮಂದಿರು ಅನುಸರಿಸಿ ದೂರದೂರದ ಪ್ರಾಂತಗಳಲ್ಲಿ ಕನ್ನಡಮಾತೆಯ ಹೆಸರನ್ನು ಮುಂದೆ ತಂದಿರುವರು. ಇದಲ್ಲವೆ ತತ್ವನಿಷ್ಠೆ !! ಅವರಲ್ಲಿ ಒಬ್ಬನು ಮುಂಬಯಿ ವಿಶ್ವವಿದ್ಯಾನಿಲಯದ B. E. ಪರೀಕ್ಷೆಯಲ್ಲಿ ೧ನೆಯ ನಂಬರು ಪಡೆದಿರುವನು. ಇವರಿಗೆ ಮಾರ್ಗದರ್ಶಕನಾದ ಆ ಸುಪುತ್ರನ ಹೆಸರು ಕನ್ನಡನಾಡಿನಲ್ಲಿ ಆದರ್ಶವಿದ್ಯಾರ್ಥಿಯೆಂದು ಚಿರವಾಗಿ ಉಳಿಯಲೆಂದು ಹಾರೈಸುವೆನು. ಈ ಪುಸ್ತಕವನ್ನು ಆತನ ಆತ್ಮಕ್ಕೆ ಸಮರ್ಪಿಸಿದ್ದೇನೆ.

ಗ್ರಂಥಕರ್ತೃ

# ಪ್ರಸ್ತಾವನೆ

ಕಸೀದೆಯನ್ನು ಹಾಕುವ ಹೆಣ್ಣುಮಕ್ಕಳು ಅರಿವೆಯ ಹಾಸು ಹೊಕ್ಕುಗಳನ್ನು ಅರಿತುಕೊಂಡು ಅವುಗಳಲ್ಲಿ ಬೇರೆ ಬೇರೆ ಒಣ್ಣದ ಸೂಕ್ಷ್ಮ ರೇಶಿಮೆಯ ಎಳೆಗಳನ್ನು ತುಂಬಿ ಸುಂದರವಾದ ಹೂವುಗಳನ್ನೂ ಗಿಡಬಳ್ಳಿಗಳನ್ನೂ ಪ್ರಾಣಿಗಳನ್ನೂ ರೂಪಿಸಿ ತೋರಿಸುವಂತೆ ಶಿಕ್ಷಕರು ವಿದ್ಯಾರ್ಥಿಗಳ ಮನಸಿನ ಸಹಜ ಪ್ರವೃತ್ತಿಗಳನ್ನೂ ವಿಚಾರವಿಕಾರಗಳನ್ನೂ ಅರಿತುಕೊಂಡು ಅವುಗಳಿಗನುಸರಿಸಿ ಪಾಠಗಳನ್ನು ರಚಿಸಿಕೊಂಡು ಅವರಲ್ಲಿ ಬೀಜರೂಪದಿಂದಿರುವ ನಾನಾವಿಧ ಶಕ್ತಿಗಳನ್ನು ಹೊರಕ್ಕೆ ತಂದು ಅವುಗಳ ಸಹಾಯ್ಯದಿಂದ ಜಗತ್ತಿನಲ್ಲಿ ಕರ್ತೃತ್ವಶಾಲಿಗಳಾಗು ವಂತೆ ಮಾಡುವುದೇ ಶಿಕ್ಷಣವು. ಶಿಕ್ಷಣದ ಮೂಲತತ್ವಗಳ ವಿವೇಚನ ವನ್ನು ಮಾಡುವುದೇ ಈ ಪುಸ್ತಕವನ್ನು ಬರೆಯುವ ಉದ್ದೇಶವು.

ಸದ್ಯಕ್ಕೆ ಕಾಂಗ್ರೆಸ ಸರಕಾರದವರು ಅನೇಕ ಮುಖವಾಗಿ ಪ್ರಾಥ ಮಿಕ ಶಿಕ್ಷಣ ಪ್ರಸಾರಕಾರ್ಯವನ್ನು ಕೈಕೊಂಡಿರುವರು. ಲಕ್ಷಗಟ್ಟಲೆ ಹಣವನ್ನು ವೆಚ್ಚಮಾಡಲು ಮುಂಗಡ ಪತ್ರಿಕೆಯಲ್ಲಿ ಏರ್ಪಾಡು ಮಾಡಿ ರುವರು. ಸಣ್ಣಪುಟ್ಟ ಹಳ್ಳಿಗಳಲ್ಲಿಯೂ ಸಾಲೆಗಳು ಸ್ಥಾಪಿಸಲ್ಪಟ್ಟಿರು ವುವು. ಇದು ಆನಂದದ ಸಂಗತಿಯು. ಆದರೆ ಅಲ್ಲಿ ಕೆಲಸಮಾಡುವ ಶಿಕ್ಷಕರಿಗೂ ಟ್ರೇ. ಕಾ. ವಿದ್ಯಾರ್ಥಿಗಳಿಗೂ ಶಿಕ್ಷಣದ ಮೂಲತತ್ವಗಳ ಜ್ಞಾನ ಸಂಪಾದಿಸುವುದಕ್ಕೆ ಇಲ್ಲಿ ಒಂದಾದರೂ ಪುಸ್ತಕವಿದ್ದಿಲ್ಲ. ಈ ಕೊರತೆಯನ್ನು ದೂರ ಮಾಡಲೋಸುಗ ಅನೇಕ ಶಿಕ್ಷಣ ಶಾಸ್ತ್ರಜ್ಞರು ಬೇರೆ ಬೇರೆ ಭಾಷೆಗಳಲ್ಲಿ ಬರೆದ ಪುಸ್ತಕಗಳ ಆಧಾರದಿಂದಲೂ ಸ್ವಂತದ ಅನುಭವದಿಂದಲೂ ಈ ಪುಸ್ತಕವನ್ನು ಬರೆದಿದ್ದೇನೆ. ನಾನು ಆಧಾರವಾಗಿ ತೆಗೆದುಕೊಂಡ ಗ್ರಂಥಗಳ ಕರ್ತೃಗಳಿಗೆ ಅತ್ಯಂತ ಕೃತಜ್ಞನಾಗಿದ್ದೇನೆ.

ನಿಜವಾಗಿ ವಿಚಾರಮಾಡಿದರೆ ಈ ಪುಸ್ತಕವನ್ನು ಬರೆಯಲು ನನಗೆ ಅಧಿಕಾರವಿಲ್ಲ. ಯಾಕಂದರೆ ನಾನು ಶಿಕ್ಷಣಶಾಸ್ತ್ರದ ಹೆಚ್ಚಿನ ಪರೀಕ್ಷೆ ಯಲ್ಲಿ ತೇರ್ಗಡೆ ಹೊಂದಿದವನಲ್ಲ. ಆದಾಗ್ಯೂ ಹೆಣ್ಣುಮಕ್ಕಳ ಟ್ರೇನಿಂಗ

ಕಾಲೇಜದಂತಹ ಒಂದು ಸಣ್ಣ ಸಂಸ್ಥೆಯಲ್ಲಿ ಶಿಕ್ಷಣಶಾಸ್ತ್ರಜ್ಞರಾದ ಮಿಸ್ ಸ್ಕ್ವೊಲಂಡ ಹಾಗು ಮಿಸ್ ಬ್ಲ್ಯಾಕ್ಸಟನ್ ಈ ಇಬ್ಬರು ಯುರೋಪಿಯನ್ ವಿದುಷಿಯರ ಕೈಕೆಳಗೆ ಸತತವಾಗಿ ಎರಡು ತಪ ಅಂದರೆ ಇಪ್ಪತ್ತುನಾಲ್ಕು ವರ್ಷ ಅನೇಕ ಪ್ರಕಾರದ ಶಿಕ್ಷಣ ವಿಷಯಕ ಕಾರ್ಯಗಳನ್ನು ಮಾಡಿದ್ದಲ್ಲದೆ ಕನ್ನಡ ಶಿಕ್ಷಕೆಯೆಂಬ ತ್ರೈಮಾಸಿಕವನ್ನು ಏಳು ವರ್ಷ ನಡೆಸಿದ್ದೇನೆ. ಅದೇಕಾಲಕ್ಕೆ ನಾನು ಟ್ರೇ. ಕಾ. ದ ಮೊದಲನೆಯ ವರ್ಷದ ವರ್ಗಕ್ಕೆ ಕಲಿಸುತ್ತಿದ್ದ ಶಿಕ್ಷಣ ವಿಷಯವನ್ನು ಕುರಿತು ಆಗಾಗ್ಗೆ ಆ ತ್ರೈಮಾಸಿಕದಲ್ಲಿ ಬರೆದ ಲೇಖಗಳನ್ನು ಒಟ್ಟುಗೂಡಿಸಿ ಹಿಂದಿನಿಂದ “ ಶಿಕ್ಷಣಸಾರ ” ವೆಂಬ ಪುಸ್ತಕರೂಪದಿಂದ ಪ್ರಸಿದ್ಧಮಾಡಿದ್ದೇನು. ಈಗ ಟ್ರೇನಿಂಗ ಕಾಲೇಜದ ಅನೇಕ ವಿದ್ಯಾರ್ಥಿಗಳ ಬೇಡಿಕೆಯಿಂದಲೂ ಕೆಲವು ಮಿತ್ರರ ಸಲಹೆಯಿಂದಲೂ, ಆ ಪುಸ್ತಕದಲ್ಲಿ ಈಗಿನ ಶಿಕ್ಷಣದ ಹೊಸ ವಿಚಾರಗಳಿಗನುಸರಿಸಿ ಸುಧಾರಣೆಗಳನ್ನು ಮಾಡಿದ್ದಲ್ಲದೆ ಎಷ್ಟೋ ಹೊಸ ವಿಷಯಗಳನ್ನು ಸೇರಿಸಿ ಶಿಕ್ಷಕರಿಗೂ ಟ್ರೇನಿಂಗ ಕಾಲೇಜದ ವಿದ್ಯಾರ್ಥಿಗಳಿಗೂ ಉಪಯುಕ್ತವಾಗುವಂತೆ ಬರೆದು ಸಿದ್ಧಮಾಡಿದೆನು. ಇದಲ್ಲದೆ ಈ ಪುಸ್ತಕವು ತಾಯಿತಂದೆಗಳಿಗೂ ತಮ್ಮ ಮಕ್ಕಳ ಸುಧಾರಣೆಗೆ ಸಹಾಯ್ಯಕವಾಗಬಹುದು. ಪುಸ್ತಕವು ಈಗಿನ ಸ್ವರೂಪವನ್ನು ಹೊಂದಲಿಕ್ಕೆ ಇಲ್ಲಿಯ ಟ್ರೇನಿಂಗ ಸ್ಕೂಲಿಗೆ ಕಳೆದ ತಿಂಗಳ ಕೊನೆಯವರೆಗೆ ಮುಖ್ಯಾಧ್ಯಾಪಕರಾಗಿದ್ದ ಶ್ರೀಮಾನ್ ಡಿ. ವ್ಹಿ. ಕಾಳೆಯವರು ನನ್ನ ಮೊದಲಿನ ಪುಸ್ತಕವನ್ನು ಸಂಪೂರ್ಣವಾಗಿ ಓದಿ ಮಾಡಿದ ಸೂಚನೆಗಳೇ ಕಾರಣವೆಂದು ನಾನು ಹೇಳದಿರಲಾರೆನು. ಇಷ್ಟು ಶ್ರಮ ತಕ್ಕೊಂಡದ್ದಕ್ಕಾಗಿ ಅವರಿಗೆ ನಾನು ಉಪಕೃತನಾಗಿದ್ದೇನೆ.

ಈ ಪುಸ್ತಕದ ಕೈ ಬರೆಹದ ಪ್ರತಿಯನ್ನು ಶ್ರೀ. ಮುಧೋಳಕರ ವಾಮನರಾಯರೂ, ಶ್ರೀ. ಕೊಪ್ಪಳ ಗುಂಡೇರಾಯರೂ ಶ್ರೀ. ಸಾಲಿ ರಾಮರಾಯರೂ ಓದಿ ತಕ್ಕ ಸೂಚನೆಗಳನ್ನು ಮಾಡಿದ್ದಕ್ಕಾಗಿ ಆ ಎಲ್ಲ ಮಹನೀಯರಿಗೆ ಲೇಖಕನು ಕೃತಜ್ಞನಾಗಿದ್ದಾನೆ. ಶ್ರೀ. ಕೊಪ್ಪಳ ಗುಂಡೇರಾಯರು ಸಹಜಪ್ರವೃತ್ತಿಗಳ ವಿಷಯವಾಗಿ ತಾವು ಬರೆದ

ಒಂದು ಲೇಖವನ್ನು ಆಧಾರಕ್ಕಾಗಿ ಕೊಟ್ಟು ಸಹಾಯ್ಯ ಮಾಡಿದ್ದನ್ನು ನಾನು ಮರೆಯಲಾರೆನು.

ಈ ಮೇರೆಗೆ ಪುಸ್ತಕವು ಬರೆದು ಸಿದ್ಧವಾದ ಮೇಲೆ ಅದನ್ನು ಅಚ್ಚು ಹಾಕಿಸುವುದಕ್ಕೆ ಅನೇಕ ಪ್ರಯತ್ನಗಳು ಮಾಡಲ್ಪಟ್ಟವು. ಕಟ್ಟ ಕಡೆಗೆ ಶ್ರೀಮಾನ್ ಜೇ. ಪಿ. ನಾಯಿಕ ಆನರರಿ ಸೆಕ್ರೆಟರಿ ಪ್ರಾಥಮಿಕ ಶಿಕ್ಷಣ ಪ್ರಸಾರಕ ಮಂಡಲ ಧಾರವಾಡ ಇವರು ಈ ಕಾರ್ಯವನ್ನು ಕೈಕೊಂಡು ಒಮ್ಮೆಲೆ ಕೆಲಸಕ್ಕೆ ಪ್ರಾರಂಭವನ್ನೇ ಮಾಡಿದರು. ಇದಕ್ಕಾಗಿ ಅವರ ಉಪಕಾರವನ್ನು ಸ್ಮರಿಸುವುದು ನನ್ನ ಕರ್ತವ್ಯವಾಗಿದೆ.

ಕರ್ನಾಟಕ ಪ್ರಿಂಟಿಂಗ ಪ್ರೆಸ್ಸಿನ ಮಾಲಕರಾದ ಶ್ರೀ. ಜಠಾರ ವಿಠ್ಠಲರಾಯರು ಒಂದೇ ತಿಂಗಳಲ್ಲಿ ಈ ಪುಸ್ತಕವನ್ನು ಮುದ್ದಾಗಿ ಅಚ್ಚು ಹಾಕಿ ಕೊಟ್ಟದ್ದಕ್ಕಾಗಿ ಅವರಿಗೂ ನಾನು ಕೃತಜ್ಞನಾಗಿದ್ದೇನೆ.

ಶ್ರೀಮಾನ್ ದೇಶಪಾಂಡೆ ಹಣಮಂತರಾಯರು ರಿಟಾಯರ್ಡ ಸೀನಿಯರ ಅ. ಡೆಪೂಟಿ ಎ. ಇನಸ್ಪೆಕ್ಟರ ಧಾರವಾಡ ಇವರು ತಮ್ಮ ವಿಶ್ರಾಂತಿಯ ವೇಳೆಯನ್ನು ವೆಚ್ಚಮಾಡಿ ಅಚ್ಚಿನ ಪ್ರತಿಯನ್ನು ಪೂರ್ಣವಾಗಿ ಓದಿ ಮುನ್ನುಡಿಯನ್ನು ಬರೆದು ಕೊಟ್ಟದ್ದಕ್ಕಾಗಿಯೂ ತಮ್ಮ ‘ ಶಿಕ್ಷಣ ಪದ್ಧತಿ ’ ಎಂಬ ಪುಸ್ತಕದೊಳಗಿನ ‘ಪಾಶ್ಚಾತ್ಯ ಶಿಕ್ಷಣ ಪದ್ಧತಿಗಳು’ ಎಂಬ ಭಾಗವನ್ನು ತೆಗೆದುಕೊಳ್ಳುವುದಕ್ಕೆ ಒಪ್ಪಿಗೆಯನ್ನು ಕೊಟ್ಟದ್ದಕ್ಕಾಗಿಯೂ, ಅವರ ಆಭಾರವನ್ನು ನಾನು ಮನಃಪೂರ್ವಕವಾಗಿ ಮನ್ನಿಸುತ್ತೇನೆ.

ಈ ಪುಸ್ತಕದ ಉಪಯೋಗವು ಪ್ರಾಥಮಿಕ ಶಾಲಾ ಶಿಕ್ಷಕರ ಹಾಗು ಭಾವೀ ರಾಷ್ಟ್ರವಾದ ಚಿಕ್ಕಮಕ್ಕಳ ಪಾಲಕರ ಸೇವೆಗೆ ಸಲ್ಲಲೆಂದು ಜಗದೀಶನನ್ನು ಪ್ರಾರ್ಥಿಸುವ ಹಾಗು

ಸಜ್ಜನರ ಅಡಿಯಾಳಾದ,
**ತ. ನಾ. ಅಮೀನಭಾವಿ.**
ಪೆನಶನರ ಉಪಶಿಕ್ಷಕ ಹೆ. ಟ್ರೇ. ಕಾಲೇಜ,
**ಧಾರವಾಡ.**

# ಮುನ್ನುಡಿ

ಪ್ರಾಂತದ ಆಡಳಿತೆಯು ರಾಷ್ಟ್ರಸಭೆಯವರ ವಶಕ್ಕೆ ಬಂದಂದಿನಿಂದ ಶಿಕ್ಷಣದ ಪ್ರಗತಿಯು ಭರದಿಂದ ನಡೆಯುಹತ್ತಿದೆ. ಹೊಸ ಹೊಸ ಪ್ರಯೋಗಗಳನ್ನು ರೂಢಿಯಲ್ಲಿ ತರಲು ಒಮ್ಮನಸಿನ ಪ್ರಯತ್ನಗಳು ನಡೆದಿವೆ. ಪ್ರಾಥಮಿಕ ಶಿಕ್ಷಣದ ಪ್ರಸಾರ, ಪ್ರೌಢರ ಶಿಕ್ಷಣ, ಉದ್ಯೋಗ, ಕೃಷಿ, ವ್ಯಾಪಾರ ಇವುಗಳ ಶಿಕ್ಷಣ, ವರ್ಧಾ ಶಿಕ್ಷಣ, ಹೀಗೆ ಅನೇಕ ವಿಧವಾಗಿ ಶಿಕ್ಷಣ ಸುಧಾರಣೆಯ ಸಾಹಸಗಳು ನಡೆದಿವೆ. ವಿಶೇಷತಃ ಪ್ರಾಥಮಿಕ ಶಿಕ್ಷಣಕ್ಕಾಗಿ ಪ್ರಾಂತಿಕ ಸರಕಾರದವರು ಉದಾರ ಹಸ್ತದಿಂದ ಹಣವನ್ನು ವೆಚ್ಚಮಾಡಲಿಕ್ಕೆ ಸಿದ್ಧರಿದ್ದಾರೆ. ಅದರಂತೆ ಬಜೆಟ್ಟುಗಳಲ್ಲಿ ಹೆಚ್ಚಿನ ವೆಚ್ಚದ ವ್ಯವಸ್ಥೆಯನ್ನು ಮಾಡಿದ್ದಾರೆ. ಹೊಸ ಹೊಸ ಅಧಿಕಾರಿಗಳನ್ನು ಈ ಕಾರ್ಯಕ್ಕಾಗಿ ನಿಯಮಿಸಿದ್ದಾರೆ. ಹೀಗೆ ಶಿಕ್ಷಣಕಾರ್ಯಕ್ಕೆ ಪ್ರೋತ್ಸಾಹವು ಭರದಿಂದ ದೊರೆಯುಹತ್ತಿದೆ. ಹಿಂದಿನ ಕಾಲದಲ್ಲಿ ಕಂಡುಬರುತ್ತಿದ್ದ ನಿರ್ಬಂಧಗಳು ದೂರಾಗಿವೆ. ಶಿಕ್ಷಕರೆಲ್ಲರೂ ಸರಿಯಾಗಿ ಟ್ರೇನಿಂಗ ಹೊಂದಿದ ಟ್ರೇಂಡರೇ ಇರಬೇಕೆಂಬ ತತ್ವವನ್ನು ರೂಢಿಯಲ್ಲಿ ತರುವ ಯೋಜನೆಗಳು ಪ್ರಾರಂಭವಾಗಹತ್ತಿವೆ. ಟ್ರೇನಿಂಗ ಸಂಸ್ಥೆಗಳಿಗೆ ಹೆಚ್ಚೆಚ್ಚು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳುವುದು ಗೊತ್ತಾಗಿದೆ. ಇಂತಹ ಸುಸಂಧಿಯಲ್ಲಿ ಶಿಕ್ಷಣದ ಉದ್ಯೋಗದಲ್ಲಿ ತಮ್ಮ ಆಯುಷ್ಯವನ್ನು ಕಳೆದು ಉತ್ತಮ ತರದ ಅನುಭವವನ್ನು ಪಡೆದ ನಮ್ಮ ಸ್ನೇಹಿತರಾದ ಶ್ರೀ. ತಮ್ಮಾಜಿ ನಾರಾಯಣ ಅಮೀನಭಾವಿ ಮಾಸ್ತರರು ಬರೆದ 'ಶಿಕ್ಷಣದ ಮೂಲತತ್ವಗಳು' ಎಂಬ ಪುಸ್ತಕವು ವಿದ್ಯಾರ್ಥಿಗಳಿಗೆ ಶಿಕ್ಷಣ ವಿಷಯದಲ್ಲಿ ಕೈಗನ್ನಡಿಯಾಗುವುದೆಂದು ನಂಬಿದ್ದೇವೆ.

ಶಿಕ್ಷಣವು ಕೆಲಮಟ್ಟಿಗೆ ಶಾಸ್ತ್ರವೂ ಕೆಲಮಟ್ಟಿಗೆ ಕಲೆಯೂ ಆಗಿರುವುದು. ಆದುದರಿಂದ ಮಾನಸಶಾಸ್ತ್ರದ ಮೂಲತತ್ವಗಳನ್ನು

ಶಿಕ್ಷಕರು ಅರಿಯುವುದು ಅತ್ಯವಶ್ಯವು. ಇಲ್ಲವಾದರೆ ಶರೀರದಂಡನೆ ಯೊಂದೇ ಶಿಕ್ಷಣದ ಸಾಧನವೆಂದು ತಿಳಿದು ಅದರ ಉಪಾಸನೆ ಮಾಡುತ್ತ ಬಾಲಕರ ಮನೋಧರ್ಮಗಳನ್ನು ಅರಿಯದ ಹುಂಬರು ಆವ ಪ್ರಕಾರದ ಶಿಕ್ಷಣವನ್ನು ಕೊಡಬಲ್ಲರು? ಶಿಕ್ಷಣ ಕಲೆಯನ್ನು ಸಂಪಾದಿಸಲಿಕ್ಕೆ ರೂಢಿಯೂ ಪದ್ಧತಿಯೂ ಸರಿಯಾದವುಗಳಿರಬೇಕು. ಹೀಗೆ ಈ ಪುಸ್ತಕ ದಲ್ಲಿ ಶಿಕ್ಷಣಶಾಸ್ತ್ರ ಮತ್ತು ಕಲೆ ಇವುಗಳ ವಿಷಯವಾಗಿ ಸಾಕಷ್ಟು ವಿವೇಚನವು ಇರುವುದು.

ಶಿಕ್ಷಣವು ಸರ್ವಾಂಗಸುಂದರವಾಗಬೇಕಾದರೆ ಬಾಲಕರ ಶಾರೀರಿಕ ಮಾನಸಿಕ ನೈತಿಕ ಶಕ್ತಿಗಳನ್ನು ಸರಿಯಾಗಿ ಬಲಪಡಿಸಬೇಕಾಗುವುದು. ಪ್ರಾಥಮಿಕ ಶಿಕ್ಷಕರು ಬಾಲಕರ ಈ ಮೂರೂ ಶಕ್ತಿಗಳು ಬಲಪಡುವಂತೆ ಪ್ರತಿದಿನದ ವೇಳಾಪತ್ರಿಕೆಯಲ್ಲಿ ತಕ್ಕ ವ್ಯವಸ್ಥೆಯನ್ನು ಮಾಡತಕ್ಕದ್ದು. ಈ ಉದ್ದೇಶವು ಈಡೇರುವಂತೆ ಪ್ರತಿದಿನದ ಪಾಠಗಳನ್ನು ಹೇಗೆ ಸಾಗಿಸ ಬೇಕೆಂಬ ಬಗ್ಗೆ ಈ ಪುಸ್ತಕದಲ್ಲಿ ತಕ್ಕ ಸೂಚನೆಗಳುಂಟು.

ಶ್ರೀ. ಅಮೀನಭಾವಿ ಮಾಸ್ತರರು ಕೆಲವು ವರ್ಷಗಳ ಹಿಂದೆ 'ಶಿಕ್ಷಣ ಸಾರ' ಎಂಬ ಪುಸ್ತಕವನ್ನು ಪ್ರಸಿದ್ಧಿಸಿದ್ದರು. ಅದರಲ್ಲಿಯ ವಿಚಾರ ಗಳನ್ನು ಈಗ ಹೊಸ ವಾತಾವರಣಕ್ಕನುಸರಿಸಿ ವಿಸ್ತರಿಸಿ ಬರೆದಿದ್ದಾರೆ. ಇದಲ್ಲದೆ 'ಶಿಕ್ಷಣಪದ್ಧತಿ' ಎಂಬ ನಮ್ಮ ಪುಸ್ತಕದೊಳಗಿನ ಕೆಲವು ಭಾಗವನ್ನು ಸಮಾವೇಶ ಮಾಡಿದ್ದಾರೆ. ಕರ್ನಾಟಕದಲ್ಲಿ ೫-೬ ಸಾವಿರ ಶಿಕ್ಷಕರೂ ೨-೩ ಸಾವಿರ ಶಾಲೆಗಳೂ ಇದ್ದರೂ ಶಿಕ್ಷಕರ ಮಾರ್ಗ ದರ್ಶಕವಾದ ಪುಸ್ತಕಗಳು ಇಲ್ಲದ್ದರಿಂದ ಶಿಕ್ಷಕರಿಗೆ ಹೊಸ ಹೊಸ ವಿಚಾರಗಳ ಜ್ಞಾನವು ಸಾಕಷ್ಟು ಆಗುತ್ತಿರುವದಿಲ್ಲ. ಈ ಕೊರತೆ ಯನ್ನು ಹೋಗಲಾಡಿಸುವುದಕ್ಕೆ ಮಾಡಿದ ಶ್ರೀ. ಅಮೀನಭಾವಿಯವರ ಪ್ರಯತ್ನವು ಅಭಿನಂದನೀಯವಾಗಿದೆ. ಹೀಗೆಯೇ ಶಿಕ್ಷಕರ ಶಿಕ್ಷಣ ವನ್ನು ಕೈಕೊಂಡ ಮೇಲ್ತರಗತಿಯ ಶಿಕ್ಷಕರು ಈ ಪ್ರಕಾರ ಹೊಸ ಹೊಸ ಪುಸ್ತಕಗಳನ್ನು ಬರೆದು ಶಿಕ್ಷಣವು ಯಶಸ್ವಿಯಾಗುವಂತೆ ಮಾಡುವರೆಂದು ನಂಬುತ್ತೇವೆ.

ಪ್ರಾಥಮಿಕ ಶಿಕ್ಷಣವು ಸಾರ್ವತ್ರಿಕವಾಗಬೇಕಾದರೆ ಒತ್ತಾಯ ಮಾಡದೆ ಸಾಧ್ಯವಾಗದು. ಒತ್ತಾಯದ ಶಿಕ್ಷಣವನ್ನು ಸಾಗಿಸಲಿಕ್ಕೆ ಬಹಳ ದ್ರವ್ಯವೂ ತಕ್ಕ ವ್ಯವಸ್ಥೆಯೂ ಸರಿಯಾದ ಆಗ್ರಹವೂ ಬೇಕು. ಮತ್ತು ಜನರ ಸಾಂಪತ್ತಿಕ ಸ್ಥಿತಿಯು ಸುಧಾರಿಸಿದಂತೆ ಶಿಕ್ಷಣದ ಆವಶ್ಯಕತೆಯು ಅವರಿಗೆ ತೋರಹತ್ತುವುದು. ಆದುದರಿಂದ ಮೊದಲು ಪಟ್ಟಣಗಳಲ್ಲಿ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಿದರೆ ಅದು ಯಶಸ್ವಿಯಾಗುವುದು. ಮುಂದೆ ಕ್ರಮೇಣ ಅದರ ವ್ಯಾಪಕತೆಯನ್ನು ಹೆಚ್ಚಿಸಿ ಹಳ್ಳಿಗಳಿಗೆ ಅನ್ವಯಿಸಬೇಕು. ಬಡೋದೆ, ಮೈಸೂರು ಮೊದಲಾದ ಮುಂದರಿದ ಸಂಸ್ಥಾನಗಳಲ್ಲಿ ಒತ್ತಾಯದ ಶಿಕ್ಷಣವನ್ನು ಪ್ರಾರಂಭಿಸಿ ಬಹಳ ದಿವಸಗಳಾದರೂ ಅದು ಯಶಸ್ವಿಯಾಗದಿರಲಿಕ್ಕೆ ಪ್ರಜೆಗಳ ಬಡತನವೇ ಕಾರಣವಾಗಿದೆ. ಬಾಲಕರನ್ನು ಶಾಲೆಗೆ ಕಳಿಸದಿದ್ದದ್ದಕ್ಕೆ ಪಾಲಕರಿಗೆ ಮಾಡಿದ ದಂಡದ ಹಣವು ಲಕ್ಷದ ವರೆಗೆ ಏರಿದೆ. ಅದನ್ನು ಕೊಡುವ ಶಕ್ತಿಯು ಇಲ್ಲದ್ದರಿಂದ ಬಡೋದೆ ಸರಕಾರದವರು ಮೊನ್ನೆ ಶ್ರೀ. ಪ್ರತಾಪಸಿಂಹ ಮಹಾರಾಜರ ರಾಜ್ಯಾಭಿಷೇಕದ ಕಾಲಕ್ಕೆ ದಂಡದ ಹಣವನ್ನು ಸೂಟು ಬಿಟ್ಟರು. ಜನರ ಅಭಿಪ್ರಾಯದಂತೆ ಈಗಿನ ಶಿಕ್ಷಣವು ಸಾಕಷ್ಟು ಉಪಯುಕ್ತವಿಲ್ಲೆಂದು ತೋರುತ್ತದೆ. ಆದುದರಿಂದ ಅದರಲ್ಲಿ ತಕ್ಕ ಹೆಚ್ಚು ಕಡಿಮೆ ಮಾಡಿ ಜನರಿಗೆ ಉಪಯುಕ್ತವಾಗುವಂತೆ ಮಾಡುವುದು ಅವಶ್ಯವಿದೆ. ಒಟ್ಟಿಗೆ ಬಾಲಕರು ಶಿಕ್ಷಣ ಹೊಂದಿದ ಮೇಲೆ ಸ್ವಾವಲಂಬಿಗಳೂ, ಧನೋತ್ಪಾದನ ಮಾಡುವವರೂ ಉದ್ಯೋಗಿಗಳೂ ಆದರೆ ದೇಶದ ಭಾಗ್ಯೋದಯವು ಲಭಿಸುವುದು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಮಹಾತ್ಮಾ ಗಾಂಧಿಯವರ ಸೂಚನೆಯಂತೆ ಸಿದ್ಧಪಡಿಸಿದ ವರ್ಧಾ ಶಿಕ್ಷಣಯೋಜನೆಯು ಒಂದು ಉತ್ತಮತರದ ಪ್ರಯೋಗವಾಗಿದೆ. ಈ ಪ್ರಯೋಗವನ್ನು ರೂಢಿಯಲ್ಲಿ ತರಲಿಕ್ಕೆ ಹೆಚ್ಚಿನ ವಿದ್ಯೆಯನ್ನು ಸಂಪಾದಿಸಿದ ಉತ್ಸಾಹವುಳ್ಳ ಕಲ್ಪಕ ಶಿಕ್ಷಕರು ಬೇಕಾಗುವರು. ಹೀಗೆ ನಮ್ಮ ದೇಶದ ಶಿಕ್ಷಣದ ಇತಿಹಾಸದಲ್ಲಿ ಇದೇ ಪ್ರಥಮ ಸಂಪೂರ್ಣ "ಸ್ವದೇಶಿ" ಪದ್ಧತಿಯು. ಇಷ್ಟು ದಿವಸಗಳ

ವರೆಗೆ ನಾವು ಪಾಶ್ಚಾತ್ಯ ಪದ್ಧತಿಗಳನ್ನು ಅನುಸರಿಸುತ್ತ ಬಂದಿರುವೆವು. ಆದುದರಿಂದ ಹೊಸ ಹೊಸ ಪ್ರಯೋಗಗಳನ್ನು ಯಶಸ್ವಿಯಾಗುವಂತೆ ಮಾಡುವ ಶಿಕ್ಷಣ ಸುಧಾರಕರ ಅವಶ್ಯಕತೆಯು ಬಹಳವದೆ. ಅಂತಹ ಶಿಕ್ಷಣ ಸುಧಾರಕರು ನಮ್ಮಲ್ಲಿ ಉಂಟಾಗಲೆಂದು ನಮ್ಮ ಉತ್ಕಟವಾದ ಹಂಬಲ.

ಧಾರವಾಡ
೨ ನೆಯ ಜೂನ ೧೯೩೭.

**ದೇಶಪಾಂಡೆ ಹನುಮಂತರಾವ**
**ಗೋವಿಂದರಾವ**
ರಿಟಾಯರ್ಡ ಸೀ. ಅ. ಡೆ. ಇ. ಜಿಲ್ಹಾ, ಧಾರವಾಡ

# ಅನುಕ್ರಮಣಿಕೆ


| ಪ್ರಕರಣಗಳು. | ವಿಷಯ. | ಪುಟಗಳು. |
|---|---|---|
| ೧. | ಉಪೋದ್ಘಾತ ಶಿಕ್ಷಣದ ಉದ್ದೇಶಗಳು .. | ೧ – ೧೨ |
| ೨. | ಮಕ್ಕಳ ಶಾರೀರಿಕ ಮಾನಸಿಕ ಬೆಳವಣಿಗೆ .. | ೧೩– ೨೫ |
| ೩. | ಬೌದ್ಧಿಕ ಶಿಕ್ಷಣ—ಮನಸ್ಸೂ ಅದರ ವ್ಯಾಪಾರಗಳೂ ಇಂದ್ರಿಯಗಳೂ ಅವುಗಳ ಶಿಕ್ಷಣವೂ .. | ೨೬– ೩೬ |
| ೪. | ಬೌದ್ಧಿಕ ಶಿಕ್ಷಣ—ಮನೋವಿಕಾಸ .. | ೩೭– ೫೧ |
| ೫. | ಸಹಜಪ್ರವೃತ್ತಿಗಳು—ಸಾಮಾನ್ಯವಿಚಾರ .. | ೫೨– ೬೩ |
| ೬. | ಶಿಕ್ಷಣವೂ ಸಹಜಪ್ರವೃತ್ತಿಗಳೂ .. | ೬೪– ೭೪ |
| ೭. | ಕೃತಿ ಪ್ರೇಮ .. .. .. | ೭೫– ೮೪ |
| ೮. | ಸಂಪಾದನ ಪ್ರವೃತ್ತಿ .. .. | ೮೫-- ೯೦ |
| ೯. | ಆಟಗಳು .. .. .. | ೯೧–೧೦೦ |
| ೧೦. | ನೈತಿಕ ಶಿಕ್ಷಣ ( ಶೀಲಪರಿಪೋಷಣ ) .. | ೧೦೧–೧೧೨ |
| ೧೧. | ಶಾರೀರಿಕ ಶಿಕ್ಷಣ .. .. | ೧೧೩–೧೨೬ |
| ೧೨. | ಸಾಲೆಯ ತಿದ್ದುವಿಕೆ .. .. | ೧೨೭–೧೪೦ |
| ೧೩. | ಪಾಠದ ಸಿದ್ಧತೆ .. .. .. | ೧೪೧–೧೫೫ |
| ೧೪. | ಶಿಕ್ಷಣದ ಸಾಧನಗಳು .. .. | ೧೫೬–೨೦೩ |

| ಪ್ರಕರಣಗಳು. | ವಿಷಯ. | ಪುಟಗಳು. |
| --- | --- | --- |
| ೧೫. | ಶಿಕ್ಷಣದ ಸಾಧನಗಳು<br>I ಶಿಕ್ಷಕನ ವ್ಯಕ್ತಿತ್ವ. .. | .. ೧೬೧–೧೭೦ |
| ೧೬. | ಶಿಕ್ಷಣದ ಸಾಧನಗಳು<br>II (ಅ) ಪ್ರಶ್ನೆಗಳು. .. | .. ೧೭೧–೧೮೧ |
| ೧೭. | ಶಿಕ್ಷಣದ ಸಾಧನಗಳು<br>II (ಬ) ಉತ್ತರಗಳು. .. | .. ೧೮೨–೧೮೯ |
| ೧೮. | ಶಿಕ್ಷಣದ ಸಾಧನಗಳು<br>III ಕಪ್ಪು ಹಲಗೆಯ ಉಪಯೋಗ | .. ೧೯೦–೨೦೩ |
| ೧೯. | ಪಾಶ್ಚಾತ್ಯ ಶಿಕ್ಷಣಶಾಸ್ತ್ರಜ್ಞರ ಪದ್ಧತಿಗಳೂ<br>ವರ್ಧಾ ಶಿಕ್ಷಣದ ಯೋಜನೆಯೂ | .. ೨೦೪–೨೨೫ |
| | ೧. ಬಾಲೋದ್ಯಾನ ಪದ್ಧತಿ .. | .. ೨೦೪–೨೦೮ |
| | ೨. ಮಾಂಟೆಸರಿ ಪದ್ಧತಿ .. | .. ೨೦೯–೨೧೪ |
| | ೩. ಡಾಲ್ಟನ ಪದ್ಧತಿ .. | .. ೨೧೪–೨೧೭ |
| | ೪. ಯೋಜನಾ ಪದ್ಧತಿ .. | .. ೨೧೭–೨೨೧ |
| | ೫. ಕ್ರೀಡನ ಪದ್ಧತಿ .. | .. ೨೨೧–೨೨೩ |
| | ೬. ವರ್ಧಾ ಶಿಕ್ಷಣ ಯೋಜನೆ | .. ೨೨೪–೨೨೫ |
| ೨೦. | ಉಪಸಂಹಾರ .. .. | .. ೨೨೬–೨೨೮ |

# ಶಿಕ್ಷಣದ ಮೂಲತತ್ವಗಳು

## ೧ನೆಯ ಪ್ರಕರಣ

### ಉಪೋದ್ಘಾತ—ಶಿಕ್ಷಣದ ಉದ್ದೇಶಗಳು.

ಒಂದು ತೋಟದಲ್ಲಿ ಒಂದು ಮಾವಿನ ಸಸಿಯನ್ನು ನೋಡುತ್ತೇವೆ. ಅದರ ಬೊಡ್ಡೆಯು ಇನ್ನೂ ಬಹಳ ಸಣ್ಣದಾಗಿರುವುದು; ನಾಲ್ಕೈದು ಕೋಮಲವಾದ ಚಿಗರೆಲೆಗಳು ಇರುವವು. ಮಂದಗಾಳಿಯಿಂದ ಸಹ ಅವು ಅಲ್ಲಾಡುತ್ತಿರುವುವು. ತೋಟಿಗನು ಅದಕ್ಕೆ ಹೊತ್ತುಹೊತ್ತಿಗೆ ನೀರು ಹಣಿಸುವುದು, ಗೊಬ್ಬರ ಹಾಕುವುದು ಮುಂ. ಕಾರ್ಯಗಳನ್ನು ಬಹಳ ಎಚ್ಚರದಿಂದ ಮಾಡುತ್ತಿರುವನು. ಕೆಲವು ವರ್ಷಗಳಾದ ಮೇಲೆ ನಾವು ಪುನಃ ಆ ತೋಟಕ್ಕೆ ಹೋದಾಗ ನೋಡಲು ಮೊದಲಿನ ಸಸಿಯು ಈಗ ಬೆಳೆದು ದೊಡ್ಡಮರವಾಗಿರುತ್ತದೆ. ದಟ್ಟವಾದ ಅದರ ನೆರಳನ್ನೂ ನಾಲ್ಕೂದಿಕ್ಕಿಗೆ ಹಬ್ಬಿದ ಅದರ ಟೊಂಗೆಗಳನ್ನೂ ಕಂಡು ನಮಗೆ ಬಹಳ ಆಶ್ಚರ್ಯವಾಗುತ್ತದೆ. ಆ ಮರದ ಮೇಲೆ ಅಲ್ಲಲ್ಲಿಗೆ ಜೋತಾಡುತ್ತಿರುವ ಹಸರು, ಹಳದಿ, ಕೇಸರೀವರ್ಣದ ಕಾಯಿಗಳನ್ನೂ ಹಾಡುಗಳನ್ನೂ ಕಂಡು ನಮಗೆ ಬಹಳ ಆನಂದವಾಗುತ್ತದೆ. ನಾವು ಮೊದಲು ನೋಡಿದ ಸಣ್ಣಸಸಿಯೇ ಬೆಳೆದು ಇಂಥ ದೊಡ್ಡಮರವಾಗಿದೆ, ಈ ಕಲ್ಪನೆಯು ನಮ್ಮ ಮನಸಿನಲ್ಲಿ ಬಂದಕೂಡಲೆ ನಮ್ಮ ಆಶ್ಚರ್ಯವು ಇಮ್ಮಡಿಸುವದು; ಮೊದಲು ನೋಡಿದ ಸಣ್ಣ ಸಸಿಯು ಬೆಳೆದು ಇಷ್ಟುದೊಡ್ಡ ವೃಕ್ಷವು ಹೇಗೆ ಆಯಿತು? ತೋಟಿಗನು ನಿಯಮದಿಂದ ನೀರು ಗೊಬ್ಬರಗಳನ್ನು ಹಾಕಿ ಆ ಗಿಡದ ಬೆಳವಣಿಗೆಗೆ

ಆವಶ್ಯಕವಾದ ಸಂಗತಿಗಳನ್ನು ಒದಗಿಸಿಕೊಟ್ಟನು. ಅವನು ಬೇರೆ ಯಾವ ದೊಂದು ವನಸ್ಪತಿಯ ಸಸಿಯನ್ನು ಹೀಗೆ ಬೆಳಿಸಿ ದೊಡ್ಡ ವೃಕ್ಷವನ್ನು ಮಾಡಲಾರನು. ಹುಲ್ಲಿಗೆ ಬೇಕಾದಷ್ಟು ಗೊಬ್ಬರವನ್ನೂ ನೀರನ್ನೂ ಹಾಕಿದರೆ ಅದು ಎಂದೂ ಮರವಾಗಲಾರದು. ಹೀಗೆ ಬೆಳೆದು ದೊಡ್ಡದಾಗಿ ವಿಸ್ತಾರಹೊಂದಿ ಅಂಥ ಕಾಯಿಗಳನ್ನು ಧರಿಸುವ ಶಕ್ತಿಯನ್ನು ಪರಮೇಶ್ವರನು ಮಾವಿನ ಸಸಿಯಲ್ಲಿಯೇ ಇಟ್ಟಿರುವನು. ತೋಟಿಗನು ಅದರ ಬೆಳವಣಿಗೆಗೆ ಅನುಕೂಲವಾದ ಸಂಗತಿಗಳನ್ನು ಆ ಸಸಿಯ ಹತ್ತಿರಕ್ಕೆ ತಂದನು; ಮತ್ತು ಪ್ರತಿಕೂಲವಾದ ಸಂಗತಿಗಳನ್ನು ಇಲ್ಲದಂತೆ ಮಾಡಿದನು. ಶಿಕ್ಷಕನ ಉದ್ಯೋಗವು ಬಹಳಮಟ್ಟಿಗೆ ಈ ತೋಟಿಗನ ಉದ್ಯೋಗವನ್ನು ಹೋಲುವುದು.

ನಾವು ಒಮ್ಮೊಮ್ಮೆ ಓಡುತ್ತಿರುವ ಮೋಟಾರನ್ನು ಹಿಡಿದು ನಿಲ್ಲಿಸುವ ಕಸುವುಳ್ಳ ಮನುಷ್ಯನನ್ನು, ಇಲ್ಲವೆ ಎದೆಯಮೇಲೆ ಬಹು ದೊಡ್ಡದಾದ ಬಂಡೆಯನ್ನು ಇಡಿಸಿಕೊಂಡು ಅದರಮೇಲೆ ಉಕ್ಕಿನ ಘನ್ನದಿಂದ ಬಲವಾದ ಪೆಟ್ಟುಹಾಕಿಸಿಕೊಳ್ಳುವ ಮನುಷ್ಯನನ್ನು ಕಾಣುತ್ತೇವೆ. ಈ ತರದ ಅದ್ಭುತ ಶಕ್ತಿಯ ಪ್ರಯೋಗಗಳನ್ನು ಕಂಡು ನಮಗೆ ಬಹಳ ಆಶ್ಚರ್ಯವಾಗುತ್ತದೆ. ಇಷ್ಟು ಕಸುವು ಅವರಿಗೆ ಹೇಗೆ ಬಂದಿರಬಹುದು? ದೇವರು ಅವರಿಗೆ ವಿಲಕ್ಷಣವಾದ ಶರೀರವನ್ನು ಕೊಟ್ಟಿರುವನೆಂಬಂತಿಲ್ಲ. ಬಾಲ್ಯದಲ್ಲಿ ಅವರು ಸಹ ನಮ್ಮ ಹಾಗೆಯೇ ಇದ್ದರು. ವ್ಯಾಯಾಮದಿಂದ ಅವರು ತಮಗೆ ದೇವರು ಕೊಟ್ಟ ಶಾರೀರಿಕ ಶಕ್ತಿಯನ್ನು ಬೆಳಿಸಿಕೊಂಡರು. ಈ ಶಕ್ತಿಯು ಬೀಜರೂಪ ವಾಗಿ ಅವರ ದೇಹದಲ್ಲಿ ಮೊದಲೇ ಇತ್ತು. ಅಭ್ಯಾಸದಿಂದ ಅಥವಾ ಶಿಕ್ಷಣದಿಂದ ಅದು ಮೇಲೆ ಹೇಳಿದ ರೀತಿಯಾಗಿ ಬೆಳಿಸಲ್ಪಟ್ಟಿತು.

ಇದೇ ಪ್ರಕಾರ ಭಾಸ್ಕರಾಚಾರ್ಯರು ಐಝಾಕ ನ್ಯೂಟನ ಮೊದಲಾದ ಬುದ್ಧಿವಂತರು ಬರೆದ ಗ್ರಂಥಗಳನ್ನು ಓದಿದರೆ ಅವರ ವಿಲಕ್ಷಣ ಬುದ್ಧಿಯ ಕಲ್ಪನೆಯಾಗುತ್ತದೆ. ಅದರಿಂದ ನಮಗೆ ಬಹಳ ಆಶ್ಚರ್ಯವಾಗುತ್ತದೆ. ಈಬಗೆಯ ವಿಲಕ್ಷಣವಾದ ಬುದ್ಧಿಯು

ಇವರಿಗೆ ಹೇಗೆ ಪ್ರಾಪ್ತವಾಯಿತು? ಬುದ್ಧಿಯು ಎರಡನೆಯವರಿಂದ ಕೊಡಲ್ಪಡುವ ವಸ್ತುವಲ್ಲ. ದೇವರು ಬೀಜರೂಪದಿಂದ ಅವರಲ್ಲಿ ಮಾನಸಿಕ ಶಕ್ತಿಗಳನ್ನು ಇಟ್ಟಿದ್ದನು. ಶಿಕ್ಷಣದಿಂದ ಅವುಗಳ ವಿಕಾಸ ವಾಗಿ ಈ ಪರಿಣಾಮವನ್ನು ಹೊಂದಿತು. ಪ್ರತಿಒಬ್ಬ ಹುಡುಗನಿಗೆ ದೇವರು ಮಾನಸಿಕ ಶಕ್ತಿಗಳನ್ನು ದಯಪಾಲಿಸಿರುವನು. ಅವು ಚಿಕ್ಕಂದಿನಲ್ಲಿ ಬೀಜರೂಪದಿಂದ ಇರುವವು. ಶಿಕ್ಷಣದಿಂದ ಅವು ವಿಕಾಸಹೊಂದುವವು.

ಶಾರೀರಿಕಶಕ್ತಿ, ಮಾನಸಿಕಶಕ್ತಿ ಇವುಗಳಂತೆಯೇ ಸಹಾನುಭೂತಿ, ಸ್ವಾರ್ಥತ್ಯಾಗ, ದಯಾ, ಪ್ರೇಮ, ಮುಂತಾದ ಉಚ್ಚ ಮನೋವೃತ್ತಿಗಳ ಬೀಜಗಳಾದರೂ ಚಿಕ್ಕಮಕ್ಕಳ ಅಂತಃಕರಣದಲ್ಲಿ ಇದ್ದೇ ಇರುವವು. ಶಿಕ್ಷಣದ ಯೋಗದಿಂದ ಅವು ಅಭಿವೃದ್ಧಿ ಹೊಂದುವವು. ಉಚ್ಚ ಮನೋವೃತ್ತಿಗಳು ಪೂರ್ಣ ವಿಕಾಸಹೊಂದುವದರಿಂದ ಗೌತಮಬುದ್ಧ, ಶಂಕರಾಚಾರ್ಯ, ಮಹಾವೀರ, ಮಹಮ್ಮದ ಪೈಗಂಬರ ಮೊದಲಾದವರಂಥ ಪ್ರಾಣಿಮಾತ್ರರ ಮೇಲೆ ದಯಮಾಡುವ ಜನರು ನಮ್ಮ ದೃಷ್ಟಿಗೆ ಬೀಳುತ್ತಾರೆ. ಪ್ರತಿ ಒಬ್ಬ ಹುಡುಗನಲ್ಲಿ ಶಾರೀರಿಕಶಕ್ತಿ ಬುದ್ಧಿಶಕ್ತಿ, ಹಾಗು ಮನೋವೃತ್ತಿ ಇವುಗಳನ್ನು ದೇವರು ಬೀಜರೂಪದಿಂದ ಇಟ್ಟಿದ್ದಾನೆ. ಅವು ಸಮನಾಗಿಯೂ ತಕ್ಕ ಪ್ರಮಾಣವಾಗಿಯೂ ಬೆಳೆಯುವದೇ ವಿಕಾಸವೆಂದು ಹೇಳಲ್ಪಡುವದು. ಮಕ್ಕಳ ಶಾರೀರಿಕಶಕ್ತಿ, ಬುದ್ಧಿಶಕ್ತಿ ಸುಮನೋವೃತ್ತಿಗಳನ್ನು ವಿಕಾಸಗೊಳಿಸುವುದೇ ಶಿಕ್ಷಣದ ಕಾರ್ಯವು. ಶಾರೀರಿಕ ಶಕ್ತಿಯು ಬೆಳೆಯಬೇಕಾದರೆ, ಅವಶ್ಯವಾದ ವ್ಯಾಯಾಮವನ್ನು ಮಾಡಲಿಕ್ಕೆಬೇಕು. ಇಂಥ ವ್ಯಾಯಾಮವು ದಿನಾಲು ದೊರೆಯುತ್ತ ಹೋಗುವದರಿಂದ ಅವರ ಸ್ನಾಯುಗಳ ಶಕ್ತಿಯು ಸಾವಕಾಶವಾಗಿ ಬೆಳೆಯುತ್ತ ಹೋಗುವದು. ಬುದ್ಧಿ ಶಕ್ತಿಗಳಿಗೂ ಇದೇ ನಿಯಮವು ಹತ್ತುವದು.

ದೇವರು ಮಕ್ಕಳಲ್ಲಿ ಬೀಜರೂಪದಿಂದ ಇಟ್ಟ ಶಕ್ತಿಗಳಿಗೆ ಯೋಗ್ಯವೂ ಹಿತಕರವೂ ಆದ ವ್ಯಾಯಾಮವನ್ನು ಕೊಡುವುದೇ ನಿಜವಾದ ಶಿಕ್ಷಣವು.

ನಾವು ನಮ್ಮ ಜೀವಿತದಲ್ಲಿ ಅನೇಕ ಕರ್ತವ್ಯಗಳನ್ನು ಮಾಡಬೇಕಾಗುತ್ತದೆ. ಅವುಗಳನ್ನು ಮಾಡಲಿಕ್ಕೂ ಈ ಜಗತ್ತಿನೊಳಗಿನ ಶುದ್ಧಾನಂದವನ್ನು ಅನುಭವಿಸಲಿಕ್ಕೂ ಮೇಲೆ ಹೇಳಿದ ಮೂರೂ ಪ್ರಕಾರದ ಶಕ್ತಿಗಳು ವಿಕಾಸಹೊಂದುವುದು ಅತ್ಯವಶ್ಯವು. ಮೊದಲು ಶರೀರ ಸಂಪತ್ತಿಯ ಮಹತ್ವವು ಎಷ್ಟಿರುವುದೆಂಬುದನ್ನು ವಿವರಿಸುವ.

ಮನುಷ್ಯನ ಬುದ್ಧಿಯು ಎಷ್ಟು ತೀಕ್ಷ್ಣವಾಗಿದ್ದರೂ, ಅವನು ಎಷ್ಟು ದೊಡ್ಡ ಮನಸ್ಸಿನವನಾಗಿದ್ದರೂ ಅವನಲ್ಲಿ ಶರೀರಸಂಪತ್ತು ಇಲ್ಲದಿದ್ದರೆ ಅವೆರಡರಿಂದ ಏನೂ ಪ್ರಯೋಜನವಾಗುವುದಿಲ್ಲ. ಯಾವಾಗಲೂ ಬೇನೆಯಿಂದ ಬಳಲುವ ಮನುಷ್ಯನು ಈ ಜಗತ್ತಿನ ಅನೇಕ ಸುಖಗಳಿಗೆ ಎರವಾಗುತ್ತಾನೆ. ಅವನಿಂದ ಪರರಿಗೆ ಉಪಕಾರ ಮಾಡುವುದಾಗುವುದಿಲ್ಲ. ಸ್ವಂತದ ಆಯುಷ್ಯವನ್ನೂ ಕಷ್ಟದಿಂದ ಕಳೆಯಬೇಕಾಗುವುದು. ದೈವಯೋಗದಿಂದ ಅವನ ಬಳಿಯಲ್ಲಿ ಬಹಳ ಸಂಪತ್ತು ಇದ್ದರೂ ಕೂಡ ಶರೀರಸಂಪತ್ತೊಂದು ಇಲ್ಲದಿದ್ದರೆ ಇತರ ಸಂಪತ್ತುಗಳ ಉಪಯೋಗವೇನು ? ಜಗತ್ತಿನೊಳಗಿನ ಎಲ್ಲ ಸಂಪತ್ತುಗಳಿಗಿಂತ ಶರೀರಸಂಪತ್ತು ಮಿಗಿಲಾದದ್ದು. ಶರೀರಸಂಪತ್ತಿನ ಮಹತ್ವವು ಎಲ್ಲ ದೇಶಗಳಲ್ಲಿ ಯಾವಾಗಲೂ ಎಣಿಸಲ್ಪಡುವುದು. ನಮ್ಮ ಪ್ರಾಚೀನ ಋಷಿಗಳು "ಶರೀರಮಾದ್ಯಂ ಖಲು ಧರ್ಮಸಾಧನಂ" ಎಂದು ಶರೀರಸಂಪತ್ತಿಯ ಮಹತ್ವವನ್ನು ಹೇಳಿದ್ದಾರೆ. ಆದಕಾರಣ ಮಕ್ಕಳ ಶಾರೀರಿಕ ಶಕ್ತಿಗಳನ್ನು ವಿಕಾಸಗೊಳಿಸುವುದು ಶಿಕ್ಷಕರ ಮೊದಲನೆಯ ಕರ್ತವ್ಯವು.

ಮನುಷ್ಯನ ಬುದ್ಧಿಯು ವಿಕಾಸವಾಗದಿದ್ದರೆ ಅವನ ಜನ್ಮವು ವ್ಯರ್ಥವಾದದ್ದು. ಈ ಜಗತ್ತಿನಲ್ಲಿ ಮನುಷ್ಯನು ಪಡೆದ ಶ್ರೇಷ್ಠತ್ವಕ್ಕೆ ಆತನ ಬುದ್ಧಿಶಕ್ತಿಯೇ ಕಾರಣವು. ಬುದ್ಧಿವಂತನಾದ ಮನುಷ್ಯನು ತನ್ನ ಬುದ್ಧಿಸಾಮರ್ಥ್ಯದಿಂದ ಸ್ವಂತದ ಕಲ್ಯಾಣವನ್ನು ಸಾಧಿಸಿಕೊಂಡು ಪರರಿಗೆ ಹಿತಮಾಡುವನು. ಮನುಷ್ಯ ಪ್ರಾಣಿಯ ಸುಖಾಭಿವೃದ್ಧಿಯ ಸಾಧನಗಳಾದ ಉಗಿಬಂಡಿ, ತಾರಾಯಂತ್ರ, ಗ್ರಾಮೋಫೋನ

ಮೊದಲಾದವುಗಳನ್ನು ಬುದ್ಧಿವಂತರೇ ಶೋಧಿಸಿದ್ದಾರೆ. ವೈದ್ಯಶಾಸ್ತ್ರ, ರಸಾಯನಶಾಸ್ತ್ರ, ಜ್ಯೋತಿಷಶಾಸ್ತ್ರ ಮೊದಲಾದ ಶಾಸ್ತ್ರಗಳಲ್ಲಿ ಪ್ರವೀಣರಾದವರು ತಮ್ಮ ಅಲೌಕಿಕ ಬುದ್ಧಿಸಾಮರ್ಥ್ಯದಿಂದ ಹೊಸ ಹೊಸ ಶೋಧಗಳನ್ನು ಮಾಡಿ ಮನುಷ್ಯಪ್ರಾಣಿಯ ಸುಖಾಭಿವೃದ್ಧಿಯನ್ನು ಮಾಡಿದ್ದಾರೆ; ಮತ್ತು ಈ ವಿಶ್ವದ ಗೂಢವಾದ ತತ್ವಗಳನ್ನು ಶೋಧಿಸುವ ಪ್ರಯತ್ನಮಾಡಿ ಮನುಷ್ಯಜಾತಿಗೆ ಸನ್ಮಾರ್ಗದ ದಾರಿಯನ್ನು ತೋರಿಸಿರುವರು. ಈ ಎಲ್ಲ ಮಹನೀಯರು ಜಗತ್ತಿನ ಮೇಲೆ ಅನಂತ ಉಪಕಾರಗಳನ್ನು ಮಾಡಿದ್ದಾರೆ. ಮನುಷ್ಯನು ತನ್ನ ಆಯುಷ್ಯವನ್ನು ಸುಖದಿಂದ ಕಳೆಯಲಿಕ್ಕೂ ತನ್ನ ಹಾಗು ತನ್ನನ್ನು ಅವಲಂಬಿಸಿದ ಜನರ ಚರಿತಾರ್ಥವನ್ನು ಸಾಗಿಸಲಿಕ್ಕೂ ಬುದ್ಧಿಯು ಅವಶ್ಯವಾಗಿ ಬೇಕು. ಆದಕಾರಣ ಮಕ್ಕಳಲ್ಲಿ ಬೀಜರೂಪದಿಂದ ಇದ್ದ ಬುದ್ಧಿಶಕ್ತಿಯನ್ನು ವಿಕಾಸಪಡಿಸುವುದು ಶಿಕ್ಷಕನ ಎರಡನೆಯ ಕರ್ತವ್ಯವಾಗಿದೆ.

ಶರೀರಸಂಪತ್ತು, ಹಾಗು ಬುದ್ಧಿ ಇವುಗಳಿಗಿಂತ ಶೀಲದ ಮಹತ್ವವು ಹೆಚ್ಚಿರುವದು. ಯಾವನೊಬ್ಬ ಮನುಷ್ಯನು ಒಳ್ಳೇ ಚುರುಕು ಬುದ್ಧಿಯವನಿರುವನು; ಅವನ ಶಾರೀರಿಕ ಬಲವೂ ವಿಂಗಿಲಾಗಿರುವುದು; ಆದರೆ ಆತನ ಶೀಲವು ಚೆನ್ನಾಗಿರದಿದ್ದರೆ ಆ ಮನುಷ್ಯನು ಸ್ವಾರ್ಥಬುದ್ಧಿಯಿಂದ ಬೇಕಾದಂಥ ದುಷ್ಕೃತ್ಯಗಳನ್ನು ಮಾಡಲಿಕ್ಕೆ ಹೆದರುವುದಿಲ್ಲ. ಆ ಮನುಷ್ಯನು ತನ್ನ ಶರೀರಸಂಪತ್ತಿನ, ಬುದ್ಧಿಯ ಉಪಯೋಗವನ್ನು ಪರರನ್ನು ಮೋಸಗೊಳಿಸುವುದಕ್ಕೂ ಪೀಡಿಸುವುದಕ್ಕೂ ಮಾಡಿಕೊಳ್ಳುವನು. ಮನುಷ್ಯನ ಬುದ್ಧಿಯು ಹೆಚ್ಚು ಚುರುಕಾಗಿದ್ದಷ್ಟು ಅವನಿಂದ ಸಮಾಜಕ್ಕೆ ಅಂಜಿಕೆ ಹೆಚ್ಚಿರುತ್ತದೆ. ಆ ಚುರುಕುಬುದ್ಧಿಯ ಉಪಯೋಗವನ್ನು ಅವರು ಸಮಾಜಕ್ಕೆ ತೊಂದರೆಕೊಡುವುದರಲ್ಲಿ ಉಪಯೋಗಿಸುವರು.

ಶೀಲದಿಂದಲೇ ಮನುಷ್ಯನಿಗೆ ಮನುಷ್ಯತ್ವವು ಪ್ರಾಪ್ತವಾಗಿದೆ. ಅದು ಇಲ್ಲದಿದ್ದರೆ ಅವನಂಥ ನೀಚ, ಭಯಂಕರ ಪ್ರಾಣಿಯು ಈ

ಜಗತ್ತಿನಲ್ಲಿ ಬೇರೊಂದಿಲ್ಲ. ಸುಶೀಲ ಮನುಷ್ಯನು ತನ್ನ ಕರ್ತವ್ಯಗಳನ್ನು ಮಾಡುವುದಕ್ಕೆ ಯಾವಾಗಲೂ ಸಿದ್ಧನಿರುವನು. ತನ್ನಿಂದ ಪರರಿಗೆ ಸ್ವಲ್ಪ ಸಹ ಹಾನಿಯಾಗದಂತೆ ಎಚ್ಚರಪಡುವನು. ಅವನು ಎಲ್ಲರ ಕೂಡ ಸಹಾನುಭೂತಿಯಿಂದಲೂ ಮಮತೆಯಿಂದಲೂ ನಡಕೊಳ್ಳುವನು. ತನ್ನಿಂದ ಪರರ ಕಲ್ಯಾಣವಾಗಲೆಂದು ಯತ್ನಿಸುತ್ತಿರುವನು. ಸಾರಾಂಶ, ಮನುಷ್ಯನಿಗೆ ತನ್ನ ಜೀವನದ ಉಪಯೋಗವು ಸರಿಯಾಗಿ ಆಗಬೇಕಾದರೆ ಅವನಲ್ಲಿ ಶೀಲವು ಅವಶ್ಯವಾಗಿ ಬೇಕು. ಶಿಕ್ಷಣದಿಂದ ಮನುಷ್ಯನಲ್ಲಿ ಶೀಲವು ಉತ್ಪನ್ನವಾಗಲಿಕ್ಕೆ ಬೇಕು. ಅದಕ್ಕಾಗಿ ಮಕ್ಕಳಿಗೆ ಚಿಕ್ಕ ವಯಸ್ಸಿನಿಂದ ಒಳ್ಳೇ ಚಟಗಳನ್ನು ಹಚ್ಚಲಿಕ್ಕೆಬೇಕು. ಆಜ್ಞಾಪಾಲನ, ಸತ್ಯ, ಸಹಾನುಭೂತಿ, ಈ ಮುಂತಾದ ಗುಣಗಳು ಚಿಕ್ಕ ವಯಸ್ಸಿನಿಂದಲೇ ಅವರಲ್ಲಿ ಬೇರೂರಲಿಕ್ಕೆಬೇಕು. ಆತ್ಮಸಂಯಮನದ ರೂಢಿಯು ಅವರಿಗೆ ಮೊದಲಿನಿಂದಲೇ ಹತ್ತತಕ್ಕದ್ದು. ಮನುಷ್ಯನಿಗೆ ರೂಢಿಗಳು ಒಮ್ಮೆ ಹತ್ತಿದವೆಂದರೆ ಅವುಗಳ ವರ್ಚಸ್ಸು ಅವನ ಮೇಲೆ ಅವನು ಸಾಯುವತನಕ ಇರುವದು. ಅವನ ಇಚ್ಛೆಯು ಏನೇ ಇರಲಿ, ಅದನ್ನು ಅಲ್ಲಗಳೆದು ರೂಢಿಯು ತನ್ನ ಇಚ್ಛೆಯಂತೆ ನಡೆಯಲಿಕ್ಕೆ ಹಚ್ಚುವದು. ಸಾರಾಂಶ, ಮನುಷ್ಯನು ರೂಢಿಗಳ ದಾಸನಾಗುತ್ತಾನೆ; ರೂಢಿಗಳಂಥ ಒತ್ತಾಯಪಡಿಸುವ ಒಡೆಯನು ಮತ್ತೊಬ್ಬನಿಲ್ಲ. ಆದಕಾರಣ ಮಕ್ಕಳ ಮುಂದಿನ ಆಯುಸ್ಸು ಸುಖದಿಂದ ಹೋಗಬೇಕಾದರೆ, ಅವರ ತಾಯಿತಂದೆಗಳೂ ಶಿಕ್ಷಕರೂ ಅವರಿಗೆ ಒಳ್ಳೇ ರೂಢಿಗಳನ್ನು ಹಚ್ಚಲಿಕ್ಕೆ ಯತ್ನಮಾಡತಕ್ಕದ್ದು.

ಈ ಮೇರೆಗೆ ಹುಡುಗರ (೧) **ಶರೀರ ಸಂಪತ್ತಿಯನ್ನು ಬೆಳಿಸುವುದು**; (೨) ಅವರ **ಬುದ್ಧಿಯನ್ನು ವಿಕಾಸಗೊಳಿಸುವುದು**; ಅವರಿಗೆ ಉತ್ತಮವಾದ ರೂಢಿಗಳನ್ನು ಹಚ್ಚಿ ಅವರಲ್ಲಿಯ ಉಚ್ಚ ಮನೋವೃತ್ತಿಗಳನ್ನು ವಿಕಾಸಗೊಳಿಸಿ (೩) ಅವರು **ಸುಶೀಲರಾಗುವಂತೆ ಮಾಡುವುದು**; ಇವೇ ಶಿಕ್ಷಣದ ಮೂರು ಉದ್ದೇಶಗಳಾಗಿರುತ್ತವೆ.

ಮಕ್ಕಳ ಶಿಕ್ಷಣವು ತೀರ ಚಿಕ್ಕವಯಸ್ಸಿನಲ್ಲಿಯೇ ಪ್ರಾರಂಭವಾಗುವದು. ಶಿಕ್ಷಣಕ್ಕೆ ಪಾಟಿ-ಪೇನ್ಸಿಲುಗಳೇ ಅವಶ್ಯವಾಗಿ ಬೇಕೆಂಬಂತಿಲ್ಲ.

ಚಿಕ್ಕಮಗುವು ತನ್ನ ತಾಯಿ-ತಂದೆಗಳ ಹಾಗು ಸುತ್ತುಮುತ್ತು ಇರುವ ಜನರ ಕೃತಿಗಳನ್ನು ಲಕ್ಷ್ಯಪೂರ್ವಕವಾಗಿ ನೋಡುತ್ತಿರುತ್ತದೆ. ಅದರಲ್ಲಿ ಅನುಕರಣಶಕ್ತಿಯು ಬಹಳವಿರುತ್ತದೆ. ಅದರಿಂದ ಆ ಚಿಕ್ಕ ಮಗುವಿನ ಪರಿಚಯದ ಜನರ ಮಾತುಗಳ, ಕೃತಿಗಳ ಪರಿಣಾಮವು ಆ ಮಕ್ಕಳಮೇಲೆ ಯಾವಾಗಲು ಆಗುತ್ತಿರುತ್ತದೆ. ಅಲ್ಲಿಂದಲೇ ಅವರ ಶಿಕ್ಷಣವು ಪ್ರಾರಂಭವಾಗುತ್ತದೆ. ಅವರು ತಮ್ಮ ಸಂಗಡಿಗರನ್ನು ಕೂಡಿಕೊಂಡು ಆಡಲಾರಂಭಿಸಿದರೆಂದರೆ ಅವರ ಸಹವಾಸದ ಪರಿಣಾಮವೂ ಆ ಮಕ್ಕಳಮೇಲೆ ಆಗತೊಡಗುವುದು. ಆ ಬಳಿಕ ಅವರು ಶಾಲೆಗೆ ಹೋಗುವರು. ಅಲ್ಲಿ ಶಿಕ್ಷಕರ ಮೇಲ್ವಿಚಾರಣೆಯ ಕೆಳಗೆ ಅವರ ಶಾಲಾ ಶಿಕ್ಷಣಕ್ಕೆ ಪ್ರಾರಂಭವಾಗುವುದು.

ಇದರಿಂದ ತಾಯಿಯು ಮಕ್ಕಳ ಮೊದಲನೆಯ ಶಿಕ್ಷಕಿ ಎಂದು ಹೇಳಿದಂತಾಯಿತು. ಸುಶೀಲಳಾದ ತಾಯಿಯು ತನ್ನ ಮಕ್ಕಳಿಗೆ ಯಾವ ಪ್ರಕಾರದ ಶಿಕ್ಷಣವನ್ನು ಕೊಡುತ್ತಾಳೆಂಬುದನ್ನೂ ಆ ಶಿಕ್ಷಣದ ಪರಿಣಾಮವೇನಾಗುವುದೆಂಬುದನ್ನೂ ಅರಿತುಕೊಳ್ಳಬೇಕಾದರೆ ಶಿವಾಜಿ, ಜಾರ್ಜ ವಾಶಿಂಗಟನ್, ಅಬ್ರಹಾಮ ಲಿಂಕನ್ ಮೊದಲಾದ ಮಹಾತ್ಮರ ಜೀವನಚರಿತ್ರಗಳನ್ನು ಓದಬೇಕು. ಅಂದರೆ ತಾಯಿಯ ಶಿಕ್ಷಣದ ಮಹತ್ವವು ತಿಳಿಯುವದು. ಚಿಕ್ಕಮಗುವು ಎಲ್ಲ ಪ್ರಕಾರದಿಂದ ತಾಯಿಯನ್ನೇ ಅವಲಂಬಿಸಿರುವುದರಿಂದ ಅದು ಅವಳ ಅನುಕರಣವನ್ನು ಮಾಡುವುದು ಸ್ವಾಭಾವಿಕವು; ತಾಯಿಯ ಪ್ರೇಮದಿಂದ ಆ ಮಗುವು ಯಾವಾಗಲು ತಾಯಿಯ ಅಪ್ಪಣೆಯನ್ನು ಮೀರಿ ನಡೆಯಲಾರದು. ಅವಳು ಹೇಳಿದ ಮಾತುಗಳ ಪರಿಣಾಮವು ಮಕ್ಕಳ ಮನಸಿನ ಮೇಲೆ ಬಹುಬೇಗ ಆಗುವುದು. ತನ್ನ ಮಕ್ಕಳಿಗೆ ಚಿಕ್ಕಂದಿನಿಂದ ಒಳ್ಳೇ ರೂಢಿಗಳನ್ನು ಹಚ್ಚುವುದಕ್ಕೂ ಪರೋಪಕಾರ, ದಯೆ, ಈಶ್ವರನಲ್ಲಿ

ಭಕ್ತಿ ಈ ಮುಂತಾದ ಅನೇಕ ಉಚ್ಚ ಮನೋವೃತ್ತಿಗಳ ಪೋಷಣೆಯನ್ನು ಮಾಡಲಿಕ್ಕೂ ತಾಯಿಗೆ ಆಗಾಗ್ಗೆ ಎಷ್ಟೋ ಆಸ್ಪದವು ದೊರಕುತ್ತಿರುವುದು. ತಾಯಿಗಿಂತ ಕೆಲಮಟ್ಟಿಗೆ ಕಡಿಮೆ ಅಂಶದಿಂದ ತಂದೆಗೂ ಮಕ್ಕಳಿಗೆ ಶಿಕ್ಷಣಕೊಡುವ ಪ್ರಸಂಗಗಳು ದೊರಕುವವು. ತಾಯಿ-ತಂದೆಗಳು ತಮ್ಮ ಮಕ್ಕಳಿಗೆ ಕೊಡುವ ಶಿಕ್ಷಣವು **ಗೃಹಶಿಕ್ಷಣವೆಂದು** ಹೇಳಲ್ಪಡುವುದು. ಗೃಹಶಿಕ್ಷಣವು ಎಲ್ಲ ಶಿಕ್ಷಣದ ಅಸ್ತಿವಾರವಾಗಿದೆ. ಉತ್ತಮ ಗೃಹಶಿಕ್ಷಣವು ದೊರೆಯುವ ಭಾಗ್ಯವು ಬಹುಸ್ವಲ್ಪ ಹುಡುಗರಿಗೆ ಮಾತ್ರ ಇರುವದು; ಆದುದರಿಂದ ಮಕ್ಕಳಿಗೆ ಶಿಕ್ಷಣವನ್ನು ಕೊಡುವ ಸಂಪೂರ್ಣ ಹೊಣೆಗಾರಿಕೆಯು ಶಿಕ್ಷಕರ ಮೇಲೆಯೇ ಬೀಳುವುದು.

ಮಕ್ಕಳ ಮೂರೂ ಪ್ರಕಾರದ ಶಕ್ತಿಗಳನ್ನು ವಿಕಾಸಗೊಳಿಸುವುದು, ಶಾಲಾಶಿಕ್ಷಣದ ಮುಖ್ಯ ಕೆಲಸವಾಗಿದೆ. ಸಾಲೆಯಲ್ಲಿ ಮಕ್ಕಳ ಶರೀರ ಸಂಪತ್ತು ಚೆನ್ನಾಗಿ ಉಳಿದು ಅದು ಯೋಗ್ಯ ಬೆಳವಣಿಗೆಯನ್ನು ಹೊಂದಿ ಅವರು ಸದೃಢರಾಗುವುದರಕಡೆಗೆ ಶಿಕ್ಷಕರು ಲಕ್ಷ್ಯಕೊಡಲಿಕ್ಕೆ ಬೇಕು. ಸಾಲೆಯಲ್ಲಿ ಮಕ್ಕಳ ಬುದ್ಧಿಗೆ ತಕ್ಕ ವ್ಯವಸಾಯವು ದೊರೆತು, ಅದು ಚುರುಕಾಗಲಿಕ್ಕೆ ಬೇಕು. ಮತ್ತು ಅವರಿಗೆ ಒಳ್ಳೇ ರೂಢಿಗಳು ಹತ್ತಿ ಅವರಲ್ಲಿ ಶೀಲವುಂಟಾಗಲಿಕ್ಕೆ ಬೇಕು. ಹುಡುಗರಲ್ಲಿ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡುವ ಸಾಮರ್ಥ್ಯವನ್ನು ಉಂಟುಮಾಡುವುದು, ತಾಯಿ-ತಂದೆಗಳ ಹಾಗು ಶಿಕ್ಷಕರ ಕರ್ತವ್ಯವಾಗಿದೆ. ಮಕ್ಕಳ ಶಾರೀರಿಕ ಮಾನಸಿಕ ನೈತಿಕ ಶಕ್ತಿಗಳು ಅಭಿವೃದ್ಧಿ ಹೊಂದಿದವೆಂದರೆ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಜರಗಿಸುವ ಸಾಮರ್ಥ್ಯವು ಅವರಲ್ಲಿ ಸ್ವಾಭಾವಿಕವಾಗಿಯೇ ಉತ್ಪನ್ನವಾಗುವುದು. ಸಾಲೆಯ ವಸತಿ ಗೃಹಗಳಲ್ಲಿ ಹಗಲು ರಾತ್ರಿ ಶಿಕ್ಷಕನ ಮೇಲ್ವಿಚಾರಣೆಯ ಕೆಳಗೆ ಇರುವ ಹುಡುಗರ ಶಿಕ್ಷಣದ ಹೊಣೆಗಾರಿಕೆಯು ಶಿಕ್ಷಕನ ಮೇಲೆಯೇ ಹೆಚ್ಚಾಗಿರುವುದು; ಆದರೆ ಕೆಲವು ನಿಯಮಿತ ವೇಳೆಯಲ್ಲಿ ಮಾತ್ರ ಸಾಲೆಗೆ ಬಂದು ಉಳಿದ ವೇಳೆಯಲ್ಲಿ ಮನೆಯೊಳಗೆ ಇರುವ

ಹುಡುಗರ ಶಿಕ್ಷಣದ ಹೊಣೆಗಾರಿಕೆಯು ಆ ಹುಡುಗರ ತಾಯಿ-ತಂದೆ ಶಿಕ್ಷಕ ಇವರಲ್ಲಿ ಹಂಚಿಹೋಗುವುದು. ಮಕ್ಕಳ ತಾಯಿ-ತಂದೆಗಳು ಸುಶಿಕ್ಷಿತರಾಗಿದ್ದರೆ ಅವರಿಗೆ ಗೃಹಶಿಕ್ಷಣವನ್ನು ಕೊಡುವ ವಿಷಯದಲ್ಲಿ ಎಚ್ಚರಪಡುವರು. ಆದುದರಿಂದ ಶಿಕ್ಷಕನ ಕೆಲಸವು ಸುಲಭವಾಗುವುದು. ಅವರು ಅಶಿಕ್ಷಿತರಾಗಿದ್ದರೆ ಅವರ ಗೃಹಶಿಕ್ಷಣವು ಚೆನ್ನಾಗಿರುವುದಿಲ್ಲಾದ ಕಾರಣ ಶಿಕ್ಷಕನ ಕಾರ್ಯವು ಬಹು ತೊಂದರೆಯುಳ್ಳದ್ದಾಗುವುದು. ಅಂಥ ಮಕ್ಕಳಿಗೆ ಮನೆಯಲ್ಲಿ ಯಾವ ಯಾವ ಕೆಟ್ಟ ರೂಢಿಗಳು ಹತ್ತಿರುವುವೋ ಅವುಗಳನ್ನು ತೆಗೆದುಹಾಕಿ ಒಳ್ಳೇ ರೂಢಿಗಳನ್ನು ಹಚ್ಚಬೇಕಾಗುವುದು.

ಸಾಲೆಯಲ್ಲಿ ಕಲಿಸಲ್ಪಡುವ ವಿಷಯುಗಳು, ಅಲ್ಲಿ ನೆಲೆಗೊಂಡ ಶಿಸ್ತು, ಅಲ್ಲಿಯ ವಾತಾವರಣ ಇವೆಲ್ಲವುಗಳಿಂದ ಶಿಕ್ಷಕರು ಮಕ್ಕಳಿಗೆ ಶಿಕ್ಷಣ ಕೊಡುವ ಕಾರ್ಯವನ್ನು ಮಾಡುತ್ತಿರುತ್ತಾರೆ. ಗದ್ಯಪದ್ಯ, ಇತಿಹಾಸ, ಭೂಗೋಲ, ಗಣಿತ, ಡ್ರಾಯಿಂಗ, ಸೃಷ್ಟಿನಿರೀಕ್ಷಣೆ ಹಸ್ತ ವ್ಯವಸಾಯ ಇತ್ಯಾದಿ ವಿಷಯುಗಳನ್ನು ಕಲಿಸುವಲ್ಲಿ ಮಕ್ಕಳ ವಿಚಾರ ಶಕ್ತಿಯು ಬೆಳೆದು ಅವರ ಕೈ, ಕಣ್ಣು ಮುಂತಾದ ಇಂದ್ರಿಯಗಳ ಉಪಯೋಗವನ್ನು ಅವರಿಗೆ ಚೆನ್ನಾಗಿ ಮಾಡಿಕೊಳ್ಳಲಿಕ್ಕೆ ಬರಬೇಕು; ಏಕಾಗ್ರತೆ, ಕಾರ್ಯಪ್ರೀತಿ, ಸ್ವಾವಲಂಬನ ನಿಯಮಿತತನ, ಆತ್ಮ ಸಂಯಮನ ಈ ಮುಂತಾದ ಸದ್ಗುಣಗಳು ಹುಡುಗರಿಗೆ ಹತ್ತಬೇಕು; ಒಳ್ಳೇ ಸಂಗತಿಗಳ ವಿಷಯುವಾಗಿ ಹುಡುಗರ ಮನಸಿನಲ್ಲಿ ಸೇರಿಕೆಯು ಉತ್ಪನ್ನವಾಗಬೇಕು; ಕೆಟ್ಟ ಸಂಗತಿಗಳ ವಿಷಯುವಾಗಿ ತಿರಸ್ಕಾರವು ಹುಟ್ಟಬೇಕು; ಅನೇಕ ವಿಷಯುಗಳ ಉಪಯುಕ್ತ ಜ್ಞಾನವನ್ನು ಸಂಪಾದಿಸುವ ಲವಲವಿಕೆಯು ಅವರಲ್ಲಿ ಉತ್ಪನ್ನವಾಗಬೇಕು ಇತ್ಯಾದಿ. ಉದ್ದೇಶಗಳಿಂದ ಮೇಲೆ ಹೇಳಿದ ಬೇರೆ ಬೇರೆ ವಿಷಯುಗಳು ಸಾಲೆಯಲ್ಲಿ ಕಲಿಸಲ್ಪಡುವವು.

ಈ ಎಲ್ಲ ವಿಷಯುಗಳ ಜ್ಞಾನವನ್ನು ವಿದ್ಯಾರ್ಥಿಗಳು ಶಿಕ್ಷಕನ ಸಹಾಯ್ಯದಿಂದಲೂ ಸ್ವಂತ ಪ್ರಯತ್ನದಿಂದಲೂ, ಸಂಪಾದಿಸತಕ್ಕದ್ದು.

ವಿಚಾರಶಕ್ತಿಯು ಸಹಜವಾಗಿ ವಿಕಾಸಹೊಂದತಕ್ಕದ್ದೆಂಬ ಮಾತನ್ನು ಶಿಕ್ಷಕರು ಲಕ್ಷ್ಯದಲ್ಲಿಡತಕ್ಕದ್ದು.

ಯಾವನೊಬ್ಬ ಮನುಷ್ಯನ ಶಾರೀರಿಕ ಶಕ್ತಿಗಳು ಬೆಳೆಯಬೇಕಾದರೆ ಆ ಮನುಷ್ಯನು ಸ್ವತಃ ಸಾಮು, ಡಂಬೆಲ್ಸ್, ಮಲ್ಲಗಂಬ ಮುಂತಾದ ಸಾಧನಗಳಿಂದ ನಿತ್ಯದಲ್ಲಿ ವ್ಯಾಯಾಮವನ್ನು ಮಾಡತಕ್ಕದ್ದು. ಅದೇ ಪ್ರಕಾರ ಹುಡುಗರ ಬುದ್ಧಿಯು ವಿಕಾಸಹೊಂದಬೇಕಾದರೆ ಅವರು ಸ್ವತಃ ವಿಚಾರಮಾಡತಕ್ಕದ್ದು. ಅವರ ಬುದ್ಧಿಗೆ ವ್ಯಾಯಾಮವು ದೊರಕಲಿಕ್ಕೆ ಬೇಕು. ಶಿಕ್ಷಕನು ಹುಡುಗರಿಗೆ ಅನೇಕ ಸಂಗತಿಗಳನ್ನು ಹೇಳಿಕೊಡುವನು. ಅವರು ಅವುಗಳನ್ನು ಪಾಠಮಾಡುವುದು, ಪರೀಕ್ಷೆಯ ಕಾಲಕ್ಕೆ ಪರೀಕ್ಷಕರ ಮುಂದೆ ಆ ಸಂಗತಿಗಳನ್ನು ಅಂದು ತೋರಿಸುವುದು ಇದರಿಂದ ಶಿಕ್ಷಣದ ಯಾವ ಕಾರ್ಯವೂ ನೆರವೇರುವುದಿಲ್ಲ. ಈ ಪದ್ಧತಿಯಿಂದ ಹುಡುಗನು ಎಷ್ಟು ವಿಷಯಗಳನ್ನು ಕಲಿತರೂ ಅವನ ವಿಚಾರಶಕ್ತಿಯು ವಿಕಾಸವಾಗುವುದಿಲ್ಲಾದ ಕಾರಣ ಅವನು ಕೇವಲ ಆ ಜ್ಞಾನದ ಹೊರೆಯನ್ನು ಮಾತ್ರ ಹೊತ್ತಂತೆ ಆಗುವುದು. ಸಾಲೆಯಲ್ಲಿ ಹುಡುಗರು ಕಲಿಯುವ ಎಷ್ಟೋ ವಿಷಯಗಳು ಅವರ ಮುಂದಿನ ಆಯುಷ್ಯದಲ್ಲಿ ಅವರಿಗೆ ಏನೂ ಉಪಯೋಗವಾಗುವಂತೆ ಇರುವುದಿಲ್ಲ. ನಾವು ಚಿಕ್ಕ ವಯಸ್ಸಿನಲ್ಲಿ ಕಲಿತ ಭೂಗೋಲ, ಗಣಿತ ಈ ವಿಷಯಗಳೊಳಗಿನ ಬಹು ಸ್ವಲ್ಪ ಭಾಗವು ಮಾತ್ರ ನಮಗೆ ಮುಂದಿನ ಆಯುಷ್ಯದಲ್ಲಿ ಉಪಯೋಗವಾಗುವುದು. ಅಂದಮೇಲೆ ಆ ವಿಷಯಗಳನ್ನು ಏಕೆ ಕಲಿಯಬೇಕು? ಭೂಗೋಲ ಕಲಿಸುವ ಉದ್ದೇಶವೇನು? ಮಕ್ಕಳು ಕಾರ್ಯಕಾರಣ ಸಂಬಂಧವನ್ನು ಅರಿತುಕೊಳ್ಳುವುದು; ಅವರಿಗೆ ವಿಚಾರಮಾಡುವ ರೂಢಿಯನ್ನು ಹಚ್ಚುವುದು; ದೇವರು ಈ ಜಗತ್ತನ್ನು ಎಷ್ಟು ವಿಶಾಲವಾಗಿಯೂ, ಎಷ್ಟು ವಿಚಿತ್ರವಾಗಿಯೂ, ಎಷ್ಟು ಚಾತುರ್ಯದಿಂದಲೂ ಉಂಟುಮಾಡಿದ್ದಾನೆಂಬ ಸಂಗತಿಯು ಹುಡುಗರ ಲಕ್ಷ್ಯಕ್ಕೆ ಬಂದು ಅವರಲ್ಲಿ ದೇವರ ವಿಷಯಕವಾದ ಭಕ್ತಿಯು ಬೆಳೆಯುವುದು; ಈ ಮುಂತಾದ ಉದ್ದೇಶಗಳು

ಭೂಗೋಲ ಕಲಿಸುವಲ್ಲಿ ಇರುವವು. ಇದೇ ನಿಯಮವು ಉಳಿದ ವಿಷಯಗಳಿಗೂ ಹತ್ತುವುದು. ವಿಷಯಜ್ಞಾನಕ್ಕಿಂತ ಆ ಜ್ಞಾನವನ್ನು ದೊರಕಿಸುವ ಪದ್ಧತಿಗೆ ಹೆಚ್ಚು ಮಹತ್ತ್ವವಿರುತ್ತದೆ. ಮಾನಸಿಕ ನೈತಿಕ ಶಕ್ತಿಗಳನ್ನು ವಿಕಾಸಪಡಿಸುವ ಕೆಲಸವು ಆಗಿಹೋದ ಮೇಲೆ ಆ ಜ್ಞಾನವು ಮರೆತುಹೋದರೂ ಚಿಂತೆಯಿಲ್ಲ. ಈ ಸಂಗತಿಯನ್ನು ಹೆಚ್ಚು ಸ್ಪಷ್ಟಮಾಡುವುದಕ್ಕಾಗಿ ನಾವು ಒಂದು ಉದಾಹರಣೆಯನ್ನು ತಕ್ಕೊಳ್ಳುವ. ಇಬ್ಬರು ಹುಡುಗರು ಹಿಂದುಸ್ತಾನದ ಭೂಗೋಲವನ್ನು ಕಲಿಯುತ್ತಾರೆಂದು ತಿಳಿಯುವ. ಅವರಲ್ಲಿ ಒಬ್ಬ ಹುಡುಗನು ಈ ವಿಷಯವನ್ನು ಕಲಿಯುತ್ತಿರುವಾಗ ತನ್ನ ವಿಚಾರಶಕ್ತಿಯ ಹಾಗು ನಿರೀಕ್ಷಣಶಕ್ತಿಯ ಉಪಯೋಗಮಾಡಿಕೊಂಡು ಈ ವಿಷಯದ ಜ್ಞಾನವನ್ನು ಸಂಪಾದಿಸಿಕೊಂಡನು. ಕೊಂಕಣಪಟ್ಟಿ ಅಸಾಮು ಪ್ರಾಂತಗಳಲ್ಲಿ ಮಳೆಯು ಹೆಚ್ಚು ಏಕೆ? ಸಿಂಧಪ್ರಾಂತದಲ್ಲಿ ಮಳೆ ಕಡಿಮೆ ಏಕೆ? ಅಯೋಧ್ಯಾ ಪ್ರಾಂತದಲ್ಲಿ ದಟ್ಟಾದ ಜನವಸತಿಯು ಏಕೆ? ಮಾರವಾಡ ಬಿಕಾನೇರಗಳಲ್ಲಿ ಅದು ಕಡಿಮೆ ಏಕೆ? ಕೃಷ್ಣಾ-ಗೋದಾವರಿ ಮುಂತಾದ ಸಹ್ಯಾದ್ರಿಯಲ್ಲಿ ಉಗಮಹೊಂದುವ ನದಿಗಳು ತಮ್ಮ ಸಮೀಪದಲ್ಲಿರುವ ಅರಬೀಸಮುದ್ರವನ್ನು ಬಿಟ್ಟು ದೂರದಲ್ಲಿರುವ ಬಂಗಾಲದ ಉಪಸಾಗರದ ಕಡೆಗೆ ಏಕೆ ಹರಿಯುವವು? ಹತ್ತಿಯ ಗಿರಣಿಗಳು ಮುಂಬಯಿ ಅಮದಾಬಾದ ಪಟ್ಟಣಗಳಲ್ಲಿ ಹೆಚ್ಚು ಏಕೆ? ಇತ್ಯಾದಿ ಸಂಗತಿಗಳ ವಿಚಾರ ಮಾಡಲಿಕ್ಕೆ ಹಚ್ಚಿ ಶಿಕ್ಷಕನು ಮೊದಲನೆಯ ಹುಡುಗನಿಗೆ ಭೂಗೋಲವನ್ನು ಕಲಿಸಿದನು. ಎರಡನೆಯ ಹುಡುಗನು ನದಿಗಳನ್ನೂ ಪಟ್ಟಣಗಳನ್ನೂ ಅವುಗಳ ಜನಸಂಖ್ಯೆಯನ್ನೂ ಭೂಶಿರ ಆಖಾತಗಳನ್ನೂ ಪಾಠಮಾಡಿ ಕಲಿತನು. ಕಾಲಾಂತರದಿಂದ ಅವರಿಬ್ಬರೂ ಕಲಿತ ವಿಷಯಗಳಲ್ಲಿ ಎಷ್ಟೋ ಭಾಗವನ್ನು ಮರೆಯುವರು; ಆದರೆ ಮೊದಲನೆಯ ಹುಡುಗನಿಗೆ ಭೂಗೋಲ ಕಲಿಸುವುದರಿಂದ ಆಗತಕ್ಕ ಪ್ರಯೋಜನವು ಆಯಿತು. ಎರಡನೆಯವನ ಶ್ರಮವು ಮಾತ್ರ ವ್ಯರ್ಥವಾಯಿತು. ಭೂಗೋಲ ಕಲಿಯುವುದರಿಂದ ಮೊದಲನೆಯ ಹುಡುಗನ

ಬುದ್ಧಿಗೆ ಯೋಗ್ಯ ವ್ಯಾಯಾಮವು ದೊರಕಿತು. ಅವನ ಬುದ್ಧಿಯು ವಿಕಾಸವಾಯಿತು. ಅವನು ಕಲಿತ ಭೂಗೋಲ ವಿಷಯಕ ಜ್ಞಾನವು ಮರೆತುಹೋದರೂ ಬುದ್ಧಿಯ ವಿಕಾಸವು ನಷ್ಟವಾಗುವುದಿಲ್ಲ. ಸ್ವತಃ ವಿಚಾರ ಮಾಡುವ ಹಾಗು ಸ್ವಂತ ಪ್ರಯತ್ನದಿಂದ ಜ್ಞಾನ ಸಂಪಾದಿಸುವ ರೂಢಿಯೂ ಜ್ಞಾನಾರ್ಜನೆಯ ಅಭಿರುಚಿಯೂ ಅವನಲ್ಲಿ ಸ್ಥಿರವಾಗಿ ಉಳಿಯುವವು.

ಹುಡುಗರು ಪರೀಕ್ಷೆಯಲ್ಲಿ ತೇರ್ಗಡೆಹೊಂದಬೇಕೆಂದು ಕಲಿಸುವ ಉದ್ದೇಶವಿರುವದಿಲ್ಲ. ಮಕ್ಕಳಿಗೆ ವಿಷಯವು ತಿಳಿಯಲಿ, ತಿಳಿಯದಿರಲಿ, ಅವರ ವಿಚಾರಶಕ್ತಿಗೆ ವ್ಯವಸಾಯವು ದೊರಕಲಿ, ದೊರಕದಿರಲಿ, ಆದರೆ ಪರೀಕ್ಷೆಯಲ್ಲಿ ತೇರ್ಗಡೆಹೊಂದುವ ಉದ್ದೇಶದಿಂದ ಪುಸ್ತಕದೊಳಗಿನ ಬೇರೆಬೇರೆ ಭಾಗಗಳನ್ನು ಪಾಠಮಾಡಬೇಕೆಂದು ಹುಡುಗರು ಶಾಲೆಗೆ ಬರುವುದಿಲ್ಲ. ಹೀಗೆ ಪಾಠಮಾಡುವುದರಿಂದ ಮಕ್ಕಳ ಸ್ಮರಣಶಕ್ತಿಗೆ ಮಾತ್ರ ಹೆಚ್ಚು ತೊಂದರೆಯಾಗುವುದು. ಬೌದ್ಧಿಕ ಹಾಗು ನೈತಿಕ ಪ್ರಯೋಜನವೇನೂ ಆಗುವುದಿಲ್ಲ. ಇಂಥ ಶಾಲೆಗಳಲ್ಲಿ ಹುಡುಗರಿಗೆ ಮನೋರಂಜಕ ಸಂಗತಿಗಳೇನೂ ಇರುವುದಿಲ್ಲಾದಕಾರಣ ಆ ಶಾಲೆಗಳಲ್ಲಿ ಕಲಿಯಲಿಕ್ಕೆ ಉತ್ಸಾಹವು ಇಲ್ಲದಂತಾಗುವುದು.

**ಸಾರಾಂಶ:** ಒಳ್ಳೇ ಶಿಕ್ಷಕನು "ನನ್ನ ವಿದ್ಯಾರ್ಥಿಗಳು ಪಾಠಮಾಡಿ ಪರೀಕ್ಷೆಯಲ್ಲಿ ತೇರ್ಗಡೆಹೊಂದಬೇಕೆಂದು" ಎಂದೂ ಇಚ್ಛಿಸುವದಿಲ್ಲ. ಆದರೆ— "ನನ್ನ ವಿದ್ಯಾರ್ಥಿಗಳು ಶರೀರದಿಂದ ಸುದೃಢರೂ, ನಿರೋಗಿಗಳೂ ಚುರುಕುಬುದ್ಧಿಯುಳ್ಳವರೂ, ಸುಶೀಲರೂ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಜರುಗಿಸುವ ಸಾಮರ್ಥ್ಯವುಳ್ಳವರೂ, ತಮ್ಮ ಬಿಡುವಿನ ವೇಳೆಯನ್ನು ಸದ್ವ್ಯಯ ಮಾಡಲಿಕ್ಕೆ ಮನಃಪೂರ್ವಕವಾಗಿ ಪ್ರಯತ್ನಮಾಡುವವರೂ ಆಗಬೇಕೆ"ಂದು ಇಚ್ಛಿಸುವನು. ಇಂಥ ಶಿಕ್ಷಕನ ವಿದ್ಯಾರ್ಥಿಗಳು ಆತನಿಗೆ ಸರ್ವಕಾಲವೂ ಋಣಿಯಾಗಿದ್ದು ಆತನ ವಿಷಯವಾಗಿ ಮನಸಿನಲ್ಲಿ ಪೂಜ್ಯಬುದ್ಧಿಯುಳ್ಳವರಾಗುವರು.

# ೨ನೆಯ ಪ್ರಕರಣ

## ಮಕ್ಕಳ ಶಾರೀರಿಕ ಮಾನಸಿಕ ಬೆಳವಣಿಗೆ.

ಮಕ್ಕಳ ಶಾರೀರಿಕ ಬೌದ್ಧಿಕ ಶಕ್ತಿಗಳನ್ನು ಅಭಿವೃದ್ಧಿಗೊಳಿಸುವುದೂ, ಅವರಿಗೆ ಒಳ್ಳೇ ಚಟಗಳನ್ನು ಹಚ್ಚಿ ಸುಶೀಲರನ್ನಾಗಿ ಮಾಡುವುದೂ ಶಿಕ್ಷಕನ ಕರ್ತವ್ಯವೆಂದು ಹಿಂದಿನ ಪ್ರಕರಣದಲ್ಲಿ ಹೇಳಿದೆ. ಮನುಷ್ಯನ ಬುದ್ಧಿ ಹಾಗು ಸ್ವಭಾವಗಳು ಅವನ ಮನಸಿನ ವಿಕಾಸವನ್ನು ಅವಲಂಬಿಸಿರುವವು. ಮನಸು ಹೆಚ್ಚು ಹೆಚ್ಚು ವಿಕಾಸವಾದಂತೆ ಅವನ ಬುದ್ಧಿಯು ಬೆಳೆದು ಅವನಲ್ಲಿ ಸ್ವತಂತ್ರ ವಿಚಾರಮಾಡುವ ಶಕ್ತಿಯು ಉತ್ಪನ್ನವಾಗುವುದು. ಗ್ರಾಹಕ ಶಕ್ತಿಯು ಬೆಳೆಯುವುದು. ಉಚ್ಚ ಮನೋವೃತ್ತಿಗಳು ಜಾಗೃತವಾಗುವವು. ಇನ್ನು, ಮನಸ್ಸಿನ ವಿಕಾಸವು ಶರೀರದ ವಿಕಾಸವನ್ನು ಅವಲಂಬಿಸಿರುವುದು. ಶರೀರವು ಸುದೃಢವಾದರೆ ಮನಸ್ಸಾದರೂ ಸುದೃಢವಾಗುವುದು. ಶರೀರವು ಅಶಕ್ತವೂ ರೋಗಿಷ್ಠವೂ ಆಗಿದ್ದರೆ ಮನಸ್ಸಾದರೂ ಕ್ರಿಯಾಶೂನ್ಯವೂ ದುರ್ಬಲವೂ ಆಗುವುದರಲ್ಲಿ ಸಂದೇಹವಿಲ್ಲ. ಮನುಷ್ಯನು ೨೧ ವರ್ಷದವನಾಗುವ ತನಕ ಅವನ ಶರೀರವು ಕ್ರಮಕ್ರಮವಾಗಿ ಬೆಳೆಯುತ್ತಿರುವುದು. ಈ ಅವಧಿಯಲ್ಲಿ ಮನಸ್ಸಾದರೂ ಅವ್ಯಾಹತವಾಗಿ ವಿಕಾಸ ಹೊಂದುತ್ತಿರುತ್ತದೆ. ಆದಕಾರಣ ಮಕ್ಕಳು ಪ್ರೌಢರಾಗುವವರೆಗೆ ಅವರ ಶಾರೀರಿಕ ಮಾನಸಿಕ ವಿಕಾಸವು ಯಾವ ಕ್ರಮದಿಂದ ಆಗುತ್ತಿರುವುದೆಂಬುದನ್ನು ಶಿಕ್ಷಕರು ಅರಿತುಕೊಳ್ಳುವುದು ಅತ್ಯವಶ್ಯವು. ಶಿಕ್ಷಕರಿಗೆ ಈ ಜ್ಞಾನವಿಲ್ಲದಿದ್ದರೆ ಅವರು ಮಕ್ಕಳಿಗೆ ಅವರ ವಯೋಮಾನಕ್ಕನುಸರಿಸಿ ಶಾರೀರಿಕ ಹಾಗು ಮಾನಸಿಕ ಶಿಕ್ಷಣವನ್ನು ಕೊಡಲಾರರು.

ಕೂಸು ಹುಟ್ಟಿದ ಸ್ವಲ್ಪ ಹೊತ್ತಿನಮೇಲೆ ಅದನ್ನು ನಿರೀಕ್ಷಿಸಿದರೆ ಅದು ತೀರ ಸೂಕ್ಷ್ಮವೂ ದುರ್ಬಲವೂ ಆಗಿದ್ದಂತೆ ಕಾಣುವುದು. ಮೊದಲಿನ ಮೂರು ತಿಂಗಳು ಅದು ನಿದ್ರೆಯಲ್ಲಿಯೇ ಬಹಳ ವೇಳೆಯನ್ನು

ಕಳೆಯುವುದು. ಹಸಿವೆಯಾದಾಗ ಕುಡಿಯುವುದು, ಮಲಗಿ ನಿದ್ದೆ ಮಾಡುವುದು ಇದೇ ಅದರ ಜೀವನ ಕ್ರಮವಾಗಿರುತ್ತದೆ. ಮೊದಲಿನ ಮೂರು ತಿಂಗಳಲ್ಲಿ ಅದರ ಚಲನವಲನಗಳು ತೀರ ಕಡಿಮೆ ಇರುತ್ತವೆ. ಈ ಅವಧಿಯಲ್ಲಿ ಅದರ ಮಿದುಳಿನ ಬೆಳವಣಿಗೆಯು ಒಳ್ಳೇ ಭರದಿಂದ ಸಾಗುತ್ತಿರುವುದು. ಮೂರು ತಿಂಗಳ ತರುವಾಯ ಕೂಸಿನ ಕೈಕಾಲುಗಳ ಸಂಚಲನವು ಹೆಚ್ಚಾಗುವುದು. ಈ ಸಂಚಲನದಿಂದ ಕೂಸುಗಳಿಗೆ ಸಾಕಷ್ಟು ವ್ಯಾಯಾಮವು ದೊರೆಯುವುದು. ಅವರ ಸ್ನಾಯುಗಳ ಚಪಲತೆಯೂ ಕಸುವೂ ಬೆಳೆಯುವುವು. ನಾಲ್ಕನೆಯ ತಿಂಗಳಲ್ಲಿ ಕೂಸುಗಳ ದೃಷ್ಟಿಯು ಸ್ಥಿರವಾಗುವುದು. ಬೆಳಕು ಹಾಗೂ ತೀವ್ರ ಬಣ್ಣದ ಪದಾರ್ಥಗಳ ಕಡೆಗೆ ದೃಷ್ಟಿಯನ್ನಿಟ್ಟು ನೋಡಲು ಅದು ಸಮರ್ಥವಾಗುವುದು. ೫ ನೆಯ ೬ನೆಯ ತಿಂಗಳುಗಳಲ್ಲಿ ಕೂಸು ಬೇರೆ ಬೇರೆ ಬಣ್ಣದ ಪದಾರ್ಥಗಳು ದೃಷ್ಟಿಗೆ ಬಿದ್ದಕೂಡಲೆ ಕೈಕಾಲು ಅಲ್ಲಾಡಿಸುತ್ತ ಅವುಗಳನ್ನು ತಕ್ಕೊಳ್ಳುವ ಇಚ್ಛೆಯನ್ನು ತೋರಿಸುವುದು; ಆದರೆ ಮೊದಲು ಕೆಲವು ದಿವಸ ಆ ಪದಾರ್ಥವನ್ನು ಹಿಡಿಯಲು ಶಕ್ಯವಾಗುವುದಿಲ್ಲ. ತರುವಾಯ ಸ್ವಲ್ಪ ದಿವಸಗಳಲ್ಲಿ ಕೂಸು ಆ ಪದಾರ್ಥವನ್ನು ತನ್ನ ಮುಷ್ಟಿಯಲ್ಲಿ ಹಿಡಿಯುವ, ಬಾಯೊಳಗೆ ಹಾಕಿಕೊಳ್ಳುವ, ಅಲ್ಲಾಡಿಸುವ ಕಾರ್ಯಗಳನ್ನು ಮಾಡುತ್ತದೆ. ಕಾಲಾಂತರದಮೇಲೆ ರೂಢಿಯಿಂದ ಅವೇ ಕಾರ್ಯಗಳನ್ನು ಅದು ಸಹಜವಾಗಿ ಮಾಡುವುದು. ಮೊದಲು ಕೂಸು ಒಂದು ಮಗ್ಗಲಿನಿಂದ ಮತ್ತೊಂದು ಮಗ್ಗಲಿಗೆ ಹೊರಳಲಿಕ್ಕೆ ಕಲಿಯುವುದು. ಆ ಬಳಿಕ ಅದು ನೆಲಕ್ಕೆ ಹೊಟ್ಟೆ ಹಚ್ಚುವ ಯತ್ನ ಮಾಡುವುದು. ಆ ತರುವಾಯ, ಹೊಟ್ಟೆ ಹೊಸೆಯುತ್ತ ಮುಂದೆ ಸಾಗುವ ಪ್ರಯತ್ನ ಮಾಡುವುದು. ಕಾಲಾಂತರದಲ್ಲಿ ರೂಢಿಯು ಹೆಚ್ಚಾಗಲು ಈ ಕಾರ್ಯಗಳನ್ನು ಅದು ಸಹಜವಾಗಿ ಮಾಡಲಾರಂಭಿಸುವುದು. ಎಂಟನೆಯ ಅಥವಾ ಒಂಬತ್ತನೆಯ ತಿಂಗಳಲ್ಲಿ ಕೂಸು ಹೊಟ್ಟೇ ಹೊಸೆಯುವುದು; ಇಲ್ಲವೆ ಅಂಬೆಗಾಲಿಕ್ಕುವುದು.

ಮಗುವು ಒಂದೂವರೆ ಅಥವಾ ಎರಡು ವರ್ಷದ್ದಾಗಲು ಅದಕ್ಕೆ ಕಾಲು ಬರುವವು. ಅದು ನಡೆದಾಡುವುದರಿಂದಲೂ, ಆಡುವುದರಿಂದಲೂ, ಅದರ ಸ್ನಾಯುಗಳಿಗೂ ಜ್ಞಾನೇಂದ್ರಿಯಗಳಿಗೂ ಸಾಕಷ್ಟು ವ್ಯವಸಾಯವು ದೊರೆಯುವುದು. ಆದರಿಂದ ಅವುಗಳ ಶಕ್ತಿಯೂ, ಚಪಲತೆಯೂ ಕಾರ್ಯಕ್ಷಮತೆಯೂ ಬೆಳೆಯುವವು. ಈ ಬೆಳವಣಿಗೆಯ ಸಂಗಡ ಮಕ್ಕಳ ಮಿದುಳಿನ ಶಕ್ತಿಯೂ ಬೆಳೆಯುತ್ತ ಹೋಗುವುದು. ಮತ್ತು ಜ್ಞಾನಸಂಗ್ರಹ ಮಾಡುವ ಲವಲವಿಕೆಯೂ ವಿಚಾರ ಮಾಡುವ ಕಾರ್ಯವೂ ವ್ಯವಸ್ಥಿತವಾಗಿ ಪ್ರಾರಂಭವಾಗುವುವು. ಮಗುವು ಮೂರು ವರ್ಷದ್ದಾಗುವಷ್ಟರಲ್ಲಿ ನಡೆಯುವುದು, ಓಡುವುದು, ಜಿಗಿಯುವುದು, ವಸ್ತುಗಳನ್ನು ಒಗೆಯುವುದು, ತೂರುವುದು, ಹಿಡಿಯುವುದು, ಎರಡು ಅಥವಾ ಹೆಚ್ಚು ವಸ್ತುಗಳನ್ನು ಸರಿಯಾಗಿ ಇಡುವುದು, ಅಥವಾ ಒಂದರಮೇಲೊಂದು ರಚಿಸುವುದು, ಇತ್ಯಾದಿ ಅನೇಕ ಕೃತಿಗಳನ್ನು ಮಾಡಲಿಕ್ಕೆ ಕಲಿಯುವುದು. ಹುಟ್ಟಿದಂದಿನಿಂದ ಮೂರು ವರ್ಷಗಳ ಈ ಅವಧಿಗೆ ಬಾಲ್ಯದ ಪೂರ್ವಾರ್ಧವೆಂಬ ಹೆಸರು.

ಮಕ್ಕಳ ಬೆಳವಣಿಗೆಯ ಕಾರ್ಯವು, ಅದು ಎಂಟು ವರ್ಷದ್ದಾಗುವವರೆಗೆ ಒಳ್ಳೇ ಭರದಿಂದ ಸಾಗುವುದು. ಈ ವಯಸ್ಸಿನಲ್ಲಿ ಹುಡುಗರಿಗೆ ನಡೆಯೋಣ, ಓಡೋಣ, ಜಿಗಿಯೋಣ ವಸ್ತುಗಳನ್ನು ಒಗೆಯೋಣ, ಈ ಮುಂತಾದ ಕಾರ್ಯಗಳು ಬಹಳ ಸೇರುವವು. ಎರಡು ಅಥವಾ ಹೆಚ್ಚು ಇಂದ್ರಿಯಗಳನ್ನು ಉಪಯೋಗಿಸಿ ವ್ಯವಸ್ಥಿತವಾಗಿ ಮಾಡತಕ್ಕ ಕಾರ್ಯಗಳನ್ನು ಮಗುವು ಈ ವಯಸ್ಸಿನಲ್ಲಿ ಮಾಡಲಿಕ್ಕೆ ಕಲಿಯುವುದು. ಉದಾಹರಣಾರ್ಥವಾಗಿ ಹಗ್ಗದ ಮೇಲಿಂದ ಜಿಗಿಯೋಣ, ಎರಡೂ ಕೈಗಳಿಂದ ಹಗ್ಗವನ್ನು ತಲೆಯ ಮೇಲಿಂದ ಒಮ್ಮೆಲೆ ಕೆಳಗೆ ತರೋಣ ಮತ್ತು ಅದು ಕೆಳಗೆ ಬರುವುದರ ಕಡೆಗೇ ದೃಷ್ಟಿ ಇಟ್ಟು ಬಂದ ಕೂಡಲೆ ಅದನ್ನು ಎರಡೂ ಕಾಲುಗಳಿಂದ ಒಮ್ಮೆಲೆ ದಾಟಿ ಜಿಗಿಯುವುದು; ತಾಳವನ್ನು ಹಿಡಿಯುವುದಕ್ಕೂ ತಾಳಕ್ಕೆ ಸರಿಯಾಗಿ ಹಾಡುವುದಕ್ಕೂ, ತಾಳಕ್ಕೆ ಅನುಸರಿಸಿ ಹೆಜ್ಜೆಗಳನ್ನು ಹಾಕುವದಕ್ಕೂ ಮಗುವು ಇದೇ

ವಯಸ್ಸಿನಲ್ಲಿ ಕಲಿಯುವುದು, ಈ ಕಾಲದಲ್ಲಿ ಮಗುವು ಒಂದೇ ಸಮನೆ ಚಲನವಲನಗಳನ್ನು ಮಾಡುತ್ತಿರುವುದು ; ಸುಮ್ಮನೆ ಕೂಡುವುದು ಅದಕ್ಕೆ ಸೇರುವುದಿಲ್ಲ. ಶಾರೀರಿಕ ಸಂಚಲನಗಳ ಈ ಸೇರಿಕೆಯಿಂದ ಮಗುವು ಅನೇಕ ಕೆಲಸಗಳನ್ನು ಮಾಡುತ್ತದೆ. ಈ ಕೆಲಸಗಳ ಯೋಗ ದಿಂದ ಅದರ ಜ್ಞಾನೇಂದ್ರಿಯಗಳ ಸ್ನಾಯುಗಳ ಶಕ್ತಿಯೂ ಚಪಲತೆಯೂ ಬೆಳೆಯುತ್ತವೆ. ಜ್ಞಾನೇಂದ್ರಿಯಗಳು ಹೆಚ್ಚು ಕಾರ್ಯಕ್ಷಮವಾದ ದ್ದರಿಂದ ಮಕ್ಕಳ ಜ್ಞಾನವು ದಿನದಿನಕ್ಕೆ ಬೆಳೆಯುತ್ತ ಹೋಗುವುದು, ಈ ಕಾರಣದ ಮೂಲಕವಾಗಿ ಸುಧಾರಿಸಿದ ದೇಶಗಳೊಳಗಿನ ಚಿಕ್ಕ ಮಕ್ಕಳ ಶಾಲೆಯಲ್ಲಿ ಆಟ, ಗಾಯನ, ನೃತ್ಯ, ನಾಟಕ, ಸಂಭಾಷಣ, ಮುಂತಾದ ವಿಷಯಗಳನ್ನು ಬಹಳವಾಗಿ ಉಪಯೋಗಿಸುತ್ತಾರೆ. ಈ ಕಾಲದಲ್ಲಿ ಮಕ್ಕಳ ಸಂಚಲನಗಳಿಗೆ ಪ್ರತಿಬಂಧ ಮಾಡಿದರೆ ಅದರಿಂದ ಅವರ ಶರೀರಪ್ರಕೃತಿಗೆ ಅಪಾಯವಾಗುವುದಲ್ಲದೆ, ಅವರ ಮಾನಸಿಕ ಬೆಳವಣಿಗೆಯೂ ನಿಂತುಬಿಡುವುದು. ಮಕ್ಕಳ ನಾಲ್ಕನೆಯ ವರ್ಷದ ವಯಸ್ಸಿನಿಂದ ೫ ವರ್ಷಗಳ ಅವಧಿಗೆ ನಾವು ಬಾಲ್ಯದ ಉತ್ತರಾರ್ಧವೆಂದು ತಿಳಿಯುವ; ಮಗುವು ಎಂಟು ವರ್ಷದ್ದಾದ ಕೂಡಲೆ ಅದರ ಮಿದುಳಿನ ತೂಕವು ಬೆಳೆಯುವುದು ಬಹುತರವಾಗಿ ನಿಂತುಬಿಡುವುದು. ಇಲ್ಲಿಂದ ಮುಂದಿನ ಕಾಲದಲ್ಲಿ ಅದು ಬಹುತರವಾಗಿ ಬೆಳೆಯುವುದಿಲ್ಲ.

ಇಲ್ಲಿಂದ ಮುಂದಿನ ನಾಲ್ಕು ವರ್ಷಗಳ ಅವಧಿಯಲ್ಲಿ ಮಕ್ಕಳ ಶರೀರದ ಬೆಳೆವಣಿಗೆಯು ಮೊದಲಿನಂತೆ ಭರದಿಂದ ಸಾಗುವುದಿಲ್ಲ. ತೀರ ಸಾವಕಾಶವಾಗಿ ಸಾಗುವುದು. ಈ ಕಾಲದಲ್ಲಿ ಮಕ್ಕಳು ಕೌಶಲ್ಯದ ಚಾಪಲ್ಯದ ಅನೇಕ ಕೆಲಸಗಳನ್ನು ಮಾಡಲಿಕ್ಕೆ ಕಲಿಯುತ್ತಾರೆ. ಹಾಡೋಣ ಬಾರಿಸೋಣ, ಈಸೋಣ, ಸಾಯಕಲ್ ಏರಾಟ ಮುಂತಾದ ಅನೇಕ ಕೆಲಸಗಳನ್ನು ಮಕ್ಕಳು ಇದೇ ವಯಸ್ಸಿನಲ್ಲಿ ಕಲಿಯುತ್ತಾರೆ. ಮತ್ತು ಸ್ನಾಯುಗಳ ಚಪಲತೆ, ಕಸುವು ಸಹನಶೀಲತೆ ಈ ಶಕ್ತಿಗಳೂ ಇದೇ ವಯಸ್ಸಿನಲ್ಲಿ ಬೆಳೆಯುವವು. ಡ್ರಿಲ್, ಲಾಠಿ, ಲೇಝೀಮು, ಮುಂತಾದ ವ್ಯಾಯಾಮಗಳಿಂದಲೂ, ಆಟಗಳಿಂದಲೂ, ಮಕ್ಕಳ

ಶರೀರವು ಪ್ರಮಾಣಕ್ಕೆ ಸರಿಯಾದದ್ದೂ ಸುಸಂಬದ್ಧವಾದದ್ದೂ ಆಗಲಿಕ್ಕೆ ಇದೇ ಕಾಲವು ಯೋಗ್ಯವಾದದ್ದು. ಈ ಕಾಲಕ್ಕೆ ನಾವು ಸ್ಥಿರತೆಯ ಕಾಲವೆಂದು ಅನ್ನಬಹುದು.

ಈ ಸ್ಥಿರತೆಯ ಕಾಲದ ತರುವಾಯ, ತಾರುಣ್ಯದ ಪೂರ್ವಸಿದ್ಧತೆಯ ಕಾಲವು ಬರುವುದು. ಈ ಕಾಲವು ಸುಮಾರು ಎರಡು ವರ್ಷ ಇರುವುದು. ಈ ಅವಧಿಯಲ್ಲಿ ಶರೀರದ ಅವಯವಗಳ ಬೆಳವಣಿಗೆಯು ಭರದಿಂದ ಸಾಗುವುದು. ಇಡೀ ಶರೀರದ ಮಾನದಿಂದ ಅವಯವಗಳ ಬೆಳವಣಿಗೆಯು ಹೆಚ್ಚಾಗುವುದರಿಂದ ಶರೀರವು ಪ್ರಮಾಣಕ್ಕೆ ಸರಿಯಾದದ್ದಾಗಿ ಕಾಣುವುದಿಲ್ಲ. ಈ ಕಾಲದಲ್ಲಿ ಹುಡುಗರಿಗೆ ಯೋಗ್ಯವಾದ ವ್ಯಾಯಾಮವನ್ನು ಕೊಟ್ಟು ಶರೀರದ ಬೆಳವಣಿಗೆಯು ಪ್ರಮಾಣಕ್ಕೆ ಸರಿಯಾದದ್ದಾಗುವಂತೆ ಎಚ್ಚರಪಡಬೇಕಾಗುವುದು. ಈ ಕಾಲದಲ್ಲಿ ಮಕ್ಕಳ ಮೈಯಲ್ಲಿ ಕಸುವು ಬೆಳೆಯುವುದು. ಆದರೆ ಮೊದಲಿನಂತೆ ಯಾವಾಗಲೂ ಚಲನವಲನಗಳನ್ನು ಮಾಡುವ ಇಚ್ಛೆಯು ಆಗುವುದಿಲ್ಲ. ಈ ಕಾಲಕ್ಕೆ **ತಾರುಣ್ಯದ ಸಂಧಿಕಾಲ**ವೆಂದು ಅನ್ನಬಹುದು.

ಹದಿನೈದನೆಯ ವರ್ಷದಿಂದ ಪುನಃ ಮಕ್ಕಳ ತೂಕ ಎತ್ತರಗಳು ಬೆಳೆಯಲಾರಂಭಿಸುವುವು. ಶರೀರವು ಪ್ರಮಾಣಬದ್ಧವಾಗುವುದು. ಹುಡುಗರ ಹಾಗು ಹುಡುಗಿಯರ ಶರೀರದಲ್ಲಿ ಇದೇ ಕಾಲಕ್ಕೆ ಮಹತ್ವದ ಹೆಚ್ಚುಕಡಿಮೆಗಳಾಗುವುವು ಸಣ್ಣಪುಟ್ಟ ಬೇನೆಬೇಸರಿಕೆಗಳು ಈ ಕಾಲದಲ್ಲಿ ಬರುವ ಸಂಭವವು ಹೆಚ್ಚಿರುವುದು. ಆದರೆ ಅವುಗಳಿಂದ ಮಕ್ಕಳ ಶರೀರ ಪ್ರಕೃತಿಗೆ ಅಪಾಯವಾಗುವುದಿಲ್ಲ. ರಕ್ತಾಶಯವು ಒಳ್ಳೇ ಬಲಿಷ್ಠವಾಗುವುದು. ಈ ವಯಸ್ಸಿನಲ್ಲಿ ದೃಷ್ಟಿಯ ವಿಷಯವಾಗಿ ಬಹಳ ಎಚ್ಚರಪಡಬೇಕಾಗುವುದು. ಅದಕ್ಕೆ ಕೆಲಸವು ಹೆಚ್ಚಾದರೆ ಅದು ಕೆಡುವ ಸಂಭವವಿರುವುದು. ಈ ಎರಡು ವರ್ಷಗಳ ಕಾಲಕ್ಕೆ **ತಾರುಣ್ಯದ ಉಷಃಕಾಲ**ವೆಂದು ಅನ್ನಬಹುದು.

ಮಕ್ಕಳ ಆಯುಷ್ಯದೊಳಗಿನ ೧೭ ರಿಂದ ೨೧ ರ ವರೆಗಿನ ೫ ವರ್ಷಗಳ ಕಾಲವು ಒಳ್ಳೇ ಮಹತ್ವದ ಕಾಲವೆಂದು ಹೇಳಬಹುದು. ಇದೇ

ಕಾಲದಲ್ಲಿ ಎಲ್ಲ ಶರೀರಾವಯವಗಳು ಸುದೃಢವಾಗುವವು. ಶಾರೀರಿಕ ಶಕ್ತಿಯು ಬೆಳೆಯುವುದು. ಚಿಕ್ಕ ವಯಸ್ಸಿನೊಳಗಿನ ಚಪಲತೆಯನ್ನು ಕೂಡ ಅವರು ಈ ವಯಸ್ಸಿನಲ್ಲಿ ಪುನಃ ಸಂಪಾದಿಸಬಹುದು. ಈ ವಯಸ್ಸಿನ ಎಷ್ಟೋ ಹುಡುಗರು ಆಟದಿಂದಲೂ ವ್ಯಾಯಾಮದಿಂದಲೂ ಒಂದೇ ಅವಯವದ ಸ್ನಾಯುಗಳ ಚಪಲತೆಯನ್ನೂ ಸಾಮರ್ಥ್ಯವನ್ನೂ ಬೆಳಿಸಿಕೊಳ್ಳುತ್ತಾರೆ. ಆದರೆ ಇತರ ಅವಯವಗಳ ಬೆಳವಣಿಗೆಯ ಕಡೆಗೆ ದುರ್ಲಕ್ಷ್ಯವಾಗುವುದರಿಂದ ಅದರ ಸ್ನಾಯುಗಳು ದುರ್ಬಲವಾಗುವವು. ಇದು ಇಷ್ಟವಲ್ಲ. ಈ ಅನರ್ಥವನ್ನು ತಪ್ಪಿಸುವದಕ್ಕಾಗಿ ಶಿಕ್ಷಕರೂ ಪಾಲಕರೂ ಎಚ್ಚರಪಡತಕ್ಕದ್ದು. ಈ ಅಯ್ದು ವರ್ಷಗಳ ಅವಧಿಗೆ **ತಾರುಣ್ಯದ ಪ್ರಭಾತಕಾಲ**ವೆಂದು ಅನ್ನಬಹುದು.

ಇಪ್ಪತ್ತೊಂದನೆಯ ವರ್ಷದ ತರುವಾಯ ಮನುಷ್ಯನ ಎತ್ತರತೆಯು ಹೆಚ್ಚಾಗುವುದಿಲ್ಲ. ಇಲ್ಲಿಂದ ಮುಂದೆ ಶರೀರವು ಹೆಚ್ಚು ತುಂಬುತ್ತ ಮಾತ್ರ ಹೋಗುವುದು.

ಇನ್ನು, ನಾವು ಮಕ್ಕಳ ಮಾನಸಿಕ ವಿಕಾಸವು ಹೇಗೆ ಆಗುತ್ತ ಹೋಗುವುದೆಂಬುದನ್ನು ಸಂಕ್ಷಿಪ್ತವಾಗಿ ವಿವರಿಸುವ. ಕೂಸು ಹುಟ್ಟಿದಂದಿನಿಂದ ಮೂರು ತಿಂಗಳ ಕಾಲವನ್ನು ನಿದ್ದೆಯಲ್ಲಿಯೇ ಕಳೆಯುವುದೆಂದು ಹಿಂದೆ ಹೇಳಿದ್ದೇವೆ. ಈ ಕಾಲಕ್ಕೆ ಅದರ ಜ್ಞಾನೇಂದ್ರಿಯಗಳ ಶಕ್ತಿಯು ತೀರ ಕಡಿಮೆ ಇರುವುದು. ಕಣ್ಣಿನ ಮೇಲೆ ಝುಗಝುಗಿಸುವ ಪ್ರಕಾಶವು ಬಿದ್ದರೆ ಅದು ಕಣ್ಣು ಮುಚ್ಚಿಬಿಡುವುದು. ಅದರ ಬಳಿಯಲ್ಲಿ ದೊಡ್ಡ ಸಪ್ಪಳವಾದರೆ ಅದು ಒಮ್ಮೆಲೆ ಗಾಬರಿಯಾಗಿ ಅಳುವುದು. ಕ್ವಿನೈನದಂಥ ಕಹಿ ಪದಾರ್ಥವನ್ನು ಅದರ ನಾಲಗೆಯ ಮೇಲೆ ಇಟ್ಟರೆ ಮೋರೆಯನ್ನು ಕಿವುಚಿಕೊಳ್ಳುವುದು. ಮೈಗೆ ತಣ್ಣಗಿನ ಇಲ್ಲವೆ ಬಿಸಿಯಾದ ಪದಾರ್ಥಗಳು ತಗಲಿದರೆ ಅದು ಅಳಲಾರಂಭಿಸುವುದು. ಅದರ ಜ್ಞಾನೇಂದ್ರಿಯದಿಂದ ಇದಕ್ಕಿಂತ ಹೆಚ್ಚಿನ ಜ್ಞಾನವೇನೂ ಅದಕ್ಕೆ ಆಗುವುದಿಲ್ಲ. ಮೂರು ತಿಂಗಳಾದ ಮೇಲೆ ಕೂಸುಗಳ ದೃಷ್ಟಿಯು ಸ್ಥಿರವಾಗುವುದು. ಆಗ ಅದು ಪದಾರ್ಥಗಳ ಕಡೆಗೆ ಲಕ್ಷ್ಯವಿಟ್ಟು ನೋಡಲಾರಂಭಿಸುವುದು.

ಬೇಗನೆ ತಾಯಿಯ ಗುರುತು ಹಿಡಿಯುವುದು; ಅವಳ ಧ್ವನಿಯನ್ನೂ ಗೊತ್ತು ಹಿಡಿಯುವುದು. ಹುಡುಗರ ಮುಂದೆ ಝಗಝಗ ಹೊಳೆಯುವ ಬಣ್ಣದ ಪದಾರ್ಥವನ್ನು ಹಿಡಿದರೆ ಅದು ಅದನ್ನು ಲಕ್ಷ್ಯಪೂರ್ವಕವಾಗಿ ನೋಡತೊಡಗುವುದು. ಮಗುವಿನ ಬಳಿಯಲ್ಲಿ ಒಂದು ಪಾತ್ರೆಯನ್ನು ಬಾರಿಸಲಾರಂಭಿಸಿದರೆ ಅದು ಅದರ ಕಡೆಗೇ ತಿರುಗಿ ಆ ಸಪ್ಪಳವನ್ನು ಕೇಳತೊಡಗುವುದು. ಈ ಮೇರೆಗೆ ಕೂಸಿನ ಚಕ್ಷುರಿಂದ್ರಿಯದ ಹಾಗು ಶ್ರವಣೇಂದ್ರಿಯದ ಶಕ್ತಿಗಳು ಬೆಳೆಯುತ್ತಹೋಗುವುವು. ಅವು ಕೂಸಿಗೆ ಜ್ಞಾನವನ್ನುಂಟುಮಾಡುವ ಕಾರ್ಯಕ್ಕೆ ತೊಡಗುವವು. ಮಕ್ಕಳಿಗೆ ಜ್ಞಾನವನ್ನು ಮಾಡಿಕೊಡುವ ಕೆಲಸದಲ್ಲಿ ಅವರ ಸ್ನಾಯುಗಳು—ವಿಶೇಷವಾಗಿ ಬೆರಳಿನೊಳಗಿನ ಸ್ನಾಯುಗಳು ಬಹಳವಾಗಿ ಉಪಯೋಗವಾಗುವುವು. ಅಯ್ದನೆಯ ತಿಂಗಳಲ್ಲಿ ಮಕ್ಕಳಿಗೆ ಕೈಯಲ್ಲಿ ಪದಾರ್ಥಗಳನ್ನು ಹಿಡಿಯಲಿಕ್ಕೆ ಬರುವುದು. ವಸ್ತುಗಳನ್ನು ಕೈಯಲ್ಲಿ ಹಿಡಿಯುವುದು, ಅದನ್ನು ಅಲ್ಲಾಡಿಸುವುದು, ಅದನ್ನು ಬಾಯಲ್ಲಿಟ್ಟುಕೊಳ್ಳುವುದು, ಅದನ್ನು ತೊಟ್ಟಲದ ಪಟ್ಟಿಗಳಿಗೆ ಅಪ್ಪಳಿಸುವುದು ಈ ಮೊದಲಾದ ಕಾರ್ಯಗಳನ್ನು ಮಾಡಿ ಮಗುವು ಆ ವಸ್ತುವಿನ ಗುಣಧರ್ಮಗಳ ಜ್ಞಾನವನ್ನು ಸಾವಕಾಶವಾಗಿ ಸಂಪಾದಿಸುವುದು ಅದಕ್ಕೆ ಈಗ ಸ್ಮರಣ ವಾಗುತ್ತಿರುವಂತೆ ವ್ಯಕ್ತವಾಗುವುದು. ತಾಯಿಯ ಕೈಯಲ್ಲಿ ಚಮಚೆಯನ್ನು ನೋಡಿದಕೂಡಲೆ ತಾಯಿಯು ಇನ್ನು ನನಗೆ ಹಾಲು ಕುಡಿಸುವಳೆಂದು ಸಂತೋಷದಿಂದ ಕೈಕಾಲು ಅಲ್ಲಾಡಿಸುವುದು. ತಾಯಿಯು ಅಂಗಿಯನ್ನು ಕಳೆಯಹತ್ತಿದರೆ, ಅವಳು ಇನ್ನು ನನಗೆ ಎರೆಯುವಳೆಂದು ಅಳಲಾರಂಭಿಸುವುದು. ತಾಯಿ, ತಂದೆ, ಅಣ್ಣ, ಅಕ್ಕ ಮೊದಲಾದವರನ್ನು ಅದು ಚೆನ್ನಾಗಿ ಗುರುತಿಸುವುದು. ಕೂಸು, ಹರಿದಾಡುತ್ತಿರುವಾಗ ಜ್ಞಾನೇಂದ್ರಿಯಗಳ ದ್ವಾರದಿಂದ ಅದಕ್ಕೆ ಬೇರೆ ಬೇರೆ ವಸ್ತುಗಳ ಹಾಗು ತನ್ನ ಸುತ್ತುಮುತ್ತಲಿನ ಜಗತ್ತಿನ ಜ್ಞಾನವಾಗುವುದು.

ಕೂಸು ಒಂದುವರ್ಷದ್ದಾಯಿತೆಂದರೆ ಸ್ವಲ್ಪ ಸ್ವಲ್ಪ ಮಾತಾಡಲಾರಂಭಿಸುವುದು. ಹಿರಿಯರು ವಸ್ತುಗಳನ್ನೂ, ಪ್ರಾಣಿಗಳನ್ನೂ, ಕ್ರಿಯೆ

ಗಳನ್ನೂ ಯಾವ ಹೆಸರುಗಳಿಂದ ಕರೆಯುವರೋ, ಅವುಗಳನ್ನು ಲಕ್ಷ್ಯ ಪೂರ್ವಕವಾಗಿ ಕೇಳುವುದು; ಆ ಬಳಿಕ ಅವುಗಳನ್ನು ತಾನೂ ಬಾಯಿಂದ ಉಚ್ಚರಿಸುವುದು, ಈ ಕಾರ್ಯವು ಯಾವಾಗಲೂ ನಡೆಯುತ್ತಲೇ ಇರುವುದು. ಅವರ ಶಬ್ದಸಂಗ್ರಹವು ಬೆಳೆದಂತೆ ಅವರ ಜ್ಞಾನವೂ ಹೆಚ್ಚಾಗುತ್ತಿರುವುದು.

ಮಗುವು ತನ್ನ ಸುತ್ತುಮುತ್ತು ನೋಡುವ ಪದಾರ್ಥಗಳಲ್ಲಿ ಕೆಲವು ಚಲನವನ್ನು ಹೊಂದುತ್ತಿರುವುದೂ ಕೆಲವು ತೀರ ಸ್ಥಿರವಾಗಿರುವದೂ ಅದಕ್ಕೆ ಗೊತ್ತಾಗುವುದು. ಮುಂದೆ ಬರಬರುತ್ತಾ ಸಜೀವ ಹಾಗು ನಿರ್ಜೀವ ವಸ್ತುಗಳಲ್ಲಿರುವ ಭೇದವು ಅಲ್ಪ ಸ್ವಲ್ಪ ತಿಳಿಯುಲಾರಂಭಿಸುವುದು. ಅದರಂತೆ ತಾವು ಮತ್ತು ಪರರು ಇದರೊಳಗಿನ ಭೇದವನ್ನು ಅರಿತುಕೊಳ್ಳುವುದು. ಮಕ್ಕಳು ನಡೆದಾಡಲಾರಂಭಿಸಿದರೆಂದರೆ ಅವರ ಅನುಭವವೂ ಜ್ಞಾನವೂ ಮತ್ತಿಷ್ಟು ಹೆಚ್ಚಾಗುವುದು. ಅವರಲ್ಲಿ ಜಿಜ್ಞಾಸೆಯೂ, ಕೃತಿಪ್ರೇಮವೂ ಜಾಗೃತವಾಗುವುದರಿಂದ ಪದಾರ್ಥಗಳ ಹಾಗು ಪ್ರಾಣಿಗಳ ಕೃತಿಗಳ ಜ್ಞಾನವು ಅವರಿಗೆ ಭರದಿಂದ ಆಗಲಾರಂಭಿಸುವುದು. ಮೃದು, ಕಠಿಣ, ತಣ್ಣಗೆ, ಬೆಚ್ಚಗೆ, ದೊಡ್ಡದು, ಸಣ್ಣದು. ಇವುಗಳ ಕಲ್ಪನೆಯು ಅವರ ಮನಸಿನಲ್ಲಿ ಉತ್ಪನ್ನವಾಗುವುದು. ಆಕಳು ನಾಯಿ, ಬೆಕ್ಕು, ಕುದುರೆ ಮುಂತಾದ, ಅವರ ಸುತ್ತುಮುತ್ತು ಇರುವ ಪ್ರಾಣಿಗಳನ್ನೂ ಯಾವಾಗಲೂ ಕಣ್ಣಮುಂದೆ ಇರುವ ಪದಾರ್ಥಗಳನ್ನೂ ಅವರು ಚೆನ್ನಾಗಿ ಗುರುತುಹಿಡಿಯುವರು. ೩ನೆಯ ವರ್ಷದಿಂದ ಮಕ್ಕಳ ಕಲ್ಪನಾಶಕ್ತಿಯು ಅಲ್ಪಸ್ವಲ್ಪ ವ್ಯಕ್ತವಾಗುವುದು. ಅಣ್ಣನ ಕೈಯೊಳಗೆ ಸುಳ್ಳು ಸುಳ್ಳೇ 'ಪೇಢೆ ಹಿಡಿ' ಎಂದು ಕೊಟ್ಟು, ವಿನೋದ ಮಾಡುವುದು ಕಲ್ಪನಾಶಕ್ತಿಯ ದ್ಯೋತಕವಾಗಿರುತ್ತದೆ. ಅವರ ಮಾತುಗಳಿಂದಲೂ ಕೃತಿಗಳಿಂದಲೂ, ವಿಚಾರಶಕ್ತಿಯು ಒಡಮೂಡಲಾರಂಭಿಸುವುದೆಂದು ತಿಳಿಯುವುದು.

ಈ ಮೊದಲಿನ ಮೂರುವರ್ಷದ ಅವಧಿಯಲ್ಲಿ ಮಕ್ಕಳ ಅನುಭವವೂ, ಪೂರ್ವಜ್ಞಾನವೂ ತೀರ ಕಡಿಮೆ ಇರುವುದರಿಂದ ಅವರ ವಿಚಾರ

ಶಕ್ತಿಯಾದರೂ ತೀರ ದುರ್ಬಲವಿರುತ್ತದೆ. ಪದಾರ್ಥಗಳನ್ನು ಎಲ್ಲ ರೀತಿಯಿಂದ ಸರಿಯಾಗಿ ನಿರೀಕ್ಷಣಮಾಡದಿದ್ದರೆ ಅವುಗಳ ಯಥಾರ್ಥವೂ ಸ್ಪಷ್ಟವೂ ಆದ ಜ್ಞಾನವು ಆಗುವುದಿಲ್ಲ. ಮಕ್ಕಳ ನಿರೀಕ್ಷಣವು ಈ ವಯಸ್ಸಿನಲ್ಲಿ ಏಕಾಂಗಿಯಾದದ್ದೂ ಮೇಲೆ ಮೇಲೆ ಕಂಡದ್ದೂ ಆಗಿರುವು ದರಿಂದ ಅವರ ಜ್ಞಾನವು ಕೂಡ ಅಸ್ಪಷ್ಟವಾದದ್ದೂ ಅಯಥಾರ್ಥ ವಾದದ್ದೂ ಆಗಿರುವುದು. ನೈತಿಕ ಕಲ್ಪನೆಗಳೇ ಇಲ್ಲದ್ದರಿಂದ ತಾತ್ಕಾಲಿ ಕವಾಗಿ ಆಗುವ ಪ್ರೇರಣೆಗಳಿಂದ ಅವರು ಕೃತಿಗಳನ್ನು ಮಾಡುತ್ತಿರು ತ್ತಾರೆ. ಮತ್ತು ಆ ಪ್ರೇರಣೆಗಳು ಕೂಡ ಅವರ ಶಾರೀರಿಕ ಸುಖದ ಇಚ್ಛೆಯಿಂದಲೇ ಆದಂಥವುಗಳಿರುತ್ತವೆ. ಅವರ ಮಾನಸಿಕ ಶಕ್ತಿಗಳು ಬಹಳ ದುರ್ಬಲವಾಗಿರುವುವು. ಮತ್ತು ಅವು ಬಹುಶಃ ಕೆಲಸವನ್ನು ಮಾಡುತ್ತಿರುವುದಿಲ್ಲ. ಮುಂಜಾನೆ ಎದ್ದಂದಿನಿಂದ ರಾತ್ರಿ ಮಲಗುವ ವರೆಗೆ ಅದನ್ನು ನೋಡು, ಇದನ್ನು ನೋಡು, ಅದಕ್ಕೆ ಕೈಹಚ್ಚು ಅದನ್ನು ಬಾರಿಸಿ ನೋಡು, ಇದನ್ನು ಅಲ್ಲಾಡಿಸಿ ನೋಡು. ಇತ್ಯಾದಿ. ಇಲ್ಲವೆ ಹಿರಿಯರ ಅಥವಾ ಸಂಗಡಿಗರ ಕೃತಿಗಳನ್ನು ತಿಳಿದಾಗಲಿ, ತಿಳಿಯದೆ ಆಗಲಿ ಅನುಕರಣಮಾಡುವುದು ಇವೇ ಕೆಲಸಗಳನ್ನು ಅವರು ಮಾಡುತ್ತಿ ರುವರು. ಜ್ಞಾನ ಸಂಗ್ರಹಮಾಡುವ ಅವರ ಕಾರ್ಯವು ಒಂದೇ ಸಮನೆ ನಡೆದಿರುವುದು. ಮಗುವು ಎರಡುವರ್ಷದ್ದಾದ ಕೂಡಲೆ ಅದರ ಮನಸಿನಲ್ಲಿ ಸಹಾನುಭೂತಿಯ ಸಹಜ ಪ್ರವೃತ್ತಿಯು ಜಾಗೃತವಾಗು ವುದು. ಪರರ ಸುಖದುಃಖಗಳ ಕಲ್ಪನೆಯು ಅದರ ಮನಸಿನಲ್ಲಿ ಬರಲಾರಂ ಭಿಸುವುದು. ಬಾಲ್ಯದ ಪೂರ್ವಾರ್ಧದ ಮೂರುವರ್ಷದ ಈ ಕಾಲವನ್ನು ಮಗುವು ತನ್ನ ಸುತ್ತುಮುತ್ತು ಇರುವ ವಸ್ತುಗಳ ಪ್ರಾಣಿಗಳ ಜ್ಞಾನ ಸಂಪಾದಿಸುವುದರಲ್ಲಿ ಕಳೆಯುವುದು.

**ಬಾಲ್ಯದ ಉತ್ತರಾರ್ಧವು :—** ಮಕ್ಕಳ ನಾಲ್ಕನೆಯ ವರ್ಷದ ವಯಸ್ಸಿನಿಂದ ಮುಂದಿನ ಆಯ್ದು ವರ್ಷಗಳ ಅವಧಿಗೆ ಬಾಲ್ಯದ ಉತ್ತ ರಾರ್ಧವೆಂದು ಎನ್ನುತ್ತಾರೆ. ಮಕ್ಕಳು ತಮ್ಮ ಆಯುಷ್ಯದ ಈ ಅವಧಿಯನ್ನು ಆಟದಲ್ಲಿಯೇ ಕಳೆಯುವರು. ನಾಲ್ಕನೆಯ ವರ್ಷದಿಂದ

ಮಕ್ಕಳ ಮಾನಸಿಕ ಶಕ್ತಿಗಳು ಒಳ್ಳೇ ಭರದಿಂದ ಕೆಲಸ ಮಾಡಲಾರಂಭಿಸುವುವು. ಈ ಅವಧಿಯಲ್ಲಿ ಅವರು ತಮ್ಮ ಜ್ಞಾನಸಂಗ್ರಹವನ್ನೂ ಅನುಭವವನ್ನೂ ಸತತವಾಗಿ ಬೆಳಿಸುತ್ತಿರುವರು. ವಸ್ತುಗಳ ಪ್ರತಿಮೆಯನ್ನು ಮನಸ್ಸಿನಲ್ಲಿ ತಾರದೆ ಅವುಗಳ ವಿಷಯವಾಗಿ ವಿಚಾರಮಾಡುವ ಚಟವು ಹತ್ತುವುದು. ಯಾವದೊಂದು ವಸ್ತುವಿನ ಇಲ್ಲವೆ ಪ್ರಾಣಿಯ ವಿಷಯವಾಗಿ ತಮ್ಮ ಮನಸಿನಲ್ಲಿ ಇದ್ದ ಕಲ್ಪನೆಗಳನ್ನು ಅವರು ತಮ್ಮ ಆಟದಲ್ಲಿ ಉಪಯೋಗಿಸಿಕೊಳ್ಳುವರು. ಪದಾರ್ಥಗಳ ತುಲನೆ ಮಾಡುವುದು, ಅವುಗಳ ಸಂಬಂಧವನ್ನು ಅರಿತುಕೊಳ್ಳುವುದು, ಅವುಗಳ ವಿಷಯವಾಗಿ ತಮ್ಮ ಅಲ್ಪಬುದ್ಧಿಗೆ ಸೂಚಿಸುವ ವಿಚಾರಗಳನ್ನು ಮಾಡುವುದು, ಇವೇ ಮುಂತಾದ ಕಾರ್ಯಗಳು ಅವರ ಮನಸಿನಲ್ಲಿ ಯಾವಾಗಲು ನಡೆದಿರುವುವು.

ಅವರ ಜಿಜ್ಞಾಸೆಯು ಒಳ್ಳೇ ಭರದಿಂದ ಕೆಲಸಮಾಡುತ್ತಿರುವುದು. ಇದೇ ಕಾರಣದಿಂದ ಮಗುವು ಹಿರಿಯರಾದವರಿಗೆ ಸುತ್ತುಮುತ್ತಲಿನ ವಸ್ತುಗಳ ವಿಷಯವಾಗಿಯೂ ಪ್ರಾಣಿಗಳ ವಿಷಯವಾಗಿಯೂ ಅನೇಕ ಪ್ರಶ್ನಗಳನ್ನು ಕೇಳುತ್ತಿರುತ್ತದೆ. ಅಯ್ದನೆಯ ವರ್ಷದಿಂದ ಮಕ್ಕಳಿಗೆ ಕಾಗೆ ಗುಬ್ಬಿಗಳ ಕಥೆಗಳು ಸೇರುವವು. ಆ ಬಳಿಕ ಅವರಿಗೆ ಅದ್ಭುತ ಕಥೆಗಳು ಸೇರುವವು. ಅವರ ಕಲ್ಪನಾಶಕ್ತಿಯು ಬೆಳೆಯುತ್ತಿರುವುದರಿಂದ ಆ ಕಥೆಗಳು ಅವರಿಗೆ ಸರಿಯಾಗಿ ತಿಳಿಯುವುವು. ಆಟಗಳಲ್ಲಿಯೂ ಅವರ ಕಲ್ಪನಾಶಕ್ತಿಯು ಕಂಡುಬರುವುದು. ಈಗ ಅವರಿಗೆ ಸ್ವಂತದ ಜ್ಞಾನವು ಚೆನ್ನಾಗಿ ಆಗುವುದು. ತಮ್ಮ ಮನಸಿಗೆ ಸೇರುವ ವಿಷಯದಲ್ಲಿ ಕೆಲವೊಂದು ಅವಧಿಯ ವರೆಗೆ ಲಕ್ಷವನ್ನು ಕೊಡಲಿಕ್ಕೆ ಅವರಿಗೆ ಶಕ್ಯವಾಗುವುದು. ಅಂದರೆ ಅವರ ಅವಧಾನವು ಬೆಳೆಯುವುದು. ಪರರ ಅನುಕರಣಮಾಡುವ ಅವರ ಕೆಲಸವು ಒಂದೇಸಮನೆ ನಡೆದೇ ಇರುವುದು. ಇದರಿಂದ ಸುದ್ದಿಗಳನ್ನು ಹೇಳುವುದು, ಆಟಗಳನ್ನು ಆಡುವುದು, ವ್ಯವಸ್ಥೆಯಿಂದ ಉಣ್ಣುವದು, ಕೈ ತೊಳೆದುಕೊಳ್ಳುವುದು, ಅಂಗಿ ಚಣ್ಣಗಳನ್ನೂ

ಹಾಕಿಕೊಳ್ಳುವುದು ಇತ್ಯಾದಿ ಕೆಲಸಗಳನ್ನು ಅವರು ಸರಿಯಾಗಿ ಮಾಡುವರು. ಹಿರಿಯರಿಂದ ಅಹುದೆನಿಸಿಕೊಳ್ಳುವ ಅಪೇಕ್ಷೆಯು ಉತ್ಪನ್ನವಾಗುವುದು. ಅವರು ಅಹುದೆನ್ನುವಂತೆಯೇ ಕೆಲಸ ಮಾಡ ಲಿಕ್ಕೆ ಪ್ರಯತ್ನಮಾಡುತ್ತಾರೆ. ಈಗ ಅವರ ಸಹಾನುಭೂತಿಯು ಬೆಳೆಯುವುದು. ಪರರ ದುಃಖದಿಂದ ಅವರಿಗೆ ದುಃಖವಾಗುವುದು; ಮತ್ತು ಸಂತೋಷದಿಂದ ಸಂತೋಷವಾಗುತ್ತದೆ. ಈ ಮೇರೆಗೆ ಮಕ್ಕಳ ಸಾಲೆಯೊಳಗಿನ ಆಯುಷ್ಯಕ್ರಮಕ್ಕೆ ಪ್ರಾರಂಭ ಮಾಡುವ ಸಿದ್ಧತೆಯು ಆಗುತ್ತದೆ.

ಆರನೆಯ ವರ್ಷ ಇಲ್ಲವೆ ಏಳನೆಯ ವರ್ಷ ಮಕ್ಕಳು ಸಾಲೆಗೆ ಹೋಗುತ್ತಾರೆ. ಅವರಿಗೆ ಸಾಲೆಯಲ್ಲಿ ಬರೆಹ, ವಾಚನ, ಅಂಕೆ, ಮಗ್ಗಿ ಗಳನ್ನು ಕಲಿಸಲಾರಂಭಿಸುತ್ತಾರೆ ಈ ಕಾಲದಲ್ಲಿಯೂ ಅವರ ಅಭ್ಯಾಸ ಕ್ರಮವು ಆಟದ ರೂಪದಿಂದ ಇರತಕ್ಕದ್ದು. ಅವರನ್ನು ಒಂದೇ ಸ್ಥಳದಲ್ಲಿ ಕೂಡ್ರಿಸಿ ಶಿಕ್ಷಕರು ತಾವೇ ಅನೇಕ ಸಂಗತಿಗಳನ್ನು ಹೇಳಿ ಹೀಗೆ ಮಾಡು, ಹಾಗೆ ಮಾಡು ಎಂದು ಕೃತಿಗಳನ್ನು ಮಾಡಿಸುವುದ ರಿಂದ ಅವರ ಜ್ಞಾನವು ಬೆಳೆಯಲಾರದು ಮಕ್ಕಳಿಗೆ ಮನೋರಂಜಕ ವಾದ ವೈಯಕ್ತಿಕ ವ್ಯವಸಾಯಗಳನ್ನು ಕೊಟ್ಟು ಮಾಡಿಸುವುದರಿಂದ ಅವರಿಗೆ ಆನಂದವಾಗುವುದು. ಮತ್ತು ಕಾರ್ಯದಲ್ಲಿ ಅಭಿರುಚಿಯು ಉತ್ಪನ್ನವಾಗುವುದು. ಸ್ವಂತದ ನಿರೀಕ್ಷಣೆಯಿಂದಲೂ, ಕೃತಿಗ ಳಿಂದಲೂ, ಅವರ ಜ್ಞಾನವು ಬೆಳೆಯುತ್ತದೆ. ಕಥೆಗಳು, ಹಾಡು, ಆಟ, ಸಂಭಾಷಣ, ವ್ಯವಸಾಯಗಳು ಈ ಸಾಧನಗಳಿಂದಲೇ ಅವರು ಜ್ಞಾನವನ್ನು ಸಂಪಾದಿಸಿಕೊಳ್ಳಬೇಕು ಬಾಲ್ಯದ ಉತ್ತರಾರ್ಧದಲ್ಲಿ ಮಕ್ಕಳ ಕಲ್ಪನಾ-ಶಕ್ತಿಯು ಒಳ್ಳೇ ಭರದಿಂದ ಕೆಲಸ ಮಾಡುತ್ತಿರುತ್ತದೆ. ಮಕ್ಕಳ ವಿಚಾರಶಕ್ತಿಯೂ ಕೂಡ ಸಾವಕಾಶವಾಗಿ ಬೆಳೆಯುತ್ತಿರುತ್ತದೆ ಜ್ಞಾನೇಂದ್ರಿಯಗಳ ಸಾಹಾಯ್ಯದಿಂದ ಜ್ಞಾನಸಂಗ್ರಹ ಮಾಡುವ ಕಾರ್ಯವು ಸತತವಾಗಿ ನಡೆದಿರುತ್ತದೆ. ಮಕ್ಕಳಿಗೆ ತಮ್ಮ ಸಂಗಡಿಗ ರೊಡನೆ ಕೂಡಿಕೊಂಡು ಆಡುವುದು ಹೆಚ್ಚಾಗಿ ಸೇರುತ್ತಿರುವುದು.

ಆದುದರಿಂದ ಅವರ ವಿಚಾರಗಳೂ ಕಲ್ಪನೆಗಳೂ ಭರದಿಂದ ಬೆಳೆಯುತ್ತಿರುವುವು. ತನ್ನ ಗೆಳೆಯರು ಹಾಗು ತನಗಿಂತ ಹಿರಿಯರು ತನಗೆ ಒಳ್ಳೆಯವನೆನ್ನಬೇಕೆಂದು ಮಗುವು ಈ ವಯಸ್ಸಿನಲ್ಲಿ ಪ್ರಯತ್ನಮಾಡುತ್ತಿರುತ್ತದೆ. ಇನ್ನೂ ಅದಕ್ಕೆ ನೈತಿಕ ಕಲ್ಪನೆಗಳ ಜ್ಞಾನವಿರುವುದಿಲ್ಲ. ತನಗಿಂತ ಹಿರಿಯರ ಹಾಗು ತನ್ನ ಸಂಗಡಿಗರ ಅನುಕರಣಮಾಡುವದರಲ್ಲಿಯೇ ಅದಕ್ಕೆ ಹೆಚ್ಚು ಆನಂದವಾಗುತ್ತದೆ. ಈ ಕಾಲದಲ್ಲಿ ಮಕ್ಕಳು ಬಹು ಬೇಗ ಪಾಠ ಮಾಡುತ್ತಾರೆ. ಬಾಲ್ಯದ ಪೂರ್ವಾರ್ಧ ಉತ್ತರಾರ್ಧಗಳಲ್ಲಿ ಜ್ಞಾನೇಂದ್ರಿಯಗಳಿಂದ ಜ್ಞಾನಸಂಗ್ರಹ ಮಾಡುವ ಕಾರ್ಯವು ಏಕಪ್ರಕಾರವಾಗಿ ನಡೆದೇ ಇರುವುದು. ಕೃತಿ ಆಟಗಳ ಸಾಹಾಯ್ಯದಿಂದ ಮಕ್ಕಳು ಜ್ಞಾನವನ್ನು ಸಂಪಾದಿಸುತ್ತಿರುತ್ತಾರೆ; ಮತ್ತು ತಮ್ಮ ಅನುಭವವನ್ನು ಬೆಳೆಯಿಸಿಕೊಳ್ಳುತ್ತಿರುತ್ತಾರೆ. ಬಾಲ್ಯದ ಉತ್ತರಾರ್ಧದಲ್ಲಿ ಕಲ್ಪನಾಶಕ್ತಿಯು ಉದಯಹೊಂದಿ ವಿಕಾಸವಾಗುವುದು. ತುಲನಾ, ಅನುಮಾನ, ನಿರ್ಣಯ ಮುಂತಾದ ವ್ಯಾಪಾರಗಳನ್ನು ಮಾಡಲಿಕ್ಕೆ ಅವರು ಕಲಿಯುತ್ತಾರೆ. ಪದಾರ್ಥಗಳ ಪ್ರತಿಮೆಗಳಿಲ್ಲದೆ ಅವುಗಳ ಬಗ್ಗೆ ವಿಚಾರಮಾಡಲಿಕ್ಕೆ ಅವರಿಗೆ ಐದನೆಯ ವರ್ಷದಿಂದ ಬರಲಾರಂಭಿಸುತ್ತದೆ ಬುದ್ಧಿವಂತ ಹುಚ್ಚ, ಮೃದು ಕಠಿಣ ಮುಂತಾದ ಗುಣಗಳ ತಿಳುವಳಿಕೆಯು ಅವರಿಗಾಗುತ್ತದೆ. ಆದರೆ ಶೌರ್ಯ ಮೃದುತನ ಇತ್ಯಾದಿ ಅಮೂರ್ತಕಲ್ಪನೆಗಳನ್ನು ಸ್ಪಷ್ಟವಾಗಿ ಗ್ರಹಣ ಮಾಡಲಾರರು. ಮತ್ತು ಅವರಿಂದ ಆತ್ಮಸಂಯಮನವನ್ನೂ ಮಾಡುವುದಾಗದು. ಮಕ್ಕಳಲ್ಲಿ ಸಿಟ್ಟು, ಲೋಭ, ಪ್ರೇಮ ಮೊದಲಾದ ಮನೋವಿಕಾರಗಳು ಒಳ್ಳೇ ಭರದಿಂದ ಕೆಲಸ ಮಾಡುತ್ತಿರುತ್ತವೆ.

**ಮಕ್ಕಳ ೯ ನೆಯ ವರ್ಷದಿಂದ ೧೪ ನೆಯ ವರ್ಷದ ಅತ್ಯಂತವರೆಗಿನ ಕಾಲವು :—** ಈ ಕಾಲದಲ್ಲಿ ಅವರ ವಿಚಾರಶಕ್ತಿಯು ಹೆಚ್ಚು ಬೆಳೆಯುವುದು. ಅವರ ಕಲ್ಪನಾಶಕ್ತಿಯು ವಿಚಾರಶಕ್ತಿಯ ಅಧೀನವಾಗಿ ಕೆಲಸ ಮಾಡುವುದು. ಕಾರ್ಯಕಾರಣಸಂಬಂಧವನ್ನು ಶೋಧಿಸಿ ತೆಗೆಯುವುದರಲ್ಲಿ ಮಕ್ಕಳಿಗೆ ಒಂದು ಪ್ರಕಾರದ ಆನಂದವಾಗುತ್ತದೆ.

ಯಾವದೊಂದು ಉದ್ದೇಶವನ್ನು ಇಟ್ಟುಕೊಂಡು, ಬಹಳಹೊತ್ತಿನವರೆಗೆ ವ್ಯವಸಾಯವನ್ನು ಮಕ್ಕಳು ಈ ವಯಸ್ಸಿನಲ್ಲಿ ಮಾಡುವರು. ಈ ಕಾಲದಲ್ಲಿ ಅವರಿಗೆ ಸ್ಮರಣಶಕ್ತಿಯು ಬಹಳವಿರುವುದು. ಭೂಗೋಲದೊಳಗಿನ ಪರ್ವತ, ನದಿ, ಪಟ್ಟಣ, ಮುಂತಾದವುಗಳ ಪಟ್ಟಿಯನ್ನು ಅವರು ಸಹಜವಾಗಿ ಪಾಠಮಾಡುತ್ತಾರೆ; ಆದರೆ ಇದರಿಂದ ಅವರ ವಿಚಾರಶಕ್ತಿಯು ಬೆಳೆಯುವುದಿಲ್ಲ. ಈ ಹುಡುಗರಿಗೆ ಕೆಲಸಮಾಡಲಿಕ್ಕೆ ಹಚ್ಚುವುದರಿಂದ ಅವರು ದೊರಕಿಸಿದ ಜ್ಞಾನದ ಉಪಯೋಗವಾಗುವುದು. ಆದರಿಂದ ಅವರ, ಜ್ಞಾನವು ಹೆಚ್ಚು ಸ್ಪಷ್ಟವಾದದ್ದೂ ಪೂರ್ಣವಾದದ್ದೂ ಆಗುವುದು. ಈ ವಯಸ್ಸಿನ ಹುಡುಗರ ಮನಸಿನೊಳಗಿನ ಸಿಟ್ಟು, ಅಂಜಿಕೆ, ಲೋಭ ಇತ್ಯಾದಿ ಸ್ವಾರ್ಥದ ಮನೋವಿಕಾರಗಳು ಕಡಿಮೆಯಾಗುತ್ತ ಹೋಗುವವು; ಮತ್ತು ಅವುಗಳ ಬದಲು ಆದರ ಸ್ನೇಹ, ಭೂತದಯೆ, ಈ ಮೊದಲಾದ ಉಚ್ಚ ಮನೋವಿಕಾರಗಳು ಉತ್ಪನ್ನವಾಗುವವು. ಮಕ್ಕಳಿಗೆ ಆತ್ಮಸಂಯಮನದ ರೂಢಿಯು ಹತ್ತುವುದು. ಅವರ ಮನಸಿನಲ್ಲಿ ಸ್ವಾಭಿಮಾನವು ಜಾಗೃತವಾಗುವುದು.

**೧೪ ನೆಯ ವರ್ಷದಿಂದ ೨೧ ನೆಯ ವರ್ಷದ ಕೊನೆಯವರೆಗಿನ ಕಾಲವು :—** ಈ ಕಾಲದಲ್ಲಿ ಎಲ್ಲ ಮಾನಸಿಕ ಶಕ್ತಿಗಳ ವಿಕಾಸವಾಗುತ್ತದೆ. ಈ ವಯಸ್ಸಿನಲ್ಲಿ ನೀತಿಯ ಕಲ್ಪನೆಗಳು ದೃಢವಾಗುತ್ತವೆ. ಮನುಷ್ಯನು ತನ್ನ ಗುರಿಯನ್ನು ಗೊತ್ತುಮಾಡಿಕೊಂಡು, ಆದರಂತೆ ವರ್ತಿಸುತ್ತಾನೆ. ಮತ್ತು ಮನುಷ್ಯನಿಗೆ ಯಾವದೊಂದು ಸಂಗತಿಯ ಬಗ್ಗೆ ವಿಚಾರಮಾಡಿ, ಆತ್ಮಸಂಯಮನಮಾಡಿಕೊಂಡು ನಡೆಯುವ ಚಟವು ಹತ್ತುವುದು. ಮತ್ತು ತನ್ನ ಕರ್ತವ್ಯಗಳು ಯಾವವೆಂಬುದರ ತಿಳುವಳಿಕೆಯು ಉತ್ಪನ್ನವಾಗುವುದು. ವಿದ್ಯಾರ್ಜನೆಗೆ ಈ ಕಾಲವು ಅತ್ಯಂತ ಉಪಯುಕ್ತವಾದದ್ದು.

# ೩ನೆಯ ಪ್ರಕರಣ

## ಬೌದ್ಧಿಕ ಶಿಕ್ಷಣ

### ಮನಸ್ಸೂ ಅದರ ವ್ಯಾಪಾರಗಳೂ. ಇಂದ್ರಿಯಗಳೂ ಅವುಗಳ ಶಿಕ್ಷಣವೂ.

ಮಕ್ಕಳ ಶಾರೀರಿಕ ಹಾಗು ಮಾನಸಿಕ ಬೆಳವಣಿಗೆಯು ಯಾವ ಕ್ರಮದಿಂದ ಆಗುತ್ತಿರುವುದೆಂಬುದು ಹಿಂದಿನ ಪ್ರಕರಣದಲ್ಲಿ ಸಂಕ್ಷಿಪ್ತವಾಗಿ ವಿವರಿಸಲ್ಪಟ್ಟಿತು. ಇನ್ನು, ಈ ಪ್ರಕರಣದಲ್ಲಿ ಮನಸ್ಸಿನ ಸ್ವರೂಪವು ಯಾವದು? ಮನಸ್ಸಿನಲ್ಲಿ ನಡೆಯುವ ವ್ಯಾಪಾರಗಳು ಯಾವವು? ಈ ವಿಷಯವಾಗಿ ವಿಚಾರಮಾಡಲಾಗುವುದು.

ಮನಸ್ಸು ಅಂದರೇನು? ಈ ಪ್ರಶ್ನೆಗೆ ಉತ್ತರವನ್ನು ಕೊಡುವುದು ಬಹಳ ಕಠಿಣವಿರುವುದು. ಮನಸ್ಸಿನ ವ್ಯಾಖ್ಯೆಯನ್ನು ಸರಿಯಾಗಿ ಹೇಳುವುದು ಅಶಕ್ಯವೇ ಸರಿ. ಆದರೆ ಮನಸಿನಲ್ಲಿ ನಡೆಯುವ ವ್ಯಾಪಾರಗಳನ್ನು ಗೊತ್ತುಹಿಡಿಯುವುದು ಸುಲಭವಿರುವುದು; ಉದಾಹರಣಾರ್ಥವಾಗಿ ನಾವು ಒಂದು ಗುಲಾಬಿಯ ಹೂವನ್ನು ಕೈಯಲ್ಲಿ ತಕ್ಕೊಂಡೆವೆಂದು ತಿಳಿಯುವ. ಅದರ ಬಣ್ಣವನ್ನೂ ಆಕಾರವನ್ನೂ ಕಣ್ಣುಗಳು ನೋಡುವವು. ಅದರ ಸುವಾಸನೆಯನ್ನು ಮೂಗು ಪರೀಕ್ಷಿಸುವುದು, ಆದರೆ ಅದನ್ನು ನೋಡುವುದರಿಂದಲೂ, ಸುವಾಸನೆಯನ್ನು ತಕ್ಕೊಳ್ಳುವದರಿಂದಲೂ ಆಗುವ ಆನಂದವು ಕಣ್ಣಿಗೂ ಆಗುವದಿಲ್ಲ; ಮೂಗಿಗೂ ಆಗುವುದಿಲ್ಲ. ಇದೇ ಪ್ರಕಾರ ಇಂಪಾದ ಗಾಯನವನ್ನು ಕಿವಿಯು ಕೇಳುವುದು; ಆದರೆ ಆನಂದವು ಕಿವಿಗೆ ಆಗುವುದಿಲ್ಲ. ನಾಲಗೆಯು ಮಧುರವಾದ ಪಕ್ವಾನ್ನಗಳ ಸವಿಯನ್ನು ತಕ್ಕೊಳ್ಳುವುದು. ಆದರೆ ಸುಖವು ನಾಲಗೆಗೆ ಆಗುವುದಿಲ್ಲ. ಕೆಟ್ಟ

ಸುದ್ದಿಯನ್ನು ಕಿವಿಯು ಕೇಳುವುದು; ಆದರೆ ಅದರಿಂದಾಗುವ ದುಃಖವನ್ನು ಬೇರೆ ಯಾವುದೋ ಒಂದು ಶಕ್ತಿಯು ಅನುಭವಿಸುವುದು. ಇತ್ಯಾದಿ ಆನಂದ ಸುಖದುಃಖಗಳನ್ನು ಅನುಭವಿಸುವ ಶಕ್ತಿಯೇ ಮನಸ್ಸಾಗಿರುವುದು.

ಇನ್ನೊಂದುಬಗೆಯಿಂದ ವಿಚಾರಮಾಡೋಣ. ಮಗುವಿನ ಎದುರಿಗೆ ತಾಯಿಯು ಬಂದು ನಿಂತಕೂಡಲೆ 'ಇವಳೇ ನನ್ನ ತಾಯಿ ಯೆಂದು ಅದಕ್ಕೆ ತಿಳಿಯುವುದು. ಅವಳ ರೂಪವು ಅದರ ಕಣ್ಣಿಗೆ ಗೋಚರವಾಗುವುದು ; ಅವಳ ಧ್ವನಿಯು ಅದರ ಕಿವಿಗೆ ಕೇಳುವುದು. ಆದರೆ ಇವಳೇ ತಾಯಿಯೆಂಬ ಜ್ಞಾನವನ್ನು ಮಾಡಿಕೊಡುವ ಒಂದು ಶಕ್ತಿಯು ಬೇರೆಯೇ ಇರುವುದು. ಈ ಶಕ್ತಿಯೇ ಮನಸ್ಸೆಂದು ಹೇಳಬಹುದು.

ಇನ್ನೂ ಒಂದು ರೀತಿಯಿಂದ ಮನಸಿನ ವ್ಯಾಪಾರಗಳನ್ನು ಗೊತ್ತು ಹಿಡಿಯಬಹುದು. ಹೇಗೆಂದರೆ ನಮ್ಮ ನೆರೆಮನೆಯಲ್ಲಿ ಇಂಪಾದ ಗಾಯನವು ನಡೆದಿರುವದೆಂದು ತಿಳಿಯುವಾ. ಅದು ನಮ್ಮ ಕಿವಿಗೆ ಕೇಳುವುದು. ಆದರೆ ಆ ಕಾಲಕ್ಕೆ ಆ ಗಾಯನವನ್ನು ಕೇಳುವ ಇಚ್ಛೆಯು ನಮಗಾದರೆ ಮಾತ್ರ ನಾವು ಅಲ್ಲಿಗೆ ಹೋಗುತ್ತೇವೆ. ಹೋಗುವ ಕೆಲಸವನ್ನು ಕಾಲುಗಳು ಮಾಡುವವು. ಆದರೆ ಅದನ್ನು ಕೇಳುವ ಇಚ್ಛೆಯೇ ನಮಗಾಗದಿದ್ದರೆ, ಅಥವಾ ಆ ಗಾಯನಕ್ಕಿಂತ ಹೆಚ್ಚು ಮಹತ್ವದ ಮತ್ತೊಂದು ಸಂಗತಿಯ ಕಡೆಗೆ ಹೋಗುವ ಇಚ್ಛೆ ಇದ್ದರೆ ಅಲ್ಲಿಗೆ ನಾವು ಹೋಗುವುದಿಲ್ಲ. ಹಾಗಾದರೆ ನಮ್ಮಲ್ಲಿ ಇಚ್ಛೆಯನ್ನು ಉತ್ಪನ್ನಮಾಡುವ ಶಕ್ತಿಯು ಯಾವದು ? ಅದೇ ಮನಸ್ಸೆಂದು ಹೇಳಬಹುದು.

ಸಾರಾಂಶ, **ಸುಖದುಃಖಾದಿಗಳನ್ನು ಅನುಭವಿಸುವಂಥ, ಜ್ಞಾನವನ್ನ ಇಚ್ಛೆಯನ್ನೂ ಉತ್ಪನ್ನಮಾಡುವಂಥ ದೇವರು ಮನುಷ್ಯನಿಗೆ ಕೊಟ್ಟ ಅದ್ಭುತವಾದ ಶಕ್ತಿಗೆ ಮನಸ್ಸೆಂದು ಹೇಳ**

**ಬಹುದು.** ಈ ಶಕ್ತಿಯ ಕಾರ್ಯವು ಮಿದುಳಿನಲ್ಲಿ ನಡೆಯುವದು. ಈ ಮಿದುಳಿಗೂ, ಕಣ್ಣು, ಕಿವಿ, ಕೈಕಾಲು ಮೊದಲಾದ ಜ್ಞಾನೇಂದ್ರಿಯ ಕರ್ಮೇಂದ್ರಿಯಗಳಿಗೂ ತಂತೀ ಟಪಾಲಿನಂತೆ ಜ್ಞಾನವಾಹಿ, ಕ್ರಿಯಾ-ವಾಹಿ ಎಂಬ ಎರಡುಪ್ರಕಾರದ ತಂತುಗಳಿಂದ ಸಂಬಂಧವು ಜೋಡಿಸಲ್ಪಟ್ಟಿರುವದು.

**ಮನಸ್ಸಿನಲ್ಲಿ ನಡೆಯುವ ವ್ಯಾಪಾರಗಳು :—** ಮೇಲೆ ಹೇಳಿದ ವಿವರದಿಂದ ಮನಸಿನಲ್ಲಿ ಮೂರು ತರದ ವ್ಯಾಪಾರಗಳು ನಡೆಯುವವೆಂಬುದು ಸ್ಪಷ್ಟವಾಗುವದು. (೧) ಸುಖದುಃಖಾದಿ ಭಾವನೆಗಳು. (೨) ಜ್ಞಾನ (ತಿಳುವಳಿಕೆ) (೩) ಇಚ್ಛೆ. ಈ ಮೂರುತರದ ವ್ಯಾಪಾರಗಳು ಪ್ರತಿಯೊಬ್ಬರ ಮನಸಿನಲ್ಲಿ ಯಾವಾಗಲೂ ನಡೆಯುತ್ತಿರುತ್ತವೆ. ಪ್ರಯಾಗದಲ್ಲಿ ಗಂಗಾ, ಯಮುನಾ, ಸರಸ್ವತಿ ನದಿಗಳು ಒಂದಕ್ಕೊಂದು ಕೂಡಿ ಹರಿಯುವಂತೆ ಈ ಮೂರೂ ತರದ ವ್ಯಾಪಾರಗಳು ಯಾವಾಗಲು ಒಂದಕ್ಕೊಂದು ಕೂಡಿಕೊಂಡು ಸಾಗುವವು. ನಾವು ಹಸಿವೆಯಿಂದ ಬಳಲುತ್ತಿರುವಾಗ ಆಹಾರವನ್ನು ದೊರಕಿಸಬೇಕೆಂಬ ಇಚ್ಛೆಯಾಗುತ್ತದೆ. ಇಲ್ಲಿ ಹಸಿವೆಯು ಭಾವನೆಯು; ಆಹಾರವನ್ನು ದೊರಕಿಸಬೇಕೆಂಬುದು ಜ್ಞಾನವು; ಇವೆರಡರಿಂದ ಇಚ್ಛೆಯು ಉತ್ಪನ್ನವಾಯಿತು. ನಾವು ಒಂದು ಸುಂದರವಾದ ಚಿತ್ರವನ್ನು ತೆಗೆದು ಮುಗಿಸಿದೆವೆಂದರೆ ನಮಗೆ ಬಹಳ ಸಂತೋಷವಾಗುವುದು. ಇಲ್ಲಿ ಚಿತ್ರಕಲೆಯು ಜ್ಞಾನವು, ಅದನ್ನು ತೆಗೆದು ಮುಗಿಸಬೇಕೆಂಬುದು ಇಚ್ಛಾಶಕ್ತಿಯ ಕಾರ್ಯವು, ಇವೆರಡರಿಂದ ಸಂತೋಷವೆಂಬ ಭಾವನೆಯು ಉತ್ಪನ್ನವಾಯಿತು. ಮತ್ತು ಯಾವದೊಂದು ಭಾವನೆಯ ಮೂಲಕವಾಗಿ ಉತ್ಪನ್ನವಾದ ಇಚ್ಛಾಶಕ್ತಿಯ ಸತತ ಪ್ರಯತ್ನಗಳಿಂದ ಜ್ಞಾನವು ಅಂದರೆ ತಿಳುವಳಿಕೆಯು ಹುಟ್ಟುವುದು. ವ್ಯಾಪಾರಮಾಡಿ ಬಹಳ ದ್ರವ್ಯಗಳಿಸಬೇಕೆಂಬ ಇಚ್ಛೆಯಿಂದ ಸತತ ಪ್ರಯತ್ನಗಳನ್ನು ಮಾಡುವುದರಿಂದ ವ್ಯಾಪಾರದ ರಹಸ್ಯಗಳ ಜ್ಞಾನವು ಆಗುವದು.

**ಸಾರಾಂಶ** : ಈ ಮೂರು ತರದ ವ್ಯಾಪಾರಗಳು ಒಂದಕ್ಕೊಂದು ಸಂಬಂಧವಾಗಿದ್ದು ಕೂಡಿಕೊಂಡು ನಡೆಯುವುವು. ಈ ಮೂರರಲ್ಲಿ ಯಾವದೊಂದಕ್ಕೆ ಕೊರತೆಯಾದರೆ ಪರಿಣಾಮವು ಯಶಸ್ವಿಯಾಗ ಲಾರದು. ಆದರೆ ಯಾವಾಗಲೂ ಈ ಮೂರೂ ವ್ಯಾಪಾರಗಳು ಸಮನಾಗಿ ನಡೆಯುತ್ತಿರುವುದಿಲ್ಲ. ಒಮ್ಮೊಮ್ಮೆ ಭಾವನೆಗಳು ಪ್ರಬಲವಾಗಿ ನಡೆಯುವುವು. ಆ ಕಾಲಕ್ಕೆ ಇಚ್ಛಾಶಕ್ತಿ, ಜ್ಞಾನಶಕ್ತಿ ಇವೆರಡರ ಕಾರ್ಯಗಳು ತೀರ ಕಡಿಮೆ ಪ್ರಮಾಣದಲ್ಲಿರುವವು.

ಸಾಲೆಯಲ್ಲಿ ನಡೆಯುವ ಅನೇಕ ಉದಾಹರಣೆಗಳಿಂದ ಈ ಮಾತನ್ನು ಸ್ಪಷ್ಟಮಾಡಿ ತೋರಿಸಬಹುದು. ಚಿಕ್ಕಮಕ್ಕಳ ವರ್ಗದ ಮುಂದೆ ಒಂದು ಸುಂದರವಾದ ಬಣ್ಣದ ಚಿತ್ರವನ್ನು ತೂಗಹಾಕಿದರೆ ಎಲ್ಲ ಹುಡುಗರೂ ಒಳ್ಳೇ ಸಂತೋಷದಿಂದ ಅದನ್ನು ನೋಡಲಾರಂಭಿಸುವರು; ಕೆಲಹೊತ್ತಿನವರೆಗೆ ಅವರು ಅದನ್ನು ಒಳ್ಳೇ ಲಕ್ಷ್ಯಪೂರ್ವಕವಾಗಿ ನೋಡಿ ಅದರಿಂದ ತಮಗೆ ಗೊತ್ತಾಗುವ ಸಂಗತಿಗಳನ್ನು ಕುರಿತು ಮಾತುಗಳ ನ್ನಾಡಲಾರಂಭಿಸುವರು. ಈ ಉದಾಹರಣೆಯಲ್ಲಿ ಭಾವನೆಯೇ ಪ್ರಬಲ ವಾಗಿದ್ದು ಇಚ್ಛಾಶಕ್ತಿ ಹಾಗು ಜ್ಞಾನಶಕ್ತಿಗಳ ವ್ಯಾಪಾರಗಳು ಕಡಿಮೆ ಪ್ರಮಾಣದಲ್ಲಿ ಇರುವವು.

ಮೇಲಿನ ಇಯತ್ತೆಯವರಿಗೆ ಗಣಿತದ ಉದಾಹರಣೆಯನ್ನು ಬೇಸರ ಬರುವಂಥ ಒಂದು ರೀತಿಯಿಂದ ಒಬ್ಬ ಶಿಕ್ಷಕನು ತಿಳಿಸಿಹೇಳುತ್ತಿದ್ದ ನೆಂದು ಕಲ್ಪಿಸುವ: ಈ ಪ್ರಸಂಗದಲ್ಲಿ ಹುಡುಗರು ಆ ರೀತಿಯನ್ನು ತಿಳಕೊಳ್ಳಲಿಕ್ಕೆ ಬಹಳ ಲಕ್ಷ್ಯವನ್ನು ಕೊಡಬೇಕಾಗುವುದು. ಅದರಿಂದ ಅವರ ಮನಸ್ಸಿಗೆ ಬಹಳ ಕಷ್ಟವಾಗುವುದು. ಇಷ್ಟು ಕಷ್ಟಬಟ್ಟು ಲಕ್ಷ್ಯಪೂರ್ವಕವಾಗಿ ತಿಳಕೊಂಡರೂ ವಿಶೇಷ ಜ್ಞಾನವಾಗುವುದಿಲ್ಲ. ಇಲ್ಲಿ ಇಚ್ಛಾಶಕ್ತಿಯ ವ್ಯಾಪಾರವು ಒಳ್ಳೇ ಬಲವತ್ತರವಾಗಿ ನಡೆಯ ಬೇಕಾಗುವುದು. ಭಾವನೆಯ ವ್ಯಾಪಾರವು ಕಡಿಮೆ; ಜ್ಞಾನವಂತೂ ತೀರ ಕಡಿಮೆ.

ಮತ್ತೊಂದು ವರ್ಗದಲ್ಲಿ ಒಬ್ಬ ಶಿಕ್ಷಕನು ಮಕ್ಕಳಿಗೆ ಅನೇಕ ಸಣ್ಣಸಣ್ಣ ಪ್ರಶ್ನಗಳನ್ನು ಕೇಳುತ್ತ ಅವರನ್ನು ವಿಚಾರಕ್ಕೆ ಹಚ್ಚಿ ಇಚ್ಛಿತ ಉತ್ತರಗಳನ್ನು ತೆಗೆದುಕೊಳ್ಳುತ್ತಿರುವನೆಂದು ಕಲ್ಪಿಸುವ ; ಈ ಉದಾಹರಣೆಯಲ್ಲಿ ಹುಡುಗರ ಮನಸಿನಲ್ಲಿ ಜ್ಞಾನದ ವ್ಯಾಪಾರವು ವಿಶೇಷವಾಗಿ ನಡೆಯುತ್ತಿರುವುದು, ಪಾಠದ ಕಡೆಗೆ ಲಕ್ಷ ಕೊಡುವುದು ಇಚ್ಛಾಶಕ್ತಿಯ ವ್ಯಾಪಾರವು. ಶಿಕ್ಷಕನ ಪ್ರಶ್ನಗಳನ್ನು ತಿಳಕೊಂಡು ಅವುಗಳಿಗೆ ಸರಿಯಾಗಿ ಉತ್ತರಗಳನ್ನು ಕೊಡುವಾಗ ಹುಡುಗರಿಗೆ ಆಗುವ ಆನಂದವು ಭಾವನೆಯ ವ್ಯಾಪಾರವು. ಇವುಗಳಲ್ಲಿ ಜ್ಞಾನದ ವ್ಯಾಪಾರವು ವಿಶೇಷ ವಾಗಿ ನಡೆಯುತ್ತಿದ್ದು, ಭಾವನೆ ಹಾಗು ಇಚ್ಛೆಗಳು ಕಡಿಮೆ ಪ್ರಮಾಣ ದಲ್ಲಿರುವವು.

ಶಿಕ್ಷಕರು ಆಗಾಗ್ಗೆ ಮಕ್ಕಳ ಮನಸಿನಲ್ಲಿ ಈ ಮೂರೂ ಬಗೆಯ ವ್ಯಾಪಾರಗಳನ್ನು ಜಾಗೃತಗೊಳಿಸಿ ಅವು ಸರಿಯಾದ ಮಾರ್ಗದಿಂದ ವಿಕಾಸಹೊಂದುವಂತೆ ಯತ್ನಮಾಡುವುದೇ ಮಾನಸಿಕ ಶಿಕ್ಷಣದ ಉದ್ದೇಶವು. ಮಕ್ಕಳು ಕೇವಲ ವಿಕಾರವಶರಾಗಿ ನಡೆಯುವವರೂ, ಇಚ್ಛೆಗೆ ಬಂದಂತೆ ವರ್ತಿಸುವವರೂ ಆಗದೆ ವಿವೇಕಿಗಳು ಅಂದರೆ ವಿಚಾರ ಪೂರ್ವಕವಾಗಿ ನಡೆಯುವವರಾಗಬೇಕಾದರೆ ಅವರಿಗೆ ಶಿಕ್ಷಣ ಕೊಡುವ ಶಿಕ್ಷಕರಿಗೆ ಈ ಮನೋವ್ಯಾಪಾರಗಳ ಜ್ಞಾನವು ಅವಶ್ಯವಾಗಿ ಬೇಕು.

## ಶರೀರಕ್ಕೂ ಮನಸ್ಸಿಗೂ ಇರುವ ಸಂಬಂಧಗಳು

ಶರೀರಕ್ಕೂ ಮನಸ್ಸಿಗೂ ಅತಿ ನಿಕಟಸಂಬಂಧವಿದೆ ; ಮನಸ್ಸಿನ ವಿಕಾಸವು ಶರೀರದ ವಿಕಾಸವನ್ನೇ ಅವಲಂಬಿಸಿದೆ ಎಂದು ಹಿಂದೆ ಹೇಳ ಲಾಗಿದೆ. ಕೆಟ್ಟ ಹವೆ, ಸತ್ವಹೀನವಾದ ಆಹಾರ, ಅಪೂರ್ಣವಾದ ಪ್ರಕಾಶ ಅಶಕ್ತತನ ಇವೆಲ್ಲವುಗಳ ಪರಿಣಾಮವು ಶರೀರಕ್ಕೆ ಎಷ್ಟು ಅಪಾಯಕಾರಕವಾಗಿ ಆಗುವುದೋ ಅಷ್ಟೇ ಮನಸಿನ ಮೇಲೆಯೂ ಆಗುವುದು. ಈ ಕಾರಣಗಳಿಂದ ಮನಸ್ಸಿನ ಗ್ರಹಣಶಕ್ತಿಯು ಕಡಿಮೆ ಯಾಗುತ್ತದೆ. ಸ್ಮರಣಶಕ್ತಿಯು ದುರ್ಬಲವಾಗುತ್ತದೆ. ಒಂದೇ

ಪಾಠವನ್ನು ಬಹಳ ಹೊತ್ತಿನವರೆಗೆ ಸಾಗಿಸಿದರೆ, ಮಕ್ಕಳು ದಣಿದಿರುವಾಗ ಅವರನ್ನು ಅಭ್ಯಾಸಕ್ಕೆ ಕೂಡಿಸಿದರೆ ಅವರ ಮಿದುಳಿಗೆ ತೊಂದರೆಯಾಗುತ್ತದೆ. ಅವರ ಲಕ್ಷ್ಯವು ಅಭ್ಯಾಸದ ಕಡೆಗೆ ಹತ್ತುವುದಿಲ್ಲ. ಒಂದು ವಿಷಯವು ಮುಗಿದು ಮತ್ತೊಂದು ವಿಷಯವನ್ನು ಪ್ರಾರಂಭಿಸುವ ಮೊದಲು ಮಕ್ಕಳಿಗೆ ಸ್ವಲ್ಪಹೊತ್ತು ವಿಶ್ರಾಂತಿಯನ್ನು ಕೊಡುವುದು ಅವಶ್ಯವು. ಸಣ್ಣಮಕ್ಕಳ ಪಾಠಗಳು ಅರ್ಧತಾಸಿಗಿಂತ ಹೆಚ್ಚು ಇರಬಾರದು. ಅವರಿಗೆ ಬೇಸರಬರಬಾರದೆಂದು ಹಾಡು, ಕವಾಯತ, ಡ್ರಾಯಿಂಗ ಮುಂತಾದ ಮನೋರಂಜಕ ವಿಷಯಗಳನ್ನು ನಡನಡುವೆ ಸೇರಿಸತಕ್ಕದ್ದು. ಸಾರಾಂಶ, ಹುಡುಗರ ಮನಸಿಗೂ ಶರೀರಕ್ಕೂ ಅಪಾಯವಾಗದ ರೀತಿಯಿಂದ ಶಿಕ್ಷಣವನ್ನು ಕೊಡುವುದು ಶಿಕ್ಷಕನ ಕರ್ತವ್ಯವಾಗಿದೆ.

ಬೌದ್ಧಿಕ ಶಿಕ್ಷಣವನ್ನು ಕೊಡುತ್ತಿರುವಾಗ ಮಕ್ಕಳ ಭಾವನೆ, ಹಾಗು ಪ್ರವೃತ್ತಿ ಇವುಗಳ ಕಡೆಗೆ ಶಿಕ್ಷಕನು ಅವಶ್ಯವಾಗಿ ಲಕ್ಷ್ಯಕೊಡಬೇಕಾಗುವುದು. ಯಾವದೊಂದು ಸಂಗತಿಯ ರುಚಿಯು ಹತ್ತದ ಹೊರತು ಹುಡುಗರು ಆ ಸಂಗತಿಯ ಕಡೆಗೆ ಲಕ್ಷ್ಯಕೊಡುವುದಿಲ್ಲ. ಲಕ್ಷ್ಯಕೊಟ್ಟ ಹೊರತು ಆ ಸಂಗತಿಯ ಜ್ಞಾನವಾಗುವ ಸಂಭವವಿಲ್ಲ. ಇಲ್ಲಿ ಅಭಿರುಚಿಯು ಒಂದು ಭಾವನೆಯು, ಲಕ್ಷ್ಯಕೊಡೋಣವು ಪ್ರವೃತ್ತಿಯ ಕಾರ್ಯವು. ಯಾವುದೊಂದು ಸಂಗತಿಯು ನಮಗೆ ಚೆನ್ನಾಗಿ ತಿಳಿಯಬೇಕಾದರೆ ಆ ಸಂಗತಿಯ ಕಡೆಗೆ ನಾವು ಪೂರ್ಣವಾಗಿ ಲಕ್ಷ್ಯಕೊಡಲಿಕ್ಕೆಬೇಕು. **ಏಕಾಗ್ರತೆಯಿಂದ ಲಕ್ಷ್ಯಕೊಡುವ ಕ್ರಿಯೆಗೆ ಅವಧಾನವೆಂಬ ಹೆಸರು.** ಅವಧಾನದಲ್ಲಿ ಎರಡು ಪ್ರಕಾರಗಳು: (೧) **ಐಚ್ಛಿಕ ಅವಧಾನ** (೨) **ಅನೈಚ್ಛಿಕ ಅವಧಾನ.** ಒಂದು ಕಠಿಣ ಉದಾಹರಣೆಯನ್ನು ಮೇಲಿನ ಇಯತ್ತೆಯ ಪ್ರೌಢ ವಿದ್ಯಾರ್ಥಿಗಳಿಗೆ ಒಬ್ಬ ಶಿಕ್ಷಕನು ಬೇಸರಬರುವ ಒಂದು ರೀತಿಯಿಂದ ತಿಳಿಸಿಕೊಡುತ್ತಿದ್ದರೂ ಅದನ್ನು ತಿಳಿದುಕೊಳ್ಳುವುದಕ್ಕಾಗಿ ಆ ವಿದ್ಯಾರ್ಥಿಗಳು ಲಕ್ಷ್ಯಕೊಡುತ್ತಾರೆ. ಇದು ಐಚ್ಛಿಕ ಅವಧಾನದ ಉದಾಹರಣೆಯು. ಒಂದು

ಸುಂದರವಾದ ಬಣ್ಣದ ಚಿತ್ರವನ್ನು ಚಿಕ್ಕಮಕ್ಕಳ ವರ್ಗದ ಮುಂದೆ ಹಿಡಿದರೆ ಆ ಹುಡುಗರ ಲಕ್ಷವು ಆ ಚಿತ್ರದ ಕಡೆಗೆ ತಾನಾಗಿಯೇ ಎಳೆಯಲ್ಪಡುವುದು. ಇದು ಅನೈಚ್ಛಿಕ ಅವಧಾನದ ಉದಾಹರಣೆಯು. ಚಿಕ್ಕಮಕ್ಕಳ ಶಿಕ್ಷಕನು ಅವರ ಅನೈಚ್ಛಿಕ ಅವಧಾನವನ್ನು ಅವಲಂಬಿಸಿ ಕೆಲಸಮಾಡಬೇಕಾಗುವುದು. ಶಿಕ್ಷಕರು ತಾವು ಕಲಿಸತಕ್ಕ ವಿಷಯದ ಕಡೆಗೆ ಮಕ್ಕಳ ಲಕ್ಷವು ಹತ್ತುವುದಕ್ಕಾಗಿ ಕೆಳಗೆ ಹೇಳಿದ ಸೂಚನೆಗಳನ್ನು ಲಕ್ಷದಲ್ಲಿಡತಕ್ಕದ್ದು. (೧) ಮಕ್ಕಳಿಗೆ ಕಲಿಸತಕ್ಕ ಪಾಠವು ಮನೋರಂಜಕವಾಗುವಂತೆ ಯತ್ನಮಾಡತಕ್ಕದ್ದು. (೨) ಚಿತ್ರ, ನಕಾಶ ಮೊದಲಾದ ಆಕರ್ಷಕ ವಸ್ತುಗಳ ಉಪಯೋಗವನ್ನು ಪಾಠದಲ್ಲಿ ಉಪಯೋಗಿಸಬೇಕು. (೩) ಪಾಠಕ್ಕೆ ಸಂಬಂಧಿಸಿದ ಯಾವದೊಂದು ಕೆಲಸವನ್ನು ಮಾಡಿಸಲಿಕ್ಕೆ ಪ್ರಯತ್ನ ಮಾಡಬೇಕು. (೪) ಪಾಠದಲ್ಲಿ ಪ್ರಶ್ನಗಳ ಉಪಯೋಗವನ್ನು ವಿಶೇಷವಾಗಿ ಮಾಡುತ್ತಿರಬೇಕು.

**ಮನಸ್ಸೂ ಇಂದ್ರಿಯಗಳೂ :—** ಮನಸ್ಸು ಒಂದು ಭದ್ರವಾದ ಕೋಟೆಯಲ್ಲಿ ಇಟ್ಟ ಸೆರೆಯಾಳಿನಂತೆ ಇರುವುದು. ಆ ಸೆರೆಯಾಳಿಗೆ ಹೊರಗಿನವರು ಯಾರಾದರೂ ಆ ಕೋಟೆಯ ಬಾಗಿಲೊಳಗಿಂದ ಅನ್ನವನ್ನು ತಂದುಕೊಟ್ಟರೆ ಮಾತ್ರ ಅವನು ಉಣ್ಣುವನು; ಇಲ್ಲದಿದ್ದರೆ ಅಲ್ಲಿಯೇ ಸತ್ತುಹೋಗುವನು. ನಮ್ಮ ಮನಸ್ಸಿನ ಸ್ಥಿತಿಯಾದರೂ ಹಾಗೆಯೇ ಇರುವುದು. **ಮನಸ್ಸಿಗೆ ಕಣ್ಣು, ಕಿವಿ, ಮೂಗು, ನಾಲಗೆ, ಸ್ಪರ್ಶ ಹೀಗೆ ಐದು ಬಾಗಿಲುಗಳು ಇರುವವು.** ಇವುಗಳ ದ್ವಾರದಿಂದ ಅದು ಹೊರಗಿನ ವಸ್ತುಗಳ ಜ್ಞಾನವನ್ನು ಮಾಡಿಕೊಳ್ಳುತ್ತದೆ. ಆ ಜ್ಞಾನವು ಅದಕ್ಕೆ ದೊರೆಯದಿದ್ದರೆ ಅದು ಸತ್ತುಹೋಗುವುದು. **ಈ ಐದು ದ್ವಾರಗಳಿಗೆ ಜ್ಞಾನೇಂದ್ರಿಯಗಳೆಂಬ ಹೆಸರು.**

**ಇಂದ್ರಿಯಗಳಿಂದಾಗುವ ಜ್ಞಾನ :—** ಕಣ್ಣಿನಿಂದ ವಸ್ತುಗಳ ಆಕಾರ, ಬಣ್ಣ, ಅಳತೆ, ಅಂತರಗಳ ಜ್ಞಾನವಾಗುವುದು; ಕಿವಿಯಿಂದ ಧ್ವನಿಯೂ, ಮೂಗಿನಿಂದ ವಾಸನೆಯೂ, ನಾಲಗೆಯಿಂದ ರುಚಿಯೂ, ಗೊತ್ತಾಗುವವು. ಸ್ಪರ್ಶದಿಂದ ತಣ್ಣಗೆ-ಬೆಚ್ಚಗೆ, ಮೆತ್ತಗೆ-ಬಿರಸು,

ನುಣುಪು-ಹುರಬರಕು, ಹಗುರು-ಜಡ ಈ ಮೊದಲಾದ ಸಂಗತಿಗಳ ಜ್ಞಾನವಾಗುವುದು. ಇವುಗಳಲ್ಲಿ ಕಣ್ಣು ಎಲ್ಲಕ್ಕೂ ಶ್ರೇಷ್ಠವಾದದ್ದು ; ಯಾಕಂದರೆ ಅದರಿಂದ ಆಗುವಷ್ಟು ಜ್ಞಾನವು ಬೇರೆ ಯಾವ ಇಂದ್ರಿಯು ಗಳಿಂದಲೂ ಆಗುವುದಿಲ್ಲ. ಕೆಲವು ಇಂದ್ರಿಯುಗಳು ತಮ್ಮ ಕೆಲಸವನ್ನು ಮಾಡುವುದಲ್ಲದೆ ಬೇರೆ ಇಂದ್ರಿಯುಗಳ ಕೆಲಸವನ್ನೂ ಮಾಡುವುವು ; ಉದಾಹರಣಾರ್ಥವಾಗಿ ಕುರುಡರು ಸ್ಪರ್ಶಜ್ಞಾನದಿಂದ ವಸ್ತುಗಳ ಆಕಾರಗಳನ್ನೂ ಸಣ್ಣಸಣ್ಣ ಪದಾರ್ಥಗಳ ಅಳತೆಯನ್ನೂ ತಿಳಿಯುವರು. ನಾವು ಮಾವಿನಹಣ್ಣನ್ನು ಮೂಸಿನೋಡಿ ಅದರ ರುಚಿಯನ್ನು ಹೇಳು ವೆವು. ಪದಾರ್ಥಗಳಿಂದಾಗುವ ಧ್ವನಿಯಿಂದ ಆ ಪದಾರ್ಥಗಳಿರುವ ದಿಕ್ಕು ಗೊತ್ತಾಗುವುದು.

**ಇಂದ್ರಿಯುಗಳ ಶಿಕ್ಷಣವು:—** ನಾವು ದೊಡ್ಡವರಾದಂತೆ ನಮ್ಮ ಕೈಕಾಲುಗಳ ಶಕ್ತಿಯು ಬೆಳೆಯುವಂತೆ ನಮ್ಮ ಇಂದ್ರಿಯುಗಳ ಶಕ್ತಿಯೂ ಬೆಳೆಯುವುದು. ಎಷ್ಟೋ ಹುಡುಗರು ತಮ್ಮ ಇಂದ್ರಿಯುಗಳ ಉಪಯೋಗವನ್ನು ಮಾಡಿಕೊಳ್ಳುವುದಿಲ್ಲ. ಅದರಿಂದ ಅವರಿಗೆ ಬಾಹ್ಯ ಜಗತ್ತಿನ ಜ್ಞಾನವು ಆಗುವುದಿಲ್ಲ. ಈ ಜ್ಞಾನವೇ ಮೂಲ ಜ್ಞಾನವು ; ಈ ಜ್ಞಾನವು ಸರಿಯಾಗಿ ಆಗದಿದ್ದರೆ ಅವರಲ್ಲಿ ಸ್ಮರಣ-ಕಲ್ಪನಾ-ವಿಚಾರ ಶಕ್ತಿಗಳು ಉತ್ಪನ್ನವಾಗುವುದಿಲ್ಲ. ಮುಂದೆ ಮಾಡಲ್ಪಡುವ ವಿಚಾರ ನಿರ್ಣಯ ಅನುಮಾನ ಈ ಮುಂತಾದ ಮನೋವ್ಯಾಪಾರಗಳು ಸರಿಯಾಗಿಯೂ ವ್ಯವಸ್ಥಿತವಾಗಿಯೂ ಆಗುವುದಿಲ್ಲ. ಅದರಿಂದ ಅವರು ದಡ್ಡರೆನಿಸಿಕೊಳ್ಳುವರು. ಇದರಿಂದ ಇಂದ್ರಿಯುಜ್ಞಾನದ ಮಹತ್ವವು ಎಷ್ಟಿರುವದೆಂಬುದು ಗೊತ್ತಾಗುವುದು. ಇಂದ್ರಿಯುಗಳನ್ನು ಹೆಚ್ಚು ಹೆಚ್ಚು ಉಪಯೋಗಿಸಿದಂತೆ ಪದಾರ್ಥಗಳ ಜ್ಞಾನವು ಹೆಚ್ಚು ಸ್ಪಷ್ಟ ವಾಗಿಯೂ ಹೆಚ್ಚು ತೀವ್ರವಾಗಿಯೂ ಆಗುವುದು ; ಮತ್ತು ಎರಡು ವಸ್ತುಗಳ ಸಾಮ್ಯವೈಷಮ್ಯಗಳನ್ನು ಕಂಡುಹಿಡಿಯುವ ಶಕ್ತಿಯು ಬೆಳೆಯುವುದು. ಇಂದ್ರಿಯುಗಳಿಗೆ ಶಿಕ್ಷಣವನ್ನು ಕೊಡುವ ಮುಖ್ಯ ಉದ್ದೇಶಗಳು ಇವೇ ಎರಡು. ಘ್ರಾಣೇಂದ್ರಿಯುದ ಉಪಯೋಗವನ್ನು,

ನಮಗಿಂತಲೂ ಅತ್ತರಗಳನ್ನು ಮಾರುವವರು ವಿಶೇಷವಾಗಿ ಮಾಡಿಕೊಳ್ಳುವುದರಿಂದ ಅವರ ಘ್ರಾಣೇಂದ್ರಿಯದಲ್ಲಿ ವಾಸನೆಯ ಸೂಕ್ಷ್ಮ ಭೇದಗಳನ್ನು ಕಂಡುಹಿಡಿಯುವ ಶಕ್ತಿಯು ಹೆಚ್ಚಾಗಿ ಒಂದಿರುವುದು. ಇದರಂತೆ ಚಿತ್ರಕಾರರ ಕಣ್ಣಿನಲ್ಲಿ ಪದಾರ್ಥಗಳ ಬಣ್ಣಗಳ ಸೂಕ್ಷ್ಮ ಭೇದಗಳನ್ನೂ ಗಾಯಕರ ಕಿವಿಯಲ್ಲಿ ಧ್ವನಿಯ ಸೂಕ್ಷ್ಮಭೇದಗಳನ್ನೂ ತಿಳಿಯುವ ಶಕ್ತಿಯು ಒಂದಿರುವದು.

ಚಿಕ್ಕಮಕ್ಕಳ ಶಿಕ್ಷಣದಲ್ಲಿ ಮುಖ್ಯವಾಗಿ ಕಣ್ಣು, ಕಿವಿ, ಸ್ಪರ್ಶ ಈ ಮೂರು ಇಂದ್ರಿಯಗಳಿಗೇ ಶಿಕ್ಷಣ ಕೊಡುವುದಿರುತ್ತದೆ. ಮೂಗು ಹಾಗು ನಾಲಗೆ ಇವುಗಳಿಗೆ ಶಿಕ್ಷಣ ಕೊಡುವ ಪ್ರಸಂಗಗಳು ತೀರ ಕಡಿಮೆ. ಇಂದ್ರಿಯ ಶಿಕ್ಷಣದ ಸಂಬಂಧದಿಂದ ಶಿಕ್ಷಕ ಶಿಕ್ಷಕಿಯರು ಲಕ್ಷ್ಯದಲ್ಲಿಡತಕ್ಕ ಸಂಗತಿಗಳು ಯಾವವೆಂದರೆ:—

(೧) ಯಾವದೊಂದು ಪಾಠವನ್ನು ಕಲಿಸುವಾಗ ಶಕ್ಯವಿದ್ದಷ್ಟು ಮಟ್ಟಿಗೆ ಹುಡುಗರ ಮುಂದೆ ವಸ್ತುಗಳನ್ನು ಇಟ್ಟು ಅವುಗಳನ್ನು ಪೂರ್ಣವಾಗಿ ನಿರೀಕ್ಷಣೆ ಮಾಡಲಿಕ್ಕೆ ಹಚ್ಚಬೇಕು.

(೨) ಪ್ರತ್ಯಕ್ಷ ವಸ್ತುಗಳಿಂದ ಆಗುವ ಜ್ಞಾನವು ಬೇರೆ ಪ್ರತಿ ಶಬ್ದಗಳನ್ನು ಹೇಳುವುದರಿಂದಾಗಲಿ, ವಿವರಿಸಿ ಹೇಳುವುದರಿಂದಾಗಲಿ ಆಗಲಾರದು. ಉದಾಹರಣಾರ್ಥವಾಗಿ ಕಾಫಿ ಬೀಜಗಳ ವಿಷಯವಾಗಿ ಹೇಳುವುದಿದ್ದಾಗ ಅವು "ಒಂದು ಗಿಡದ ಬೀಜಗಳು" ಎಂದು ಹೇಳಿ ಪಾಠಮಾಡಿಸಿದರೆ ಹುಡುಗರಿಗೆ ಅವುಗಳ ಸರಿಯಾದ ಕಲ್ಪನೆಯು ಬರಲಾರದು. ಆದರೆ ಆ ಬೀಜಗಳನ್ನೇ ಪ್ರತ್ಯಕ್ಷವಾಗಿ ಅವರ ಮುಂದೆ ಇಟ್ಟು ಅವುಗಳ ಆಕಾರವನ್ನೂ ಬಣ್ಣವನ್ನೂ ನಿರೀಕ್ಷಣೆ ಮಾಡಿಸಬೇಕು. ಅವುಗಳ ವಾಸನೆಯನ್ನು ತಕ್ಕೊಳ್ಳಲಿಕ್ಕೂ ರುಚಿಯನ್ನು ನೋಡಲಿಕ್ಕೂ ಹಚ್ಚಬೇಕು. ಹೀಗೆ ಮಾಡುವುದರಿಂದ ಕಾಫಿ ಬೀಜಗಳ ಯಥಾರ್ಥ ಕಲ್ಪನೆಯಾಗುವುದಲ್ಲದೆ ಎಂದೂ ಮರೆಯದಂಥ ಜ್ಞಾನವಾಗುವುದು.

(೩) ಪ್ರತ್ಯಕ್ಷ ವಸ್ತುಗಳು ಒಂದು ವೇಳೆ ದೊರಕದಿದ್ದರೆ ಮಣ್ಣಿನಿಂದ ಅಥವಾ ಕಟ್ಟಿಗೆಯಿಂದ ಮಾಡಿದ ಮಾದರಿಗಳನ್ನು ಉಪಯೋಗಿಸಬೇಕು. ಅವೂ ಸಿಕ್ಕದಿದ್ದರೆ ಚಿತ್ರಗಳನ್ನು ತೋರಿಸಿ ಜ್ಞಾನ ಮಾಡಿಕೊಡಬೇಕು. ಅವೂ ಸಹ ಸಿಕ್ಕದಂತಿದ್ದರೆ ಶಿಕ್ಷಕರು ಕರೇ ಹಲಿಗೆಯ ಮೇಲೆ ಸ್ವತಃ ಚಿತ್ರಗಳನ್ನು ತೆಗೆದು ತೋರಿಸಬೇಕು.

(೪) ಆದಷ್ಟು ಮಟ್ಟಿಗೆ ಹೆಚ್ಚು ಇಂದ್ರಿಯಗಳನ್ನು ಉಪಯೋಗಿಸಲಿಕ್ಕೆ ಹಚ್ಚಬೇಕು. ಅದರಿಂದ ಆ ವಸ್ತುವಿನ ಜ್ಞಾನವು ಹೆಚ್ಚು ಸ್ಪಷ್ಟವಾಗಿ ಆಗುವುದು. ಉದಾಹರಣಾರ್ಥವಾಗಿ ನಾವು ಮಾವಿನ ಹಣ್ಣುಗಳನ್ನು ಕೊಳ್ಳುವಾಗ ಮೊದಲು ಕಣ್ಣಿನಿಂದ ಅದರ ಬಣ್ಣವನ್ನೂ ಆಕಾರವನ್ನೂ ಅರಿತುಕೊಳ್ಳುತ್ತೇವೆ. ತರುವಾಯ ಅದನ್ನು ಮೂಸಿ ನೋಡಿ ವಾಸನೆಯನ್ನು ತಕ್ಕೊಳ್ಳುತ್ತೇವೆ. ಹಿಚಿಕಿ ನೋಡಿ ಹಣ್ಣು ಅಥವಾ ಕಾಯಿ ಎಂಬುದನ್ನು ಪರೀಕ್ಷಿಸುತ್ತೇವೆ. ಆ ಬಳಿಕ ಅದನ್ನು ಹೆಚ್ಚಿ ಒಂದು ಹೋಳು ಬಾಯಿಯಲ್ಲಿ ಹಾಕಿಕೊಂಡು ಅದರ ರುಚಿ ನೋಡುತ್ತೇವೆ. ಈ ಮೇರೆಗೆ ಕಣ್ಣು, ಮೂಗು, ಸ್ಪರ್ಶ, ನಾಲಗೆ ಈ ನಾಲ್ಕು ಇಂದ್ರಿಯಗಳನ್ನು ಉಪಯೋಗಿಸುವದರಿಂದ ಆ ಮಾವಿನ ಹಣ್ಣು ಒಳ್ಳೆಯದೊ ಕೆಟ್ಟದ್ದೋ ಎಂಬುದನ್ನು ಸರಿಯಾಗಿ ನಿರ್ಣಯಿಸಲಿಕ್ಕೆ ಅನುಕೂಲವಾಗುವುದು. ಇಲ್ಲದಿದ್ದರೆ ನಾವು ಮೋಸ ಹೋಗುವ ಸಂಭವವುಂಟು. ನಮ್ಮ ಶಿಕ್ಷಣದಲ್ಲಿ ಎಲ್ಲ ಇಂದ್ರಿಯಗಳನ್ನು ಉಪಯೋಗಿಸಲು ಪ್ರಯತ್ನಮಾಡಬೇಕು. ಕನಿಷ್ಟ ಪಕ್ಷಕ್ಕೆ ಎರಡು ಇಂದ್ರಿಗಳನ್ನಾದರೂ ಉಪಯೋಗಿಸಿಕೊಳ್ಳಲಿಕ್ಕೆ ಹೇಳಬೇಕು.

ಸಾಲೆಯಲ್ಲಿ ಕಲಿಸಲ್ಪಡುವ ವಸ್ತುಪಾಠ, ಚಿತ್ರಕಲೆ, ಭೂಗೋಲ, ವಾಚನ, ಗಾಯನ, ಗಣಿತ, ಈ ವಿಷಯಗಳಲ್ಲಿ ಇಂದ್ರಿಯಗಳಿಗೆ ಶಿಕ್ಷಣವು ದೊರೆಯುವುದು. ವಾಚನ ಪಾಠದಲ್ಲಿ ಅಕ್ಷರಗಳನ್ನು ಕಣ್ಣಿನಿಂದ ನೋಡುವುದು, ಬಾಯಿಂದ ಉಚ್ಚರಿಸುವುದು, ಉಚ್ಚಾರಗಳನ್ನು ಕಿವಿಯಿಂದ ಕೇಳುವುದು ಹೀಗೆ ಮೂರು ಇಂದ್ರಿಯಗಳ

ಉಪಯೋಗವಾಗುವುದು. ವಸ್ತುಪಾಠದಲ್ಲಿ ಹೆಚ್ಚು ಇಂದ್ರಿಯಗಳಿಗೆ ಶಿಕ್ಷಣವು ದೊರೆಯುವುದು. ಡ್ರಾಯಿಂಗ, ಕೈಕೆಲಸಗಳಿಂದ ಪದಾರ್ಥಗಳ ಆಕಾರ ಬಣ್ಣಗಳ ಜ್ಞಾನವಾಗುವುದು. ತೀರ ಚಿಕ್ಕ ಮಕ್ಕಳಿಂದಲೂ ಅವರ ಬಳಿಕೆಯೊಳಗಿನ ವಸ್ತುಗಳ ಚಿತ್ರಗಳನ್ನು ತೆಗಿಸಲಿಕ್ಕೆ ಅಡ್ಡಿಯಿಲ್ಲ. ಆ ಚಿತ್ರಗಳು ಚಿತ್ರಕಲೆಯ ನಿಯಮಗಳಿಗೆ ಅನುಸರಿಸಿರದಿದ್ದರೂ ಚಿಂತೆಯಿಲ್ಲ. ಅವರು ವಸ್ತುಗಳ–ಸಾಧಾರಣ ಕಲ್ಪನೆಯನ್ನು ತೋರಿಸಿದರೆ ಸಾಕು.



# ೪ನೆಯ ಪ್ರಕರಣ

## ಬೌದ್ಧಿಕ ಶಿಕ್ಷಣ–ಮನೋವಿಕಾಸ

**ಸಂವೇದನ, ಬೋಧೆ, ಗ್ರಹಣ, ಧಾರಣಾ:—**ಜ್ಞಾನೇಂದ್ರಿಯುಗಳಿಂದ ನಮಗೆ ಬಾಹ್ಯಜಗತ್ತಿನ ಜ್ಞಾನವಾಗುವುದೆಂಬ ಸಂಗತಿಯನ್ನು ಹಿಂದಿನ ಪ್ರಕರಣದಲ್ಲಿ ವಿವರಿಸಿದ್ದೇವೆ. ಈ ಮೂಲಜ್ಞಾನದಿಂದ ಮನಸು ಕ್ರಮಕ್ರಮವಾಗಿ ಹೇಗೆ ವಿಕಾಸ ಹೊಂದುವುದೆಂಬುದನ್ನು ಇಲ್ಲಿ ಆಲೋಚಿಸುವ.

ನಾವು ಒಂದು ಸ್ಥಳದಲ್ಲಿ ಕುಳಿತಿರುವಾಗ ಒಮ್ಮೆಲೆ ನಮ್ಮ ಕಿವಿಗೆ ಒಂದು ಧ್ವನಿಯು ಕೇಳಬಂದಿತೆಂದು ಕಲ್ಪಿಸುವ. ಕೂಡಲೆ ನಮ್ಮ ಲಕ್ಷ್ಯವು ಅತ್ತಕಡೆಗೆ ಹೋಗುವುದು. ಇದಕ್ಕೆ **'ಅವಧಾನ'**ವೆನ್ನುತ್ತಾರೆಂದು ಹಿಂದೆ ಹೇಳಿದೆ. ಯಾವುದೊಂದು ಪದಾರ್ಥದಿಂದ ಧ್ವನಿಯು ಉತ್ಪನ್ನವಾದ ಕೂಡಲೆ, ಕೆರೆಯಲ್ಲಿ ಒಂದು ಕಲ್ಲು ಒಗೆದರೆ ನೀರ ಮೇಲೆ ಹೇಗೆ ವರ್ತುಳಾಕಾರವಾದ ತೆರೆಗಳು ಹುಟ್ಟಿ ಸುತ್ತು ಮುತ್ತು ಹಬ್ಬುವವೋ ಹಾಗೆಯೇ ಹವೆಯಲ್ಲಿ ಆ ಧ್ವನಿಯ ತೆರೆಗಳು ಉತ್ಪನ್ನವಾಗಿ ಸುತ್ತಲು ಹಬ್ಬುವವು ; ಅವುಗಳಲ್ಲಿ ಕೆಲವು, ನಮ್ಮ ಕಿವಿಯೊಳಗಿನ ಜ್ಞಾನತಂತುಗಳ ಮೇಲೆ ಅಪ್ಪಳಿಸುವವು ; ಅದರಿಂದ ಯಾವುದೋ ಒಂದು ಧ್ವನಿಯು ಆಯಿತೆಂದು ನಮ್ಮ ಮನಸಿಗೆ ಗೊತ್ತಾಗುವದು. ಇದು ಎಲ್ಲಕ್ಕೂ ಮೊದಲನೆಯ ಕಾರ್ಯವು. ಇದಕ್ಕೆ **ಸಂವೇದನೆ** ಎಂಬ ಹೆಸರು. ಆ ಬಳಿಕ ಮನಸು, ಈ ಧ್ವನಿಯು ಯಾವ ಪದಾರ್ಥದಿಂದ ಆದದ್ದೆಂಬುದನ್ನು ವಿಚಾರಮಾಡಿ ತಿಳಿಯುವುದು. ಈ ಕಾರ್ಯಕ್ಕೆ **ಬೋಧೆ** ಎಂಬ ಹೆಸರು. ಇದೇ ಪ್ರಕಾರ ಯಾವುದೊಂದು ಪದಾರ್ಥದ ಮೇಲೆ ಬಿದ್ದ ಪ್ರಕಾಶ ಕಿರಣಗಳು ಪರಾವರ್ತನ ಹೊಂದಿ ನಮ್ಮ ಕಣ್ಣೊಳಗಿನ ಪಟಲ (Retina) ದ ಮೇಲೆ ಮೂಡಲು,

ಅದಕ್ಕೆ ಹೊಂದಿದ ಜ್ಞಾನತಂತುಗಳು ಈ ಸುದ್ದಿಯನ್ನು ಮಿದುಳಿಗೆ ತಿಳಿಸುವವು. ಇದು **ಸಂವೇದನ** ಕಾರ್ಯವು. ಆ ಬಳಿಕ ಮಿದುಳು, ಈ ಕಿರಣಗಳು ಯಾವ ಪದಾರ್ಥದ ಮೇಲಿಂದ ಪರಾವರ್ತನ ಹೊಂದಿ ಬಂದವುಗಳೆಂಬುದನ್ನು ಅರಿತುಕೊಳ್ಳುವುದು. ಇದು **ಬೋಧೆಯ** ಕಾರ್ಯವು. ಇದರಂತೆ ಪದಾರ್ಥದ ಸೂಕ್ಷ್ಮಕಣಗಳು ಹವೆಯಲ್ಲಿ ಪಸರಿಸಿ ನಮ್ಮ ಘ್ರಾಣೇಂದ್ರಿಯದೊಳಗಿನ ಜ್ಞಾನತಂತುಗಳ ಮೇಲೆ ಅಪ್ಪಳಿಸುವುದರಿಂದ ನಮ್ಮ ಮನಸಿಗೆ ಆ ಪದಾರ್ಥದ ವಾಸನೆಯು ಗೊತ್ತಾಗುವುದು. ಪದಾರ್ಥದ ರಸವು ನಮ್ಮ ನಾಲಗೆಯ ತುದಿಯಲ್ಲಿರುವ ಜ್ಞಾನತಂತುಗಳಿಗೆ ತಗಲಲು ಆ ಪದಾರ್ಥದ ರುಚಿಯು ನಮಗೆ ತಿಳಿಯುತ್ತದೆ.

**ಸಾರಾಂಶ,** ಧ್ವನಿಯ ತೆರೆಗಳು, ಪ್ರಕಾಶದ ತೆರೆಗಳು, ಪದಾರ್ಥದ ಪರಮಾಣುಗಳು, ರಸಗಳು ಇಲ್ಲವೆ ಪದಾರ್ಥಗಳು ಅನುಕ್ರಮವಾಗಿ ಕಿವಿ, ಕಣ್ಣು, ಘ್ರಾಣ, ರಸನೆ, ಸ್ಪರ್ಶ ಈ ಇಂದ್ರಿಯಗಳಲ್ಲಿರುವ ಜ್ಞಾನತಂತುಗಳ ಮೇಲೆ ಅಪ್ಪಳಿಸುವುದರಿಂದ ಆಗುವ ಜ್ಞಾನಕ್ಕೆ **ಸಂವೇದನೆ** ಎಂಬ ಹೆಸರು. ಮತ್ತು ಆ ಜ್ಞಾನವು ಇಂಥ ಪದಾರ್ಥದಿಂದಲೇ ಆದದ್ದೆಂದು ಮನಸಿಗೆ ಆಗುವ ಜ್ಞಾನಕ್ಕೆ **ಬೋಧೆ** ಎಂಬ ಹೆಸರು. ಅವಧಾನವು ಹೆಚ್ಚು ಕಡಿಮೆ ಇದ್ದಂತೆ ಸಂವೇದನವೂ, ಬೋಧೆಯೂ ಹೆಚ್ಚಾಗಲಿ, ಕಡಿಮೆಯಾಗಲಿ ಆಗುವವು. ಜ್ಞಾನೇಂದ್ರಿಯಗಳು ಶಿಕ್ಷಣವನ್ನು ಹೊಂದಿದ್ದರೆ ಪದಾರ್ಥಗಳ ಬೋಧೆಯು ಪೂರ್ಣವಾಗಿಯೂ, ಸ್ಪಷ್ಟವಾಗಿಯೂ ಆಗುವುದು.

**ಬೋಧೆಯಿಂದ ಆಗುವ ಜ್ಞಾನವನ್ನು ಮನಸು ಸ್ವೀಕರಿಸುವುದು. ಮನಸಿನ ಈ ಶಕ್ತಿಗೆ ಗ್ರಹಣಶಕ್ತಿ**ಯೆಂಬ ಹೆಸರು. ಯಾವದೊಂದು ವಿಷಯದಲ್ಲಿ ನಮ್ಮ ಅಭಿರುಚಿಯು ಇಲ್ಲದಿದ್ದರೆ, ಅಥವಾ ಆ ವಿಷಯದ ಕಡೆಗೆ ನಮ್ಮ ಅವಧಾನವಿರದಿದ್ದರೆ ಆ ವಿಷಯವನ್ನು ನಮ್ಮ ಮನಸು ಸ್ವೀಕರಿಸುವುದಿಲ್ಲ. ಒಂದುವೇಳೆ ಸ್ವೀಕರಿಸಿದರೂ ಅದು ಮನಸಿನಲ್ಲಿ ಚೆನ್ನಾಗಿ ಮೂಡಿರುವದಿಲ್ಲಾದಕಾರಣ ಮುಂದೆ ನೆನಪಿಗೆಬರುವುದಿಲ್ಲ.

ಒಬ್ಬ ಹುಡುಗನಿಗೆ ಗಣಿತ ವಿಷಯದಲ್ಲಿ ಅಭಿರುಚಿಯು ಕಡಿಮೆ ಎಂದು ತಿಳಿಯುವ. ಶಿಕ್ಷಕನು ಗಣಿತದ ಉದಾಹರಣವನ್ನು ತಿಳಿಸಿ ಹೇಳುತ್ತಿರುವಾಗ ಆ ಹುಡುಗನು ಚಂಡಿನ ಆಟದ ಬಗ್ಗೆ ವಿಚಾರಮಾಡುತ್ತಿದ್ದರೆ ಉದಾಹರಣದ ರೀತಿಯು ಅವನಿಗೆ ತಿಳಿಯುವುದಿಲ್ಲ. ಅಂದರೆ ಅವನ ಮನಸು ಆ ರೀತಿಯನ್ನು ಸ್ವೀಕರಿಸುವುದಿಲ್ಲ. ಅದೇ ಪ್ರಕಾರ ಅವಸರದಿಂದ ನೋಡಿದ ಇಲ್ಲವೆ ಕೇಳಿದ ಸಂಗತಿಯನ್ನು ಕೂಡ ನಮ್ಮ ಮನಸು ಚೆನ್ನಾಗಿ ಸ್ವೀಕರಿಸುವುದಿಲ್ಲ. ಅದರಿಂದ ಅದು ಲಕ್ಷ್ಯದಲ್ಲಿ ಉಳಿಯುವುದಿಲ್ಲ. ಆದಕಾರಣ ಶಿಕ್ಷಕರು ಮಕ್ಕಳ ಗ್ರಹಣಶಕ್ತಿಯು ಬೆಳೆಯುವಂತೆ ಪಾಠಕ್ಕೆ ಮನೋರಂಜಕ ಸ್ವರೂಪಕೊಟ್ಟು ಅಭಿರುಚಿಯನ್ನು ಹುಟ್ಟಿಸಬೇಕು. ಪ್ರಶ್ನ ಪದ್ಧತಿಯನ್ನು ಉಪಯೋಗಿಸಿ ಅವರ ಅವಧಾನವನ್ನು ಜಾಗ್ರತಗೊಳಿಸಬೇಕು.

ನಾವು ಅನೇಕ ವಸ್ತುಗಳನ್ನೂ ಸಂಗತಿಗಳನ್ನೂ ನೋಡುತ್ತೇವೆ. ಅನೇಕ ಸುದ್ದಿಗಳನ್ನು ಕೇಳುತ್ತೇವೆ. ನಮ್ಮ ಮನಸಿನಲ್ಲಿ ನಾನಾಬಗೆಯ ವಿಚಾರಗಳು ನಡೆದಿರುವುವು. ಅವೆಲ್ಲವುಗಳು ನಮ್ಮ ಮಿದುಳಿನಮೇಲೆ ಮುದ್ರೆಯನ್ನು ಮಾಡುವುವು. ಹೀಗೆ ಮೂಡಿದ ಜ್ಞಾನವು ನಷ್ಟವಾಗುವುದಿಲ್ಲ. **ಮನಸಿನಲ್ಲಿ ಜ್ಞಾನವನ್ನು ಸಂಗ್ರಹಿಸಿಟ್ಟುಕೊಳ್ಳುವ ಈ ಶಕ್ತಿಗೆ ಧಾರಣಾಶಕ್ತಿ** ಯೆಂಬ ಹೆಸರು. ಈ ಶಕ್ತಿಯು ಮಿದುಳಿನ ಶಕ್ತಿಯನ್ನೂ ಗ್ರಹಣ ಶಕ್ತಿಯನ್ನೂ ಅವಲಂಬಿಸಿರುವದು. ಚಿಕ್ಕಮಕ್ಕಳ ಧಾರಣಾಶಕ್ತಿಯು ಒಳ್ಳೇ ಆಶ್ಚರ್ಯಕರವಾದದ್ದಿರುತ್ತದೆ. ಅವರು ತಮ್ಮ ಸುತ್ತುಮುತ್ತು ಇರುವ ಅನೇಕ ಪದಾರ್ಥಗಳನ್ನೂ, ಅಲ್ಲಿ ನಡೆಯುವ ಅನೇಕ ಕಾರ್ಯಗಳನ್ನೂ ನೋಡಿ ಮನಸಿನಲ್ಲಿಟ್ಟುಕೊಳ್ಳಲು ಪ್ರಯತ್ನಮಾಡುವರು.

ಸ್ಮರಣ:— ಇಂದ್ರಿಯಗಳಿಂದ ಆದ ಜ್ಞಾನವನ್ನು ನಾವು ಮನಸಿನಲ್ಲಿ ಸಂಗ್ರಹಿಸಿಟ್ಟುಕೊಳ್ಳುವೆವೆಂದು ಹಿಂದೆ ಹೇಳಿದೆ. ಹೀಗೆ **ಹಿಡಿದಿಟ್ಟ ಜ್ಞಾನದ ಪ್ರತಿಮೆಯನ್ನು ಮನಸು ಬೇಕಾದಾಗ ತನ್ನ ಮುಂದೆ ತಂದುಕೊಳ್ಳುವುದು. ಮನಸಿನಲ್ಲಿ ನಡೆಯುವ ಈ ಕಾರ್ಯಕ್ಕೆ**

ಸ್ಮರಣ ಅಥವಾ ನೆನಪು ಅನ್ನುತ್ತೇವೆ. ಉದಾಹರಣಾರ್ಥವಾಗಿ ನಾವು ಸರ್ಕಸಿನಲ್ಲಿ ಒಂದು ಸಿಂಹವನ್ನು ನೋಡಿದೆವೆಂದು ಕಲ್ಪಿಸುವ; ನಮ್ಮ ಕಣ್ಣು ಅದರ ಸರ್ವಾಂಗವನ್ನು ನಿರೀಕ್ಷಿಸುವುದು; ಮನಸ್ಸು ಕಣ್ಣಿನಿಂದ ಬಂದ ಸುದ್ದಿಗಳನ್ನು ಸ್ವೀಕರಿಸಿ ಅದರ ಆಕಾರ, ಬಣ್ಣ, ಎತ್ತರ ಮುಂತಾದವುಗಳನ್ನು ಅರಿತು ಸಂಗ್ರಹಿಸಿಕೊಳ್ಳುವುದು. ಈ ಕಾರ್ಯ ಗಳು ಸಂವೇದನ, ಬೋಧೆ, ಗ್ರಹಣ, ಧಾರಣಾ ಈ ಶಕ್ತಿಗಳಿಂದ ಆದುವು. ನಾವು ಮನೆಗೆ ಬಂದಬಳಿಕ ಆ ಸಿಂಹದ ಸ್ವರೂಪವು ನಮ್ಮ ಕಣ್ಣು ಮುಂದೆ ಕಟ್ಟುವುದು. ಇದು ಸ್ಮರಣಶಕ್ತಿಯ ಕಾರ್ಯವು. ಪ್ರತ್ಯಕ್ಷ ವಾಗಿ ಕಂಡ ಸಿಂಹನ ಪ್ರತಿಮೆಗೂ, ಸ್ಮರಣಶಕ್ತಿಯಿಂದ ಮನಸಿನ ಮುಂದೆ ಬಂದ ಪ್ರತಿಮೆಗೂ ಬಹಳ ಭೇದವಿರುವುದು. ಮೊದಲನೆಯದು ಸ್ಪಷ್ಟವಾದದ್ದಿರುವುದು. ಎರಡನೆಯದು ಸ್ವಲ್ಪ ಮುಸಮುಸಕಾದದ್ದಿರು ವುದು. ಹೀಗಿದ್ದಾಗ್ಯೂ ಆ ಅಸ್ಪಷ್ಟವಾದ ಪ್ರತಿಮೆಯಿಂದ ನಮಗೆ ಬಹಳ ಉಪಯೋಗವಾಗುವುದು. ಈ ಪ್ರಕಾರದ ಪ್ರತಿಮೆಗಳನ್ನು ಹುಟ್ಟಿಸಿ ನೋಡುವ ಸಾಮರ್ಥ್ಯವು ನಮ್ಮ ಮನಸಿನಲ್ಲಿ ಇರದಿದ್ದರೆ ನಮ್ಮ ಕಲ್ಪನಾ ಶಕ್ತಿಗೆ ಸಹಾಯ್ಯವಾಗುತ್ತಿದ್ದಿಲ್ಲ. ತುಲನಾ, ವಿಚಾರ, ಅನುಮಾನ ಈ ಮೊದಲಾದ ಉಚ್ಚ ಪ್ರತಿಯ ಬೌದ್ಧಿಕ ಶಕ್ತಿಗಳು ಉತ್ಪನ್ನವಾಗುತ್ತಿದ್ದಿಲ್ಲ. ದಿನಾಲು ನಾವು ಎಷ್ಟೋ ಪದಾರ್ಥಗಳನ್ನು ನೋಡುತ್ತೇವೆ; ಎಷ್ಟೋ ಮಾತುಗಳನ್ನು ಕೇಳುತ್ತೇವೆ. ನಮ್ಮ ಮನಸಿನಲ್ಲಿ ಅನೇಕ ಕಲ್ಪನೆಗಳು ಬರುತ್ತವೆ. ಆದರೆ ಇವೆಲ್ಲವುಗಳ ಸ್ಮರಣವು ನಮಗೆ ಆಗುವುದಿಲ್ಲ. ನಮ್ಮ ಮನಸಿಗೆ ಒಳ್ಳೇ ಮಹತ್ವ ವಾದವುಗಳೆಂದು ತೋರಿದ ಸಂಗತಿಗಳು ಅಥವಾ ನಮ್ಮ ಮನಸಿನಮೇಲೆ ಹಲವು ಸಾರೆ ಸಂಸ್ಕಾರ ಮಾಡುತ್ತಿರುವ ಸಂಗತಿಗಳು ಮಾತ್ರ ನಮ್ಮ ನೆನಪಿನಲ್ಲಿ ಉಳಿಯುವುವು.

ಒಂದೇ ವಸ್ತುವನ್ನು ಬಹಳ ಸಾರೆ ಅವಲೋಕನ ಮಾಡುವು ದರಿಂದ ಗ್ರಹಣ ಧಾರಣಾ ಶಕ್ತಿಗಳ ಕಾರ್ಯಗಳು ಚೆನ್ನಾಗಿ ನಡೆದು ಮನಸಿಗೆ ಆ ವಸ್ತುವಿನ ಜ್ಞಾನವು ಸ್ಪಷ್ಟವಾಗಿ ಆಗುವುದು. ಅದರಿಂದ

ಅದು ತೀವ್ರವಾಗಿಯೂ ಸ್ಪಷ್ಟವಾಗಿಯೂ ನೆನಪಿಗೆ ಬರುವುದು. ಆದಕಾರಣ ಶಿಕ್ಷಕರು ಒಮ್ಮೆ ಕಲಿಸಿದ ಪಾಠಗಳ ಪುನರಾವರ್ತನವನ್ನು ಮೇಲೆ ಮೇಲೆ ಮಾಡಿಸತಕ್ಕದ್ದು. ಅದರಿಂದ ಆ ವಿಷಯವು ಹುಡುಗರ ಮನಸಿನಲ್ಲಿ ಸ್ಪಷ್ಟವಾಗಿ ಉಳಿದು ಬೇಕಾದಾಗ ನೆನಪಿಗೆ ಬರುವುದು. ಇದರಿಂದ ಪಾಠಗಳ ಆವರ್ತನದ ಮಹತ್ವವು ಎಷ್ಟಿರುವುದೆಂಬುದು ಗೊತ್ತಾಗುವುದು.

ಸಂವೇದನ, ಬೋಧೆ, ಗ್ರಹಣ, ಧಾರಣಾ ಶಕ್ತಿಗಳು ಹೆಚ್ಚು ಕಡಿಮೆ ಪ್ರಮಾಣದಿಂದ ಕೆಲಸಮಾಡುವುದರಿಂದ ಹುಡುಗರ ಸ್ಮರಣ ಶಕ್ತಿಯಲ್ಲಿ ಕೆಲವು ದೋಷಗಳು ಕಂಡುಬರುವುವು; ಕೆಲವು ಹುಡುಗರು ಹೊಸ ಸಂಗತಿಗಳನ್ನು ಬೇಗ ಕಲಿಯುವರು; ಆದರೆ ಬೇಗ ಮರೆಯುವರು; ಕೆಲವರಿಗೆ ಕಲಿಯಲಿಕ್ಕೆ ಬಹಳ ಕಾಲವು ಹಿಡಿಯುವುದು; ಆದರೆ ಒಮ್ಮೆ ಕಲಿತ ಸಂಗತಿಗಳನ್ನು ಎಂದೂ ಮರೆಯುವುದಿಲ್ಲ; ಮತ್ತೆ ಕೆಲವರಿಗೆ ಯಾವದೊಂದು ಸಂಗತಿಯನ್ನು ಎಷ್ಟು ಸಾರೆ ತಿಳಿಸಿ ಹೇಳಿದರೂ ನೆನಪಿನಲ್ಲಿಯೇ ಉಳಿಯುವುದಿಲ್ಲ. ಹಿಂದೆ ಹೇಳಿದ ಸ್ಮರಣಶಕ್ತಿಯ ಮೂಲ ತತ್ವಗಳನ್ನು ಅರಿತ ಶಿಕ್ಷಕರು ಮಕ್ಕಳ ಈ ದೋಷಗಳನ್ನು ಕಂಡು ಹಿಡಿದು ತಕ್ಕ ಪ್ರಯತ್ನಗಳಿಂದ ತಿದ್ದಲಿಕ್ಕೆ ಯತ್ನಮಾಡತಕ್ಕದ್ದು.

ಇಂದ್ರಿಯಗಳಿಂದ ಜಗತ್ತಿನ ಜ್ಞಾನವು ಎಷ್ಟು ಸಂಗ್ರಹವಾಗಿದೆ; ಎಂಬುದು ನಮ್ಮ ಸ್ಮರಣ ಶಕ್ತಿಯಿಂದ ಗೊತ್ತಾಗುವುದು. ಈ ಮೇರೆಗೆ ಸಂಗ್ರಹವಾದ ಜ್ಞಾನದ ಸಹಾಯ್ಯದಿಂದ ಕಲ್ಪನಾ ವಿಚಾರ ಶಕ್ತಿಗಳು ಉತ್ಪನ್ನವಾಗುವುವು. ಅವುಗಳಿಂದ ಮನಸು ಪೂರ್ಣವಾಗಿ ವಿಕಾಸ ಹೊಂದುವುದು. ಕೇವಲ ಸ್ಮರಣಶಕ್ತಿಯೊಂದು ಬೆಳೆದರೆ ಅದರಿಂದ ವ್ಯವಹಾರದಲ್ಲಿ ಅಲ್ಪ ಸ್ವಲ್ಪ ಪ್ರಯೋಜನವಾಗುತ್ತಿದ್ದಾಗ್ಯೂ ಮನಸ್ಸು ವಿಕಾಸ ಹೊಂದುವುದಿಲ್ಲ.

**ಕಲ್ಪನಾಶಕ್ತಿ:—** ನಮ್ಮ ಸ್ಮರಣಶಕ್ತಿಯು ಜ್ಞಾನೇಂದ್ರಿಯಗಳಿಂದ ಆಗುವ ಜ್ಞಾನವನ್ನು ಮಾತ್ರ ಕಾಯ್ದಿಡುವುದು. ಕೇವಲ ಇಂದ್ರಿಯಗಳಿಂದ ಆಗುವ ಜ್ಞಾನವು, ವಿಚಾರ ಶಕ್ತಿಯಿಂದ ನಿರ್ಣಯ

ಗಳನ್ನೂ ಅನುಮಾನಗಳನ್ನೂ ತೆಗೆಯಲಿಕ್ಕೆ ಸಾಲದು. ಈ ಕಾರ್ಯಗಳಿಗೆ ಬೇರೆ ಎಷ್ಟೋ ಹೊಸ ಜ್ಞಾನದ ಸಹಾಯ್ಯವು ಬೇಕು. ಆ ಜ್ಞಾನವು ನಮಗೆ ಇಂದ್ರಿಯಗಳಿಂದ ಆಗದೆ ಇಂದ್ರಿಯಗಳಿಂದ ಸಂಗ್ರಹಿಸಿದ ಜ್ಞಾನದ ಸಹಾಯ್ಯದಿಂದ ಮನಸಿನಲ್ಲಿ ತನ್ನಿಂದ ತಾನೇ ಉತ್ಪನ್ನವಾಗು ವುದು. ಉದಾಹರಣಾರ್ಥವಾಗಿ ಕನ್ನಡ ಶನೆಯ ಇಯತ್ತೆಯನ್ನು ಕಲಿಯುವ ಒಬ್ಬ ವಿದ್ಯಾರ್ಥಿಯು ತನ್ನ ಊರು, ಊರ ಸಮೀಪದಲ್ಲಿ ಇರುವ ಗುಡ್ಡ, ಹೊಳೆ, ಹಳ್ಳ, ಭೂಮಿ ಈ ಮೊದಲಾದವುಗಳನ್ನು ತನ್ನ ಇಂದ್ರಿಯಗಳಿಂದ ನಿರೀಕ್ಷಣಮಾಡಿ ಎಷ್ಟೋ ಸಂಗತಿಗಳ ಜ್ಞಾನವನ್ನು ಮಾಡಿಕೊಂಡಿರುವನು. ಈ ಜ್ಞಾನದ ಸಹಾಯ್ಯದಿಂದ ಹಿಮಾಲಯ ಪರ್ವತಗಳ ಸಾಲುಗಳು, ಅಲ್ಲಿ ಹುಟ್ಟಿ ಹರಿಯುವ ಗಂಗಾ, ಯಮುನಾ, ಗೋಗ್ರಾ, ಗಂಡಕಿ ಮೊದಲಾದ ಹೊಳೆಗಳು, ಆ ಹೊಳೆಗಳು ತಮ್ಮ ಸಂಗಡ ತರುವ ರೇವೆ, ಆ ರೇವೆಯಿಂದ ಅವುಗಳ ದಂಡೆಯ ನಿವಾಸಿಗಳಿಗೆ ಆಗುವ ಪ್ರಯೋಜನ, ಅಲ್ಲಿಯ ಜನವಸತಿ ಇವೇ ಮೊದಲಾದ ಸಂಗತಿ ಗಳನ್ನು ಅವನು ಇಲ್ಲಿಯೇ ಕುಳಿತು ಅರಿತುಕೊಳ್ಳುವನು. ಈ ಬಗೆಯ ಜ್ಞಾನವು ಅವನಿಗೆ ಯಾವ ಶಕ್ತಿಯಿಂದ ಆಗುವುದೋ ಅದೇ **ಕಲ್ಪನಾಶಕ್ತಿಯು.**

ಕಲ್ಪನಾಶಕ್ತಿಗೆ ಅಡಿಗೆ ಮಾಡುವವರ ಸಾಮ್ಯವನ್ನು ಕೊಡ ಬಹುದು. ಅವರು ತಮ್ಮ ಮುಂದೆ ಇಟ್ಟ ಸಕ್ಕರೆ, ತುಪ್ಪ, ಸಜ್ಜಿಗೆ ಈ ಮೊದಲಾದ ಪದಾರ್ಥಗಳನ್ನು ತಕ್ಕ ಪ್ರಮಾಣದಿಂದ ತೆಗೆದುಕೊಂಡು ಯೋಗ್ಯರೀತಿಯಿಂದ ಕೂಡಿಸಿ ಉಂಡಿಗಳನ್ನು ಸಿದ್ಧಮಾಡುವನು. ಇದೇ ಪ್ರಕಾರ ಕಲ್ಪನಾಶಕ್ತಿಯು ಕಾರ್ಯಮಾಡುತ್ತದೆ. ಇಂದ್ರಿಯ ಗಳಿಂದ ನಾವು ಸೃಷ್ಟಿಯ ಅವಲೋಕನವನ್ನು ಮಾಡಿದಾಗ ಮಿದುಳಿನಲ್ಲಿ ಒಂದೊಂದರಿಂದ ಒಂದೊಂದು ಚಿತ್ರವು ಮೂಡುವುದು; ಧಾರಣಾ ಶಕ್ತಿಯಿಂದ ಆ ಚಿತ್ರಗಳು ಅಲ್ಲಿ ಸ್ಥಿರವಾಗಿ ಉಳಿಯುವವು. ಇಂಥ ಎಷ್ಟೋ ಚಿತ್ರಗಳು ತಲೆಯಲ್ಲಿ ಸಂಗ್ರಹಿಸಲ್ಪಟ್ಟಿರುವುವು. ಸ್ಮರಣ ಶಕ್ತಿಯು ಇವುಗಳಲ್ಲಿ ಬೇಕಾದ ಚಿತ್ರವನ್ನು ಬೇಕಾದಾಗ ಮನಸಿನ

ಮುಂದೆ ತರುವುದು. ಕಲ್ಪನಾಶಕ್ತಿಯು ಮೊದಲು ಸಂಗ್ರಹವಾಗಿದ್ದ ಚಿತ್ರಗಳಲ್ಲಿ ಕೆಲವು ಚಿತ್ರಗಳನ್ನು ತೆಗೆದುಕೊಂಡು ಹೊಸದೊಂದು ಚಿತ್ರವನ್ನು ಕಲ್ಪಿಸಿ ಸಿದ್ಧಮಾಡುವುದು.

ಗೆರಸಪ್ಪೆಯೊಳಗಿನ ಶರಾವತಿ ನದಿಯ ತಡಸಲವನ್ನು ನಾವು ಎಂದೂ ನೋಡಿಲ್ಲೆಂದು ಕಲ್ಪಿಸುವ; ಆದರೆ ನದಿಯ ಪ್ರವಾಹ, ದೊಡ್ಡ ದೊಡ್ಡ ಬಂಡೆಗಳು, ಕೊಳ್ಳಗಳು, ನೀರಿನ ತುಷಾರಗಳು; ಕಾಮನ ಬಿಲ್ಲು ಇವೇ ಮೊದಲಾದ ಸಂಗತಿಗಳ ಜ್ಞಾನವನ್ನು ನಾವು ಈ ಮೊದಲೇ ಇಂದ್ರಿಯಗಳಿಂದ ದೊರಕಿಸಿ ಮನಸಿನಲ್ಲಿ ಸಂಗ್ರಹಿಸಿಟ್ಟುಕೊಂಡಿದ್ದೇವೆ. ಈಗ ನಾವು ತಡಸಲಿನ ವರ್ಣನೆಯನ್ನು ಓದಲಾರಂಭಿಸಿದೆವೆಂದರೆ, ಅಥವಾ ಅದನ್ನು ನೋಡಿಬಂದವರ ವ್ಯಾಖ್ಯಾನವನ್ನು ಕೇಳತೊಡಗಿದೆವೆಂದರೆ, ನಮ್ಮ ಕಲ್ಪನಾಶಕ್ತಿಯು ತಡಸಲಿನ ಒಂದೊಂದೇ ಭಾಗದ ಚಿತ್ರವನ್ನು ಸಿದ್ಧಪಡಿಸಿ ನಮ್ಮ ಮನಸಿನ ಮುಂದೆ ತಂದು ನಿಲ್ಲಿಸುವುದು ಆ ಚಿತ್ರಕ್ಕೆ ಬೇಕಾಗುವ ಸಾಮಗ್ರಿಗಳನ್ನು ನಮ್ಮ ಸ್ಮರಣಶಕ್ತಿಯು ಒದಗಿಸಿ ಕೊಡುವುದು. ಈ ರೀತಿಯಿಂದ ನಮಗಾದ ತಡಸಲಿನ ಜ್ಞಾನವು ತಡಸಲವನ್ನು ಪ್ರತ್ಯಕ್ಷವಾಗಿ ನೋಡುವುದರಿಂದ ಆಗುವ ಜ್ಞಾನದಷ್ಟು ಸ್ಪಷ್ಟವಾದದ್ದೂ ಪೂರ್ಣವಾದದ್ದೂ ಇರಲಾರದೆಂಬುದು ಸ್ಪಷ್ಟವು. ಆದಾಗ್ಯೂ ಜ್ಞಾನಾಭಿವೃದ್ಧಿಯ ದೃಷ್ಟಿಯಿಂದ ಈ ತರದ ಜ್ಞಾನವು ಅವಶ್ಯವಾದದ್ದು.

ಸಾರಾಂಶ, ಜ್ಞಾನೇಂದ್ರಿಯಗಳಿಂದ ಮನಸಿನಲ್ಲಿ ಮೂಡಿದ ಬೇರೆ ಬೇರೆ ಚಿತ್ರಗಳನ್ನು ಸ್ಮರಣಶಕ್ತಿಯಿಂದ ಮನಸಿನ ಮುಂದೆ ತಂದು ಅವುಗಳಲ್ಲಿ ಅವಶ್ಯವಿದ್ದವುಗಳನ್ನು ತಕ್ಕೊಂಡು ಅವುಗಳಿಂದ ನಾವು ಓದುತ್ತಿರುವ ಅಥವಾ ಕೇಳುತ್ತಿರುವ ಅಥವಾ ಮನಸಿನಲ್ಲಿರುವ ವರ್ಣನೆಗೆ ಅನುಸರಿಸಿ ಹೊಸದೊಂದು ಚಿತ್ರವನ್ನು ನಮ್ಮ ಮನಸಿನ ಮುಂದೆ ತಂದು ನಿಲ್ಲಿಸುವುದು **ಕಲ್ಪನಾ ಶಕ್ತಿಯ ಕಾರ್ಯವು.**

ಕಲ್ಪನಾಶಕ್ತಿಯು ಜ್ಞಾನಾಭಿವೃದ್ಧಿಯ ಶ್ರೇಷ್ಠ ಸಾಧನವೆಂಬುದು ಹಿಂದೆ ಹೇಳಿದ ಸಂಗತಿಗಳಿಂದ ಸ್ಪಷ್ಟವಾಯಿತು. ಇದು **ಬೌದ್ಧಿಕ**

**ಕಲ್ಪನಾಶಕ್ತಿಯು.** ಇದರಲ್ಲಿ ಪರರು ಮಾಡಿದ ವರ್ಣನೆಗೆ ಅನುಸರಿಸಿ ಚಿತ್ರವನ್ನು ಸಿದ್ಧಪಡಿಸುವ ಕಾರ್ಯವಿರುತ್ತದೆ. ಶಿಕ್ಷಕರು ತಿಳಿಸಿ ಹೇಳಿದ ಪಾಠವನ್ನು ವಿದ್ಯಾರ್ಥಿಗಳು ಈ ಕಲ್ಪನಾಶಕ್ತಿಯ ಸಹಾಯ್ಯದಿಂದಲೇ ಅರಿತುಕೊಳ್ಳುತ್ತಾರೆ. ಬೌದ್ಧಿಕ ಕಲ್ಪನಾಶಕ್ತಿಯ ಇನ್ನೊಂದು ಪ್ರಕಾರ ಉಂಟು. ಅದರಲ್ಲಿ ನಾವೇ ಸ್ವತಃ ನಮ್ಮ ಕಲ್ಪನೆಯಿಂದ ಹೊಸದೊಂದು ಪ್ರತಿಮೆಯನ್ನಾಗಲಿ, ಚಿತ್ರವನ್ನಾಗಲಿ ಸಿದ್ಧಪಡಿಸುತ್ತೇವೆ. ಈ ತರದ ಕಲ್ಪನಾಶಕ್ತಿಯು, ಕವಿಗಳು, ಚಿತ್ರಕಾರರು, ಮೂರ್ತಿಕಾರರು ಮೊದಲಾದವರಲ್ಲಿ ವಿಶೇಷವಾಗಿ ಕಂಡುಬರುವುದು. ಸಂಸ್ಕೃತ ಕವಿಯಾದ ಬಾಣಭಟ್ಟನು ತನ್ನ ಕಾದಂಬರಿ ಎಂಬ ಗ್ರಂಥದಲ್ಲಿ ಯಕ್ಷರು ಕಿನ್ನರರು, ಅಪ್ಸರರು, ಗಂಧರ್ವಲೋಕ, ಹಿಮಾಲಯ, ಅಚ್ಛೋದ ಸರೋವರ ಈ ಮುಂತಾದವುಗಳನ್ನು ಬಹುಸರಸವಾಗಿ ವರ್ಣಿಸಿದ್ದಾನೆ. ಆ ವರ್ಣನೆಯು ಆತನ ಕಲ್ಪನಾಶಕ್ತಿಯನ್ನು ವ್ಯಕ್ತಪಡಿಸುತ್ತದೆ. ನಾನಾ ಪ್ರಕಾರದ ಹೊಸ ಹೊಸ ಯಂತ್ರಗಳನ್ನು ಶೋಧಿಸಿದವರ ಕಲ್ಪನಾಶಕ್ತಿಯು ವಿಲಕ್ಷಣವಾದದ್ದು. ಬೇಲೂರು ಚನ್ನಕೇಶವನ ದೇವಾಲಯದಲ್ಲಿ ಕಲ್ಲಿನಲ್ಲಿ ಮೂರ್ತಿಗಳನ್ನು ಕೊರೆದ ಮೂರ್ತಿಕಾರರ ಕಲ್ಪನಾ ಶಕ್ತಿಯೂ ಕೌಶಲ್ಯವೂ ಹೊಗಳತಕ್ಕಂಥವು.

ಇನ್ನೊಂದು ತರದ ಕಲ್ಪನಾಶಕ್ತಿಯಿಂದ ಪರರ ಸುಖದುಃಖ ಮೊದಲಾದ ಭಾವನೆಗಳನ್ನು ಅರಿತುಕೊಳ್ಳುವ ಶಕ್ತಿಯು ಉತ್ಪನ್ನವಾಗುವುದು. ಹಸಿವೆಯಿಂದ ಚಡಪಡಿಸುವ ಮನುಷ್ಯನನ್ನು ಕಂಡು ಅವನ ದುಃಖದ ಕಲ್ಪನೆಯು ನಮ್ಮ ಮನಸಿನಲ್ಲಿ ಉತ್ಪನ್ನವಾಗಿ ನಾವು ಅವನಿಗೆ ಸಾಹಾಯ್ಯ ಮಾಡಲು ಸಿದ್ಧರಾಗುತ್ತೇವೆ. ಪರೋಪಕಾರ, ಸಹಾನುಭೂತಿ, ಪ್ರೇಮ ಈ ಮೊದಲಾದ ಸಾಮಾಜಿಕ ಉಚ್ಚ ಮನೋವೃತ್ತಿಗಳು ಉತ್ಪನ್ನವಾಗಲಿಕ್ಕೆ ಕಲ್ಪನಾಶಕ್ತಿಯು ಅವಶ್ಯವಾಗಿ ಬೇಕು. ಇದಕ್ಕೆ **ಭಾವನಾತ್ಮಕ ಕಲ್ಪನಾಶಕ್ತಿ** ಎಂಬ ಹೆಸರು ಇಂದಿನ ವರೆಗೆ ಆಗಿ ಹೋದ ಪರೋಪಕಾರಿಗಳೂ ದಯಾಭರಿತರೂ ಆದ ಜನರ ಮನಸಿನಲ್ಲಿ ಕಲ್ಪನಾಶಕ್ತಿಯಿಂದ ಪರರ ಭಾವನೆಗಳನ್ನೂ ಮನೋವಿಕಾರಗಳನ್ನೂ ಅರಿತು

ಕೊಳ್ಳುವ ಶಕ್ತಿಯು ವಿಶೇಷವಾಗಿದ್ದುದರಿಂದ ಅವರು ಪರರ ಸುಖವನ್ನು ಕಂಡು ಆನಂದಪಟ್ಟರು; ಮತ್ತು ದುಃಖವನ್ನು ಕಂಡು ಹೃದಯವು ಕರಗಿ ಅವರ ದುಃಖನಿವಾರಣೆಯ ಕಾರ್ಯವನ್ನು ಕೈಕೊಂಡರು. ಸದ್ಯಕ್ಕಾದರೂ ಈ ತರದ ಮಹಾತ್ಮರು ಇದ್ದೇ ಇರುವರು. ಬುದ್ಧಿಯನ್ನು ವಿಕಾಸಪಡಿಸುವಲ್ಲಿಯೂ ಸಹಾನುಭೂತಿ, ಪರೋಪಕಾರ, ಪ್ರೇಮ ಮುಂತಾದ ಸದ್ಗುಣಗಳನ್ನು ಹುಟ್ಟಿಸುವಲ್ಲಿಯೂ ಕಲ್ಪನಾ-ಶಕ್ತಿಯು ಬಹಳ ಉಪಯೋಗವಾಗುವುದೆಂಬ ಮಾತು ಮೇಲಿನ ವಿಚಾರದಿಂದ ಸ್ಪಷ್ಟವಾಯಿತು. ಆದುದರಿಂದ **ಶಿಕ್ಷಕರೂ ತಾಯಿ ತಂದೆಗಳೂ ಮಕ್ಕಳ ಕಲ್ಪನಾಶಕ್ತಿಯನ್ನು ಶಕ್ಯವಿದ್ದಷ್ಟು ಮಟ್ಟಿಗೆ ಬೆಳಿಸಲಿಕ್ಕೆ ಯತ್ನ ಮಾಡತಕ್ಕದ್ದು.**

ಮಕ್ಕಳು ಮೂರು ವರ್ಷದವರಾಗುತ್ತಲೆ ಅವರ ಕಲ್ಪನಾ-ಶಕ್ತಿಯು ಜಾಗೃತವಾಗುವುದು. ಒಂದು ಕೋಲಿಗೆ ಕುದುರೆಯೆಂದು ಹೆಸರಿಟ್ಟು ಅದರ ಮೇಲೆ ಕುಳಿತು ಓಡುವರು; ಒಮ್ಮೊಮ್ಮೆ ಹಾಸಿಗೆಯ ಸುರುಳಿಯ ಮೇಲೆ ಕುಳಿತು ಅದನ್ನು ಕುದುರೆಯನ್ನಾಗಿ ಮಾಡುವರು. ಹುಡುಗೆಯರು ಗೊಂಬೆಯನ್ನು ಕೂಸೆಂದು ಕಲ್ಪಿಸಿ ಅದಕ್ಕೆ ಎರೆಯು-ವರು, ಹೂಸುವರು, ಅಂಗಿ ತೊಡಿಸುವರು, ಇಲ್ಲವೆ ಸೀರೆ ಉಡಿಸುವರು, ತೊಟ್ಟಿಲಲ್ಲಿ ಮಲಗಿಸುವರು. ಮತ್ತೊಮ್ಮೆ ಎಲ್ಲರೂ ಕೂಡಿ ಪರಸ್ಪರರ ಅಂಗಿಯ ಚುಂಗುಗಳನ್ನು ಹಿಡಕೊಂಡು ಉಗಿಬಂಡಿಯಂತೆ ಆಗಿ ಆಡುವರು. ಇತ್ಯಾದಿ ಅನೇಕ ಆಟಗಳಲ್ಲಿ ಅವರ ಕಲ್ಪನಾಶಕ್ತಿಯು ವ್ಯಕ್ತವಾಗುವುದು. ಅವರು ದೊಡ್ಡವರಾದ ಹಾಗೆ ಈ ಕಲ್ಪನಾ ಶಕ್ತಿಯು ಕುಗ್ಗುತ್ತ ಹೋಗಿ ಅದು ವಿಚಾರಶಕ್ತಿಗೆ ಅಧೀನವಾಗಿ ಕೆಲಸ ಮಾಡತೊಡಗುವುದು. ಒಂದು ವೇಳೆ ಕಲ್ಪನಾಶಕ್ತಿಯ ಮೇಲೆ ವಿಚಾರಶಕ್ತಿಯ ಅಮಲು ಕೂಡದಿದ್ದರೆ ತಲೆಯಲ್ಲಿ ಅಲ್ಲದ ಸಲ್ಲದ ಕಲ್ಪನೆಗಳು ತುಂಬಿ ಅವುಗಳಿಂದ ಪ್ರಯೋಜನವೇನೂ ಆಗದೆ ಕೆಟ್ಟ ಪರಿಣಾಮವು ಮಾತ್ರ ಆಗುವುದು. ಮಕ್ಕಳಲ್ಲಿ ವಿಚಾರಶಕ್ತಿಯು ಉತ್ಪನ್ನವಾಗುವುದಕ್ಕಿಂತ ಮುಂಚೆ ಕೆಲವು ತಾಯಂದಿರು ಅವರನ್ನು

"ಬಾವಾ ಬಂತು" ಎಂತಲೂ "ಗುಮ್ಮನ ಕೈಯಲ್ಲಿ ಕೊಡುವೆನು" ಎಂತಲೂ ಅಂಜಿಸುವರು. ಇದರಿಂದ ಮಕ್ಕಳು ಅವುಗಳ ಬಗ್ಗೆ ತಮ್ಮ ಮನಸಿನಲ್ಲಿ ವಿಲಕ್ಷಣ ಕಲ್ಪನೆಗಳನ್ನು ಮಾಡಿಕೊಳ್ಳುವರು. ಹೆದರಿಕೆಯು ಅವರ ಮನಸಿನಲ್ಲಿ ನಟ್ಟುಹೋಗುವುದು. ಅದು ಕಡೆತನಕ ನಷ್ಟವಾಗುವುದಿಲ್ಲ. ಮಕ್ಕಳ ಮನಸಿನಲ್ಲಿ ಇಂಥ ಕಲ್ಪನೆಗಳನ್ನು ಎಂದೂ ಹುಟ್ಟಿಸಬಾರದು. ಅವರ ಮನಸಿನಲ್ಲಿ ಸೇರಿದ ಭೀತಿಯನ್ನು ಸಂಪೂರ್ಣವಾಗಿ ಹೋಗಲಾಡಿಸಲಿಕ್ಕೆ ಯತ್ನಿಸಬೇಕು.

ಚಿಕ್ಕಮಕ್ಕಳಿಗೆ ಮನೋರಂಜಕವಾದ ಕಥೆಗಳನ್ನು ಹೇಳುವುದರಿಂದಲೂ ಮಣ್ಣು, ಬೆಂಡು, ಕಾಗದ ಮುಂತಾದವುಗಳಿಂದ ಕೈಕೆಲಸಗಳನ್ನು ಮಾಡಿಸುವುದರಿಂದಲೂ ಚಿತ್ರಗಳನ್ನು ತೆಗೆಸುವುದರಿಂದಲೂ ಕಥೆಗಳನ್ನು ಹೇಳಲಿಕ್ಕೆ ಹಚ್ಚುವುದರಿಂದಲೂ ಕೆಲವು ಆಟಗಳಿಂದಲೂ ಅವರ ಕಲ್ಪನಾಶಕ್ತಿಯು ಜಾಗ್ರೃತವಾಗುವುದು. ಮಕ್ಕಳು ಹೆಚ್ಚು ಹೆಚ್ಚು ದೊಡ್ಡವರಾದಂತೆ ಇತಿಹಾಸ, ಭೂಗೋಲ, ಕವಿತೆ, ನಿಬಂಧ ಮೊದಲಾದ ವಿಷಯಗಳನ್ನು ಕಲಿಸುವುದರಿಂದ ವಿಚಾರಶಕ್ತಿಗೆ ಅನುಸರಿಸಿದ ಕಲ್ಪನಾಶಕ್ತಿಯು ವಿಕಾಸಹೊಂದುವುದು. ಅದು ನಾನಾ ವಿಧವಾದ ನಿರ್ಣಯಗಳನ್ನೂ ಅನುಮಾನಗಳನ್ನೂ ತೆಗೆಯಲಿಕ್ಕೆ ಸಾಹಾಯ್ಯಕವಾಗುವುದು.

**ಶಿಕ್ಷಕನಲ್ಲಿ ಯಾವದೊಂದು ಸಂಗತಿಯನ್ನು ವರ್ಣಿಸಿ ಹೇಳುವ ಕೌಶಲ್ಯವು ಹೆಚ್ಚಿದ್ದಂತೆ ಮಕ್ಕಳ ಕಲ್ಪನಾಶಕ್ತಿಯು ಬೆಳೆಯುವುದು.**

**ವಿಚಾರಶಕ್ತಿಯೂ ಮನಸಿನ ವಿಕಾಸವೂ :—** ಮನುಷ್ಯನು ಉಳಿದ ಯಾವತ್ತೂ ಪ್ರಾಣಿಗಳಿಗಿಂತ ಶ್ರೇಷ್ಠನೆನಿಸಿಕೊಳ್ಳಲಿಕ್ಕೆ ಅವನಲ್ಲಿರುವ ವಿಚಾರಶಕ್ತಿಯೇ ಮುಖ್ಯ ಕಾರಣವಾಗಿರುತ್ತದೆ. ಇತರ ಪ್ರಾಣಿಗಳಿಗೆ ಈ ವಿಚಾರಶಕ್ತಿಯು ಇಲ್ಲದ್ದರಿಂದ ಅವುಗಳಿಗೆ ತಮ್ಮ ಸುಧಾರಣೆಯನ್ನು ಮಾಡಿಕೊಳ್ಳುವುದು ಶಕ್ಯವಿಲ್ಲ; ಆದುದರಿಂದ ಅವು ಜಗತ್ತಿನಲ್ಲಿ ಹುಟ್ಟಿದಂದಿನಿಂದ ಇಂದಿನ ವರೆಗೆ ಇದ್ದ ಸ್ಥಿತಿಯಲ್ಲಿಯೇ ಇರುವುವು.

ಮನುಷ್ಯನಂತೆ ಕೆಲವು ಇತರ ಪ್ರಾಣಿಗಳಿಗೆ ಎಲ್ಲ ಇಂದ್ರಿಯಗಳು ಕೊಡಲ್ಪಟ್ಟಿವೆ. ಇಂದ್ರಿಯಗಳಿಂದ ಮನುಷ್ಯನ ಮಿದುಳಿನ ಮೇಲೆ ಬೇರೆ ಬೇರೆ ಇಂದ್ರಿಯಗಳಿಂದ ಬಂದ ಜ್ಞಾನವು ಮೂಡುವಂತೆ ಪಶು-ಪಕ್ಷಿ ಮುಂತಾದ ಪ್ರಾಣಿಗಳ ಮಿದುಳಿನ ಮೇಲೆಯೂ ಮೂಡುವುದು. ಆದರೆ ನಾವು ಬೇರೆ ಬೇರೆ ಪದಾರ್ಥಗಳ ಸಂಬಂಧವನ್ನೂ ಗುಣಧರ್ಮಗಳನ್ನೂ ವಿಚಾರಮಾಡಿ ಅರಿತುಕೊಳ್ಳುವಂತೆ ಅವುಗಳಿಗೆ ಅರಿತು-ಕೊಳ್ಳಲಿಕ್ಕಾಗುವುದಿಲ್ಲ. ಉದಾಹರಣಾರ್ಥವಾಗಿ ಗಡಿಯಾಳದಲ್ಲಿ ಒಂದೊಂದಾಗಿ ಹನ್ನೆರಡು ಗಂಟೆಗಳು ಬಾರಿಸುವುದನ್ನು ನಾವೂ ಕೇಳುತ್ತೇವೆ, ಪಶುಗಳೂ ಕೇಳುತ್ತವೆ. ಆದರೆ ಗಂಟೆಗಳು ಒಟ್ಟು ಹನ್ನೆರಡು ಆದವೆಂಬ ಜ್ಞಾನವು ಮನುಷ್ಯನಿಗೆ ಆಗುವಂತೆ ಅವುಗಳಿಗೆ ಆಗುವುದಿಲ್ಲ. ಅವುಗಳಿಗೆ ಸ್ಮರಣಶಕ್ತಿಯೂ ಉಂಟು. ಹೊಲದಿಂದ ಹೊರಟ ಎತ್ತು ತಪ್ಪದೆ ಮನೆಗೆ ಬರುವುದು. ಪಕ್ಷಿಗಳು ಆಹಾರದ ಸಲುವಾಗಿ ದೂರದೂರದ ವರೆಗೆ ಸಂಚರಿಸಿ ಸಾಯಂಕಾಲಕ್ಕೆ ತಿರುಗಿ ತಮ್ಮ ಗೂಡಿಗೆ ಬರುವುವು; ಗಿಳಿಯು ಕಲಿಸಿದ ಮಾತುಗಳನ್ನು ನೆನಪಿನಲ್ಲಿಟ್ಟು ಮಾತನಾಡುವುದು. ಆದರೆ ಮನುಷ್ಯನಂತೆ ವಸ್ತು, ಸ್ಥಳ, ಕಾಲ, ಪ್ರಸಂಗ ಇವುಗಳ ಸಂಬಂಧವನ್ನು ನೆನಪಿಗೆ ತಂದುಕೊಳ್ಳುವಂತೆ ಪಶು-ಪಕ್ಷಿಗಳು ತಂದುಕೊಳ್ಳಲಾರವು. ಕೆಲಕೆಲವು ಪಕ್ಷಿಗಳಲ್ಲಿ ಕಲ್ಪನಾಶಕ್ತಿಯೂ ತೋರಿಬರುವುದು. ಈ ಮಾತಿಗೆ ಗೀಜಗವೆಂಬ ಹಕ್ಕಿಯ ಗೂಡು ಸಾಕ್ಷಿಯಾಗಿರುತ್ತದೆ. ಆದರೆ ಇದು ಆ ಪಕ್ಷಿಯ ಹುಟ್ಟುಗುಣವೆಂದು ಹೇಳಬಹುದು. ಸಾರಾಂಶ ಇತರ ಪ್ರಾಣಿಗಳಲ್ಲಿ ವಿಚಾರಶಕ್ತಿಯೂ, ತುಲನೆ, ಅನುಮಾನ ಮುಂತಾದವುಗಳೂ ಇಲ್ಲ.

ವಸ್ತುಗಳ ಪ್ರತ್ಯಕ್ಷ ಜ್ಞಾನವೂ ಸ್ಮರಣವೂ ಕಲ್ಪನೆಗಳೂ ವಿಚಾರ-ಶಕ್ತಿಯ ಸಾಧನಗಳಾಗಿರುತ್ತವೆ. ಇದರಿಂದ ಯಾವುದೊಂದು ಪದಾರ್ಥವಾಗಲಿ, ಪದಾರ್ಥದ ಚಿತ್ರವಾಗಲಿ ಕಣ್ಣುಮುಂದೆ ಕಟ್ಟುವುದು. ವಿಚಾರಶಕ್ತಿಯಿಂದ ಪದಾರ್ಥಗಳಲ್ಲಿರುವ ಗುಣಧರ್ಮಗಳನ್ನೂ ಅವುಗಳ ಪರಸ್ಪರ ಸಂಬಂಧವನ್ನೂ ಹುಡುಕಿತೆಗೆಯುತ್ತೇವೆ. “ ಮನುಷ್ಯನು

ಮರಣಾಧೀನನಿರುತ್ತಾನೆ” “ಹೊಗೆಯು ಕಾಣುವಲ್ಲಿ ಬೆಂಕಿಯು ಇರಲಿಕ್ಕೆಬೇಕು” “ಸ್ವತಂತ್ರತೆಯಿಂದ ಸುಖವಾಗುವುದು” “ಉಷ್ಣತೆಯಿಂದ ಎಲ್ಲ ಪದಾರ್ಥಗಳು ವಿಸ್ತಾರವಾಗುವುವು; ಆದಕಾರಣ ಕಬ್ಬಿಣವನ್ನು ಕಾಸಿದರೆ ಅದು ವಿಸ್ತಾರಹೊಂದುವುದು.” ಇತ್ಯಾದಿ ಸಂಗತಿಗಳನ್ನು ನಾವು ಹೇಳುತ್ತಿರುವಾಗ ಯಾವದೊಂದು ಪದಾರ್ಥದ ವಿಷಯವಾಗಿ ಇಲ್ಲವೆ ನಮ್ಮ ಮನಸಿನಲ್ಲಿ ಮೂಡಿದ ಯಾವದೊಂದು ಪ್ರತಿಮೆಯ ವಿಷಯವಾಗಿ ಮಾತನಾಡುವುದಿಲ್ಲ. ಆದರೆ ಆ ಪದಾರ್ಥಗಳ ಗುಣಧರ್ಮಗಳ ವಿಷಯವಾಗಿಯೂ ಅವುಗಳ ಪರಸ್ಪರ ಸಂಬಂಧದ ವಿಷಯವಾಗಿಯೂ ವಿಚಾರಮಾಡುತ್ತಿರುತ್ತೇವೆ.

**ಸಾಮಾನ್ಯ ಬೋಧಶಕ್ತಿ :—** ಅನೇಕ ವಸ್ತುಗಳಲ್ಲಿ ಸಾಮಾನ್ಯವಾಗಿ ಕಂಡುಬರುವ ಸಂಗತಿಗಳಿಂದ ಆ ವಸ್ತುಗಳ ಒಂದು ವರ್ಗವನ್ನು ಸಿದ್ಧಮಾಡುವುದು **ವಿಚಾರಶಕ್ತಿಯ ಮೊದಲನೆಯ ಮೆಟ್ಟಿಲಾಗಿರುವುದು ;** ಉದಾಹರಣಾರ್ಥವಾಗಿ ಗುಬ್ಬಿ, ಕಾಗಿ, ಪಾರಿವಾಳ, ಗಿಳಿ, ಗೊರವಂಕ, ಹದ್ದು ಮುಂತಾದವುಗಳನ್ನು ನೋಡಿ ಅವೆಲ್ಲವುಗಳಲ್ಲಿಯೂ ಸಾಮಾನ್ಯವಾಗಿ ಕೆಲವು ಸಂಗತಿಗಳು ಇರುವುದರಿಂದ ಅವುಗಳನ್ನು “ಪಕ್ಷಿಗಳು” ಎಂಬ ಹೆಸರಿನಿಂದ ಕರೆಯುತ್ತೇವೆ. ಇದೇ ಮೇರೆಗೆ ಮನುಷ್ಯ, ಪಶು, ಗಿಡ, ನದಿ, ಪರ್ವತ ಮುಂತಾದವುಗಳು ವಸ್ತುಗಳ ಒಂದೊಂದು ವರ್ಗದ (ಜಾತಿಯ) ಹೆಸರುಗಳಾಗಿರುತ್ತವೆ. ನಮ್ಮ ಮನಸಿನಲ್ಲಿ ಈ ವರ್ಗೀಕರಣದ ವಿಚಾರವು ಹೇಗೆ ನಡೆಯುವುದೆಂಬದನ್ನು ಇನ್ನೊಂದು ಉದಾಹರಣೆಯಿಂದ ಸ್ಪಷ್ಟೀಕರಿಸುವ:ಎಷ್ಟೋ ಮನುಷ್ಯರು ಪಶುಗಳು, ಪಕ್ಷಿಗಳು, ಹುಳಗಳು ಮೊದಲಾದವುಗಳನ್ನು ನಾವು ಇಂದ್ರಿಯಗಳಿಂದ ನೋಡುತ್ತೇವೆ. ಎದುಳಿನಲ್ಲಿ ಅವುಗಳ ಚಿತ್ರಗಳು ಮೂಡುವವು. ಸ್ಮರಣಶಕ್ತಿಯು ಅವುಗಳ ಚಿತ್ರಗಳನ್ನು ಬೇಕಾದಾಗ ನಮ್ಮ ಮುಂದೆ ತಂದು ನಿಲ್ಲಿಸುವುದು, ಆಬಳಿಕ ನಮ್ಮ ಮನಸು ಇವೆಲ್ಲವುಗಳ ತುಲನೆಯನ್ನು ಮಾಡಿ ಇವೆಲ್ಲವುಗಳಲ್ಲಿಯೂ ಸಾಮಾನ್ಯವಾಗಿ ಇರುವ ಬದುಕುವಿಕೆ (ಜೀವಿತ್ವ) ಎಂಬ ಗುಣವನ್ನು ಬೇರ್ಪಡಿಸುವುದು.

ಈ ಗುಣವಿರುವ ಪದಾರ್ಥಗಳ ಒಂದು ಗುಂಪನ್ನು ಮಾಡಿ ಆ ಗುಂಪಿಗೆ **' ಪ್ರಾಣಿಗಳು '** ಎಂಬ ಹೆಸರನ್ನು ಕೊಡುವುದು. ನಿಜವಾಗಿ ವಿಚಾರ ಮಾಡಿದರೆ ' ಪ್ರಾಣಿ ' ಈ ಕಲ್ಪನೆಯು ನಮಗೆ ಇಂದ್ರಿಯಗಳಿಂದಾಗಲಿ ಸ್ಮರಣಶಕ್ತಿಯಿಂದಾಗಲಿ ಕಲ್ಪನಾಶಕ್ತಿಯಿಂದಾಗಲಿ ಆಗಿರುವುದಿಲ್ಲ. ಮನುಷ್ಯ, ಪಶು, ಪಕ್ಷಿ ಇವುಗಳಲ್ಲಿರುವ ಸಾಮಾನ್ಯವಾದ ಒಂದು ಗುಣವು ಕಂಡುಬರುವ ವಸ್ತುಗಳನ್ನು ನಾವು ' ಪ್ರಾಣಿ ' ಎಂಬ ಹೆಸರಿನಿಂದ ಕರೆಯುತ್ತೇವೆ. ಅಂದಮೇಲೆ ಇಂತಹ ಪದಾರ್ಥಗಳ ಅಸ್ತಿತ್ವವು ಸ್ವತಂತ್ರವಾಗಿ ಇರುವುದು ಶಕ್ಯವೇ ಇಲ್ಲ. ಈ ತರದ ಸಾಮಾನ್ಯ ಬೋಧವು ವಿಚಾರಶಕ್ತಿಯಿಂದಲೇ ಆಗುವುದು. ಮತ್ತು ಈ ಬೋಧವಾಗಲಿಕ್ಕೆ ಜ್ಞಾನೇಂದ್ರಿಯಗಳ ಸ್ಮರಣಶಕ್ತಿಯ ಸಹಾಯ್ಯವು ವಿಚಾರಶಕ್ತಿಗೆ ಬೇಕೆಂಬುದು ಸ್ಪಷ್ಟವಿರುತ್ತದೆ.

ಈ ಮೇರೆಗೆ **ಹಲವು ವಸ್ತುಗಳಲ್ಲಿ ಸಾಮಾನ್ಯವಾಗಿ ಇರುವ ಒಂದು ಗುಣದಿಂದ ಅವುಗಳ ಒಂದು ವರ್ಗವನ್ನು ಕಲ್ಪಿಸುವ ಮನಸಿನ ಶಕ್ತಿಗೆ ಸಾಮಾನ್ಯ ಬೋಧ ಶಕ್ತಿ ಎಂಬ ಹೆಸರು.**

**ನಿರ್ಣಯ :—** ಈ ಮೇರೆಗೆ ವಸ್ತುಗಳ ಸಾಮಾನ್ಯ ಕಲ್ಪನೆಯು ಮನಸಿನಲ್ಲಿ ಬಂದ ಮೇಲೆ ಎರಡು ಸಾಮಾನ್ಯ ಕಲ್ಪನೆಗಳ ತುಲನೆ ಮಾಡಿ ಅವುಗಳ ಪರಸ್ಪರ ಸಂಬಂಧವನ್ನು ನಾವು ವಿಚಾರ ಮಾಡಿ ನಿರ್ಣಯವನ್ನು ಮಾಡುತ್ತೇವೆ. ಈ ಕಾರ್ಯವು **ವಿಚಾರಶಕ್ತಿಯ ಎರಡನೆಯ ಮೆಟ್ಟಿಲಾಗಿರುವುದು.** ವಾಕ್ಯವು ನಿರ್ಣಯದ ಬಾಹ್ಯ ಸ್ವರೂಪವಿರುತ್ತದೆ. ಯಾವದೊಂದು ನಿರ್ಣಯದಲ್ಲಿ ಎರಡು ಸಂಗತಿಗಳು ಇರುತ್ತವೆ. (೧) **ತುಲನೆ, (೨) ನಿಷ್ಕರ್ಷ.** ಉದಾಹರಣಾರ್ಥವಾಗಿ ಕೇದಗೆಯು ಒಂದು ಹೂವಾಗಿದೆ. ಇದು ಒಂದು ನಿರ್ಣಯವು. ಈ ನಿರ್ಣಯವನ್ನು ಹೊರಡಿಸುವ ಮೊದಲು ಕೇದಗೆಗೂ ಇತರ ಹೂಗಳಿಗೂ ತುಲನೆಯನ್ನು ಮಾಡುವೆವು. ಮಲ್ಲಿಗೆ, ಸೇವಂತಿಗೆ, ಗುಲಾಬಿ, ಸಂಪಿಗೆ ಈ ಎಲ್ಲ ಹೂಗಳಲ್ಲಿ ಕೆಲವು ಸಾಮಾನ್ಯ ಸಂಗತಿಗಳುಂಟು. ಆ ಸಂಗತಿಗಳಿರುವ ವಸ್ತುಗಳನ್ನು ' ಹೂ ' ಎಂಬ ವರ್ಗದಲ್ಲಿ ಸೇರಿಸಿದ್ದೇವೆ.

ಇದು ಸಾಮಾನ್ಯ ಬೋಧಶಕ್ತಿಯ ಕಾರ್ಯವು. ಮೇಲೆ ಹೇಳಿದಂತೆ ಕೇದಗೆಯನ್ನು ಇತರ ಹೂಗಳ ಸಂಗಡ ತುಲನೆ ಮಾಡುವಾಗ ಹೂಗಳ ಸಾಮಾನ್ಯ ಸಂಗತಿಗಳು ಈ ಕೇದಗೆಯಲ್ಲಿ ಅವೆಯೋ ಇಲ್ಲವೋ ಎಂಬು ದನ್ನು ವಿಚಾರ ಮಾಡುವೆವು. ಅವು ಅವೆಯೆಂದು ಕಂಡುಬಂದದ್ದರಿಂದ ಕೇದಗೆಯು ಹೂ ಎಂದು ನಿರ್ಣಯವಾಯಿತು.

**ಅನುಮಾನ :— ಎರಡು ಸಾಮಾನ್ಯ ಕಲ್ಪನೆಗಳ ಪರಸ್ಪರ ಸಂಬಂಧಕ್ಕೆ ನಿರ್ಣಯವೆಂಬ ಹೆಸರು. ಎರಡು ನಿರ್ಣಯಗಳಲ್ಲಿ ರುವ ಪರಸ್ಪರ ಸಂಬಂಧಕ್ಕೆ ಅನುಮಾನವೆಂಬ ಹೆಸರು.** ನಿರ್ಣಯ ಅನುಮಾನಗಳು ಉಚ್ಚ ತರದ ಮನೋವ್ಯಾಪಾರಗಳು; ಈ ಎರಡೂ ಬಗೆಯ ಶಕ್ತಿಗಳನ್ನು ವಿಕಾಸಪಡಿಸಿ ವಿಚಾರಶಕ್ತಿಯನ್ನು ಅಭಿವೃದ್ಧಿ ಪಡಿಸುವುದೇ ಬೌದ್ಧಿಕ ಶಿಕ್ಷಣದ ಧ್ಯೇಯವಾಗಿದೆ. ಕೇವಲ ಸ್ಮರಣ ಶಕ್ತಿಯಿಂದ ಅನುಮಾನವನ್ನು ಕಟ್ಟಲಿಕ್ಕೆ ಬರಲಾರದು. ನಾವು ನಮ್ಮ ಮೊದಲಿನ ಅನುಭವವನ್ನೂ ಈಗಿನ ಅನುಭವವನ್ನೂ ಒರೆಹಚ್ಚಿ ವಿಚಾರ ಮಾಡುತ್ತೇವೆ. ಆ ಬಳಿಕ ಅನುಮಾನ ಮಾಡುತ್ತೇವೆ. **ಅನುಮಾನವು ವಿಚಾರಶಕ್ತಿಯ ಮೂರನೆಯ ಮೆಟ್ಟಲಾಗಿದೆ.**

“ ಎಲ್ಲ ಘನಪದಾರ್ಥಗಳು ಉಷ್ಣತೆಯಿಂದ ವಿಸ್ತಾರಹೊಂದು ವವು. ” ಇದೊಂದು ಅನುಮಾನವು. ಈ ಅನುಮಾನದಲ್ಲಿ ಎರಡು ನಿರ್ಣಯಗಳ ಪರಸ್ಪರ ಸಂಬಂಧವು ಆಲೋಚಿಸಲ್ಪಟ್ಟಿರುವುದು. 'ಕಬ್ಬಿಣ ತಾಮ್ರ, ಹಿತ್ತಾಳಿ, ಕಲ್ಲು ಮುಂತಾದವುಗಳು ಘನಪದಾರ್ಥಗಳು.' ಇದು ಒಂದು ನಿರ್ಣಯವು; ' ಕಬ್ಬಿಣ ತಾಮ್ರ ಹಿತ್ತಾಳಿ ಈ ಪದಾರ್ಥ ಗಳು ಉಷ್ಣತೆಯಿಂದ ವಿಸ್ತಾರ ಹೊಂದುವವು ' ಎಂಬ ಮಾತನ್ನು ಪ್ರತ್ಯಕ್ಷ ಪ್ರಯೋಗದಿಂದ ನಿರ್ಣಯಿಸಿದೆವು. ಅಂದಬಳಿಕ ಎಲ್ಲ ಘನ ಪದಾರ್ಥಗಳು ಉಷ್ಣತೆಯಿಂದ ವಿಸ್ತಾರ ಹೊಂದುವುವು. ಎಂಬ ಮಾತು ಸಹಜವಾಗಿ ಸಿದ್ಧವಾಯಿತು. ಈ ಅನುಮಾನದಿಂದ ತೆಗೆದ ನಿಯಮವು ನಾವು ಪ್ರತ್ಯಕ್ಷವಾಗಿ ಪ್ರಯೋಗಮಾಡಿ ನೋಡದೆ ಇದ್ದ ಘನ ಪದಾರ್ಥಗಳಿಗೂ ಹತ್ತುವುದು. ಇಲ್ಲಿ ನಾವು **ಕೆಲವು ವಿಶೇಷ**

**ಉದಾಹರಣೆಗಳಿಂದ ಸಾಮಾನ್ಯ ನಿಯಮವನ್ನು ಕಟ್ಟಿದೆವು.** ಇದು ಒಂದುತರದ ಅನುಮಾನವು. **ಈ ಅನುಮಾನಕ್ಕೆ ಉದ್ಗಾಮಿ ಅನುಮಾನವೆಂಬ ಹೆಸರು.**

ಅಂಕಗಣಿತ, ವ್ಯಾಕರಣ, ಇತಿಹಾಸ, ಭೂಗೋಲ ವಸ್ತುಪಾಠ ಮೊದಲಾದ ವಿಷಯಗಳನ್ನು ಕಲಿಸುವಾಗ ಈ **ಉದ್ಗಾಮಿ ಅನುಮಾನದ ಶಿಕ್ಷಣ ಪದ್ಧತಿಯು** ವಿಶೇಷವಾಗಿ ಉಪಯೋಗವಾಗುವುದು. ಯಾಕಂದರೆ ಅಲ್ಲಿ ಕೆಲವು ವಿಶೇಷ ಉದಾಹರಣೆಗಳಿಂದ ಸಾಮಾನ್ಯ ನಿಯಮವನ್ನು ಹೊರಡಿಸತಕ್ಕದ್ದಿರುವುದು. ಈ ಮೇರೆಗೆ ಹೊರಟ ಸಾಮಾನ್ಯ ನಿಯಮವು ದೃಢವಾಗುವುದಕ್ಕಾಗಿ ಅದನ್ನು ಅನೇಕ ವಿಶೇಷ ಉದಾಹರಣೆಗಳಿಗೆ ಹಚ್ಚಬೇಕಾಗುವುದು. ಆದರೆ ಶಿಕ್ಷಕರು ತಾವೇ **ಸಾಮಾನ್ಯ ನಿಯಮಗಳನ್ನು ಹೇಳಿ ಅವುಗಳನ್ನು ಹುಡುಗರಿಂದ ವಿಶೇಷ ಉದಾಹರಣೆಗಳಿಗೆ ಹಚ್ಚಿಸುವದು ಅವಗಾಮಿ ಅನುಮಾನದ ಶಿಕ್ಷಣ ಪದ್ಧತಿಯು.** ಇದು ಸರಿಯಾದ ಶಿಕ್ಷಣ ಪದ್ಧತಿಯಲ್ಲ.

ಮಕ್ಕಳು ದೊಡ್ಡವರಾದ ಮೇಲೆ ಮಾಡತಕ್ಕ ಅನೇಕ ಕೆಲಸಗಳಲ್ಲಿ ಈ ಎರಡೂ ತರದ ಅನುಮಾನಗಳನ್ನು ತೆಗೆಯಬೇಕಾಗುವುದು. ಆಕಾಲಕ್ಕೆ ಅವರು ಸರಿಯಾದ ಅನುಮಾನಗಳನ್ನು ತೆಗೆಯುವ ಶಕ್ತಿಯುಳ್ಳವರಾದರೆ ಅವರ ಮನಸ್ಸು ಪೂರ್ಣವಾಗಿ ವಿಕಾಸವಾಗಿರುವದೆಂದು ತಿಳಿಯತಕ್ಕದ್ದು. ಕೇವಲ ಸ್ಮರಣಶಕ್ತಿಯನ್ನು ಬೆಳಿಸಿಕೊಳ್ಳುವುದರಿಂದ ಇಂಥ ಅನುಮಾನಗಳನ್ನು ತೆಗೆಯಲಿಕ್ಕೆ ಎಂದೂ ಬರಲಾರದು. ಆದಕಾರಣ ನಾವು ನಮ್ಮ ಶಿಕ್ಷಣದಲ್ಲಿ ವಿಷಯಗಳನ್ನು ಕೇವಲ ಪಾಠ ಮಾಡಿಸದೆ ಹುಡುಗರನ್ನು ವಿಚಾರಕ್ಕೆ ಹಚ್ಚಿ ಹೊಸ ಹೊಸ ನಿರ್ಣಯಗಳನ್ನು ತೆಗೆಯಲಿಕ್ಕೂ ಅವುಗಳಿಂದ ಹೊಸ ಹೊಸ ಅನುಮಾನಗಳನ್ನು ಹೊರಡಿಸಲಿಕ್ಕೂ ಯುತ್ನಿಸುತ್ತಿರಬೇಕು.

# ೫ನೆಯ ಪ್ರಕರಣ

## ಸಹಜ ಪ್ರವೃತ್ತಿಗಳು

### ಸಾಮಾನ್ಯ ವಿಚಾರ

ಈ ಜಗತ್ತಿನಲ್ಲಿ ನಾವು ಅನೇಕ ಪ್ರಾಣಿಗಳನ್ನು ನೋಡುತ್ತೇವೆ. ಪ್ರತಿ ಒಂದು ಪ್ರಾಣಿಯು ತನ್ನ ರಕ್ಷಣ ಪೋಷಣಗಳನ್ನು ಮಾಡಿಕೊಳ್ಳುವುದು; ತನ್ನ ವಂಶವೃದ್ಧಿಯನ್ನು ಮಾಡಿ ತನ್ನ ಜೀವನ ಕ್ರಮವನ್ನು ಮುಗಿಸುವುದು. ಸೃಷ್ಟಿಯ ಈ ಕ್ರಮವು ಸರಿಯಾಗಿ ನಡೆಯಬೇಕೆಂದು ಸೃಷ್ಟಿಕರ್ತನು ಪ್ರತಿ ಒಂದು ಪ್ರಾಣಿಗೆ ಕೆಲವು ಜನ್ಮಸಿದ್ಧ ಅಥವಾ ಸ್ವಾಭಾವಿಕ ಪ್ರವೃತ್ತಿಗಳನ್ನು ಕೊಟ್ಟಿದ್ದಾನೆ. ಆ ಪ್ರವೃತ್ತಿಗಳ ಮೂಲಕ ಆ ಪ್ರಾಣಿಯು ಕೆಲವೊಂದು ವಿಶಿಷ್ಟ ವಸ್ತುವನ್ನು ನೋಡಲಿ, ಇಲ್ಲವೆ ಒಂದು ವಿಶಿಷ್ಟ ಪ್ರಸಂಗವು ತಿಳಿಯಲಿ, ಆಗ ಒಂದು ವಿಶಿಷ್ಟ ರೀತಿಯಿಂದ ವರ್ತಿಸುವುದು. ಉದಾಹರಣಾರ್ಥವಾಗಿ ಪಕ್ಷಿಗಳ ಜೀವನಕ್ರಮವನ್ನು ನೋಡಿರಿ. ಹೆಣ್ಣು ಹಕ್ಕಿಯು ತತ್ತಿಗಳನ್ನು ಇಕ್ಕುವ ಸಮಯವು ತಿಳಿದಕೂಡಲೆ ಎರಡೂ ಹಕ್ಕಿಗಳು ಗೂಡು ಕಟ್ಟುವ ಪ್ರಯತ್ನವನ್ನು ಮಾಡತೊಡಗುವುವು. ಕೂಡಲೆ ಅದರಲ್ಲಿ ಹೆಣ್ಣು ಹಕ್ಕಿಯು ತತ್ತಿಗಳನ್ನು ಇಕ್ಕುವುದು. ಆ ಬಳಿಕ ಎರಡೂ ಪಕ್ಷಿಗಳು ಆ ತತ್ತಿಗಳಿಗೆ ಕಾವು ಕೊಡುವುವು. ಆ ತತ್ತಿಗಳಿಂದ ಮರಿಗಳು ಹೊರಬಿದ್ದ ಬಳಿಕ ಅವುಗಳಿಗೆ ಆಹಾರವನ್ನು ತಂದು ಕೊಟ್ಟು ಪೋಷಣೆಯನ್ನು ಮಾಡುವುವು. ಮರಿಗಳಿಗೆ ಪಕ್ಕ ಬಲಿತ ಕೂಡಲೆ ಅವು ಹಾರಿ ಹೋಗಿ ಸ್ವತಂತ್ರ ಜೀವನಕ್ರಮವನ್ನು ಪ್ರಾರಂಭಿಸುವುವು. ಪಕ್ಷಿಗಳಿಗೆ ಗೂಡು ಕಟ್ಟಲಿಕ್ಕೆ ಯಾರು ಕಲಿಸಿದರು? ಅವು ಗೂಡು ಕಟ್ಟುವುದನ್ನೂ ತತ್ತಿಗಳಿಗೆ ಕಾವು ಕೊಡುವುದನ್ನೂ ಮರಿಗಳ

ರಕ್ಷಣ ಪೋಷಣಗಳನ್ನೂ ಸ್ವಾಭಾವಿಕವಾಗಿ ಹುಟ್ಟುಗುಣಗಳಿಂದಲೇ ಮಾಡುವುವು.

ಎತ್ತು, ಆಕಳು, ಕುದುರೆ ಮೊದಲಾದ ಪ್ರಾಣಿಗಳಿಗೆ ಹುಲಿಯ ವಾಸನೆಯು ಬಹು ದೂರದಿಂದ ತಿಳಿಯುವುದು. ಅದರಿಂದ ಆ ಪ್ರಾಣಿಗಳ ಮನಸಿನಲ್ಲಿ ಭೀತಿಯು ಉತ್ಪನ್ನವಾಗುವಾಗುವುದು. ಕೂಡಲೆ ಅವು ಆ ವಾಸನೆಯು ಬರುವ ದಿಕ್ಕಿನ ವಿರುದ್ಧ ದಿಕ್ಕಿಗೆ ಓಡಲಾರಂಭಿಸುವುವು. ಅವುಗಳಲ್ಲಿ ಎಷ್ಟೋ ಪ್ರಾಣಿಗಳು ಹುಲಿಯನ್ನು ಎಂದೂ ನೋಡಿರದಿದ್ದರೂ ಅವು ಕೂಡ ಹೀಗೆ ವರ್ತಿಸುವುವು. ವಿಶಿಷ್ಟ ತರದ ವಾಸನೆಯು ಬಂದ ಕೂಡಲೆ ಓಡಿ ಹೋಗಬೇಕೆಂದು ಆ ಪ್ರಾಣಿಗಳಿಗೆ ಯಾರೂ ಕಲಿಸಿರುವುದಿಲ್ಲ. ಮುಂದೆ ಒದಗುವ ಸಂಕಟದಿಂದ ಆತ್ಮಸಂರಕ್ಷಣವನ್ನು ಮಾಡಿಕೊಳ್ಳಬೇಕೆಂಬ ಸಹಜ ಪ್ರವೃತ್ತಿಯಿಂದ ಈ ಕಾರ್ಯವು ಸಂಭವಿಸುವುದು.

ಮೇಲಿನ ಎರಡು ಉದಾಹರಣೆಗಳಿಂದ ಸಹಜ ಪ್ರವೃತ್ತಿ ಅಂದರೇನೆಂಬುದು ಲಕ್ಷ್ಯದಲ್ಲಿ ಬರುವುದು. **ಎಲ್ಲ ಪ್ರಾಣಿಗಳು ಹುಟ್ಟುಗುಣದಿಂದ ಕೆಲವೊಂದು ವಿಶಿಷ್ಟ ಪ್ರಸಂಗದಲ್ಲಿ ಒಂದು ವಿಶಿಷ್ಟ ರೀತಿಯಿಂದ ನಡೆಯುವುವು. ಹೀಗೆ ಉಂಟಾಗುವ ಪ್ರವೃತ್ತಿಯೇ ಸಹಜ ಪ್ರವೃತ್ತಿಯೆಂದು ಹೇಳಬಹುದು.** ಈ ಪ್ರವೃತ್ತಿಗಳು ಶಿಕ್ಷಣ ಸಂಸ್ಕಾರ–ಅನುಭವಗಳಿಂದ ಬರತಕ್ಕವುಗಳಲ್ಲ. ಜನ್ಮತಃ ಬಂದಿರುವುವು. ಕೆಲವು ಸಹಜ ಪ್ರವೃತ್ತಿಗಳು ಎಲ್ಲ ಪ್ರಾಣಿಗಳಲ್ಲಿ ಇರುವವು. ಉದಾ:— ಆತ್ಮಸಂರಕ್ಷಣೆಯ ಸಲುವಾಗಿ ಓಡಿ ಹೋಗುವುದು. ಇನ್ನು, ಕೆಲವು ಪ್ರವೃತ್ತಿಗಳು ಒಂದು ಜಾತಿಯ ಎಲ್ಲ ಪ್ರಾಣಿಗಳಲ್ಲಿ ಮಾತ್ರ ಕಂಡು ಬರುತ್ತವೆ. ಉದಾ:— ಹುಟ್ಟುಗಳನ್ನು ಕಟ್ಟಿ ಅದರಲ್ಲಿ ತುಪ್ಪವನ್ನು ಸಂಗ್ರಹಿಸುವ ಪ್ರವೃತ್ತಿಯು ಜೇನ ಹುಳಗಳಲ್ಲಿ ಮಾತ್ರ ಕಂಡುಬರುವುದು.

ಪ್ರಾಣಿಗಳ ಎಲ್ಲ ತರದ ಕಾರ್ಯಪ್ರವೃತ್ತಿಯ ಮೂಲವು ಈ ಸಹಜ ಪ್ರವೃತ್ತಿಗಳಲ್ಲಿ ದೊರೆಯುವುದು. ಕಾರ್ಯಕ್ಕೆ ಪ್ರವೃತ್ತ

ವಾಗುವ ಶಕ್ತಿಯು ಪ್ರಾಣಿಗಳಲ್ಲಿ ಹೇಗೆ ಉತ್ಪನ್ನವಾಗುವುದೆಂಬದನ್ನು ಆಲೋಚಿಸುವ; ಸಂಕಟ ಒದಗಿದಾಗ ಆತ್ಮಸಂರಕ್ಷಣ ಮಾಡಿಕೊಳ್ಳುವ ಪ್ರವೃತ್ತಿಯನ್ನು ದೇವರು ಎಲ್ಲ ಪ್ರಾಣಿಗಳಿಗೂ ಕೊಟ್ಟಿದ್ದಾನೆ. ನಾವು ದಾರಿಯಿಂದ ಹೋಗುತ್ತಿರುವಾಗ ಒಂದು ಗೂಳಿಯು ನಮ್ಮ ಮೈಮೇಲೆಬಂದಿತೆಂದು ತಿಳಿಯುವ;ಕೂಡಲೆ ನಾವು ಗಾಬರಿಯಾಗುವೆವು. ಆಗ ನಾವು ಸ್ವಸಂರಕ್ಷಣದ ಸಲುವಾಗಿ ಓಡಿಹೋಗುವೆವು ; ಇಲ್ಲವೆ ಮರೆಗೆ ಅಡಗಿಕೊಳ್ಳುವೆವು. ಅಂಗಳದಲ್ಲಿ ಕಾಳು ಆರಿಸಿ ತಿನ್ನುತ್ತಿರುವ ಕೋಳಿಗೆ ಬೆಕ್ಕು ದೃಷ್ಟಿಗೆ ಬಿದ್ದಕೂಡಲೆ ಅದು ಗಾಬರಿಯಾಗಿ ಕ-ಕ್ಕ-ಕ್ಕ ಎಂದು ಅಲ್ಲಿಂದ ಹಾರಿ ಮನೆಯೊಳಗೆ ಹೋಗುವುದು. ಇದೇ ಪ್ರಕಾರ ಬಾಗಿಲಿನಲ್ಲಿ ಒಬ್ಬ ಬೈರಾಗಿಯು ಬಂದ ಕೂಡಲೆ ಅವನನ್ನು ಕಂಡು ಅಲ್ಲಿಯೇ ಆಡುತ್ತಿರುವ ಕೂಸು ಅಂಜಿ ತಾಯಿಯ ಬಳಿಗೆ ಓಡಿ ಹೋಗುವುದು ; ತಾಯಿಯು ಅದನ್ನು ಎತ್ತಿಕೊಂಡು ಸಮಾಧಾನ ಪಡಿಸುವಳು. ಈ ಮೂರೂ ಉದಾಹರಣೆಗಳಿಂದ ತಿಳಿಯುವುದೇ ನಂದರೆ:— ಮೊದಲು ಪ್ರಾಣಿಗಳಿಗೆ ಭೀತಿದಾಯಕ ವಸ್ತುಗಳ ಜ್ಞಾನ ವಾಗುವುದು. ಆ ಬಳಿಕ ಭೀತಿ ಈ ಮನೋವಿಕಾರವು ಅದರ ಮನಸಿನಲ್ಲಿ ಉತ್ಪನ್ನವಾಗುವುದು. ಆ ಭೀತಿಯಿಂದ ಆ ಪ್ರಾಣಿಗೆ ಅಪಾಯ ಮಾಡುವ ವಸ್ತುವಿನಿಂದ ದೂರ ಹೋಗಬೇಕೆಂಬ ಪ್ರೇರಣೆಯು ಆಗುವುದು. ಆ ಬಳಿಕ ಪ್ರಾಣಿಯು ದೂರ ಓಡಿ ಹೋಗುವದು. ಇಲ್ಲವೆ ಅಡಗಿಕೊಳ್ಳುವ ಕಾರ್ಯವನ್ನು ಮಾಡುವುದು. ಸಹಜ ಪ್ರವೃತ್ತಿ ಯಿಂದ ಸಂಭವಿಸುವಂಥ ಯಾವದೊಂದು ಕಾರ್ಯದ ಬಗೆಗೆ ವಿಚಾರ ಮಾಡಿದರೂ **ಜ್ಞಾನ, ಮನೋವಿಕಾರ, ಪ್ರವರ್ತಕ ಶಕ್ತಿ** ಈ ಮೂರು ಕಂಡುಬರುತ್ತವೆ. ಮೇಲಿನ ಉದಾಹರಣೆಗಳಲ್ಲಿ ಮೊದಲು ವಸ್ತುವಿನ ಜ್ಞಾನ, ಆಮೇಲೆ ಭೀತಿ ಎಂಬ ಮನೋವಿಕಾರ, ಓಡಿ ಹೋಗೋಣ ಇದು ಪ್ರವರ್ತಕ ಶಕ್ತಿಯ ಕಾರ್ಯ ಎಂಬುದು ಸ್ಪಷ್ಟವಿದೆ. ಮನೋ ವಿಕಾರಗಳು ಕಾರ್ಯಪ್ರವೃತ್ತಿಯ ಪ್ರಬಲವಾದ ಕಾರಣಗಳೆಂದು ಹೇಳಬಹುದು. ಈ ವಿಕಾರಗಳು ಹೊರಗಿನ ಒಂದು ವಸ್ತುವಿನಿಂದಾಗಲಿ,

ಒಂದು ಪ್ರಸಂಗದಿಂದಾಗಲಿ ಪ್ರಚೋದನಗೊಳ್ಳುವುವು. ಅವು ಕಾರ್ಯದಲ್ಲಿ ಪ್ರವೃತ್ತಿಯನ್ನುಂಟು ಮಾಡುವುವು.

ಪ್ರಾಣಿಗಳ ಮನಸಿನಲ್ಲಿ ಉತ್ಪನ್ನವಾಗುವ ಪ್ರವೃತ್ತಿಗಳು ಮುಖ್ಯವಾಗಿ ಸ್ವಸಂರಕ್ಷಣದ ಸಲುವಾಗಿ, ಇಲ್ಲವೆ ಸಂತತಿ ಸಂವರ್ಧನದ ಸಲುವಾಗಿ ಇರುವವು. ಉಳಿದ ಎಷ್ಟೋ ಪ್ರವೃತ್ತಿಗಳು ಇವೆರಡರಲ್ಲಿಯೇ ಸಮಾವೇಶವಾಗುವುವು. ಉದಾ:- ಆಹಾರ ಸಂಪಾದಿಸಬೇಕೆಂಬ ಪ್ರವೃತ್ತಿಯು ಆತ್ಮಸಂರಕ್ಷಣದ ಪ್ರವೃತ್ತಿಯಲ್ಲಿಯೇ ಸಮಾವೇಶವಾಗುವುದು. ಯುಯುತ್ಸಾ ಪ್ರವೃತ್ತಿ ಅಥವಾ ಯುದ್ಧ ಪ್ರವೃತ್ತಿಯು ಮೊದಲು ತನ್ನ ಸಂತತಿಗೆ ಶತ್ರುಗಳಿಂದ ಉಂಟಾಗುವ ಪೀಡೆಯನ್ನು ಪರಿಹರಿಸುವುದಕ್ಕೆ ಉತ್ಪನ್ನವಾಗುವುದು. ಮುಂದೆ ಆಹಾರ ಸಂಪಾದಿಸುವಾಗ ಒದಗುವ ತೊಂದರೆಗಳನ್ನು ದೂರಮಾಡುವಾಗ ಈ ಪ್ರವೃತ್ತಿಯು ಉಪಯೋಗವಾಗುವುದು.

ಈ ಎರಡು ಮುಖ್ಯ ಪ್ರವೃತ್ತಿಗಳಲ್ಲಿ ಯಾವದು ಹೆಚ್ಚಿನದೆಂಬ ಬಗೆಗೆ ಶಾಸ್ತ್ರಜ್ಞರಲ್ಲಿ ಮತಭೇದವುಂಟು. ಕೆಲವರು ಆತ್ಮಸಂರಕ್ಷಣೆಯು ಹೆಚ್ಚಿನದೆಂಬುವರು. ಮಿಕ್ಕವರು ಸಂತತಿ ಸಂವರ್ಧನೆಯೇ ಪ್ರಬಲವಾದದ್ದೆನ್ನುವರು. ಉಭಯ ಪಕ್ಷದವರೂ ತಮ್ಮ ತಮ್ಮ ಅಭಿಪ್ರಾಯವನ್ನು ಸ್ಪಷ್ಟಪಡಿಸಲಿಕ್ಕೆ ದೃಷ್ಟಾಂತಗಳನ್ನು ಕೊಡುವರು. ಸಂತತಿ ಸಂವರ್ಧನದಲ್ಲಿ ಎಷ್ಟೋ ಪ್ರಾಣಿಗಳ ಸ್ವಾರ್ಥತ್ಯಾಗವು ಕಂಡುಬರುವುದು. ಜಾತಿ ವಿಷಯಕ ಪ್ರೇಮವು ಒಳ್ಳೇ ಪ್ರಬಲವಾಗಿರುವುದು. ಮೂಲ ಜೀವಘಟಕವನ್ನು ನೋಡಿದರೆ ಅದು ತನ್ನ ಜಾತಿ ಸಂವರ್ಧನೆಗಾಗಿ ತನ್ನನ್ನೇ ಇಬ್ಭಾಗವಾಗಿ ವಿಭಾಗಿಸಿಕೊಂಡು ತನ್ನತನ (ಆತ್ಮತ್ವ) ವನ್ನು ಬೆಳಿಸುವುದು. ಅಂದರೆ ತನ್ನ ಅಮರತ್ವವನ್ನು ಕಾಯ್ದುಕೊಳ್ಳುವುದು. ಮಾನವರಲ್ಲಿಯೂ ಈ ಪ್ರೇರಣೆಯು ಸಂತತಿ ಸಂವರ್ಧನಗಳಲ್ಲಿ ಕಂಡುಬರುವುದು. ತಂದೆಯು ಮಗನಲ್ಲಿ ತನ್ನನ್ನು ಕಾಯ್ದುಕೊಂಡಿರುವನೆಂದೆನ್ನುವರು. ಇದೇ ಪುನರ್ಜನ್ಮವೆಂತಲೂ ಕೆಲವರ ಕಲ್ಪನೆಯು.

ಈ ಎರಡು ಪ್ರವೃತ್ತಿಗಳ ಕೂಡ ಮೂರನೆಯದೊಂದು ಪ್ರವೃತ್ತಿಯು ಕಂಡುಬರುವುದು. ಅದು ಸಾಂಘಿಕ ಪ್ರವೃತ್ತಿಯು. ಸಜಾತಿಯ ಪ್ರಾಣಿಗಳು ತಮ್ಮ ಹಿಂಡಿನೊಳಗಿನ ಇತರ ಪ್ರಾಣಿಗಳನ್ನು ದೂರದಿಂದಲೇ ಗುರುತಿಸಿಕೊಂಡು ಅವುಗಳೊಡನೆ ಸೇರಿಕೊಳ್ಳುವವು. ಈ ಸಾಂಘಿಕ ಪ್ರವೃತ್ತಿಯು ಜಾತಿಯ ಹಾಗು ವ್ಯಕ್ತಿಯ ಸಂರಕ್ಷಣೆಗೆ ಉಪಯುಕ್ತವಾದದ್ದು. ಮತ್ತು ತಮಗೆ ಅನುರೂಪವಾದ ದಾಂಪತ್ಯ ವನ್ನು ದೊರಕಿಸಿಕೊಳ್ಳುವುದಕ್ಕೂ ಚಿಕ್ಕವರ ರಕ್ಷಣೆ ಪೋಷಣೆಗಳಿಗೂ ಉಪಯೋಗವಾಗುವುದು. ಈ ಸಾಂಘಿಕ ಪ್ರವೃತ್ತಿಯು ತಳಹದಿಯ ಮೇಲೆಯೇ ಮಾನವ ಸಮಾಜವು ಕಟ್ಟಲ್ಪಟ್ಟಿರುವುದು. ಸಮಾಜ ಬಂಧನವು ಸಾಂಘಿಕ ಪ್ರೇರಣೆಯ ಶಿಶುವು. ಸಮಾಜ ಘಟನೆಯಲ್ಲಿ ಸ್ವಾರ್ಥತ್ಯಾಗ ಮೊದಲಾದ ಉಚ್ಚ ಮನೋವೃತ್ತಿಗಳು ಒಳಗೊಂಡಿ ರುವುವು.

ಸಹಜ ಪ್ರವೃತ್ತಿಗಳ ವಿಷಯವಾಗಿ ಹಿಂದೆ ಹೇಳಿದ ಪ್ರಕಾರ ಮುಖ್ಯವಾಗಿ ಮೂರು ಸಂಗತಿಗಳನ್ನು ಲಕ್ಷ್ಯದಲ್ಲಿಡತಕ್ಕದ್ದು. **(೧) ಸಹಜ ಪ್ರವೃತ್ತಿಗಳು ಎಲ್ಲ ಪ್ರಾಣಿಗಳಲ್ಲಿ ಅಥವಾ ಒಂದು ಜಾತಿಯ ಎಲ್ಲ ಪ್ರಾಣಿಗಳಲ್ಲಿ ಇರುವುವು. (೨) ಸಹಜ ಪ್ರವೃತ್ತಿಯಿಂದ ಆಗತಕ್ಕ ವ್ಯಾಪಾರಗಳಲ್ಲಿ ಜ್ಞಾನ, ಮನೋವಿಕಾರ ಪ್ರವರ್ತಕ ಶಕ್ತಿ ಇವು ಮೂರು ಕಂಡುಬರುವುವು. (೩) ಕೆಲವು ಬುದ್ಧಿವಂತ ಪ್ರಾಣಿಗಳ ಸಹಜ ಪ್ರವೃತ್ತಿಯಿಂದ ಆಗತಕ್ಕ ಕಾರ್ಯಗಳಲ್ಲಿ ಅನುಭವದಿಂದಲೂ ಶಿಕ್ಷಣದಿಂದಲೂ, ಬಹಳ ಹೆಚ್ಚು ಕಡಿಮೆ ಗಳಾಗುವುವು.** ಉದಾ:- ಒಂದು ವರ್ಷದ ಕೂಸು ಪೇಢೆಯನ್ನು ಕಂಡಕೂಡಲೆ ಒಮ್ಮೆಲೆ ಕೈಹಾಕಿ ತಕ್ಕೊಂಡು ಬಾಯಿಗೆ ಹಚ್ಚುವುದು. ನಾಲ್ಕು ವರ್ಷ ವಯಸ್ಸಿನ ಹುಡುಗನು ಹಾಗೆ ಮಾಡದೆ ತಾಯಿಯನ್ನು ಕೇಳಿ ತಕ್ಕೊಳ್ಳುವನು. ಹತ್ತು ವರ್ಷದ ಹುಡುಗನು ತಾಯಿಯು ಎಲ್ಲರಿಗೂ ಪೇಢೆಯನ್ನು ಹಂಚಿಕೊಡುವತನಕ ಅವಳ ಬಳಿಗೆ ಸುಮ್ಮನೆ ನಿಂತುಕೊಳ್ಳುವನು.

ಆನೆ, ಕುದುರೆ, ನಾಯಿ, ಮಂಗ ಮೊದಲಾದ ಬುದ್ಧಿವಂತ ಪ್ರಾಣಿಗಳ ಸಹಜಪ್ರವೃತ್ತಿಯಿಂದ ಆಗುವ ಕಾರ್ಯಗಳಲ್ಲಿ ಶಿಕ್ಷಣದಿಂದಲೂ ಅನುಭವದಿಂದಲೂ ಅಲ್ಪಸ್ವಲ್ಪ ಹೆಚ್ಚುಕಡಿಮೆಯಾಗುವುದು ನಿಜವು. ಆದರೆ ಮನುಷ್ಯಪ್ರಾಣಿಯ ದೃಷ್ಟಿಯಿಂದ ಈ ಹೆಚ್ಚು ಕಡಿಮೆಯು ತೀರ ಅಲ್ಪ ಪ್ರಮಾಣದ್ದಿರುತ್ತದೆ. ಚಿಕ್ಕಮಗುವಿನ ಕೈಯೊಳಗಿನ ಪೇಢೆಯನ್ನು ಕಸಿದುಕೊಂಡರೆ ಮಗುವು ಸಿಟ್ಟಾಗುವುದು, ಅಳುವುದು. ಕಸಿದುಕೊಂಡವರನ್ನು ಕಚ್ಚಲು ಪ್ರಯತ್ನಿಸುವುದು. ನಾಯಿಯು ರೊಟ್ಟಿಯನ್ನು ತಿನ್ನುತ್ತಿರುವಾಗ ಅದರ ರೊಟ್ಟಿಗೆ ಯಾರಾದರೂ ಕೈಹಚ್ಚಿದರೆ ಅದಕ್ಕೂ ಸಿಟ್ಟು ಬರುವದು. ಗುರುಗುಟ್ಟುತ್ತ ಅವರ ಮೈಮೇಲೆ ಏರಿ ಹೋಗುವುದು. ಈ ಮೇರೆಗೆ ಸಹಜ ಪ್ರವೃತ್ತಿಯಿಂದ ಆಗುವ ಚಿಕ್ಕಮಗುವಿನ ಕೃತಿ, ಹಾಗು ಅದೇ ಪ್ರವೃತ್ತಿಯ ಮೂಲಕ ಆಗುವ ನಾಯಿಯ ಕೃತಿ ಇವುಗಳಲ್ಲಿ ವಿಶೇಷ ಭೇದವೇನೂ ಕಂಡುಬರುವುದಿಲ್ಲ. ಆದರೆ ನಾಯಿಗೆ ಸಿಟ್ಟು ತರಿಸುವಂಥ ಪ್ರಸಂಗವೂ ಅದರಿಂದಾಗುವ ಕೃತಿಯೂ, ಅದರ ಇಡೀ ಆಯುಷ್ಯದಲ್ಲಿ ಹಾಗೆಯೇ ಉಳಿಯುವುವು. ನಾಯಿಯು ಎಷ್ಟು ಅನುಭವವನ್ನು ಪಡೆದಾಗ್ಯೂ ಅಥವಾ ಕಲಿಸಲ್ಪಟ್ಟಾಗ್ಯೂ ಅದನ್ನು ನಿಂದಿಸುವುದಕ್ಕಾಗಿ ಮಾಡಿದ ಕವಿತೆಗಳಿಂದ ಅದಕ್ಕೆ ಸಿಟ್ಟು ಬರಲಾರದು. ಮತ್ತು ತನ್ನ ಅಪಮಾನ ಮಾಡಿದ ಶತ್ರುಗಳ ಸೇಡು ತೀರಿಸುವುದಕ್ಕಾಗಿ ಇಲ್ಲವೆ ಅವರ ನಾಶ ಮಾಡುವುದಕ್ಕಾಗಿ ತನ್ನ ಜಾತಿ ಬಾಂಧವರ ಸಭೆಯನ್ನು ನೆರೆಯಿಸಿ ಅವರ ಸಹಾನುಭೂತಿಯನ್ನೂ ಸಹಾಯ್ಯವನ್ನೂ ದೊರಕಿಸಲಾರದು. ಆದರೆ ಹುಡುಗನ ಬಾಲ್ಯಾವಸ್ಥೆಯು ಮುಗಿದು ಅವನು ಪ್ರೌಢನಾದ ಮೇಲೆ ತನ್ನನ್ನು ಅಪಮಾನ ಗೊಳಿಸಿದವರ ಸೇಡು ತೀರಿಸಿಕೊಳ್ಳುವುದಕ್ಕಾಗಿ ಅನೇಕ ಉಪಾಯುಗಳನ್ನು ಕೈಕೊಳ್ಳುವನು.

ಪ್ರತಿಯೊಂದು ಸಹಜ ಪ್ರವೃತ್ತಿಯ ಕಾರ್ಯಪ್ರವೃತ್ತಿಗೆ ಒಂದೊಂದು ಮನೋವಿಕಾರವು ಪ್ರಬಲವಾದ ಕಾರಣವೆಂದು ಹಿಂದೆ ಹೇಳಿದೆ. ಬೇರೆ ಬೇರೆ ಸಹಜ ಪ್ರವೃತ್ತಿಗಳಲ್ಲಿ ಹುಟ್ಟುವ ಬೇರೆ ಬೇರೆ

ಮನೋವಿಕಾರಗಳನ್ನು ಅನುಲಕ್ಷಿಸಿ ಅಮೇರಿಕದ ಸುಪ್ರಸಿದ್ಧ ಮಾನಸ ಶಾಸ್ತ್ರಜ್ಞನಾದ ಡಾಕ್ಟರ ಮಾಗ್ಡುಗಲ್‌ನೆಂಬುವವನು ಸಹಜ ಪ್ರವೃತ್ತಿಗಳ ಒಂದು ಪಟ್ಟಿಯನ್ನು ಸಿದ್ಧಮಾಡಿರುವನು. ಅವುಗಳಲ್ಲಿ ಮುಖ್ಯವಾಗಿರುವ ಕೆಲವು ಪ್ರವೃತ್ತಿಗಳನ್ನೂ ಆ ಪ್ರತಿಯೊಂದರಲ್ಲಿ ಕಂಡು ಬರುವ ಮನೋವಿಕಾರವನ್ನೂ ಕೆಳಗೆ ಕೊಟ್ಟಿದೆ.

| | ಸಹಜ ಪ್ರವೃತ್ತಿ. | ಮನೋವಿಕಾರ. |
|---|---|---|
| ೧ | ವಾತ್ಸಲ್ಯ ಪ್ರವೃತ್ತಿ | ಕೋಮಲ ಭಾವನೆ, ವತ್ಸಲತೆ. |
| ೨ | ಜಿಜ್ಞಾಸೆ | ಕುತೂಹಲ ಅಥವಾ ಆಶ್ಚರ್ಯ |
| ೩ | ಪಲಾಯನ ಪ್ರವೃತ್ತಿ | ಭೀತಿ |
| ೪ | ಯುದ್ಧ ಪ್ರವೃತ್ತಿ | ಸಿಟ್ಟು |
| ೫ | ಜುಗುಪ್ಸಾ ಪ್ರವೃತ್ತಿ | ತಿರಸ್ಕಾರ |
| ೬ | ಆತ್ಮಪ್ರೌಢಿಯ ಪ್ರವೃತ್ತಿ | ಅಭಿಮಾನ, ಗರ್ವ |
| ೭ | ಲೀನತೆ ಅಥವಾ ವಿನಯಶೀಲತೆ | ನಮ್ರತೆ |
| ೮ | ಸಂಪಾದನ ಪ್ರವೃತ್ತಿ ಇಲ್ಲವೆ ಸಂಚಯ ಪ್ರವೃತ್ತಿ | ಪೋಷಣ, ರಕ್ಷಣ |

ಇವುಗಳಲ್ಲಿ ಒಂದೊಂದರ ವಿಷಯವಾಗಿ ಕೆಲವು ವಿಶೇಷ ಸಂಗತಿಗಳು ಕೆಳಗೆ ಕೊಡಲ್ಪಟ್ಟಿರುವವು.

೧ **ವಾತ್ಸಲ್ಯ ಪ್ರವೃತ್ತಿ:—** ಈ ಪ್ರವೃತ್ತಿಯು ತಾಯಿತಂದೆಗಳಲ್ಲಿ ಇರುವುದು. ಅವರು ತಮ್ಮ ಮಕ್ಕಳ ವಿಷಯವಾಗಿ ತೋರಿಸುವ ಮನೋವಿಕಾರಕ್ಕೆ **ಮಮತೆ** ಎಂಬ ಹೆಸರು. ಈ ಕೋಮಲ ಭಾವನೆಯ ಪ್ರೇರಣೆಯಿಂದ ತಾಯಿತಂದೆಗಳು ತಮ್ಮ ಮಕ್ಕಳ ಕಲ್ಯಾಣದ ಸಲುವಾಗಿ ಅತ್ಯಂತ ಪರಿಶ್ರಮವನ್ನು ಮಾಡುವರು. ತಮ್ಮ ಸ್ವಂತದ ಸುಖ ದುಃಖಗಳ ಕಡೆಗೆ ತಿಲಮಾತ್ರವೂ ಲಕ್ಷ್ಯ ಕೊಡುವುದಿಲ್ಲ. ಪಕ್ಷಿ ಜಾತಿಯಲ್ಲಿ ಗಂಡು ಹೆಣ್ಣು ಈ ಎರಡರಲ್ಲಿಯೂ ಈ ಭಾವನೆಯು ಬಲವತ್ತರವಾಗಿರು

ವುದು. ಪಶುಜಾತಿಯಲ್ಲಿ ತಾಯಿಯಲ್ಲಿ ಮಾತ್ರ ಈ ವಾತ್ಸಲ್ಯವು ಕಂಡುಬರುವುದು. ಈ ಭಾವನೆಯು ಬಹಳ ಮಹತ್ವವಾದದ್ದು. ಇದರಿಂದಲೇ ಮುಂದಿನ ಪೀಳಿಗೆಯು ಸಿದ್ಧವಾಗುವುದು. ಸೃಷ್ಟಿಕ್ರಮವು ಅಬಾಧಿತವಾಗಿ ನಡೆಯುವುದು. ಪ್ರೇಮ, ದಯಾ, ಸ್ನೇಹ, ಅನುಕಂಪನ ಇತ್ಯಾದಿ ಉಚ್ಚ ಮನೋವೃತ್ತಿಗಳು ಈ ಭಾವನೆಯಿಂದಲೇ ಉತ್ಪನ್ನವಾಗುವುವು.

೨. **ಜಿಜ್ಞಾಸೆ:—** ಬಾಲಕರಿಗೆ ಸುತ್ತುಮುತ್ತು ಕಾಣುವ ಪ್ರಪಂಚವೆಲ್ಲ ಹೊಸದಿರುವುದು. ಹೊಸ ವಸ್ತುವನ್ನು ಹೊಸ ಪ್ರಾಣಿಯನ್ನು ಕಂಡಕೂಡಲೆ ಬಾಲಕರು ಇದು ಏನು? ಇದು ಇಲ್ಲಿ ಏಕೆ ಇರುವುದು? ಇದು ಹೀಗೆ ಏಕೆ? ಇತ್ಯಾದಿ ಪ್ರಶ್ನಗಳನ್ನು ಮಾಡಿ ಆ ವಸ್ತುವಿನ ಜ್ಞಾನ ಮಾಡಿಕೊಳ್ಳಬೇಕೆಂಬ ಕುತೂಹಲವನ್ನು ಇಲ್ಲವೆ ಲವಲವಿಕೆಯನ್ನು ತೋರಿಸುವರು. ಪ್ರಪಂಚದೊಳಗಿನ ಹೊಸವಸ್ತುವು ಬಾಹ್ಯೋತ್ತೇಜಕವು. ಅದು ದೃಷ್ಟಿಗೆ ಬೀಳಲು ಕುತೂಹಲವೆಂಬ ಪ್ರೇರಣೆಯು ತಪ್ಪದೆ ಆಗುವುದು. ಇಂಥ ಹೊಸಪದಾರ್ಥಗಳನ್ನು ತಂದೊದಗಿಸಿ ಅವುಗಳ ಮೂಲಕ ಜಿಜ್ಞಾಸೆಯನ್ನು ಹುಟ್ಟಿಸಿ ಅದನ್ನು ತಣಿಸುವುದು ಶಿಕ್ಷಕನ ಕರ್ತವ್ಯವಾಗಿದೆ ಜ್ಞಾನಾಭಿವೃದ್ಧಿಯನ್ನು ಮಾಡಿಕೊಳ್ಳಬೇಕೆಂಬ ಬಾಲಕರಲ್ಲಿಯ ಹುಮ್ಮಸದ ಹಂಬಲವು ತೃಪ್ತಿಗೊಳ್ಳಬೇಕು. ಇಂದ್ರಿಯಗಳ ಮುಖಾಂತರವಾಗಿ ಹುಡುಗರು ಈ ಜ್ಞಾನವನ್ನು ಮಾಡಿಕೊಳ್ಳುವರು ಚಿಕ್ಕಚಿಕ್ಕಬಾಲಕರು ದರ್ಶನೇಂದ್ರಿಯ ರಸನೇಂದ್ರಿಯಗಳ ಬಳಕೆಯನ್ನು ವಿಶೇಷವಾಗಿ ಮಾಡುವರು. ತೀರ ಹಸುಗೂಸು ಕೈಗೆ ಸಿಕ್ಕ ಪದಾರ್ಥಗಳನ್ನೆಲ್ಲ ಬಾಯಲ್ಲಿ ಹಾಕಿಕೊಳ್ಳುವುದು. ಯಾಕಂದರೆ ಆ ಅವಸ್ಥೆಯಲ್ಲಿ ರಸನೇಂದ್ರಿಯವೇ ಹೆಚ್ಚು ಜಾಗೃತಿಯುಳ್ಳದ್ದಿರುವುದು. ಅಂದರೆ ಬೇರೆ ಇಂದ್ರಿಯಗಳ ಉಪಯೋಗವನ್ನು ಮಾಡಿಕೊಳ್ಳುವುದಿಲ್ಲವೆಂಬಂತಿಲ್ಲ; ಒಂದೊಂದು ಕಾಲದಲ್ಲಿ ಒಂದೊಂದು ಇಂದ್ರಿಯದಲ್ಲಿ ಹೆಚ್ಚು ಜಾಗೃತಿ ಇರುವುದು ಕಂಡುಬರುವುದು.

ಈ ಕಾರಣಗಳನ್ನು ಚೆನ್ನಾಗಿ ಅರಿತುಕೊಂಡ ಫ್ರೊಬೆಲ್ಲನು ಬಾಲಕರನ್ನು ತೋಟಗಳಲ್ಲಿ ಕರೆದುಕೊಂಡು ಹೋಗಿ ಸೃಷ್ಟಿಯ ನಿರೀಕ್ಷಣೆ ಮಾಡಿಸಿ ಸ್ವಾಭಾವಿಕ ರೀತಿಯಿಂದ ಬಾಲಕರು ತಾವಾಗಿಯೇ ಕಲಿಯುವಂತೆ ಕಿಂಡರ ಗಾರ್ಟನ್ ಪದ್ಧತಿಯಲ್ಲಿ ಏರ್ಪಾಡು ಮಾಡಿರುವನು. ಮಾಂಟಿಸೋರಿ ಪದ್ಧತಿಯಲ್ಲಿ ಕೂಡ ಇಂದ್ರಿಯಗಳ ಮುಖಾಂತರ ಶಿಕ್ಷಣವು ದೊರೆಯುವಂತೆ ಬೇರೆಬೇರೆ ವ್ಯವಸಾಯಗಳ ಯೋಜನೆಯು ಇರುವುದು. ಶಬ್ದಜ್ಞಾನಕ್ಕಿಂತ ಮೊದಲು ವಸ್ತುಗಳ ಪರಿಚಯವಾಗಲಿಕ್ಕೆಬೇಕು. **ವಸ್ತುಗಳು ಶಬ್ದಗಳ ಅರ್ಥ**ವೆಂಬ ಮಾತನ್ನು ಶಿಕ್ಷಕರು ಮರೆಯಬಾರದು. ವಸ್ತುಗಳ ವಿಷಯವಾಗಿ ಮಕ್ಕಳು ಹೆದರದೆ ನಿರ್ದಾಕ್ಷಿಣ್ಯದಿಂದ ಪ್ರಶ್ನ ಕೇಳಲಿಕ್ಕೆ ಉತ್ತೇಜನವನ್ನು ಕೊಡತಕ್ಕದ್ದು. ಮತ್ತು ಶಿಕ್ಷಕರು ಪಾಲಕರು ತಕ್ಕ ಉತ್ತರಗಳನ್ನು ಕೊಟ್ಟು ಅವರ ಜಿಜ್ಞಾಸೆಯನ್ನು ತೃಪ್ತಿಪಡಿಸತಕ್ಕದ್ದು. ಅವರು ಪ್ರಶ್ನಗಳನ್ನು ಕೇಳಿದಾಗ ಸಿಟ್ಟುಮಾಡಿ ಅವರ ಜಿಜ್ಞಾಸೆಯನ್ನು ಕುಗ್ಗಿಸಬಾರದು.

ಕುದುರೆ, ಆನೆ, ನಾಯಿ, ಬೆಕ್ಕು, ಮಂಗ ಈ ಪ್ರಾಣಿಗಳಲ್ಲಿಯೂ ಪಕ್ಷಿಗಳಲ್ಲಿಯೂ ಈ ಪ್ರವೃತ್ತಿಯು ವಿಶೇಷವಾಗಿ ಕಂಡುಬರುವುದು. ಪ್ರಾಣಿಗಳ ಶರೀರಕ್ಕೆ ಹಿತಕರವಾದ ಪದಾರ್ಥಗಳು ಯಾವವು, ಅಪಾಯಕಾರಕ ಪದಾರ್ಥಗಳು ಯಾವವು, ಈ ಜ್ಞಾನವನ್ನು ಮಾಡಿಕೊಳ್ಳಬೇಕೆಂದು ಅವು ಜಿಜ್ಞಾಸೆಯಿಂದ ಪ್ರಯತ್ನ ಮಾಡುತ್ತಿರುವವೆಂದು ಅನುಮಾನ ಮಾಡಬಹುದು.

**೩. ಪಲಾಯನ ಪ್ರವೃತ್ತಿ :—** ಪ್ರಾಣಿಗಳಿಗೆ ಸ್ವಸಂರಕ್ಷಣ ಕಾರ್ಯದಲ್ಲಿ ಈ ಸಹಜಪ್ರವೃತ್ತಿಯು ಬಹಳ ಉಪಯೋಗವಾಗುವುದು. ವಿಲಕ್ಷಣವಾದಂಥ ಅಥವಾ ದೊಡ್ಡದಾದಂಥ ಇಲ್ಲವೆ ಕರ್ಕಶವಾದಂಥ ಸಪ್ಪಳ, ಕಗ್ಗತ್ತಲೆ, ವಿಲಕ್ಷಣ ಪ್ರಾಣಿ, ಪರಿಚಯವಿಲ್ಲದ, ಒಳ್ಳೇ ವೇಗದಿಂದ ಓಡುವ ಪ್ರಾಣಿ ಇವುಗಳಿಂದ ಭಯವು ಉತ್ಪನ್ನವಾಗುವುದು. ಈ ಮನೋವಿಕಾರದ ಪ್ರೇರಣೆಯಿಂದ ಪ್ರಾಣಿಗಳು ಈ ಸಂಕಟದಿಂದ ತಮ್ಮ ಶರೀರದ ರಕ್ಷಣದ ಸಲುವಾಗಿ ದೂರ ಓಡಿಹೋಗುವುವು;

ಇಲ್ಲವೆ ಎಲ್ಲಿಯಾದರೂ ಮರೆಗೆ ಅಡಗಿಕೊಳ್ಳುವುವು. ಅಡಗಿಕೊಳ್ಳು ವುದು ಪಲಾಯನ ಪ್ರವೃತ್ತಿಯ ಒಂದು ಭಾಗವೆಂದು ಹೇಳಬಹುದು. ಯಾವ ಸಂಕಟದ ಪ್ರತೀಕಾರ ಮಾಡುವ ಸಾಮರ್ಥ್ಯವು ಇಲ್ಲವೆಂದು ತಿಳಿದಾಗ ಆ ಸಂಕಟದ ಬಗ್ಗೆ ಭೀತಿಯು ಉತ್ಪನ್ನವಾಗುವುದು. ಆ ಸಂಕಟಕ್ಕೆ ಇದಿರಾಗಿ ಹೋರಾಡುವ ಶಕ್ತಿಯು ಇದೆ ಎಂದು ಆ ಪ್ರಾಣಿಗೆ ಮನವರಿಕೆಯಾದರೆ ಅದರ ಮನಸಿನಲ್ಲಿ ಸಿಟ್ಟು ಜಾಗೃತವಾಗಿ ಅದು ಯುದ್ಧಕ್ಕೆ ಪ್ರವೃತ್ತವಾಗುವುದು.

೪. **ಯುದ್ಧಪ್ರವೃತ್ತಿ :—** ಈ ಪ್ರವೃತ್ತಿಯಿಂದ ಪ್ರಾಣಿಗಳ ಸಂರಕ್ಷಣವಾಗುವುದು. ಪ್ರಾಣಿಗಳ ಇಚ್ಛೆಗೆ ಇಲ್ಲವೆ ಕ್ರಿಯೆಗೆ ಯಾರಾದರೂ ಅಡ್ಡಬಂದರೆ ಪ್ರಾಣಿಗೆ ಸಿಟ್ಟುಬರುವುದು. ಈ ಮನೋವಿಕಾರದ ಪ್ರೇರಣೆಯಿಂದ ಆ ಪ್ರಾಣಿಯು ಅಡ್ಡ ಬಂದ ಪ್ರಾಣಿಯ ಸಂಗಡ ಯುದ್ಧಮಾಡತೊಡಗುವುದು. ಒಂದು ನಾಯಿಯು ರೊಟ್ಟಿಯನ್ನು ತಿನ್ನುತ್ತಿರುವಾಗ ಎರಡನೆಯ ನಾಯಿಯು ಸಿಟ್ಟಾಗಿ ಗುರುಗುಟ್ಟುವುದು. ಮತ್ತು ಒಮ್ಮೆಲೇ ಅದರಮೇಲೆ ಏರಿ ಹೋಗುವುದು.

೫. **ಜುಗುಪ್ಸಾ ಪ್ರವೃತ್ತಿ :—** ಈ ಪ್ರವೃತ್ತಿಯು ಪ್ರಾಣಿಗಳ ಶರೀರವನ್ನು ಅಪಾಯದಿಂದ ಸಂರಕ್ಷಿಸುವುದು. ಹೊಲಸು ಪದಾರ್ಥಗಳು, ಕೆಟ್ಟವಾಸನೆ, ಕೊಳೆತ ಪದಾರ್ಥಗಳು ಇವುಗಳಿಂದ ನಮಗೆ ಹೇಸಿಗೆ ಬರುವುದು ; ಅವುಗಳಬಗ್ಗೆ ನಮ್ಮ ಮನಸಿನಲ್ಲಿ ತಿರಸ್ಕಾರವು ಉತ್ಪನ್ನವಾಗುವುದು. ಈ ಮನೋವಿಕಾರದ ಪ್ರೇರಣೆಯಿಂದ ನಾವು ಆ ಪದಾರ್ಥಗಳಿಂದ ದೂರ ಸರಿಯುತ್ತೇವೆ. ಇದೇ ಪ್ರವೃತ್ತಿಯ ಮೂಲಕ ಅಸತ್ಯತೆ, ಕ್ರೂರತನ, ದುಷ್ಟತನ, ಮೊದಲಾದ ಭಾವನೆಗಳ ಬಗ್ಗೆಯೂ ತಿರಸ್ಕಾರವು ಉತ್ಪನ್ನವಾಗುವುದು.

೬. **ಆತ್ಮಪ್ರೌಢಿಯ ಪ್ರವೃತ್ತಿ :—** ಈ ಪ್ರವೃತ್ತಿಯ ಬೆನ್ನ ಹಿಂದೆ ಅಭಿಮಾನ ಅಥವಾ ಗರ್ವ ಈ ಮನೋವಿಕಾರವಿರುತ್ತದೆ. ಅದರ ಪ್ರೇರಣೆಯಿಂದ ಮನುಷ್ಯನಲ್ಲಿ ತನ್ನ ವಿದ್ವತ್ತೆಯನ್ನೂ, ಸಂಪತ್ತನ್ನೂ, ಶಕ್ತಿಯನ್ನೂ ಸೌಂದರ್ಯವನ್ನೂ ಸಮಾಜಕ್ಕೆ ತೋರಿಸ

ಬೇಕೆಂಬ ಇಚ್ಛೆಯು ಉತ್ಪನ್ನವಾಗುವುದು. ಇದು ಸಾಮಾಜಿಕ ಪ್ರವೃತ್ತಿಯು; ಯಾಕೆಂದರೆ ಸುತ್ತುಮುತ್ತು ಪ್ರೇಕ್ಷಕರು ಇದ್ದರೆ ಮಾತ್ರ ತಮ್ಮ ಶಕ್ತ್ಯಾದಿಗಳನ್ನು ಪ್ರದರ್ಶನ ಮಾಡುವ ಇಚ್ಛೆಯು ಅಂತಃಕರಣದಲ್ಲಿ ಉತ್ಪನ್ನವಾಗುವುದು. ಕುದುರೆ, ನಾಯಿ, ಆನೆ, ಮೊದಲಾದ ಪಶುಗಳಲ್ಲಿಯೂ ಕೋಳಿ, ಪಾರಿವಾಳ, ನವಿಲು, ಮೊದಲಾದ ಪಕ್ಷಿಗಳಲ್ಲಿಯೂ ಈ ಪ್ರವೃತ್ತಿಯು ಕಂಡುಬರುವುದು.

೭. **ಲೀನತೆ ಅಥವಾ ವಿನಯಶೀಲತೆ:—** ಬಲದಿಂದಾಗಲಿ, ಗುಣದಿಂದಾಗಲಿ, ವಿದ್ವತ್ತಿನಿಂದಾಗಲಿ, ತಮಗಿಂತ ಶ್ರೇಷ್ಠರಾದವರನ್ನು ಕಂಡರೆ ಮನುಷ್ಯನ ಮನಸಿನಲ್ಲಿ ನಮ್ರತೆಯು ಉತ್ಪನ್ನವಾಗುತ್ತದೆ. ಅವನು ಅಂಥವನ ಕೂಡ ಒಳ್ಳೇ ಲೀನತೆಯಿಂದ ನಡೆಕೊಳ್ಳುವನು. ನಾಯಿಯು ತನಗಿಂತ ಬಲಿಷ್ಠವಾದ ಮತ್ತೊಂದು ನಾಯಿಯನ್ನು ಕಂಡ ಕೂಡಲೆ ಅದರ ಸಮೀಪಕ್ಕೆ ಹೋಗದೆ ದೂರ ಸರಿದು ನಿಂತುಕೊಳ್ಳುವುದು. ಅದರ ಬಾಲವು ಕೆಳಗಾಗುವುದು. ದೀನವೃತ್ತಿಯು ತೋರಿಬರುವುದು. ಈ ವೃತ್ತಿಯು ಪಕ್ಷಿಯ ಜಾತಿಯಲ್ಲಿಯೂ ಕಂಡೂ ಬರುವುದು.


ಈ ಏಳು ಪ್ರವೃತ್ತಿಗಳಲ್ಲದೆ **ಕೃತಿ-ಪ್ರೇಮ, ಸಂಪಾದನಪ್ರವೃತ್ತಿ** ಇವು ಶಿಕ್ಷಕರ ಹಾಗು ಪಾಲಕರ ದೃಷ್ಟಿಯಿಂದ ಬಹಳ ಮಹತ್ವದವಿರುತ್ತವೆ. ಅವುಗಳ ವಿವರವು ಮುಂದೆ ಸ್ವತಂತ್ರ ಪ್ರಕರಣದಲ್ಲಿ ಬರುವುದು.

ಸಹಜಪ್ರವೃತ್ತಿಗಳು ಹುಟ್ಟಿದಂದಿನಿಂದಲೂ ಇರುವವು. ಆದರೆ ಬಾಲ್ಯದಲ್ಲಿಯೇ ಎಲ್ಲ ಪ್ರವೃತ್ತಿಗಳು ಕಾರ್ಯಪ್ರವರ್ತಕವಾಗಿರುವುದಿಲ್ಲ. ತೀರ ಚಿಕ್ಕ ಮಕ್ಕಳಲ್ಲಿ ಸ್ವಸಂರಕ್ಷಣ ಪೋಷಣಗಳಿಗೆ ಉಪಯೋಗವಾಗುವ ಅಳೋಣ, ಹಿಂದಕ್ಕೆ ಸರಿಯೋಣ, ಹಾಲು ಕುಡಿಯೋಣ ಮುಂತಾದ ಪ್ರವೃತ್ತಿಗಳು ವ್ಯಕ್ತವಾಗುವವು. ಹುಟ್ಟಿದ ಕೂಡಲೇ ಕೂಸು ತಾಯಿಯ ಮೊಲೆಕುಡಿಯುವುದು. ಬಿಸಿಯಾದ ಪದಾರ್ಥವು ಶರೀರಕ್ಕೆ ತಗಲಿದರೆ ಹಿಂದಕ್ಕೆ ಸರಿಯುವದು. ಹಸಿವೆಯಾದಕೂಡಲೇ ಅಳುವುದು. ಇವೆಲ್ಲ ಸಹಜಪ್ರವೃತ್ತಿಗಳೇ ಆಗಿವೆ.

ಮಕ್ಕಳು ತಮ್ಮ ಕೈಕಾಲು ಮೊದಲಾದ ಇಂದ್ರಿಯಗಳ ಉಪಯೋಗವನ್ನು ಮಾಡಲಾರಂಭಿಸಿದರೆಂದರೆ ಅವರಲ್ಲಿ ಒಂದೊಂದೇ ಸಹಜ ಪ್ರವೃತ್ತಿಯು ತೋರಲಾರಂಭಿಸುವುವು. ಸಾಂಘಿಕಪ್ರವೃತ್ತಿ, ಸಂಚಯ ಪ್ರವೃತ್ತಿ ಇವು ಕೌಮಾರಾವಸ್ಥೆಯಲ್ಲಿ ಅಂದರೆ ೧೨ ವರ್ಷದ ವಯಸ್ಸಿನಲ್ಲಿ ಕಂಡುಬರುವವು. ವಂಶವೃದ್ಧಿಯ ಪ್ರೀತಿಯು ಪ್ರೌಢ ವಯಸ್ಸಿನಲ್ಲಿ ಉತ್ಪನ್ನವಾಗುವುದು.

ಈ ಸಹಜ ಪ್ರವೃತ್ತಿಗಳಿಂದಲೇ ಮನುಷ್ಯನು ನಾನಾಪ್ರಕಾರದ ಪ್ರಯತ್ನಗಳನ್ನು ಮಾಡುತ್ತಿರುತ್ತಾನೆ. ಅವನ ಆಚಾರ ವಿಚಾರ ರೂಢಿಗಳು, ಸೇರಿಕೆಗಳು ಸಹಜ ಪ್ರವೃತ್ತಿಯ ಫಲಗಳಾಗಿವೆ. ಸಾರಾಂಶ, ಈ ಸಹಜಪ್ರವೃತ್ತಿಗಳು ಗಡಿಯಾಳಕ್ಕೆ ಮುಖ್ಯ ಸ್ಪ್ರಿಂಗು ಹೇಗೋ ಹಾಗೆ ಮನುಷ್ಯನಿಗೆ ಉಪಯುಕ್ತವಾದವುಗಳೆಂದು ಹೇಳಬಹುದು. ಸ್ಪ್ರಿಂಗು ಕೆಟ್ಟರೆ ಇಲ್ಲವೆ ನಷ್ಟವಾದರೆ ಗಡಿಯಾರವು ನಿಂತುಬಿಡುವುದು. ಅದೇ ಪ್ರಕಾರ ಮನುಷ್ಯ ಪ್ರಾಣಿಯ ಸಹಜಪ್ರವೃತ್ತಿಗಳು ನಷ್ಟವಾದರೆ ಅವನಿಂದ ಯಾವತರದ ಕಾರ್ಯಗಳೂ ಆಗುವ ಸಂಭವವಿಲ್ಲ.

ಈ ಸಹಜಪ್ರವೃತ್ತಿಗಳನ್ನು ಸಂಪೂರ್ಣವಾಗಿ ನಷ್ಟಮಾಡುವುದು ಅಥವಾ ಹತ್ತಿಕ್ಕುವುದು ಶಕ್ಯವಿಲ್ಲ. ಆದರೆ ಶಿಕ್ಷಣದಿಂದ ಈ ಪ್ರವೃತ್ತಿಗಳನ್ನು ಹಿತಕರವಾದ ಯೋಗ್ಯಮಾರ್ಗಕ್ಕೆ ತಿರುಗಿಸಿ ಮನುಷ್ಯನ ಜೀವನವು ಅವನ ಸ್ವಂತಕ್ಕೂ ಸಮಾಜಕ್ಕೂ ಉಪಯುಕ್ತವೂ ಸುಖ-ಕರವೂ ಆಗುವಂತೆ ಮಾಡುವುದು ಶಕ್ಯವಿರುವುದು. ಅದು ಮುಂದಿನ ಪ್ರಕರಣದಲ್ಲಿ ವಿವರಸಲ್ಪಡುವುದು.



# ೬ನೆಯ ಪ್ರಕರಣ

## ಶಿಕ್ಷಣವೂ ಸಹಜಪ್ರವೃತ್ತಿಗಳೂ

ಇಂದಿನ ಕಾಲದ ಶಿಕ್ಷಣ ಶಾಸ್ತ್ರಜ್ಞರು ವಿಷಯ ಜ್ಞಾನಕ್ಕೇ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟದ್ದರಿಂದ ಅವರು ಈ ಸಹಜ ಪ್ರವೃತ್ತಿಗಳಿಗೂ ಭಾವನೆಗಳಿಗೂ, ವಿಶೇಷ ಮಹತ್ವವನ್ನು ಕೊಟ್ಟಿರಲಿಲ್ಲ. ಇತ್ತೀಚೆಲಾಗಿ ಮಾನಸಶಾಸ್ತ್ರದಲ್ಲಿ ಹೊಸಹೊಸ ಶೋಧಗಳು ಆದದ್ದರಿಂದ ಶಿಕ್ಷಣದಲ್ಲಿಯೂ ಅನೇಕ ಸೌಕರ್ಯಗಳು ಉಂಟಾಗಿರುವುವು. ಚಿಕ್ಕಮಕ್ಕಳಿಗೆ ಶಿಕ್ಷಣಕೊಡುವ ಸುಲಭವಾದ ಮಾರ್ಗಗಳು ದೊರೆತಿರುವುವು. ಶಿಕ್ಷಣದಲ್ಲಿ ಮಕ್ಕಳ ಸಹಜ ಪ್ರವೃತ್ತಿಗಳನ್ನು ಉಪಯೋಗಿಸುವುದರಿಂದ ಅಂದರೆ ಆಯಾಭಾವನೆಗಳನ್ನು ಪ್ರಚೋದನಗೊಳಿಸುವುದರಿಂದ ಮಕ್ಕಳು ತಾವಾಗಿಯೇ ಕಾರ್ಯದಲ್ಲಿ ಪ್ರವೃತ್ತರಾಗುವರು. ಪ್ರತ್ಯಕ್ಷವಾದ ಆಚರಣೆಯಲ್ಲಿ ನೀನು ಹೀಗೆ ಮಾಡು, ನೀನು ಹೀಗೆ ಮಾಡಬೇಡ ಎಂದು ವಿಧಿನಿಷೇಧಪರವಾದ ಅಪ್ಪಣೆಗಳನ್ನು ಕೊಡುವುದರಿಂದ ಎಲ್ಲ ಕಾಲಕ್ಕೂ ಒಳ್ಳೇ ಪರಿಣಾಮವಾದೀತೆಂದು ಹೇಳಲಿಕ್ಕೆ ಬರುವಂತಿಲ್ಲ. ಮಕ್ಕಳು ನಮಗೆ ಬೇಡಾದ ಒಂದು ಕಾರ್ಯವನ್ನು ಮಾಡುತ್ತಿದ್ದರೆ ಅದನ್ನು ಮಾಡಬೇಡೆಂದು ಹೇಳಿದರೆ ಒಮ್ಮೊಮ್ಮೆ ಅವರು ಕೇಳಲಿಕ್ಕಿಲ್ಲ. ಅಂಥ ಪ್ರಸಂಗದಲ್ಲಿ ಬೇರೊಂದು ಪ್ರವೃತ್ತಿಯ ಭಾವನೆಗೆ ಪ್ರಚೋದನವನ್ನು ಕೊಟ್ಟು ಮತ್ತೊಂದು ಕಾರ್ಯದಲ್ಲಿ ತೊಡಗಿಸಿದರೆ ಆ ಹುಡುಗನು ಬೇಡಾದ ಕಾರ್ಯವನ್ನು ತಾನಾಗಿಯೇ ಬಿಟ್ಟು ಬಿಡುವನು. ಚಿಕ್ಕಮಗುವು ಹಟಮಾಡುತ್ತಿರುವಾಗ ಒಂದು ಸುಂದರವಾದ ಗೊಂಬೆಯನ್ನಾಗಲಿ, ಚಿತ್ರವನ್ನಾಗಲಿ ಅದರ ಕೈಯಲ್ಲಿ ಕೊಟ್ಟರೆ ಅದು ಅಳುವುದನ್ನು ಬಿಟ್ಟು ಸುಮ್ಮನಾಗುವುದು. ಇಲ್ಲಿ ಕುತೂಹಲ ಪ್ರವೃತ್ತಿಗೆ ಪ್ರಚೋದನ ಕೊಟ್ಟಂತಾಯಿತು.

ಚಿಕ್ಕಮಕ್ಕಳ ಶಿಕ್ಷಣಕಾರ್ಯದಲ್ಲಿ ಜಿಜ್ಞಾಸೆಯಷ್ಟು ಉಪಯುಕ್ತವಾದ ಪ್ರವೃತ್ತಿಯು ಬೇರೊಂದಿಲ್ಲ. ಆದಕಾರಣ ಶಿಕ್ಷಕರು ನಾನಾವಿಧ ಪ್ರಯತ್ನಗಳಿಂದ ಮಕ್ಕಳ ಮನಸಿನಲ್ಲಿ ಜಿಜ್ಞಾಸೆಯನ್ನು ಹುಟ್ಟಿಸಿ ಪಾಠದಲ್ಲಿ ಅವಧಾನವನ್ನು ಹುಟ್ಟಿಸತಕ್ಕದ್ದು. ನವನಿರ್ಮಿತಿ (ಕೃತಿಪ್ರೇಮ) ಈ ಪ್ರವೃತ್ತಿಯೂ ಪಾಠದಕಡೆಗೆ ಮಕ್ಕಳ ಲಕ್ಷವನ್ನು ಎಳೆದುಕೊಳ್ಳುವುದಕ್ಕೆ ಎರಡನೆಯ ಸಾಧನವಾಗಿದೆ. ಇದನ್ನು ಮುಂದಿನ ಪ್ರಕರಣದಲ್ಲಿ ಸ್ವತಂತ್ರವಾಗಿ ವಿವರಿಸಲಾಗಿದೆ. ಉಳಿದ ಕೆಲವು ಪ್ರವೃತ್ತಿಗಳು ನೈತಿಕ ದೃಷ್ಟಿಯಿಂದಲೂ ಸಾಮಾಜಿಕ ದೃಷ್ಟಿಯಿಂದಲೂ ಉಪಯುಕ್ತವಾಗಿರುವವು. ಅವುಗಳನ್ನು ಶಿಕ್ಷಣದಲ್ಲಿ ಉಪಯೋಗಿಸುವ ರೀತಿಯು ಈ ಪ್ರಕರಣದಲ್ಲಿ ವಿವರಿಸಲ್ಪಟ್ಟಿದೆ.

೧. **ಜಿಜ್ಞಾಸೆ:**—ಈ ಪ್ರವೃತ್ತಿಯಲ್ಲಿ 'ಕುತೂಹಲ' ಈ ಮನೋವಿಕಾರವಿರುತ್ತದೆ. ಮಕ್ಕಳು ಯಾವದಾದರೊಂದು ಹೊಸವಸ್ತುವನ್ನು ಇಲ್ಲವೆ ಸಂಗತಿಯನ್ನು ನೋಡುವರು; ಅದರ ಬಗ್ಗೆ ಅವರ ಮನಸ್ಸಿನಲ್ಲಿ ಕುತೂಹಲವು ಜಾಗೃತವಾಗುವುದು. ಆಗ ಅವರು ಇದು ಏನು, ಅದು ಏನು, ಅದು ಹೀಗೆ ಯಾಕೆ ಇತ್ಯಾದಿ ಪ್ರಶ್ನೆಗಳನ್ನು ಕೇಳಿ ಅದರ ವಿಷಯವಾಗಿ ಜ್ಞಾನ ಸಂಪಾದಿಸಲು ಇಚ್ಛಿಸುವರು. ಮತ್ತು ತಕ್ಕ ಪ್ರಯತ್ನಗಳನ್ನು ಮಾಡುವರು. ಇಚ್ಛಿಸಿದ ಜ್ಞಾನವು ದೊರಕಿದರೆ ಅವರ ಮನಸಿಗೆ ಬಹಳ ಆನಂದವಾಗುವುದು. ಈ ತರದ ಮಕ್ಕಳ ಪ್ರವೃತ್ತಿಗೆ ಶಿಕ್ಷಕರೂ ಪಾಲಕರೂ ಯೋಗ್ಯ ಉತ್ತೇಜನವನ್ನುಕೊಟ್ಟು, ಉತ್ತಮ ಮಾರ್ಗಕ್ಕೆ ಹಚ್ಚಿದರೆ ಮಕ್ಕಳ ಮನಸಿನಲ್ಲಿ ಜ್ಞಾನಸಂಪಾದನೆಯ ಉತ್ಸುಕತೆಯು (ಉತ್ಕಂಠೆಯು) ಸ್ಥಿರವಾಗುತ್ತ ಹೋಗುವುದು. ಚಿಕ್ಕವಯಸ್ಸಿನಲ್ಲಿ ಬಲವತ್ತರವಾಗಿರುವ ಈ ಪ್ರವೃತ್ತಿಯು ಸಾಲೆಯೊಳಗಿನ ಯಾಂತ್ರಿಕ ಅಭ್ಯಾಸಕ್ರಮದಿಂದ ದುರ್ಬಲವಾಗುವುದು. ಶಿಕ್ಷಕರ ಪ್ರತಿಒಂದು ಪಾಠವು ಮಕ್ಕಳಿಗೆ ಮನೋರಂಜಕವಾಗಿ ಹುಡುಗರ ಕುತೂಹಲವು ಬೆಳೆದು ಅದನ್ನು ತಿಳಿದುಕೊಳ್ಳಬೇಕೆಂಬ ಪ್ರಬಲವಾದ ಇಚ್ಛೆಯು ಹುಟ್ಟುವಂತೆ ಇರಬೇಕು; ಮಕ್ಕಳ ಮನಸಿನಲ್ಲಿ ವಿಷಯದ

ಅಭಿರುಚಿಯನ್ನು ಹುಟ್ಟಿಸಬೇಕು. ಆ ವಿಷಯದ ಜ್ಞಾನವನ್ನು ಹುಡುಗರು ಸ್ವಪ್ರಯತ್ನದಿಂದ ದೊರಕಿಸಬೇಕೆಂದು ಅವರು ಹುಡುಗರಿಗೆ ಉತ್ತೇಜನವನ್ನು ಕೊಡಬೇಕು. ಅವಶ್ಯವಾದ ಸಾಹಿತ್ಯಗಳನ್ನು ಒದಗಿಸಿಕೊಡಬೇಕು. ಅಗತ್ಯವಿದ್ದಲ್ಲಿ ಅವರಿಗೆ ಸಾಹಾಯ್ಯವನ್ನು ಮಾಡಬೇಕು. ಮತ್ತು ಮಕ್ಕಳು ದೊರಕಿಸಿದ ಜ್ಞಾನವನ್ನು ಉಪಯೋಗಿಸುವ ತಕ್ಕ ಸಂಧಿಯನ್ನು ಒದಗಿಸಿಕೊಡಬೇಕು. ಹೀಗೆ ಮಾಡುವುದರಿಂದ ಅವರ ಮನಸಿನಲ್ಲಿ ಜ್ಞಾನಲಾಲಸೆಯು ಜಾಗೃತವಾಗುವುದು. ರೂಢಿಯಿಂದ ಈ ಮನೋವೃತ್ತಿಯು ದೃಢವಾಯಿತೆಂದರೆ ಅವರ ಮುಂದಿನ ಆಯುಷ್ಯದಲ್ಲಿ ಈ ಉತ್ಸುಕತೆಯು ಬಲವತ್ತರವಾಗಿ ಜ್ಞಾನ ಪ್ರಾಪ್ತಿಯಿಂದಾಗುವ ಆನಂದವನ್ನು ಅನುಭವಿಸುವುದು ಅವರಿಗೆ ಶಕ್ಯವಾಗುವುದು.

ಶಿಕ್ಷಕರ ಹಾಗು ಪಾಲಕರ ಮನಸಿನಲ್ಲಿ ಈ ತರದ ಜ್ಞಾನ ಸಂಪಾದಿಸುವ ಪ್ರಬಲವಾದ ಉತ್ಕಂಠೆಯು ಇದ್ದರೆ ಮಾತ್ರ ಅದನ್ನು ಮಕ್ಕಳ ಮನಸಿನಲ್ಲಿ ಉತ್ಪನ್ನಮಾಡುವುದು ಶಕ್ಯವಾಗುವುದು. ಮಕ್ಕಳು ಆಗಾಗ್ಗೆ ಕೇಳುವ ಪ್ರಶ್ನೆಗಳಿಗೆ ಪಾಲಕರು ಹಾಗು ಶಿಕ್ಷಕರು ತಕ್ಕ ಉತ್ತರಗಳನ್ನು ಕೊಟ್ಟು ಅವರನ್ನು ಸಮಾಧಾನಪಡಿಸಬೇಕು. ಮಕ್ಕಳ ಸಲುವಾಗಿಯೇ ಬರೆಯಲ್ಪಟ್ಟ ಬೇರೆ ಬೇರೆ ವಿಷಯಗಳ ಮೇಲಿನ ಸುಲಭವೂ ಮನೋರಂಜಕವೂ ಆದ ಸಣ್ಣ ಸಣ್ಣ ಪುಸ್ತಕಗಳನ್ನು ಅವರಿಂದ ಓದಿಸಬೇಕು. ಹೊಲಗಳು, ತೋಟಗಳು, ಹೊಳೆಗಳು, ಸಮುದ್ರದ ದಂಡೆ, ವಸ್ತುಸಂಗ್ರಹಾಲಯ, ಪಶುಸಂಗ್ರಹಾಲಯ ಮುಂತಾದ ಸ್ಥಳಗಳನ್ನು ಮಕ್ಕಳಿಗೆ ತೋರಿಸಿ ಅವರ ಜಿಜ್ಞಾಸೆಯನ್ನು ಮತ್ತಿಷ್ಟು ಜಾಗೃತಗೊಳಿಸಬೇಕು. ಶಾಲೆಯಲ್ಲಿ ಶಿಕ್ಷಕರು ಮಕ್ಕಳಿಗೆ ಅವಶ್ಯವಿರುವ ಸಾಹಿತ್ಯಗಳನ್ನೂ ಪುಸ್ತಕ ನಕಾಶಗಳನ್ನೂ ಒದಗಿಸಿ ಕೊಟ್ಟು ಅವರಿಗೆ ಸ್ವಪ್ರಯತ್ನದಿಂದ ಜ್ಞಾನ ಸಂಪಾದಿಸಲಿಕ್ಕೆ ಉತ್ತೇಜನವನ್ನು ಕೊಡಬೇಕು.

ಶಿಕ್ಷಕರು ಪಾಠವನ್ನು ಕಲಿಸುವಾಗ ಎಲ್ಲ ಸಂಗತಿಗಳನ್ನು ತಾವೇ

ಹೇಳಿಬಿಡುವುದರಿಂದಲೂ, ಗಾರುಡಿಗನ ಆಟದಂತೆ ಎಲ್ಲ ಪ್ರಕಾರದ ಪ್ರಯೋಗಗಳನ್ನು ತಾವೇ ಮಾಡಿತೋರಿಸಿ ಮಕ್ಕಳ ಮನೋರಂಜನ ಮಾಡುವುದರಿಂದಲೂ ಅವರು ಸೋಮಾರಿಗಳಾಗುವರು. ಅವರಲ್ಲಿ ಜ್ಞಾನಸಂಪಾದಿಸಬೇಕೆಂಬ ಇಚ್ಛೆಯು ಉತ್ಪನ್ನವಾಗುವುದಿಲ್ಲ.

ಪ್ರತಿ ಒಬ್ಬ ಮನುಷ್ಯನಿಗೆ ಯಾವುದಾದರೊಂದು ವಿಷಯದ ಜ್ಞಾನವನ್ನು ಸಂಪಾದಿಸಬೇಕೆಂಬ ಪ್ರಬಲವಾದ ಇಚ್ಛೆಯು ಇರತಕ್ಕದ್ದು. ಬಿಡುವಿನ ವೇಳೆಯನ್ನು ಆ ವಿಷಯದ ಸತತ ವ್ಯಾಸಂಗದಲ್ಲಿ ಕಳೆಯಬೇಕು. ಅದರಿಂದ ಅವನಿಗೆ ಬಹಳ ಹಿತವಾಗುವುದು.

ಪಾಶ್ಚಿಮಾತ್ಯ ಪ್ರಸಿದ್ಧ ಶಾಸ್ತ್ರಜ್ಞರಲ್ಲಿ ಎಷ್ಟೋ ಜನರು ತೀರ ಬಡತನದ ಸ್ಥಿತಿಯಲ್ಲಿ ಹುಟ್ಟಿದ್ದರು; ಬಡತನದ ಮೂಲಕ ಚಿಕ್ಕಂದಿನಲ್ಲಿಯೇ ಅವರು ಸಾಲೆಯನ್ನು ಬಿಟ್ಟು ಹೊಟ್ಟೆಯ ಉದ್ಯೋಗವನ್ನು ಕೈಕೊಳ್ಳಬೇಕಾಯಿತು. ಆದರೆ ಅವರ ಮನಸಿನಲ್ಲಿ ಜ್ಞಾನಲಾಲಸೆಯು ಒಳ್ಳೇ ಬಲವತ್ತರವಾಗಿದ್ದ ಮೂಲಕ ಅವರು ತಮ್ಮ ಬಿಡುವಿನ ವೇಳೆಯನ್ನು ಜ್ಞಾನಾರ್ಜನೆಯಲ್ಲಿ ಕಳೆದು ತಮ್ಮ ಪ್ರೀತಿಯ ವಿಷಯದ ಅಭ್ಯಾಸವನ್ನು ಮಾಡಿ ಅದರಲ್ಲಿ ಪ್ರಗತಿಯನ್ನು ಸಂಪಾದಿಸಿದರು. ಅವರು ತಮ್ಮ ಬುದ್ಧಿ ಕೌಶಲ್ಯದಿಂದಲೂ, ಸತತ ವ್ಯಾಸಂಗದಿಂದಲೂ, ಅಲ್ಪಕಾಲದಲ್ಲಿಯೇ ಶಾಸ್ತ್ರಜ್ಞರೆಂದು ಹೆಸರು ಪಡೆದರು.

೨. **ಪಲಾಯನ ಪ್ರವೃತ್ತಿ:—** ಈ ಪ್ರವೃತ್ತಿಯಲ್ಲಿ 'ಭೀತಿ' ಈ ಮನೋವಿಕಾರವಿರುತ್ತದೆ. ಹುಡುಗರು ದೊಡ್ಡವರಾದಂತೆ ಅವರಲ್ಲಿ ವಾಸಮಾಡಿಕೊಂಡಿರುವ ಭೀತಿಯು ಕಡಿಮೆಯಾಗಲಿಕ್ಕೆಬೇಕು. ಭೀತಿಯು ದುರ್ಗುಣವಾಗಿದೆ. ಶಿಕ್ಷಕರೂ ಪಾಲಕರೂ ಮಕ್ಕಳ ಭೀತಿಯನ್ನು ಕಳೆಯುವ ಪ್ರಯತ್ನವನ್ನು ಮಾಡಬೇಕು. ಮಕ್ಕಳು ಕಗ್ಗತ್ತಲೆಯಲ್ಲಿ ಅಂಜುತ್ತಿದ್ದರೆ ಅಲ್ಲಿ ದೀಪವನ್ನು ಹಚ್ಚಿ ಅಂಜಿಸುವ ಪದಾರ್ಥವೇನೂ ಇಲ್ಲೆಂದು ತೋರಿಸಿಕೊಡಬೇಕು. ಬಾವಾ ಬಂತೆಂದು ಚಿಕ್ಕಮಕ್ಕಳನ್ನು ಎಂದೂ ಅಂಜಿಸಬಾರದು. ಪ್ರತ್ಯಕ್ಷ ವಸ್ತುವಿನ ಭೀತಿಗಿಂತ ಕಾಲ್ಪನಿಕ ವಸ್ತುಗಳ ಭೀತಿಯು ಬಹಳ ಕಷ್ಟಕ್ಕೆ ಗುರಿ

ಮಾಡುವುದು. ಮಕ್ಕಳು ಕಲ್ಪನಾಶಕ್ತಿಯಿಂದ ಬಾವಾಸ ಚಿತ್ರವನ್ನು ತಮ್ಮ ಮನಸಿನಲ್ಲಿ ಮೂಡಿಸಿಕೊಳ್ಳುವರು; ಅದರಿಂದ ಕತ್ತಲೆಯ ಪ್ರತಿ ಒಂದು ಸ್ಥಳದಲ್ಲಿ ಅವರ ಕಣ್ಣಿಗೆ ಬಾವಾನು ಕಾಣಿಸಹತ್ತುವನು.

ಮಕ್ಕಳಲ್ಲಿ ವಿಚಾರಶಕ್ತಿಯು ಕಡಿಮೆ ಇರುವುದರಿಂದ ಅವರ ಶರೀರಕ್ಕೆ ಅಪಾಯ:ವಾಗುವ ಅನೇಕ ಪ್ರಸಂಗಗಳು ಒದಗುವ ಸಂಭವ ವುಂಟು. ಈ ಅಪಘಾತಗಳಿಂದ ಭೀತಿಯು ಅವರನ್ನು ರಕ್ಷಿಸುವುದು.

ಮನುಷ್ಯನು ಒಳ್ಳೇ ಬುದ್ಧಿವಂತ ಪ್ರಾಣಿಯು, ಅವನು ಜಗತ್ತಿನಲ್ಲಿ ಅನೇಕ ಪ್ರಕಾರದ ಕರ್ತವ್ಯಗಳನ್ನು ಮಾಡಬೇಕಾಗುವುದು. ಅವನು ತನ್ನ ಕುಟುಂಬದಲ್ಲಿಯೂ ಸಮಾಜದಲ್ಲಿಯೂ ರಾಷ್ಟ್ರದಲ್ಲಿಯೂ ನಡಕೊಳ್ಳಬೇಕಾಗುವುದು. ಆತನ ಸೌಖ್ಯವು ಇವೆಲ್ಲವುಗಳ ಸೌಖ್ಯವನ್ನು ಅವಲಂಬಿಸಿರುವುದು. ಆದುದರಿಂದ ಭೀತಿ ಈ ಮನೋವಿಕಾರಕ್ಕೆ ಬೇರೆ ಮಾರ್ಗವನ್ನು ತೋರಿಸಬೇಕಾಗುವುದು. ಭೀತಿಯ ಕಾರಣವು ನಿಷ್ಕಾರಣವಾದದ್ದಿದ್ದರೆ ಅಂಥ ಭೀತಿಯನ್ನು ನಷ್ಟಪಡಿಸತಕ್ಕದ್ದು. ಸಣ್ಣಮಕ್ಕಳ ಸುತ್ತುಮುತ್ತಲಿನ ವಾತಾವರಣವು ಪ್ರೇಮದ್ದಿರಬೇಕು. ಮನೆಯಲ್ಲಿಯೂ ಶಾಲೆಯಲ್ಲಿಯೂ ಶಿಸ್ತು ಚೆನ್ನಾಗಿರಬೇಕು. ತಾಯಿ ತಂದೆಗಳ ಬಗ್ಗೆಯೂ, ಶಿಕ್ಷಕರ ಬಗ್ಗೆಯೂ ಪ್ರೇಮವಿರಲಿಕ್ಕೆಬೇಕು. ಅದರಿಂದ ಮಕ್ಕಳು ಇಂಥದೊಂದು ಅಯೋಗ್ಯ ಕೆಲಸವನ್ನು ಮಾಡಿದರೆ ಗುರುಹಿರಿಯರು ಏನು ಅಂದಾರೆಂಬ ಹೆದರಿಕೆಯಿಂದ ಅವರು ಅಯೋಗ್ಯ ಕೆಲಸಗಳನ್ನು ಮಾಡುವುದಿಲ್ಲ. ಮುಂದೆ ಸದಸದ್ವಿಚಾರ ಶಕ್ತಿಯು ಬೆಳೆದ ಮೇಲೆ ಚಲೋದು ಯಾವದು, ಕೆಡಕು ಯಾವದು, ಎಂಬುದು ಅವರಿಗೇ ತಿಳಿಯ ಹತ್ತುವುದು. ಅವರ ಸ್ವಾಭಿಮಾನವು ಜಾಗೃತವಾಗುವುದು. ಅವರ ನೈತಿಕ ಮನೋವೃತ್ತಿಗಳು ಬಲಿಷ್ಠವಾಗುವವು. ಸೃಷ್ಟಿಕರ್ತನ ವಿಷಯವಾಗಿ ಅಂತಃಕರಣದಲ್ಲಿ ಪೂಜ್ಯಬುದ್ಧಿಯು ಉತ್ಪನ್ನವಾಗುವುದು. ಪಾಪ ಪುಣ್ಯಗಳ ತಿಳುವಳಿಕೆಯು ಹುಟ್ಟುವುದು. ಆಗಅವನು ಕೆಟ್ಟಕೆಲಸಗಳಿಂದ ನಗೆಗೇಡು, ಮನಸಿನ ಚುಚ್ಚುವಿಕೆ, ದೇವರಕೋಪ, ಈ ಮೂರು ಸಂಗತಿಗಳಿಗೆ ಅಂಜಿಕೊಂಡು ನಡೆಯುವನು. ಈ ಮೇರೆಗೆ

ಸುಶಿಕ್ಷಿತರಾದ ತಾಯಿತಂದೆಗಳ ಸಹವಾಸದಲ್ಲಿ ಬೆಳೆದ ಮಕ್ಕಳ ಭೀತಿಗೆ ಯೋಗ್ಯಮಾರ್ಗವು ದೊರಕುವದು. ಭೀತಿ ಈ ಮನೋವಿಕಾರಕ್ಕೆ ಯೋಗ್ಯಮಾರ್ಗಕ್ಕೆ ಹಚ್ಚುವುದಕ್ಕಾಗಿ ಕೆಳಗೆ ಹೇಳಿದಂತೆ ಕೆಲಸ ಮಾಡಬೇಕು.

**೧. ಮಕ್ಕಳ ಜ್ಞಾನವನ್ನು ಬೆಳಿಸಬೇಕು. ಅವರಿಗೆ ನಿಷ್ಕಾರಣವಾಗಿ ತೋರುವ ಭೀತಿಯನ್ನು ನಾಶಪಡಿಸಬೇಕು. ಧೈರ್ಯಶಾಲಿಗಳ ಚರಿತ್ರವನ್ನು ಓದಿಸಬೇಕು.**

**೨. ಮಕ್ಕಳಿಗೆ ಧೈರ್ಯದಿಂದ ಸಂಕಟಕ್ಕೆ ಇದಿರಾಗುವು ದನ್ನು ಕಲಿಸಬೇಕು. ಮನೆಯ ಹಾಗು ಶಾಲೆಯ ವಾತಾವರ ಣವು ಪ್ರೇಮದ್ದಿರಬೇಕು; ಮತ್ತು ಎರಡೂ ಕಡೆಗೆ ಶಿಸ್ತು ಚೆನ್ನಾಗಿರಬೇಕು.**

**೩. ಮಕ್ಕಳ ವಿಚಾರ ಶಕ್ತಿಯನ್ನು ಬೆಳಿಸಬೇಕು. ಅವರ ನೈತಿಕ ಶಕ್ತಿಗಳನ್ನೂ ವಿಕಾಸಗೊಳಿಸಬೇಕು. ಅವರ ಸ್ವಾಭಿ ಮಾನವನ್ನು ಜಾಗೃತಗೊಳಿಸಬೇಕು.**

ಭೀತಿಯ ವಿಷಯವಾಗಿ ಒಂದು ಗ್ರಂಥದಲ್ಲಿ ಕೆಳಗೆ ಕೊಟ್ಟ ಕಥೆಯು ಉಂಟು. ಒಂದು ದಿನ ಒಬ್ಬ ಮುದುಕನು ಅಡವಿಯೊಳಗಿನ ದಾರಿಯಿಂದ ಬೇರೂರಿಗೆ ಹೋಗುತ್ತಿದ್ದನು. ಅವನ ಬೆರಳೊಳಗೆ ಒಂದು ವಜ್ರದ ಉಂಗುರವಿತ್ತು. ಆ ದಾರಿಯಲ್ಲಿ ಜನರ ಓಡಾಟವು ವಿಶೇಷವಾಗಿದ್ದಿಲ್ಲ. ದಾರಿಯಲ್ಲಿ ಆ ಮುದುಕನಿಗೆ ಒಬ್ಬ ಮನುಷ್ಯನು ಇದಿರಾದನು. ಮುದುಕನ ಕೈಯೊಳಗಿನ ಉಂಗುರವು ಅವನ ಕಣ್ಣಿಗೆ ಬಿತ್ತು. ಕೂಡಲೆ ಅವನು ಮುದುಕನನ್ನು ಹಿಡಿದು ಆ ಉಂಗುರವನ್ನು ಬಲಾತ್ಕಾರದಿಂದ ಕಸಿದುಕೊಳ್ಳಬೇಕೆಂದು ನಿಶ್ಚಯಿಸಿದನು. ಅಷ್ಟರಲ್ಲಿ ಅವನಿಗೆ ಪೋಲೀಸರ ಸೀಟಿಯ ಸಪ್ಪಳವು ಕೇಳಿಸಿತು. ಕೂಡಲೆ ಅವನು ಹೆದರಿ ಆ ಮುದುಕನನ್ನು ಬಿಟ್ಟು ತನ್ನ ದಾರೀ ಹಿಡಿದು ನಡೆದನು. ಮುಂದೆ ಹೋಗುವಷ್ಟರಲ್ಲಿ ಆ ಮುದುಕನಿಗೆ ಮತ್ತೊಬ್ಬ ಮನುಷ್ಯನು ಇದಿರಾದನು. ಅವನ ಮನಸಿನಲ್ಲಿಯೂ ಮುದುಕನ ಉಂಗುರವನ್ನು

ಕಸಿದುಕೊಳ್ಳಬೇಕೆಂಬ ವಿಚಾರವು ಬಂದಿತು. ಆದರೆ ತತ್ಕಾಲಕ್ಕೆ ಅವನ ಮನಸಿನಲ್ಲಿ ಸದಸದ್ವಿವೇಕವು ಜಾಗೃತವಾಗಿ, ಈ ಉಂಗುರವನ್ನು ನಾನು ತೆಗೆದುಕೊಂಡರೆ, ಈ ಸುದ್ದಿಯು ನಾಳೆ ಜನರಲ್ಲಿ ಪ್ರಸಾರ ವಾಗುವುದು; ಅದರಿಂದ ಸಮಾಜದಲ್ಲಿ ನನಗೆ ಅಪಮಾನವಾಗುವುದು. ಈ ಭೀತಿಯು ಅವನ ಮನಸಿನಲ್ಲಿ ಉತ್ಪನ್ನವಾಯಿತು. ಆದರಿಂದ ಅವನು ಆ ಉಂಗುರವನ್ನು ಕಸಿದುಕೊಳ್ಳುವ ವಿಚಾರವನ್ನು ಬಿಟ್ಟು ತನ್ನ ದಾರೀ ಹಿಡಿದು ನಡೆದನು. ಮುಂದೆ ಕೆಲವು ಹೊತ್ತಿನ ಮೇಲೆ ಮೂರನೆಯವನೊಬ್ಬನು ಆ ಮುದುಕನಿಗೆ ಇದಿರಾದನು. ಅವನಿಗೂ ಆ ಉಂಗುರವನ್ನು ಕಸಿದುಕೊಳ್ಳುವ ದುರ್ಬುದ್ಧಿಯು ಹುಟ್ಟು ಹುಟ್ಟು ವಷ್ಟರಲ್ಲಿ ಆ ವಿಚಾರವನ್ನೇ ಅವನು ತನ್ನ ಮನಸಿನೊಳಗಿಂದ ಕಿತ್ತು ಹಾಕಿದನು. ಆಗ ಅವನು ತನ್ನ ಮನಸಿನಲ್ಲಿ ಅಂದದ್ದೇನಂದರೆ:— "ನಾನು ಈಗ ಈ ಮುದುಕನ ಉಂಗುರವನ್ನು ತಕ್ಕೊಂಡರೆ ಇದು ಅಯೋಗ್ಯ ಕೆಲಸವಾಗುವುದು. ಆದರಿಂದ ನನ್ನ ಮನಸ್ಸು ನನ್ನನ್ನೇ ದಿನಾಲು ತಿನ್ನಹತ್ತುವುದು; ಅದರಿಂದ ನನಗೆ ಊಟವು ರುಚಿ ಹತ್ತಲಿಕ್ಕಿಲ್ಲ. ರಾತ್ರಿ ನಿದ್ರೆ ಹತ್ತಲಿಕ್ಕಿಲ್ಲ. ನನ್ನ ಈ ಕೃತಿಯು ದೇವರ ಮನಸಿಗೆ ಬರುವದಿಲ್ಲ" ಹೀಗೆಂದು ಆಲೋಚಿಸಿ ಆ ಮುದುಕನಿಗೆ ನಮಸ್ಕಾರ ಮಾಡಿ ಮುಂದಕ್ಕೆ ಸಾಗಿದನು. ಈ ಕಥೆಯಲ್ಲಿ ಭೀತಿಯ ಮೂರೂ ಪ್ರಕಾರಗಳು ತೋರಿಸಲ್ಪಟ್ಟಿರುವುವು. ಶಾರೀರಿಕ ಭೀತಿ, ಸಾಮಾಜಿಕ ಭೀತಿ, ನೈತಿಕ ಭೀತಿ ಇವುಗಳಲ್ಲಿ ನೈತಿಕ ಭೀತಿಯು ಶ್ರೇಷ್ಠವಾದದ್ದೆಂಬುದು ಸಹಜವು. ಗೃಹಶಿಕ್ಷಣದಿಂದಲೂ, ಸಾಲೆ ಯೊಳಗಿನ ಶಿಕ್ಷಣದಿಂದಲೂ ಈ ನೈತಿಕ ಭೀತಿಯನ್ನು ಮಕ್ಕಳ ಮನಸಿ ನಲ್ಲಿ ಹುಟ್ಟಿಸಲಿಕ್ಕೆ ಬೇಕು.

೪. **ಜುಗುಪ್ಸಾ:—** ಈ ಪ್ರವೃತ್ತಿಯಲ್ಲಿ 'ತಿರಸ್ಕಾರ' ಈ ಮನೋವಿಕಾರವಿರುತ್ತದೆ. ಈ ಪ್ರವೃತ್ತಿಗೆ ಅಂದರೆ ಅದರಲ್ಲಿರುವ ಮನೋವಿಕಾರಕ್ಕೆ ಭೀತಿಯಂತೆಯೇ ಶಿಕ್ಷಣವನ್ನು ಕೊಡಬೇಕು. ಮಕ್ಕಳಲ್ಲಿ ಜ್ಞಾನವನ್ನು ಬೆಳಿಸಬೇಕು. ಶಾಲೆಯಲ್ಲಿಯೂ ಮನೆಯಲ್ಲಿಯೂ

ಸುವ್ಯವಸ್ಥೆಯನ್ನು ಕಾಯ್ದುಕೊಳ್ಳಬೇಕು. ಅವೆರಡರಲ್ಲಿಯೂ ಶಿಸ್ತು ಚೆನ್ನಾಗಿರಬೇಕು. ಪಾಲಕರೂ ಶಿಕ್ಷಕರೂ ಮಕ್ಕಳಿಗೆ ನೈತಿಕ ಶಿಕ್ಷಣ ವನ್ನು ಕೊಡಬೇಕು. ಸ್ವಾರ್ಥತ್ಯಾಗ, ಶೌರ್ಯ, ಸತ್ಯಪಾಲನ, ಸಮಾಜಸೇವೆಯ ಪ್ರೇಮ ಇತ್ಯಾದಿ ಸದ್ಗುಣಗಳುಳ್ಳ ಸ್ತ್ರೀಪುರುಷರ ಕಥೆಗಳನ್ನು ಮಕ್ಕಳಿಗೆ ಹೇಳಬೇಕು. ಆದರಿಂದ ಅವರ ಮನಸಿನಲ್ಲಿ ಅಸತ್ಯ ಅಂಜುಬುರಕತನ, ಅಪ್ರಾಮಾಣಿಕತನ ನೀಚವೃತ್ತಿ ಇವುಗಳ ಬಗ್ಗೆ ತಿರಸ್ಕಾರವು ಉತ್ಪನ್ನವಾಗುವುದು. ಈ ದುರ್ಗುಣಗಳಿಂದ ಅವರು ದೂರದಲ್ಲಿ ಇರಲಿಕ್ಕೆ ಪ್ರಯತ್ನ ಮಾಡುವರು. ಅದೇ ಪ್ರಕಾರ ಸಾಲೆಯೊಳಗಿನ ಮನೆಯೊಳಗಿನ ಉತ್ತಮತರದ ಶಿಸ್ತು ವ್ಯವಸ್ಥೆಗಳಿಂದ ಅಸ್ವಚ್ಛತೆ, ಅವ್ಯವಸ್ಥೆ, ಅನಿಯಮಿತತನ ಇವುಗಳ ಸಲುವಾಗಿಯೂ ಮಕ್ಕಳ ಮನಸಿನಲ್ಲಿ ತಿರಸ್ಕಾರವು ಉತ್ಪನ್ನವಾಗುವುದು. ಹೊಲಸು ಪದಾರ್ಥಗಳ ಬಗ್ಗೆ ಮನುಷ್ಯರಿಗೆ ಹೇಗೆ ತಿರಸ್ಕಾರವು ಹುಟ್ಟುವುದೋ ಅದೇ ಪ್ರಕಾರ ಕೆಟ್ಟ ಆಚಾರ ವಿಚಾರಗಳ ಬಗ್ಗೆಯೂ ತಿರಸ್ಕಾರವು ಹುಟ್ಟತಕ್ಕದ್ದು.

೫. **ಯುದ್ಧಪ್ರವೃತ್ತಿ :—** ಈ ಪ್ರವೃತ್ತಿಯಲ್ಲಿ 'ಸಿಟ್ಟು' ಈ ಮನೋವಿಕಾರವಿರುತ್ತದೆ. ಈ ಪ್ರವೃತ್ತಿಯು ಮನುಷ್ಯನಲ್ಲಿರದಿದ್ದರೆ ಅಥವಾ ದುರ್ಬಲವಾಗಿದ್ದರೆ ಆ ಮನುಷ್ಯನ ಆಯುಷ್ಯವು ಅತ್ಯಂತ ದುಃಖಮಯವಾಗುವುದು. ಅವನಿಂದ ಸಮಾಜಕ್ಕೆ ಉಪಯೋಗ ವೇನೂ ಆಗುವುದಿಲ್ಲ. ಕಾಡು ಜನರ ಸಮಾಜದಲ್ಲಿ ಈ ಯುದ್ಧ ಪ್ರವೃತ್ತಿಯು ವಿಶೇಷವಾಗಿರುವುದು. ಅವರು ತೀರ ಕ್ಷುಲ್ಲಕ ಕಾರಣ ಗಳ ಸಲುವಾಗಿ ಯುದ್ಧ ಮಾಡುವರು. ಸಮಾಜವು ಹೆಚ್ಚು ಹೆಚ್ಚು ಸುಧಾರಣೆ ಹೊಂದಿದಂತೆ ಸಿಟ್ಟು ಈ ಮನೋವಿಕಾರಕ್ಕೆ ಶಿಕ್ಷಣವು ದೊರೆಯುವುದು; ಸುಧಾರಿಸಿದ ಸಮಾಜವನ್ನು ಪ್ರತಿ ಒಬ್ಬ ವ್ಯಕ್ತಿಯು ತನ್ನ ಮನಸ್ಸನ್ನು ಆಧೀನದಲ್ಲಿಟ್ಟುಕೊಳ್ಳಬೇಕಾಗುವುದು. ದುರ್ಬಲರ ಮೇಲಾಗುವ ಅನ್ಯಾಯ, ಅನೀತಿಯ ವರ್ತನ, ಧರ್ಮದ ಹೆಸರಿನ ಮೇಲೆ ಬಡ ಜನರಿಗೆ ಆಗುವ ತಾಪ ಇವೇ ಮೊದಲಾದವು

ಗಳು ಸುಶಿಕ್ಷಿತರ ಮನಸಿನಲ್ಲಿ ಸಿಟ್ಟು ಉತ್ಪನ್ನ ಮಾಡುವ ಸಂಗತಿಗಳಾಗಿವೆ.

ಹುಡುಗರು ದೊಡ್ಡವರಾದಂತೆ ಅವರು ತಮ್ಮ ಸಿಟ್ಟನ್ನು ಬಿಗಿ ಹಿಡಿಯಲಿಕ್ಕೆ ಕಲಿತುಕೊಳ್ಳಬೇಕು. ಕುಟುಂಬದೊಳಗಿನ ಜನರು ಯಾರೂ ತಮ್ಮ ಕಡೆಗೆ ಲಕ್ಷ್ಯಕೊಡುವುದಿಲ್ಲ ; ಇದಲ್ಲದೆ ನಾವು ಸಿಟ್ಟಾದದ್ದರಿಂದ ನಮಗೆ ಬೇಕಾದ ವಸ್ತುವು ದೊರಕಲಿಲ್ಲ ; ನಮ್ಮ ಸಿಟ್ಟಿನ ಮೂಲಕ ನಮ್ಮ ತಾಯಿತಂದೆಗಳ ಪ್ರೀತಿಯೂ ನಮ್ಮ ಮೇಲೆ ಕಡಿಮೆಯಾಯಿತು ; ಇತ್ಯಾದಿ ಸಂಗತಿಗಳು ಹುಡುಗರಿಗೆ ತಿಳಿದರೆ ಅವರ ಸಿಟ್ಟು, ಹಾಗು ಅದರಿಂದ ಉತ್ಪನ್ನವಾಗುವ ಯುದ್ಧ ಪ್ರವೃತ್ತಿಯು ಬಹುಮಟ್ಟಿಗೆ ತನ್ನಿಂದ ತಾನೇ ಕಡಿಮೆಯಾಗುವುದು. ಹುಡುಗರು ದೊಡ್ಡವರಾದಂತೆ ಸಮಾಜದಲ್ಲಿ ನಡೆಯುವ ಪ್ರಸಂಗಗಳು ಒದಗುವುವು. ಆಗ ಅವರು ತಮ್ಮ ಮನಸ್ಸನ್ನು ಆಧೀನದಲ್ಲಿಟ್ಟು ಕೊಳ್ಳಬೇಕಾಗುವುದು. ಆಗ ಕ್ಷುಲ್ಲಕ ಸಂಗತಿಗಳ ಸಲುವಾಗಿ ಅವರಿಗೆ ಸಿಟ್ಟು ಬರುವುದಿಲ್ಲ. ಬಂದರೂ ಅದನ್ನು ವ್ಯಕ್ತಪಡಿಸುವುದಿಲ್ಲ. ಶಾಂತ ರೀತಿಯಿಂದ ವಿಚಾರ ಮಾಡಿ ಸಿಟ್ಟು ತರಿಸುವ ಸಂಗತಿಯ ಪ್ರತೀಕಾರ ಮಾಡುವುದಕ್ಕೆ ಉಪಾಯವನ್ನು ಹುಡುಕುವರು. ಶಿಸ್ತಿನ ವಿರುದ್ಧ ವಾಗಿ ನಡೆದದ್ದರ ಸಲುವಾಗಿಯೂ, ಅನೀತಿಯ ಕೆಲಸದ ಸಲು ವಾಗಿಯೂ, ಅನ್ಯಾಯದ ಸಲುವಾಗಿಯೂ ನಿಷ್ಕಾರಣವಾಗಿ ಆದ ತನ್ನ ಅಪಮಾನದ ಸಲುವಾಗಿಯೂ ಹುಡುಗರ ಮನಸಿನಲ್ಲಿ ಸಿಟ್ಟು ಉತ್ಪನ್ನ ವಾಗಲಿಕ್ಕೆ ಬೇಕು. ಕೋಪವು ಬರಿಯ ಪ್ರಕ್ಷುಬ್ಧವಾದರೆ ಏನು ಪ್ರಯೋಜನವು ? ಅದರ ಪ್ರೇರಣೆಯಿಂದ ಸಿಟ್ಟು ತರಿಸುವ ಸಂಗತಿಯ ಪ್ರತೀಕಾರ ಮಾಡುವ ಪ್ರವೃತ್ತಿಯು ಬಲವತ್ತರವಾಗಿರಬೇಕು.

ಮಕ್ಕಳ ಸಿಟ್ಟಿನಿಂದಲೂ ಯುದ್ಧ ಪ್ರವೃತ್ತಿಯಿಂದಲೂ, ಶಿಕ್ಷಕ ರಿಗೂ ಪಾಲಕರಿಗೂ ಬಹಳ ತಾಪವಾಗುವುದು. ಯಾಕಂದರೆ ಮಕ್ಕಳ ಆ ಪ್ರವೃತ್ತಿಯಿಂದ ಅವರ ಕೆಲಸಕ್ಕೆ ಬಹಳ ತೊಂದರೆಯಾಗುವುದು. ಅದರಿಂದ ಅವರು ಆ ಪ್ರವೃತ್ತಿಗಳನ್ನು ಹತ್ತಿಕ್ಕಲು ಪ್ರಯತ್ನಮಾಡು

ವರು. ಹಾಗೆ ಮಾಡುವುದು ಸರಿಯಲ್ಲ. ಯಾವ ಹುಡುಗನಿಗೆ ಸಿಟ್ಟು ಬರುವುದಿಲ್ಲವೋ, ಬಂದರೂ ಕೂಡ ಯುದ್ಧ ಪ್ರವೃತ್ತಿಯು ಜಾಗೃತ ವಾಗುವುದಿಲ್ಲವೋ ಆ ಹುಡುಗನ ಶರೀರ ಪ್ರಕೃತಿಯೂ ಪ್ರವರ್ತಕ ಶಕ್ತಿಯೂ ಅತ್ಯಂತ ದುರ್ಬಲವಾಗಿದೆ ಎಂದು ಹೇಳಬಹುದು. ಇಂಥ ಹುಡುಗರಿಂದ ಮುಂದೆ ಯಾವ ಮಹತ್ಕಾರ್ಯಗಳೂ ಆಗುವ ಸಂಭವ ವಿಲ್ಲ. ಆದಕಾರಣ ಮಕ್ಕಳ ಸಿಟ್ಟು, ಹಾಗು ಯುದ್ಧ ಪ್ರವೃತ್ತಿಗಳಿಗೆ ಶಿಕ್ಷಣದಿಂದ ಯೋಗ್ಯ ಮಾರ್ಗಕ್ಕೆ ಹಚ್ಚುತಕ್ಕದ್ದು ಅದರಿಂದ ಪ್ರಯೋಜನವಾಗುವುದು ; ಇಲ್ಲದಿದ್ದರೆ ಬಹಳ ಹಾನಿಯಾಗುವುದು.

**ಆತ್ಮಪ್ರೌಢಿಯ ಪ್ರವೃತ್ತಿಯು:**—ಈ ಪ್ರವೃತ್ತಿಯಲ್ಲಿ 'ಗರ್ವ' ಇಲ್ಲವೆ 'ಡೌಲು' ಈ ಮನೋವಿಕಾರಗಳಿರುತ್ತವೆ. ಈ ಪ್ರವೃತ್ತಿಗೆ ಯೋಗ್ಯ ಶಿಕ್ಷಣ ದೊರೆತು ಸ್ವಾಭಿಮಾನವು ಅವರ ಮನಸಿನಲ್ಲಿ ದೃಢ ವಾದರೆ ಅದರಿಂದ ವ್ಯಕ್ತಿಗೂ ಸಮಾಜಕ್ಕೂ ಬಹಳ ಲಾಭವಾಗುವುದು. ಚಿಕ್ಕಮಕ್ಕಳಲ್ಲಿ ತಮ್ಮ ಅರಿವೆ-ಅಂಚಡಿಗಳ ಬಗ್ಗೆ ಬುದ್ಧಿಚಾತುರ್ಯದ ಪ್ರದರ್ಶನವನ್ನು ಮಾಡುವ ಉತ್ಸಾಹವು ಆಗಾಗ್ಗೆ ಕಂಡುಬರುವುದು. "ಇಗೋ ನೋಡು ನನ್ನ ಟೊಪ್ಪಿಗೆಯು ಎಷ್ಟು ಚಂದವಾಗಿದೆ! ಇಗೋ, ನಾನು ಎಷ್ಟು ದೂರ ಜಿಗಿಯುತ್ತೇನೆ" ಇತ್ಯಾದಿ ಅವರ ಉದ್ಗಾರಗಳು ಈ ಪ್ರವೃತ್ತಿಯ ನಿದರ್ಶಕವಾಗಿರುತ್ತವೆ. ವರ್ಗದಲ್ಲಿ ಕೂಡ ಮಕ್ಕಳು "ನಾನು ಹೇಳುತ್ತೇನೆ" "ಕರೇ ಹಲಗೆಯ ಮೇಲೆ ನಾನು ಬರೆಯುತ್ತೇನೆ" ಇತ್ಯಾದಿ ಶಿಕ್ಷಕರ ಮುಂದೆ ಬಂದು ಹೇಳು ತ್ತಿರುತ್ತಾರೆ. ಈ ಮಾತುಗಳಿಂದಲೂ ಅವರು ತಮ್ಮ ಬುದ್ಧಿಕೌಶಲ್ಯದ ಪ್ರದರ್ಶನ ಮಾಡುವ ಪ್ರವೃತ್ತಿಯು ವ್ಯಕ್ತವಾಗುವುದು. ಶಿಕ್ಷಕರು ನಿರ್ದಯತನದಿಂದ ಮಕ್ಕಳ ಈ ಪ್ರವೃತ್ತಿಯನ್ನು ಹತ್ತಿಕ್ಕುವ ಪ್ರಯತ್ನ ವನ್ನು ಮಾಡಬಾರದು. ಈ ಪ್ರವೃತ್ತಿಯಿಂದಲೇ ಮನುಷ್ಯನು ಜ್ಞಾನಾರ್ಜನೆಯನ್ನು ಮಾಡುವನು ; ಕೌಶಲ್ಯವನ್ನು ಸಂಪಾದಿಸುವನು. ಇದೇ ಪ್ರವೃತ್ತಿಯಿಂದ ಜನರು ಸತ್ಕಾರ್ಯಗಳನ್ನು ಮಾಡುತ್ತಾರೆ. ತಮ್ಮ ದಾನಧರ್ಮದ ಪ್ರದರ್ಶನವಾಗಬೇಕೆಂದು ಶಾಲಾಗೃಹಗಳನ್ನೂ

ಔಷಧಾಲಯಗಳನ್ನೂ ಕೆರೆಭಾವಿಗಳನ್ನೂ ಕಟ್ಟಿಸುವರು. ಆದಕಾರಣ ಶಿಕ್ಷಕರೂ ಬಾಲಕರೂ ಮಕ್ಕಳ ಇಂಥ ಪ್ರಯತ್ನಗಳಿಗೆ ಯೋಗ್ಯ ಉತ್ತೇಜನವನ್ನು ಕೊಡಬೇಕು.

**ವಿನಯಶೀಲತೆ:—** ಈ ಪ್ರವೃತ್ತಿಯಲ್ಲಿ 'ದೈನ್ಯ'ವೆಂಬ ಮನೋವಿಕಾರವಿರುತ್ತದೆ. ತಮಗಿಂತ ಶಕ್ತಿಯಿಂದಾಗಲಿ, ಅಧಿಕಾರದಿಂದಾಗಲಿ, ಐಶ್ವರ್ಯದಿಂದಾಗಲಿ, ವಿದ್ವತ್ತಿನಿಂದಾಗಲಿ ಹೆಚ್ಚಾದವರನ್ನು ಕಂಡರೆ ಅವರ ಕೂಡ ವಿನಯದಿಂದ ತಲೆಬಾಗಿಸಿ ನಡೆಯುವ ಪ್ರವೃತ್ತಿಯು ಅನಾದಿಕಾಲದಿಂದ ನಡೆಯುತ್ತ ಬಂದಿದೆ. ಚಿಕ್ಕಮಕ್ಕಳಲ್ಲಿಯೂ ಈ ಪ್ರವೃತ್ತಿಯು ಕಂಡುಬರುತ್ತದೆ. ಶಿಕ್ಷಕರು ಮಕ್ಕಳ ಈ ಪ್ರವೃತ್ತಿಯನ್ನು ಉಪಯೋಗಿಸಿಕೊಂಡು ಅವರ ಮೇಲೆ ತಮ್ಮ ಅಧಿಕಾರವನ್ನು ನಡಿಸುವರು. ಮಕ್ಕಳು ಅವರ ಆಜ್ಞಾಧಾರಕರಾಗಿ ನಡೆಯುವರು. ಚಿಕ್ಕ ವಯಸ್ಸಿನಲ್ಲಿ ಮಕ್ಕಳಿಗೆ ಸದಸದ್ವಿವೇಕ ಬುದ್ಧಿಯು ಇರುವುದಿಲ್ಲ. ಆ ಕಾಲಕ್ಕೆ ಶಿಕ್ಷಕರು ಈ ಪ್ರವೃತ್ತಿಯ ಉಪಯೋಗವನ್ನು ಮಾಡಿಕೊಳ್ಳಲಿಕ್ಕೆ ಅಡ್ಡಿಯಿಲ್ಲ. ಆದರೆ ಮಕ್ಕಳು ದೊಡ್ಡವರಾದಂತೆ ತಮ್ಮ ಸ್ವಂತ ವಿಚಾರದಿಂದ ಶಿಕ್ಷಕರ ಮೇಲಿನ ಪ್ರೇಮದಿಂದ ಅವರ ವಿಷಯವಾಗಿ ತಮ್ಮ ಮನಸಿನೊಳಗಿನ ಆದರಬುದ್ಧಿಯಿಂದ ಶಾಲೆಯ ಶಿಸ್ತು ಚೆನ್ನಾಗಿ ಉಳಿಯುವಂತೆ ನಡಕೊಳ್ಳುವುದು ಯೋಗ್ಯವು. ಶಿಕ್ಷಕರ ವಿಷಯವಾಗಿ ಮಕ್ಕಳ ಮನಸಿನಲ್ಲಿ ಅಂಜಿಕೆ ಹಾಗು ಅನಾದರವು ಇರತಕ್ಕದ್ದಲ್ಲ. ಆದರೆ ಪರರ ಭೀತಿಯಿಂದ ಸ್ವಾಭಿಮಾನವನ್ನು ಮರೆತು ಅವರ ಮುಂದೆ ನಮ್ರರಾಗಿ ನಡೆಯುವ ಸ್ವಭಾವವು ಅನಿಷ್ಟವಾದದ್ದು. ವಿನಯಶೀಲತೆಯಿಂದ ಮಕ್ಕಳ ಸ್ವಾಭಿಮಾನವು ನಷ್ಟವಾಗದಂತೆ ಶಿಕ್ಷಕರು ಎಚ್ಚರ ಪಡಲಿಕ್ಕೆಬೇಕು.



# ೭ನೆಯ ಪ್ರಕರಣ

## ಕೃತಿ-ಪ್ರೇಮು

ಶಾರೀರಿಕ ಮಾನಸಿಕ ಶಕ್ತಿಗಳ ವಿಕಾಸವಾಗಬೇಕೆಂಬುದೇ ಈ ಪ್ರವೃತ್ತಿಯು ಮುಖ್ಯೋದ್ದೇಶವಾಗಿರುತ್ತದೆ. ಈ ಪ್ರವೃತ್ತಿಯಿಂದ ಮಕ್ಕಳ ಜ್ಞಾನವು ಬೆಳೆಯುವುದು; ಅವರಿಗೆ ವಿಚಾರಮಾಡುವ ರೂಢಿಯು ಹತ್ತುವುದು; ಅವರ ಕೈಕಾಲುಗಳೊಳಗಿನ ಸ್ನಾಯುಗಳ ಶಕ್ತಿಯು ಬೆಳೆಯುವುದು, ಅನೇಕ ಪ್ರಕಾರದ ಕೃತಿಗಳನ್ನು ಮಾಡುವ ಕೌಶಲ್ಯವೂ ಶಕ್ತಿಯೂ ಮಕ್ಕಳ ಸ್ನಾಯುಗಳಲ್ಲಿ ಉತ್ಪನ್ನವಾಗುವುವು. ಮತ್ತು ತಾವು ಮಾಡಿದ ಕೃತಿಯನ್ನು ಕಂಡು ಅವರಿಗೆ ಬಹಳ ಸಮಾಧಾನವೂ ಆನಂದವೂ ಆಗುವುವು. ಹಾಗು ತಾವು ಮಾಡಿದ ಪ್ರಯತ್ನಕ್ಕೆ ಯಶವು ದೊರಕಿದ್ದರಿಂದ ಅವರ ಆತ್ಮವಿಶ್ವಾಸವು ಬೆಳೆಯುವುದು.

ಮಕ್ಕಳು ಸಹಜ ಪ್ರವೃತ್ತಿಯಿಂದ ಮಾಡುವ ಎಷ್ಟೋ ಕೆಲಸಗಳು ಪಾಲಕರಿಗೂ ಶಿಕ್ಷಕರಿಗೂ ತಾಪದಾಯಕವಾಗುವುವು. ಅದರಿಂದ ಅವರು ಮಕ್ಕಳ ಈ ಸಹಜವೃತ್ತಿಗೆ ಅಡ್ಡಬರುವರು. ಮಕ್ಕಳು ಕಿಡಿಗೇಡಿತನದಿಂದ ಇಂಥ ಕೃತಿಗಳನ್ನು ಮಾಡುವರೆಂದು ಅವರು ತಿಳಿಯುವರು. ಇಂಥ ಕೃತಿಗಳನ್ನು ಮಾಡುವಲ್ಲಿ ಮಕ್ಕಳ ಮನಸಿನಲ್ಲಿ ದುರುದ್ದೇಶಗಳು ಇರುವುದಿಲ್ಲೆಂಬುದು ಖಂಡಿತವು. ನಿಜವಾಗಿ ಮಕ್ಕಳು ಸುಮ್ಮನೆ ಕೂಡಬಾರದು; ಓಡಾಡುವುದು, ಜಿಗಿಯುವುದು, ಒದರುವುದು, ಕೈಗೆ ಸಿಕ್ಕ ವಸ್ತುಗಳಿಂದ ಏನಾದರೂ ಕೃತಿಗಳನ್ನು ಮಾಡುವುದು ಇತ್ಯಾದಿ ಇವು ಸೃಷ್ಟಿಯ ಸ್ವಾಭಾವಿಕ ಇಚ್ಛೆಗಳಾಗಿರುತ್ತವೆ. ಈ ಇಚ್ಛೆಗಳ ವಿರುದ್ಧವಾಗಿ ವರ್ತಿಸಿದರೆ ಮಕ್ಕಳಿಗೆ ಅಹಿತವಾಗುವುದು. ಮಕ್ಕಳ ಕೃತಿಪ್ರೇಮವೆಂಬ ಸ್ವಾಭಾವಿಕ ಪ್ರವೃತ್ತಿಗೆ ಯೋಗ್ಯ ಪ್ರಸಂಗವನ್ನೂ ಸಂಧಿಯನ್ನೂ ಒದಗಿಸಿ ಕೊಡತಕ್ಕದ್ದು; ಮಕ್ಕಳ ಕೃತಿಗಳು

ಅವರಿಗೂ ತಮಗೂ ತಾಪದಾಯಕವಾಗದಂತೆ ಶಿಕ್ಷಕರೂ ಪಾಲಕರೂ ಎಚ್ಚರ ಪಡತಕ್ಕದ್ದು.

ಕೃತಿಗಳನ್ನು ಮಾಡುವುದರಿಂದ ಮಕ್ಕಳ ಜ್ಞಾನವು ಬೆಳೆಯುತ್ತದೆ; ಅವರಲ್ಲಿ ಕೆಲಸಗಳನ್ನು ಮಾಡುವ ಕೌಶಲ್ಯವೂ, ಚಾತುರ್ಯವೂ ಉತ್ಪನ್ನವಾಗುವುವು. ಈ ಸಂಗತಿಗಳು ಪಾಲಕರ ಹಾಗು ಶಿಕ್ಷಕರ ಲಕ್ಷದಲ್ಲಿ ಬರುವುದಿಲ್ಲ. ಮಕ್ಕಳು ತಮ್ಮ ಸ್ವಂತ ಸ್ಫೂರ್ತಿಯಿಂದ ಅನೇಕ ಕೃತಿಗಳನ್ನು ಮಾಡುವುದು ಮಕ್ಕಳ ಹಿತದ ದೃಷ್ಟಿಯಿಂದ ಅತ್ಯಾವಶ್ಯಕವಾದ ಸಂಗತಿ ಎಂಬ ಮಾತಿಗೂ ಅವರು ಒಪ್ಪುವುದಿಲ್ಲ.

ದಟ್ಟಾದ ಜನವಸತಿಯುಳ್ಳ ಪಟ್ಟಣಗಳಲ್ಲಿ ಇರುವ ಹುಡುಗರಿಗೆ ಕೃತಿಗಳನ್ನು ಮಾಡಲಿಕ್ಕೆ ಅವಕಾಶವೇ ದೊರೆಯುವುದಿಲ್ಲ ಅದೇ ಪ್ರಕಾರ ಎಷ್ಟೋ ಶಾಲೆಗಳಲ್ಲಿ ಹುಡುಗರಿಗೆ ಕೂಡಲಿಕ್ಕೆ ಸಾಕಷ್ಟು ಸ್ಥಳ, ಆಟದ ಬೈಲು ಇರುವುದಿಲ್ಲ. ಅಂದಮೇಲೆ ಕೃತಿಗಳನ್ನು ಮಾಡುತ್ತ ಪಾಠಗಳನ್ನು ಕಲಿಯುವುದು, ಎತ್ತಕಡೆಗೆ ? ಸ್ವೇಚ್ಛೆಯಿಂದ ಓಡಾಡಿ ಆಟಗಳನ್ನು ಆಡುವುದು ಎಲ್ಲಿ ? ಆಟಗಳಲ್ಲಿಯೂ ಅನೇಕ ಕೃತಿಗಳನ್ನು ಮಾಡಬೇಕಾಗುವುದು; ಅದಕ್ಕಾಗಿ ಮನೆಯಲ್ಲಿಯೂ ಶಾಲೆಯಲ್ಲಿಯೂ ಮಕ್ಕಳಿಗೆ ಆಡಲಿಕ್ಕೆ ಸಾಕಷ್ಟು ಸ್ಥಳವು ಇರತಕ್ಕದ್ದು. ಮನೆಯ ಅಂಗಳ ಹಿತ್ತಲಗಳು ಮಕ್ಕಳ ಮೊದಲನೇ ಶಾಲೆಗಳೆಂದು ಹೇಳಬಹುದು. ಅವರಿಗೆ ಗೊಂಬೆ, ಗೆಜ್ಜೆ, ಬೊಗರಿ, ಊದುವ ಗುಬ್ಬಿ, ಹಲಗೆ, ಗುಂಡು, ಗಜಗ, ಸ್ವರದ ಪೆಟ್ಟಿಗೆ ಮುಂತಾದ ಆಟದ ಒಡವೆಗಳನ್ನು ಮಕ್ಕಳ ವಯೋಮಾನಕ್ಕನುಸರಿಸಿ ಒದಗಿಸಿಕೊಡುತ್ತಿರಬೇಕು. ಸರಿಕರ ಸಂಗಡ ಅವರಿಗೆ ಆಡಗೊಡಬೇಕು. ಇಟ್ಟಂಗಿಯ ಆಕೃತಿಯ ಕಟ್ಟಿಗೆಯ ತುಂಡುಗಳು ಡಬ್ಬಿಗಳು ದೀಪದಪೆಟ್ಟಿಗೆಗಳು ಇವುಗಳಿಂದ ಮನೆಗಳನ್ನೂ ಪೂಲುಗಳನ್ನೂ ಕಟ್ಟಿ ಆಡಲಿಕ್ಕೆ ಅನುಕೂಲ ಮಾಡಿಕೊಡಬೇಕು.

ಸಾಲೆಯ ಅಭ್ಯಾಸಕ್ರಮದಿಂದಲೂ ವಿಷಯಗಳನ್ನು ಕಲಿಸುವ ಪದ್ಧತಿಯಿಂದಲೂ ಮಕ್ಕಳ ಕೃತಿ ಪ್ರೇಮಕ್ಕೆ ಆಸ್ಪದ ದೊರೆಯುವಂತೆ ವ್ಯವಸ್ಥೆ ಇರತಕ್ಕದ್ದು. ಸದ್ಯದ ಪರಿಸ್ಥಿತಿಯು ಹಾಗಿಲ್ಲ.

ಉದಾಹರಣಾರ್ಥವಾಗಿ ತೀರ ಸಣ್ಣಮಕ್ಕಳು ಸಾಲೆಗೆ ಬಂದಕೂಡಲೆ ಶಿಕ್ಷಕರು ಅವರಿಗೆ ಅಂಕೆ ಮಗ್ಗಿಗಳನ್ನು ಪಾಟಿಯಮೇಲೆ ಬರೆದುಕೊಟ್ಟು ಬಾಯಿಂದ ಹೇಳಲಿಕ್ಕೆ ಹಚ್ಚುವರು. ಇದರಿಂದ ಅವರ ಮನಸಿಗೆ ಸೇರಿಕೆಯಾಗುವುದಿಲ್ಲ. ಸ್ವಲ್ಪಹೊತ್ತಿನಲ್ಲಿ ಅವರು ಬೇಸರಿಯುವರು. ಅವರ ಸ್ವಾಭಾವಿಕ ಪ್ರವೃತ್ತಿಗೆ ಅನುಸರಿಸಿ ಅವರಿಗೆ ಏನಾದರೂ ಕೆಲಸವು ಬೇಕು. ಅದು ಅವರಿಗೆ ದೊರೆಯದಿದ್ದರೆ ತಮಗೆ ಬೇಕಾದ ಕೆಲಸವನ್ನು ತಾವೇ ಹುಡುಕಿ ಕೊಳ್ಳುವರು; ತಮ್ಮತಮ್ಮೊಳಗೆ ಮಾತನಾಡಲಾರಂಭಿಸುವರು. ಏನಾದರೂ ಗೊಂದಲವನ್ನು ಎಬ್ಬಿಸುವರು. ಈ ಹುಡುಗರು ತುಂಟರಿರುವರೆಂದು ಶಿಕ್ಷಕರು ಅವರಿಗೆ ಸಿಟ್ಟುಮಾಡುವರು, ಹೊಡೆಯುವರು; ಈ ಮೇರೆಗೆ ತಮ್ಮ ಅಧಿಕಾರದಿಂದ ಅವರನ್ನು ಅಂಜಿಸಿ ಸುಮ್ಮನೆ ಕೂಡ್ರಿಸುವರು. ಆಬಳಿಕ ವಾಚನದ ಪಾಠವು ಪ್ರಾರಂಭವಾಗುವುದು. ಶಿಕ್ಷಕರು ಒಬ್ಬೊಬ್ಬ ಹುಡುಗನಿಗೆ ಎರಡೆರಡು ಸಾಲು ಓದಲಿಕ್ಕೆ ಹೇಳಿ ಉಳಿದ ಹುಡುಗರಿಗೆ ತಮ್ಮ ಪುಸ್ತಕದಲ್ಲಿ ನೋಡಿರೆಂದು ಅಪ್ಪಣೆ ಕೊಡುವರು. ಆದರೆ ಹುಡುಗರ ಲಕ್ಷ್ಯವು ಪುಸ್ತಕದೊಳಗಿನ ಸಾಲುಗಳ ಕಡೆಗೆ ಒಂದೇ ಸಮನೆ ಹತ್ತುವುದು ಶಕ್ಯವಿಲ್ಲ. ಅದರಿಂದ ಅವರು ಬೇಗನೆ ಬೇಸತ್ತು ಗೊಂದಲಕ್ಕೆ ಪ್ರಾರಂಭಮಾಡುವರು; ಪುನಃ ಶಿಕ್ಷಕರು ಅವರ ಮೇಲೆ ಹರಿಹಾಯುವರು. ಹೊಡತದ ಅಂಜಿಕೆಯಿಂದ ಅವರು ಸುಮ್ಮನೆ ಕೂಡುವರು. ಈ ತರದ ಅಭ್ಯಾಸಕ್ರಮದಲ್ಲಿ ಮಕ್ಕಳಿಗೆ ಸ್ವಂತ ಪ್ರೇರಣೆಯಿಂದ ತಮಗೆ ಸೇರುವಂಥ ಕೃತಿಯನ್ನು ಮಾಡುವ ಸಂಧಿಯು ಇಡೀ ದಿವಸದಲ್ಲಿ ಒಮ್ಮೆಯಾದರೂ ದೊರೆಯುವುದಿಲ್ಲ. ಬರೆಹ, ವಾಚನ, ಅಂಕೆ, ಮಗ್ಗಿ ಮೊದಲಾದ ವಿಷಯಗಳನ್ನು ಕಲಿಸುವ ಈ ಬೆಸರಿಕೆಯ ಪದ್ಧತಿಯ ಬದಲು ಮಕ್ಕಳು ಕೆಲಸಮಾಡುತ್ತ ಈ ವಿಷಯಗಳನ್ನು ಕಲಿಯುವ ಪದ್ಧತಿಯನ್ನು ಉಪಯೋಗಿಸ ತಕ್ಕದ್ದು.

ಈ ಪದ್ಧತಿಯ ದಿಗ್ದರ್ಶನವನ್ನು ಕೆಳಗೆ ಕೊಟ್ಟ ಒಂದೆರಡು ಉದಾಹರಣೆಗಳಿಂದ ಅರಿತುಕೊಳ್ಳಬಹುದು.

ಮಕ್ಕಳಿಗೆ ೧ ರಿಂದ ೧೦ ರ ವರೆಗಿನ ಅಂಕೆಗಳ ಜ್ಞಾನವಾಗಿದೆ ಎಂದು ತಿಳಿಯುವ; ಅವುಗಳ ಅಭ್ಯಾಸದ ಸಲುವಾಗಿ ಶಿಕ್ಷಕರು ಪಾಟಿಯ ಮೇಲೆ ಬರೆಯಲಿಕ್ಕೆ ಹೇಳುವರು. ಹುಡುಗರು ನಾಲ್ಕಾರು ಸಾರೆ ಆ ಅಂಕೆಗಳನ್ನು ಪಾಟಿಯ ಮೇಲೆ ಬರೆಯುವರು. ಅದರಿಂದ ಬೇಸತ್ತು, ತಮ್ಮ ಮನಸ್ಸಿಗೆ ಸಂತೋಷವಾಗುವಂಥ ಯಾವದೊಂದು ಕೆಲಸದಲ್ಲಿ ತೊಡಗುವರು. ಇದಲ್ಲದೆ ಒಂದು ತಾಸಿನ ವರೆಗೆ ಅಂಕೆಗಳನ್ನು ಮೇಲೆ ಮೇಲೆ ಬರೆಯುವುದರಿಂದ ಮಕ್ಕಳಿಗೆ ಅಂಕೆಗಳ ನಿಜವಾದ ಜ್ಞಾನವಾಗುವುದೇ ಇಲ್ಲ, ಯಾಕಂದರೆ ಈ ಯಾಂತ್ರಿಕ ಪದ್ಧತಿಯಿಂದ ಮಕ್ಕಳಿಗೆ ಪ್ರತಿ ಒಂದು ಅಂಕೆಯ ಬೆಲೆಯು ಗೊತ್ತಾಗುವುದಿಲ್ಲ. ಮತ್ತು ಅವುಗಳ ಉಪಯೋಗವನ್ನೂ ಸರಿಯಾಗಿ ಮಾಡಲಿಕ್ಕೆ ಬರುವುದಿಲ್ಲ. ೧ ರಿಂದ ೧೦ ರ ವರೆಗಿನ ಅಂಕೆಗಳ ಸರಿಯಾದ ಜ್ಞಾನವನ್ನು ಮಾಡಿಕೊಡುವುದಕ್ಕಾಗಿ ಆಟದ ರೂಪದ ಬೇರೆ ಬೇರೆ ವ್ಯವಸಾಯಗಳನ್ನು ಕೊಟ್ಟರೆ ಅವರು ಆ ವ್ಯವಸಾಯಗಳನ್ನು ಒಳ್ಳೇ ಲಕ್ಷ್ಯಪೂರ್ವಕವಾಗಿ ಮಾಡತೊಡಗುವರು. ಯಾಕಂದರೆ ಮಕ್ಕಳ ಕೃತಿಪ್ರೇಮವೆಂಬ ಸಹಜ ಪ್ರವೃತ್ತಿಗೆ ಆ ವ್ಯವಸಾಯದಲ್ಲಿ ಸಾಕಷ್ಟು ಯೋಗ್ಯ ಸಂಧಿಯು ದೊರಕುವುದು. ಆ ವ್ಯವಸಾಯವನ್ನು ಮಾಡುವುದರಿಂದ ಮಕ್ಕಳಿಗೆ ಅಂಕೆಗಳ ಯಥಾರ್ಥ ಜ್ಞಾನವಾಗುವುದಲ್ಲದೆ ಅವುಗಳ ನಿಜವಾದ ಉಪಯೋಗವೂ ಅವರಿಗೆ ತಿಳಿಯುವುದು. ಉದಾಹರಣಾರ್ಥವಾಗಿ ಕೆಳಗಿನ ವ್ಯವಸಾಯವನ್ನು ನೋಡಿರಿ.

ಈ ವ್ಯವಸಾಯದಲ್ಲಿ ಮೊದಲು ಪ್ರತಿ ಒಬ್ಬ ಹುಡುಗನಿಗೆ ಒಂದರಿಂದ ಹತ್ತರ ವರೆಗಿನ ಹತ್ತು ಇಸ್ಪೇಟುಗಳನ್ನು ಕೊಡಬೇಕು. ಹುಡುಗರು ಅವುಗಳನ್ನು ಎಕ್ಕಾದಿಂದ ಆರಂಭಮಾಡಿ ಕ್ರಮವಾಗಿ ಎರಡು ಸಾಲಾಗಿ ತಮ್ಮ ಮುಂದೆ ಇಟ್ಟುಕೊಳ್ಳುವರು.

ಆ ಬಳಿಕ ಹುಡುಗನು ಆ ಇಸ್ಪೇಟುಗಳನ್ನು ನೋಡಿ ತನ್ನ ಪಾಟಿಯ ಮೇಲೆ '೧' ರ ಚಿನ್ಹವನ್ನು ಬರೆದು ಅದರ ಮುಂದೆ ◯ ಈ ಒಂದು ಶೂನ್ಯವನ್ನು ಬರೆಯುವನು. ಅದರ ಕೆಳಗೆ '೨' ರ ಚಿನ್ಹವನ್ನು

ಬರೆದು ಅದರ ಮುಂದೆ ○○ ಹೀಗೆ ಎರಡು ಶೂನ್ಯಗಳನ್ನು ಬರೆಯುವನು. ಇದೇ ಮೇರೆಗೆ ಹತ್ತರ ವರೆಗಿನ ಅಂಕೆಗಳ ಗುರ್ತು ಗಳನ್ನೂ ಅವುಗಳಿಗೆ ತಕ್ಕಷ್ಟು ಶೂನ್ಯಗಳನ್ನೂ ಬರೆದು ಮುಗಿಸಲಿಕ್ಕೆ ೨೦-೨೫ ಮಿನೀಟು ವೇಳೆಯು ಬೇಕಾಗುವುದು. ಈ ವ್ಯವಸಾಯ ದಿಂದ ಮಗುವಿಗೆ ಅಂಕೆಗಳ ಜ್ಞಾನವೂ ಸರಿಯಾಗಿ ಆಗುವುದು. ಮೇಲೆ ಹೇಳಿದಂತೆ ಶಿಕ್ಷಕರು ಅಂಕೆಗಳ ಗುರುತುಗಳ ಮುಂದೆ ○ ಈ ಶೂನ್ಯದ ಬದಲು ಹೂವು, ಚೆಂಡು, ಕೊಡೆ, ಮನುಷ್ಯ ಇತ್ಯಾದಿ ವಸ್ತುಗಳ ಆಕೃತಿಗಳನ್ನು ತೆಗೆಯಲಿಕ್ಕೆ ಹೇಳುವನು. ಪ್ರತಿ ಒಬ್ಬ ಹುಡುಗನು ತನಗೆ ಸೇರಿದ ಯಾವುದೊಂದು ವಸ್ತುವಿನ ಚಿತ್ರವನ್ನು ತೆಗೆಯಲಿಕ್ಕೆ ಪ್ರಯತ್ನಮಾಡುವನು. ಹೇಗಂದರೆ :—

೧ ❁ ಹೂವು, ೨ ❁ ❁ ಹೂವುಗಳು, ೩ ❁ ❁ ❁ ಹೂವುಗಳು,
೪ ❁ ❁ ❁ ❁ ಹೂವುಗಳು ಇತ್ಯಾದಿ.

ಮತ್ತೊಮ್ಮೆ ಶಿಕ್ಷಕನು ಒಬ್ಬೊಬ್ಬ ಹುಡುಗನಿಗೆ ಒಂದೊಂದು ಕಾಗದದ ಚೀಲವನ್ನು ಕೊಡುವನು ಒಂದೊಂದು ಚೀಲದಲ್ಲಿ ಎರಡೆರಡು ಕಾರ್ಡುಗಳು ಇರುವವು. ಪ್ರತಿ ಒಂದು ಕಾರ್ಡಿನ ಮೇಲೆ ಎರಡು ಉದಾಹರಣೆಗಳು ಇರುವವು. ಆ ಉದಾಹರಣೆಯಲ್ಲಿ ಅಂಕೆಗಳೂ ಆಕೃತಿಗಳೂ ಬರೆಯಲ್ಪಟ್ಟಿರುವವು. ಉದಾ :—

□ □ ೨
□ □ □ □ □ ೫
――――

ಹುಡುಗರು ಈ ಉದಾಹರಣೆಯನ್ನು ತಮ್ಮ ಪಾಟಿಯ ಮೇಲೆ ಆಕೃತಿ ಸಹಿತವಾಗಿ ಕೆಳಗೆ ಕೊಟ್ಟ ಪ್ರಕಾರ ಬರೆದುಕೊಂಡು ಉತ್ತರವನ್ನು ಬರೆಯುವದು.

□ □ ೨
□ □ □ □ □ ೫
――――
೭

ಇದೇ ಪ್ರಕಾರ ಹುಡುಗರು ಕಾರ್ಡಿನಮೇಲೆ ಮತ್ತೊಂದು ಉದಾಹರಣೆಯನ್ನು ಬರೆದು ಉತ್ತರವನ್ನು ಬರೆಯುವರು. ಈ ಮೇರೆಗೆ ಎರಡೂ ಕಾರ್ಡುಗಳೊಳಗಿನ ಉದಾಹರಣೆಗಳನ್ನು ಬರಕೊಂಡು ಉತ್ತರ ಬರೆಯಲಿಕ್ಕೆ ೨೫-೩೦ ಮಿನಿಟುಗಳು ಹಿಡಿಯುವವು. ಈ ಕೆಲಸವನ್ನು ಮಾಡುತ್ತಿರುವಾಗ ಮಗುವಿನ ಸಂಪೂರ್ಣ ಲಕ್ಷ್ಯವು ಅದರಲ್ಲಿ ತೊಡಗಿರುವುದು ; ಮತ್ತು ತಾವು ಮಾಡಿದ ಕೆಲಸವನ್ನು ಕಂಡು ಅವರಿಗೆ ಬಹಳ ಸಂತೋಷವಾಗುತ್ತದೆ. ಇದೇ ಪ್ರಕಾರ ಬರೆಹ, ವಾಚನಗಳ ವಿಷಯವಾಗಿಯೂ ಹುಡುಗರಿಗೆ ವ್ಯವಸಾಯಗಳನ್ನು ಕೊಡಬಹುದು. ಬರೆಹ ಮತ್ತು ವಾಕ್ಯರಚನೆ ಈ ವಿಷಯಗಳ ಅಭ್ಯಾಸದ ಸಲುವಾಗಿ ೧ನೆಯ ಇಯತ್ತೆಯ ವಿದ್ಯಾರ್ಥಿಗಳಿಗೆ ಕೆಳಗೆ ಕೊಟ್ಟ ವ್ಯವಸಾಯವನ್ನು ಹೇಳಬಹುದು. ಶಿಕ್ಷಕನು ಪ್ರತಿಒಬ್ಬ ಹುಡುಗನು ಒಂದೊಂದು ಕಾರ್ಡು ಕೊಡುವನು. ಆ ಪ್ರತಿಒಂದು ಕಾರ್ಡಿನಮೇಲೆ ಕೆಳಗೆ ಕೊಟ್ಟಂಥ ಬೇರೆಬೇರೆ ಅಯ್ದುಯ್ದು ಪೂರ್ಣ ವಾಕ್ಯಗಳು ಇರುವವು-

× × × ಉಂಗುರವನ್ನು ಮಾಡುತ್ತಾನೆ.
× × × ಹೊಲವನ್ನು ಹರಗುತ್ತಾನೆ.
× × × ಬೆಲ್ಲವನ್ನು ಮಾರುತ್ತಾನೆ.
× × × ಹುಡುಗರಿಗೆ ಕಲಿಸುತ್ತಾನೆ.
× × × ಪೆಟ್ಟಿಗೆಯನ್ನು ಮಾಡುತ್ತಿದ್ದಾನೆ.

ಈ ವಾಕ್ಯಗಳ ಕೆಳಗೆ ಶಿಕ್ಷಕ, ಅಂಗಡಿಕಾರ ಒಕ್ಕಲಿಗ, ಬಡಿಗ, ಅಕ್ಕಸಾಲಿಗ ಈ ಶಬ್ದಗಳು ಬರೆಯಲ್ಪಟ್ಟಿರುತ್ತವೆ. ಹುಡುಗನು ವಿಚಾರ ಮಾಡಿ ಈ ಅಯ್ದು ಶಬ್ದಗಳಲ್ಲಿ ಯೋಗ್ಯವಾದ ಶಬ್ದವನ್ನು ವಾಕ್ಯದಲ್ಲಿ ಹಾಕಿ ಅದನ್ನು ಪೂರ್ಣ ಮಾಡುವನು. ಇದೇ ಪ್ರಕಾರ ಅಯ್ದು ವಾಕ್ಯಗಳನ್ನು ಪೂರ್ಣಮಾಡಿದ ಮೇಲೆ ಆ ಕಾರ್ಡನ್ನು ಮತ್ತೊಬ್ಬ ಹುಡುಗನಿಗೆ ಕೊಟ್ಟು ಅವನ ಕಾರ್ಡನ್ನು ತಾನು ತಕ್ಕೊಳ್ಳುವನು. ಈ ರೀತಿಯಿಂದ ಪ್ರತಿಒಬ್ಬ ಹುಡುಗನು ಮುಕ್ಕಾಲು ತಾಸಿನಲ್ಲಿ ೧೫-೨೦ ವಾಕ್ಯಗಳನ್ನು ಪೂರ್ಣಮಾಡಿ ತನ್ನ ಪಾಟಿಯಮೇಲೆ

ಬರೆಯುತ್ತಾನೆ. ಕಾರ್ಡಿನ ಮೇಲಿನ ವಾಕ್ಯಗಳು ಒಳ್ಳೇ ಸುಂದರವಾದ ಅಕ್ಷರಗಳಿಂದ ಬರೆಯಲ್ಪಟ್ಟಿರುವುದರಿಂದ ಹುಡುಗರು ಕೂಡ ಅದರಂತೆ ಸುಂದರವಾಗಿಯೂ ಶುದ್ಧವಾಗಿಯೂ ಬರೆಯುಲಿಕ್ಕೆ ಪ್ರಯತ್ನ ಮಾಡು ವರು.

ಯುರೋಪ ಅಮೇರಿಕಾಖಂಡಗಳೊಳಗಿನ ಬಾಲಕರ ಸಾಲೆಗಳಲ್ಲಿ ಹುಡುಗರ ಕೃತಿಪ್ರೇಮವೆಂಬ ಪ್ರವೃತ್ತಿಯನ್ನು ಶಕ್ಯವಿದ್ದಷ್ಟುಮಟ್ಟಿಗೆ ಉಪಯೋಗಿಸಿಕೊಂಡು ಆ ಸಹಜಪ್ರವೃತ್ತಿಯನ್ನು ತಕ್ಕಮಾರ್ಗಕ್ಕೆ ಹಚ್ಚುವರು. ಈ ಶಾಲೆಗಳೊಳಗಿನ ಶಿಕ್ಷಕರು ತಾವು ಸ್ವತಃ ಬಹಳ ಸ್ವಲ್ಪ ಕಲಿಸುವರು. ಅನೇಕಪ್ರಕಾರದ ಉಪಕರಣಗಳ ಉಪಯೋಗವನ್ನು ಮಾಡಿ ಮಕ್ಕಳು ಸ್ವೇಚ್ಛೆಯಿಂದ ಅನೇಕ ಕೃತಿಗಳನ್ನು ಮಾಡಿ ತಮ್ಮ ಜ್ಞಾನವನ್ನು ಬೆಳಿಸಿಕೊಳ್ಳುತ್ತಾರೆ. ಆ ಕೃತಿಗಳಿಂದ ಮಕ್ಕಳ ಕೈಕಾಲುಗಳ ಸ್ನಾಯುಗಳಲ್ಲಿ ಚಪಲತೆಯು ಹುಟ್ಟಿ ಬೆರಳುಗಳಲ್ಲಿ ಕೌಶಲ್ಯವು ಉತ್ಪನ್ನ ವಾಗುವುದು.

ಮನೆಯಲ್ಲಿ ಪಾಲಕರು ಈ ವಿಷಯದಲ್ಲಿ ಮನಸುಹಾಕಿ ಮಕ್ಕಳಿಗೆ ಅನೇಕ ಪ್ರಕಾರದ ಮನೋರಂಜಕ ಹಾಗು ಜ್ಞಾನವರ್ಧಕ ಕೃತಿಗಳನ್ನು ಮಾಡುವ ಪ್ರಸಂಗಗಳನ್ನು ಒದಗಿಸಿಕೊಟ್ಟರೆ, ಅವರ ಶಿಕ್ಷಣಕ್ಕೆ ಉತ್ತೇಜನ ಕೊಟ್ಟಂತಾಗುವುದು. ಸ್ವಲ್ಪ ದೊಡ್ಡವರಾದ ಕೂಡಲೆ ತಮ್ಮ ಕೈಬಾಯಿಗಳನ್ನು ತಾವೇ ತೊಳಕೊಳ್ಳುವುದು, ತಮ್ಮ ಅಂಗಿ ಚಣ್ಣಗಳನ್ನು ತಾವೇ ಹಾಕಿಕೊಳ್ಳುವುದು, ತಮ್ಮ ಪಾಟಿ, ಪುಸ್ತಕ, ಅಂಗಿ ಟೊಪ್ಪಿಗೆ ಮುಂತಾದವುಗಳನ್ನು ವ್ಯವಸ್ಥೆಯಿಂದ ಗೊತ್ತುಮಾಡಿದ ಸ್ಥಳದಲ್ಲಿ ಇಟ್ಟುಕೊಳ್ಳುವುದು, ತಮ್ಮ ಊಟದ ತಾಟು, ಮಣಿ, ತಂಬಿಗೆ ವಾಟಕ ಮುಂತಾದವುಗಳನ್ನು ತಾವೇ ವ್ಯವಸ್ಥೆಯಿಂದ ಇಟ್ಟು ಕೊಳ್ಳುವುದು ಇತ್ಯಾದಿ ಅನೇಕ ಸಣ್ಣಪುಟ್ಟ ಕೆಲಸಗಳನ್ನು ತಾವೇ ಮಾಡಿಕೊಳ್ಳುವದರಿಂದ ಮಕ್ಕಳಿಗೆ ಬಹಳ ಆನಂದವಾಗುವುದು. ಮಕ್ಕಳ ಮೇಲಿನ ಅಯೋಗ್ಯ ಮಮತೆಯಿಂದ ಅಥವಾ ಅಚ್ಚೆಯಿಂದ ಎಷ್ಟೋ ತಾಯಿತಂದೆಗಳು ಅವರಿಗೆ ಏನೂ ಕೆಲಸ ಮಾಡಗೊಡುವುದಿಲ್ಲ. ಅವರ

ಕೆಲಸಗಳನ್ನೆಲ್ಲ ಅವರ ಸಲುವಾಗಿ ತಾವೇ ಮಾಡುತ್ತಾರೆ. ಅದರಿಂದ ಅವರಿಗೆ ಜನ್ಮದ ಹಾನಿಯು ಸಂಭವಿಸುವುದು.

ಡಾ. ಮಾಂಟಿಸೋರಿಯವರು ತಮ್ಮ ಅನುಭವದ ಒಂದು ಕಥೆಯನ್ನು ಬರೆದಿದ್ದಾರೆ. ಒಬ್ಬ ಶ್ರೀಮಂತ ಗೃಹಸ್ಥನ ೩ ವರ್ಷದ ಹುಡುಗನನ್ನು ಕೈಬಂಡಿಯಲ್ಲಿ ಕೂಡ್ರಿಸಿಕೊಂಡು ಒಬ್ಬ ದಾಯಿಯು ಸಮುದ್ರ ದಂಡೆಗೆ ಹೋದಳು ; ಅಲ್ಲಿ ಆ ಹುಡುಗನು ತನ್ನ ಆಟಿಗೆಯೊಳಗಿನ ಪುಟ್ಟ ಬಾಲದಿಯೊಳಗೆ ಪುಟ್ಟ ಸಲಿಕೆಯಿಂದ ಉಸುಕು ತುಂಬುತ್ತಿದ್ದನು. ಕೆಲಹೊತ್ತಿನಮೇಲೆ ಆ ದಾಯಿಯು ಮನೆಗೆ ಹೋಗುವ ಅವಸರದ ಮೂಲಕವಾಗಿ ತಾನೇ ಆ ಪುಟ್ಟ ಬಾಲದಿಯಲ್ಲಿ ಉಸುಕು ತುಂಬಿ ಬಂಡಿಯಲ್ಲಿ ಇಟ್ಟು, ಹುಡುಗನನ್ನು ಒತ್ತಾಯದಿಂದ ಬಂಡಿಯಲ್ಲಿ ಕೂಡಿಸಿ ಮನೆಯ ದಾರೀ ಹಿಡಿದಳು. ದಾಯಿಯ ಈ ಕೆಲಸವು ಆ ಹುಡುಗನಿಗೆ ಸೇರಲಿಲ್ಲ. ಅವನು ದೊಡ್ಡದನಿಯಿಂದ ಅಳಲಾರಂಭಿಸಿದನು. ಆ ಹುಡುಗನಿಗೆ ಉಸುಕು ಬೇಕಾಗಿದ್ದಿಲ್ಲ. ತಾನೇ ಸ್ವತಃ ಬಾಲದಿಯಲ್ಲಿ ಉಸುಕು ತುಂಬುವ ಕೆಲಸದಿಂದ ಅವನಿಗೆ ಸಂತೋಷವೆನಿಸುತ್ತಿತ್ತು. ಆ ಕೆಲಸದಲ್ಲಿ ಅವನ ಕೃತಿಪ್ರಿಯತೆ ಎಂಬ ಸಹಜಪ್ರವೃತ್ತಿಗೆ ಸಾಕಷ್ಟು ಅವಕಾಶವು ದೊರೆಯುತ್ತಿತ್ತು. ದಾಯಿಯು ಆ ಪ್ರವೃತ್ತಿಗೆ ಅಡ್ಡ ಬಂದದ್ದರಿಂದ ಆ ಹುಡುಗನಿಗೆ ಬಹಳ ಕೆಡಕೆನಿಸಿತು. ಅದರಿಂದ ಅವನು ಅಳಲಾರಂಭಿಸಿದನು. ಮನೆಯೊಳಗಿನ ಸುಲಭವಾದ ಹಾಗು ಹುಡುಗರಿಗೆ ಸಹಜವಾಗಿ ಮಾಡಲಿಕ್ಕೆ ಬರುವಂಥ ಕೆಲಸಗಳನ್ನು ಹುಡುಗರಿಗೆ ಹೇಳಬೇಕು. ಅದರಿಂದ ಅವರಿಗೆ ಬಹಳ ಆನಂದವಾಗುವುದು ; ಪರರಿಗೆ ಸಹಾಯ್ಯ ಮಾಡುವ ರೂಢಿಯು ಹತ್ತುವುದು. ಆದರೆ ಒಂದೇಸಮನೆ ಅವರನ್ನು ಕೆಲಸದಲ್ಲಿಯೇ ತೊಡಗಿಸಿಬಿಡಬೇಕೆಂದು ಮಾತ್ರ ತಿಳಿಯಕೂಡದು.

ಮಕ್ಕಳಿಗೆ ತಕ್ಕಂಥ ಹಾಗು ಆನಂದದಾಯಕವಾದಂಥ ಕೆಲಸಗಳನ್ನು ಮಾಡಲಿಕ್ಕೆ ಆಗಾಗ್ಗೆ ಸಾಕಷ್ಟು ಪ್ರಸಂಗಗಳು ಸಿಗುತ್ತಿದ್ದರೆ ಕಿಡಿಗೇಡಿತನವನ್ನು ಮಾಡಬೇಕೆಂಬ ಮೋಹವು ಅವರಿಗೆ ಉತ್ಪನ್ನವಾಗು

ವುದಿಲ್ಲ. ಇಂಗ್ಲಂಡದೊಳಗಿನ ಶಿಶುಶಾಲೆ, ಬಾಲೋದ್ಯಾನಶಾಲೆ ಇವುಗಳಿಗೂ ನಮ್ಮಲ್ಲಿಯ ಪ್ರಾಥಮಿಕಶಾಲೆಗಳಿಗೂ ಬಹಳ ಅಂತರವುಂಟು. ಬಾಲೋದ್ಯಾನ ಶಾಲಾಮಂದಿರಗಳು ಅವುಗಳ ಸಲುವಾಗಿಯೇ ಕಟ್ಟಲ್ಪಟ್ಟಿರುತ್ತವೆ. ಅಲ್ಲಿ ಸಾಕಷ್ಟು ಸ್ಥಳವಿರುತ್ತದೆ. ಮಕ್ಕಳಿಗೆ ತಕ್ಕಂಥ ಕುರ್ಚಿ, ಮೇಜು ಮುಂತಾದ ಸಾಮಾನುಗಳು ಇರುತ್ತವೆ. ಶಾಲೆಯ ಸುತ್ತುಮುತ್ತು ವಿಶಾಲವಾದ ತೋಟವಿರುತ್ತದೆ. ಅದರಲ್ಲಿ ಗಿಳಿ, ನವಿಲು, ಮೊಲ ಮೊದಲಾದ ಸಾಕಿದ ಪ್ರಾಣಿಗಳನ್ನು ಇಟ್ಟಿರುತ್ತಾರೆ. ಸಣ್ಣಸಣ್ಣ ಹೌದುಗಳನ್ನು ಕಟ್ಟಿ ಅಲ್ಲಿ ನೀರುಬಿಟ್ಟು ಅದರೊಳಗೆ ತರತರದ ಮೀನಗಳನ್ನು ಬಿಟ್ಟಿರುತ್ತಾರೆ. ಮಕ್ಕಳ ಆಟದ ಸಲುವಾಗಿ ಅನೇಕ ಸಾಹಿತ್ಯಗಳು ಇಡಲ್ಪಟ್ಟಿರುತ್ತವೆ. ಹಸಿ ಉಸುಕು, ಹಸಿಯಾಗಿದ್ದರೂ ಕೈಗೆ ಹತ್ತದಂಥ ಮಣ್ಣು, ಕಟ್ಟಿಗೆಯ ನಿಯಮಿತ ಆಕೃತಿಯ ಸಣ್ಣದೊಡ್ಡ ತುಂಡುಗಳು ಬಣ್ಣದ ಖಡುಗಳು, ಹಣ್ಣುಗಳು ಈ ಮುಂತಾದ ಸಾಮಗ್ರಿಗಳು ಎಲ್ಲ ಹುಡುಗರಿಗೆ ಸಾಕಾಗುವಷ್ಟು ಇರುತ್ತವೆ. ಬಣ್ಣದ ಚಿತ್ರಗಳು ಚಿತ್ರದ ಪುಸ್ತಕಗಳು ಬೇಕಾದಷ್ಟು ಇರುವವು; ಮಂಜುಳ ವಾದ್ಯಧ್ವನಿಯಿಂದ ೧೦೦-೧೫೦ ಹುಡುಗರ ಡ್ರಿಲ್ ನಾಚು, ಆಟ ಮುಂತಾದವುಗಳನ್ನು ನಡೆಯಿಸಲಿಕ್ಕೆ ಅನುಕೂಲತೆಯಿರುತ್ತದೆ. ಹುಡುಗರು ದಣಿದರೆಂದರೆ ವಿಶ್ರಾಂತಿಗಾಗಿ ವಿಶಾಲವಾದ ಹಾಲಿನಲ್ಲಿ ಸಣ್ಣಸಣ್ಣ ಮಂಚಗಳು ಅವುಗಳಿಗೆ ಸೊಳ್ಳೆಯ ಪರದೆಗಳು ಮಂಚಗಳ ಮೇಲೆ ಗಾದಿಗಳನ್ನು ಹಾಸಿ ಮೇಲೆ ಸ್ವಚ್ಛವಾದ ಮಗ್ಗಲುಹಾಸಿಗೆಯನ್ನು ಹಾಸಿರುತ್ತಾರೆ. ಮಕ್ಕಳಿಗೆ ಫಲಾಹಾರ, ಹಾಲು ಮುಂತಾದ ಉಪಹಾರದ ವ್ಯವಸ್ಥೆಯೂ ಮಾಡಲ್ಪಟ್ಟಿರುತ್ತದೆ. ಸ್ನಾನದ ಅನುಕೂಲತೆಯೂ ಅಲ್ಲಿಯೇ ಮಾಡಲ್ಪಟ್ಟಿರುತ್ತದೆ. ಇಂತಹ ಶಾಲೆಗಳಿಗೂ, ಕೂಡಲಿಕ್ಕೆ ಸಹ ಸ್ಥಳ ಸಾಲದಿದ್ದಂಥ ನಮ್ಮಲ್ಲಿಯ ಶಾಲೆಗಳಿಗೂ ತುಲನೆಯು ಹೇಗೆ ಸರಿಹೋಗುವುದು. ಇಂಥ ಶಾಲೆಗಳ ಒಬ್ಬೊಬ್ಬ ಶಿಕ್ಷಕನು ೭೦-೮೦ ಹುಡುಗರಿಗೆ ಕಲಿಸುವನು. ಇಂತಿಷ್ಟು ಹುಡುಗರು ಕೊಟ್ಟ ವ್ಯವಸಾಯಗಳನ್ನು ಸದ್ದಿಲ್ಲದೆ ಗದ್ದಲ ಗೊಂದಲಗಳಿಲ್ಲದೆ ಮನಃಪೂರ್ವಕವಾಗಿ ಮಾಡುವುದರಲ್ಲಿ ಮಗ್ನರಾಗಿರುತ್ತಾರೆ.

ಸಾರಾಂಶ, ಮಕ್ಕಳಿಗೆ ಮನೋರಂಜಕ ವ್ಯವಸಾಯಗಳನ್ನು ಕೊಟ್ಟು ಶಿಕ್ಷಕರ ಮೇಲ್ವಿಚಾರಣೆಯ ಕೆಳಗೆ ಸ್ವಂತಶ್ರಮದಿಂದ ಜ್ಞಾನ ಸಂಪಾದನಮಾಡಿಕೊಳ್ಳಲಿಕ್ಕೆ ಹಚ್ಚತಕ್ಕದ್ದು. ಅವಶ್ಯವಿದ್ದಲ್ಲಿ ಶಿಕ್ಷಕರು ಮಕ್ಕಳಿಗೆ ಸಾಹಾಯ್ಯಮಾಡತಕ್ಕದ್ದು. ಸ್ವಂತಶ್ರಮದಿಂದ ಸಂಪಾದಿಸಿದ ಜ್ಞಾನವು ಬಹುಕಾಲ ನಿಲ್ಲುವುದು. ಮಕ್ಕಳ ಕೃತಿಪ್ರೇಮವೆಂಬ ಸಹಜಪ್ರವೃತ್ತಿಯನ್ನು ಶಿಕ್ಷಣದ ಕಾರ್ಯದಲ್ಲಿ ಉಪಯೋಗಿಸಿಕೊಂಡರೆ ಅವರ ಜ್ಞಾನವು ಬೆಳೆಯುವುದು; ಅವರಲ್ಲಿ ಚಪಲತೆಯೂ, ಕೌಶಲ್ಯವೂ ಉತ್ಪನ್ನವಾಗುವುವು; ಮತ್ತು ಅವರ ಎಲ್ಲ ಪ್ರಕಾರದ ಉನ್ನತಿಯು ಆಗುವುದು. ಶಿಕ್ಷಕರೂ ಶಾಲಕರು ಈ ಸಂಗತಿಗಳನ್ನು ಲಕ್ಷದಲ್ಲಿಟ್ಟು ನಡೆದರೆ ಮಕ್ಕಳ ಶಿಕ್ಷಣವು ಸುಲಭವಾಗುವುದು.



# ೮ನೆಯ ಪ್ರಕರಣ

## ಸಂಪಾದನ ಪ್ರವೃತ್ತಿ

ಪ್ರಾಣಿಗಳ ಪೋಷಣವೂ ಶಿಕ್ಷಣವೂ ಸರಿಯಾಗಿ ಆಗಿ ಅವುಗಳ ಜೀವನಕ್ರಮವು ಸುಖಕರವಾಗಬೇಕೆಂಬುದೇ ಈ ಪ್ರವೃತ್ತಿಯ ಉದ್ದೇಶ ವಿರುವುದು. ಈ ಪ್ರವೃತ್ತಿಯು ಮನುಷ್ಯೇತರ ಪ್ರಾಣಿಗಳಿಗಿಂತ ಮನುಷ್ಯಪ್ರಾಣಿಗಳಲ್ಲಿ ಒಳ್ಳೇ ಪ್ರಬಲವಾಗಿರುವುದು. ಸ್ವತಂತ್ರವಾಗಿ ಜೀವನಕ್ರಮವನ್ನು ಸಾಗಿಸಿಕೊಂಡುಹೋಗುವ ಬಲಶಾಲಿಗಳಾದ ಹುಲಿ ಸಿಂಹ ಮೊದಲಾದ ಪ್ರಾಣಿಗಳಲ್ಲಿ ಈ ಪ್ರವೃತ್ತಿಯು ತೀರ ಕಡಿಮೆ ಇರುತ್ತದೆ. ಆ ಪ್ರಾಣಿಗಳು ಹಸಿವೆಯಾದಾಗ ತಮ್ಮ ಸ್ಥಳಬಿಟ್ಟು ಬೇಟೆಯ ಸಲುವಾಗಿ ಹೊರಗೆ ಹೊರಡುವವು. ಬೇಟೆಯು ಸಿಕ್ಕಿ ಹಸಿವೆಯು ಹಿಂಗಿತೆಂದರೆ ತೀರಿತು. ನಾಳಿಗೆ ಬೇಕು, ಇನ್ನು ಒಂದು ವಾರದ ವರೆಗೆ ಸಾಲುವಷ್ಟು ವ್ಯವಸ್ಥೆಮಾಡಿಟ್ಟುಕೊಳ್ಳಬೇಕು ಈ ಬಗೆಯ **ಸಂಚಯಪ್ರವೃತ್ತಿಯು** ಅವಕ್ಕಿರುವುದಿಲ್ಲ. ಹೆಣ್ಣು ಹುಲಿಯು ಸಹ ಬೇಟೆಯಾಡಿ ಆಹಾರವನ್ನು ಸಂಪಾದಿಸಿ ತನ್ನ ಮರಿಗಳಿಗೆ ಕೊಟ್ಟು ತಾನು ತಿಂದು ಗವಿಯಲ್ಲಿ ಸ್ವಸ್ಥವಾಗಿ ಬಿದ್ದುಕೊಳ್ಳುವುದು.

ದುರ್ಬಲವಾದ ಕೆಲವು ಪ್ರಾಣಿಗಳು ದುಡಿದು ಆಹಾರವನ್ನು ಸಂಪಾದಿಸುವುದಲ್ಲದೆ ಸಂಚಯಮಾಡುವುವು. ಜೇನ್ನೊಣಗಳು ತಮ್ಮ ಮರಿಗಳ ಸಲುವಾಗಿ ತುಪ್ಪವನ್ನು ಕೂಡಹಾಕುವುವು. ಇರುವೆಗಳು ಮಳೆಗಾಲದ ಸಲುವಾಗಿ ಕಾಳುಗಳನ್ನು ಸಂಗ್ರಹಿಸಿಡುತ್ತವೆ. ಇಣಚಿ ಗಳು ಸುಗ್ಗಿಯಲ್ಲಿ ದೊರೆತ ಹಣ್ಣುಗಳನ್ನು ತನ್ನ ಗೂಡಿನಲ್ಲಿ ಸಂಗ್ರಹಿಸಿಡುವುದು.

ಹೀಗಿದ್ದರೂ ಮನುಷ್ಯಪ್ರಾಣಿಗಿಂತ ಈ ಪ್ರಾಣಿಗಳ **ಸಂಪಾದನ ಪ್ರವೃತ್ತಿಯು** ತೀರ ದುರ್ಬಲವಾದದ್ದೆಂದು ಹೇಳಬಹುದು.

ಮನುಷ್ಯನು ತನ್ನ ಆಯುಷ್ಯವನ್ನೆಲ್ಲ ಸಂಪಾದನದಲ್ಲಿಯೇ ಕಳೆಯುವನು. ಅವನ ಮಹತ್ವಾಕಾಂಕ್ಷೆಯು ಕ್ರಮಕ್ರಮವಾಗಿ ಬೆಳೆಯುತ್ತಹೋಗುವುದು. ಹೆಚ್ಚಿನತರದ ಸೌಖ್ಯವನ್ನು ಸಂಪಾದಿಸುವುದಕ್ಕಾಗಿಯೂ, ಸಂತತಿಯ ಸುಖದ ಸಲುವಾಗಿಯೂ ದ್ರವ್ಯವನ್ನು ಸಂಪಾದಿಸಿ ಸಂಚಯಮಾಡುತ್ತಲೇ ಇರುವನು.

ಈ ಸಂಪಾದನ ಪ್ರವೃತ್ತಿಯಿಂದಲೇ ಇಂದಿನ ವರೆಗೆ ಮನುಷ್ಯ ಪ್ರಾಣಿಯು ನಾನಾಪ್ರಕಾರದ ಸುಧಾರಣೆಯನ್ನು ಹೊಂದಿದೆ. ಅವನು ತೀರ ವನಚರಸ್ಥಿತಿಯಿಂದ ಇಂದಿನ ನಾಗರಿಕಸ್ಥಿತಿಯನ್ನು ಪಡೆದಿದ್ದಾನೆ. ಇನ್ನೂ ಆತನ ಸುಧಾರಣೆಯ ಕಾರ್ಯಗಳು ಒಂದೇಸಮನೆ ನಡೆದೇ ಇರುವವು. ಆದಕ್ಕೆ ಪೋಷಕವಾಗಿ ಸಂಪಾದನಪ್ರವೃತ್ತಿಯೂ ಸಂಚಯಪ್ರವೃತ್ತಿಯೂ ಬೆಳೆಯುತ್ತಲೇ ಇರುವವು.

ಸಂಪಾದನಪ್ರವೃತ್ತಿಯಲ್ಲಿ ನಾನು ನನ್ನದು ಎಂಬ ವಿಚಾರಗಳಿಂದ ಉತ್ಪನ್ನವಾಗುವ ಆನಂದದ ಭಾವನೆಯು ಇರುತ್ತದೆ. ಈ ದ್ರವ್ಯವನ್ನು ನಾನು ಗಳಿಸಿದ್ದೇನೆ; ಇದು ನನ್ನನು, ಈ ಕಲ್ಪನೆಯು ನಮಗೆ ಬಹಳ ಆನಂದವನ್ನುಂಟುಮಾಡುತ್ತದೆ, ಸಂಪಾದನಪ್ರವೃತ್ತಿಯಿಂದ ಮನುಷ್ಯನು ಬಹಳ ಶ್ರಮಬಡುತ್ತಾನೆ, ಆ ಶ್ರಮಕ್ಕೆ ತಕ್ಕ ಪ್ರತಿಫಲವು ದೊರೆಯುವುದು; ಸಂಪತ್ತಿಯು ದೊರಕಬೇಕೆಂದು ಅನೇಕ ಬುದ್ಧಿವಂತರು ಯಂತ್ರಗಳನ್ನು ಶೋಧಿಸಿದರು, ಅದ್ದರಿಂದ ಅವರಿಗೆ ಸಂಪತ್ತು ದೊರಕಿತು, ಇತ್ತ ಸಮಾಜಕ್ಕೆ ಆ ಯಂತ್ರದಿಂದ ಪ್ರಯೋಜನವೂ ಆಯಿತು, ಒಟ್ಟಾರೆ, ಮನುಷ್ಯನ ಸಂಪಾದನಪ್ರವೃತ್ತಿಯು ಸಮಾಜಕ್ಕೆ ಉಪಕಾರಕವೇ ಆಗಿರುತ್ತದೆ, ಆದರೆ ಸಂಪಾದನ ಪ್ರವೃತ್ತಿಯ ಪ್ರೇರಣೆಯಿಂದ ತೈಮೂರಲಂಗನಂಥವರು ಪರದೇಶಗಳ ಮೇಲೆ ಸಾಗಿಹೋಗಿ ಅಲ್ಲಿಯ ಜನರ ಕೊಲೆ ಸುಲಿಗೆಗಳನ್ನು ಮಾಡಿ ಧನವನ್ನು ಸಂಪಾದಿಸುವುದು ಅನಿಷ್ಟವಾದದ್ದೂ ಅಪಾಯಕಾರಕವಾದದ್ದೂ ಆಗಿದೆ.

ಮಕ್ಕಳು ಸ್ವಲ್ಪ ದೊಡ್ಡವರಾಗಿ ಓಡಾಡಲಾರಂಭಿಸಿದರೆಂದರೆ, ಕೆಲವು ಸಣ್ಣ ಪುಟ್ಟ ವಸ್ತುಗಳನ್ನು ಸ್ವತಃ ಸಂಪಾದಿಸತೊಡಗುವರು. ಹಿರಿಯರ ಸಂಗಡ ನದಿಯ ಇಲ್ಲವೆ ಸಮುದ್ರದ ದಂಡೆಗೆ ಹೋದಾಗ ಅಲ್ಲಿಯ ಉಸುಬಿನ ಬೈಲಿನಲ್ಲಿ ಅಡ್ಡಾಡಿ ಅಲ್ಲಿ ದೊರೆಯುವ ಶಂಖ, ಶಿಂಪು, ನವಿದು ಸಾಪಾದ ಗುಂಡು ಬೆನಕಗಳನ್ನು ಆರಿಸಿ ತರುವರು. ಸಿನೇಮಾದ ಹಸ್ತಪತ್ರಿಕೆಗಳನ್ನೂ ವರ್ತಮಾನಪತ್ರಗಳೊಳಗಿನ ಚಿತ್ರಗಳನ್ನೂ ಸಂಗ್ರಹಿಸುವರು, ಹೆಣ್ಣುಮಕ್ಕಳು ಅರಿವೆಯ ಸಣ್ಣ ಸಣ್ಣ ಚೂರುಗಳನ್ನು ತಮ್ಮ ಆಟಿಗೆಯ ಸಲುವಾಗಿ ಕಾಯ್ದಿಡುವರು. ವಯಸ್ಸು ಹೆಚ್ಚಾದಂತೆ ಅವರ ಸಂಪಾದನ ಪ್ರವೃತ್ತಿಯು ಬೆಳೆದು ಉತ್ತಮೋತ್ತಮವಾದ ಪುಸ್ತಕಗಳು, ಗಡಿಯಾರ, ಆಟದ ಒಡವೆಗಳು ಚಿತ್ರಗಳು ಮುಂತಾದ ವಸ್ತುಗಳನ್ನು ಸಂಪಾದಿಸುವಲ್ಲಿಯೂ, ಸಂಗ್ರಹಿಸಿಡುವಲ್ಲಿಯೂ ಅವರು ಬಹಳ ಆನಂದಪಡುತ್ತಾರೆ. ಅವರು ಆಟದಲ್ಲಿಯಾಗಲಿ, ಚಿತ್ರಕಲೆಯಲ್ಲಾಗಲಿ, ಅಭ್ಯಾಸದಲ್ಲಿಯಾಗಲಿ, ಮೇಲೆ ನಂಬರು ಪಡೆದು ಇನಾಮು ದೊರಕಿಸಲಿಕ್ಕೆ ಯತ್ನ ಮಾಡುವರು.

ಮನುಷ್ಯನ ವಯಸ್ಸು ಹೆಚ್ಚಾದಂತೆ ಅವನ ಮಹತ್ವಾಕಾಂಕ್ಷೆಯು ಬೆಳೆಯುವುದು. ಅವನ ಸಂಪಾದನ ಪ್ರವೃತ್ತಿಯು ಹೆಚ್ಚು ಕಸುವಿನಿಂದ ಕೆಲಸಮಾಡುವುದು. ಮದುವೆಯಾದ ಮೇಲೆ ಅವನು ತನ್ನ ಹೆಂಡತಿ, ಮಕ್ಕಳ ಸಲುವಾಗಿ ಹೆಚ್ಚು ಶ್ರಮಬಟ್ಟು, ದ್ರವ್ಯವನ್ನು ಗಳಿಸುವನು. ಸಮಾಜದ ಸಲುವಾಗಿ ಇಲ್ಲವೆ ಒಂದು ಸಂಸ್ಥೆಯ ಸಲುವಾಗಿ ಸ್ವಾರ್ಥತ್ಯಾಗವನ್ನು ಮಾಡುವ ಮನುಷ್ಯನ ಸಂಪಾದನ ಪ್ರವೃತ್ತಿಯು ಒಳ್ಳೇ ಬಲವತ್ತರವಾದದ್ದಿರುತ್ತದೆ. ಪಂಡಿತ ಮದನಮೋಹನ ಮಾಲವೀಯರವರು, 'ಪೈಸಾಫಂಡಿ' ನ ಕಾಳೆಯವರು ಖಾದೀ ಕೇಂದ್ರದ ಸಲುವಾಗಿಯೂ, ಹರಿಜನರ ಸಲುವಾಗಿಯೂ ಧನವನ್ನು ಕೂಡಿಸಿದ ಮಹಾತ್ಮಾ ಗಾಂಧಿಯವರೂ ಈ ಮಾತಿಗೆ ಉದಾಹರಣರಾಗಿದ್ದಾರೆ.

ಸಂಪಾದನ ಪ್ರವೃತ್ತಿಯಲ್ಲಿ ಸಂಪಾದನ ಮಾಡೋಣ, ಹಾಗು ಸಂಚಯ ಮಾಡೋಣ ಈ ಎರಡೂ ಕಾರ್ಯಗಳ ಸಮಾವೇಶವಾಗು

ತ್ತದೆ. ಸಂಪಾದನ ಪ್ರವೃತ್ತಿಯ ಮೂಲದಲ್ಲಿ ನಾನು, ನನ್ನದು, ಎಂಬ ಕಲ್ಪನೆಯಿಂದಾಗುವ ಆನಂದದ ಭಾವನೆ ಇರುವುದೆಂಬುದನ್ನು ಹಿಂದೆ ಹೇಳಿದ್ದೇವೆ. ಮಕ್ಕಳ ಮನಸಿನಲ್ಲಿ ಸಂಪಾದನ ಪ್ರವೃತ್ತಿಯನ್ನು ಜಾಗೃತಗೊಳಿಸಿ ಅದಕ್ಕೆ ಸರಿಯಾದ ಮಾರ್ಗತೋರಿಸುವಾಗ ಮೇಲೆ ಹೇಳಿದ ಮಹತ್ತ್ವದ ಸಂಗತಿಗಳನ್ನು ಶಿಕ್ಷಕರೂ ಪಾಲಕರೂ ಲಕ್ಷ್ಯದಲ್ಲಿಡತಕ್ಕದ್ದು. ಸಣ್ಣಮಕ್ಕಳಿಗೆ ಬೇಕಾಗುವ ಎಲ್ಲತರದ ವಸ್ತುಗಳು—ಅಂಗಿಟೊಪ್ಪಿಗೆಗಳು, ಚಡ್ಡಿಗಳು, ಮಣಿ, ತಾಟು, ಬಟ್ಟಲ, ಮುಂತಾದವುಗಳು—ಸ್ವತಂತ್ರವಾಗಿರಬೇಕು. ಅವರ ಆಟಿಗೆಗಳು ಕೂಡ ಸ್ವತಂತ್ರವಾಗಿರಬೇಕು. ಈ ಎಲ್ಲ ವಸ್ತುಗಳು ನನ್ನವೆಂಬ ಭಾವನೆಯು ಅವರ ಮನಸಿನಲ್ಲಿ ಹುಟ್ಟಲಿಕ್ಕೆ ಬೇಕು. ಮಮತ್ವದ ಭಾವನೆ ಅಥವಾ ನನ್ನದು ಎಂಬ ಭಾವನೆಯ ಮೇಲೆಯೇ ಈ ಜಗತ್ತಿನ ಎಲ್ಲ ವ್ಯವಹಾರಗಳು ನಡಿದಿವೆ. ಹುಡುಗರಿಗೆ ತಿಳಿಯಹತ್ತಿದ ಮೇಲೆ ಅವರಿಗೆ ತಮ್ಮ ವಸ್ತುಗಳ ಬಗೆಗೆ ಎಚ್ಚರಪಡಲಿಕ್ಕೆ ಕಲಿಸಬೇಕು. ತಮ್ಮ ಅರಿವೆ-ಅಂಚಡಿಗಳನ್ನು ಪುಸ್ತಕ ಸಾಮಾನುಗಳನ್ನು ಇಟ್ಟುಕೊಳ್ಳುವುದಕ್ಕೆ ಒಂದು ಪೆಟ್ಟಿಗೆಯನ್ನಾಗಲಿ, ಕಪಾಟನ್ನಾಗಲಿ, ಕೊಡಬೇಕು. ಅದರಲ್ಲಿ ಅವರು ತಮ್ಮ ವಸ್ತುಗಳನ್ನು ಸುವ್ಯವಸ್ಥೆಯಿಂದ ಇಟ್ಟುಕೊಳ್ಳತಕ್ಕದ್ದು. ಮಕ್ಕಳಿಗೆ ಒಂದು ಸ್ವತಂತ್ರವಾದ ಕೋಣೆಯು ಇರುವುದು ಅವಶ್ಯ; ಕನಿಷ್ಟಪಕ್ಷಕ್ಕೆ ಎಲ್ಲ ಹುಡುಗರಿಗೆ ಕೂಡಿ ಒಂದು ಕೋಣೆಯು ಇದ್ದರೂ ಸಾಕು. ಈ ಕೋಣೆಯನ್ನು ಸ್ವಚ್ಛವಾಗಿಟ್ಟುಕೊಳ್ಳಲಿಕ್ಕೆ ಅವರಿಗೆ ಕಲಿಸತಕ್ಕದ್ದು. ಮಮತ್ವದ ಭಾವನೆಯನ್ನು ಹುಟ್ಟಿಸುತ್ತಿರುವಾಗ ಪಾಲಕರೂ ಶಿಕ್ಷಕರೂ ಮಕ್ಕಳ ಮನಸಿನಲ್ಲಿ ಕ್ಷುದ್ರಸ್ವಾರ್ಥವು ಹುಟ್ಟದಂತೆ ಎಚ್ಚರಪಡತಕ್ಕದ್ದು; ಹುಡುಗನು ತನ್ನ ಆಟಿಗೆಯನ್ನು ಸ್ವಸಂತೋಷದಿಂದ ತನ್ನ ತಂಗಿಗೆ ಇಲ್ಲವೆ ತಮ್ಮನಿಗೆ ಅಥವಾ ಗೆಳೆಯನಿಗೆ ಕೊಟ್ಟು ಸಹಾನುಭೂತಿಯನ್ನು ತೋರಿಸತಕ್ಕದ್ದು. ಮಕ್ಕಳ ವಸ್ತುಗಳು ಹಿರಿಯರಿಗೆ ಬೇಕಾಗಿದ್ದರೆ ಅದನ್ನು ಅಧಿಕಾರಬಲದಿಂದ ಬೇಡದೆ ಮೃದು ಸ್ವರದಿಂದಲೂ ಸವಿಮಾತಿನಿಂದಲೂ ಬೇಡಿದರೆ ಮಗುವಿಗೆ ಆನಂದವಾಗುವುದು.

ಮಕ್ಕಳು ಸಾಲೆಗೆ ಹೋಗಹತ್ತಿದರೆಂದರೆ ‘ಈ ವರ್ಗದ ಕೋಣೆಯು ನಮ್ಮದೆಂಬ ಭಾವನೆಯನ್ನು ಅವರ ಮನಸಿನಲ್ಲಿ ಹುಟ್ಟಿಸಬೇಕು. ಪ್ರೇಮದ ಶಿಕ್ಷಕನು ಈ ತರದ ಭಾವನೆಯನ್ನು ಬಹುಬೇಗ ಹುಟ್ಟಿಸುವನು. ಹುಡುಗರ ಮನಸಿನಲ್ಲಿ ಈ ಮಹತ್ವದ ಸುಖದಾಯಕ ಭಾವನೆಯು ಉತ್ಪನ್ನವಾದ ಕೂಡಲೆ ಹುಡುಗರು ತಮ್ಮ ವರ್ಗದ ಕೋಣೆಯನ್ನು ಸ್ವಚ್ಛವಾಗಿರಿಸುವರು; ಅಲ್ಲಿರುವ ವಸ್ತುಗಳನ್ನು ವ್ಯವಸ್ಥೆಯಿಂದ ಇಡುವರು; ವರ್ಗದ ತೋಟದ ಸಲುವಾಗಿ ಬೀಜಗಳನ್ನು ಸಂಗ್ರಹಿಸುವರು; ವರ್ಗದ ಸಂಗ್ರಹಾಲಯದ ಸಲುವಾಗಿ ನಾನಾಬಗೆಯ ಅಪರೂಪದ ವಸ್ತುಗಳನ್ನು ಕೂಡಹಾಕುವರು; ಇತ್ಯಾದಿ ಕೆಲಸಗಳಿಂದ ಅವರ ಸಂಪಾದನ ಪ್ರವೃತ್ತಿಗೆ ಸರಿಯಾದ ಮಾರ್ಗವು ಹತ್ತುವುದು. ಪಾಲಕರು ತಮ್ಮ ಮಕ್ಕಳಿಗೆ ಜಾತ್ರೆ, ಉತ್ಸವ, ಹಬ್ಬ, ಪ್ರದರ್ಶನ, ಮುಂತಾದ ಪ್ರಸಂಗಗಳಲ್ಲಿ ಚಿತ್ರದ ಪುಸ್ತಕಗಳನ್ನಾಗಲಿ ಆಟಿಗೆಗಳನ್ನಾಗಲಿ, ಪ್ರೀತಿಯ ಸಣ್ಣಪುಟ್ಟ ಒಡವೆಗಳನ್ನಾಗಲಿ ಕೊಳ್ಳಲಿಕ್ಕೆಂದು ಅಲ್ಪ ಸ್ವಲ್ಪ ಹಣವನ್ನು ಕೊಡುತ್ತಿರಬೇಕು. ಮತ್ತು ಅವರು ಆ ಹಣದ ಯೋಗ್ಯ ಉಪಯೋಗವನ್ನು ಮಾಡುವಂತೆ ಮೇಲ್ವಿಚಾರಣೆಯನ್ನು ಮಾಡುತ್ತಿರಬೇಕು. ಹುಡುಗರು ತಮಗೆ ಕೊಟ್ಟ ಹಣದಲ್ಲಿ ಕೆಲವೊಂದು ಭಾಗವನ್ನು ತಮಗಿಂತ ಚಿಕ್ಕವರ ಸಲುವಾಗಿ ಉಪಯೋಗಿಸುವಂತೆ ತಿಳಿಸಿಹೇಳಬೇಕು.

ಹೊಸ ಇಯತ್ತೆಗೆ ಸೇರಿದ ಬಾಲಕನಿಗೆ ಒಂದು ವರ್ಷದವರೆಗೆ ಸಾಲುವಷ್ಟು ಕಾಗದ, ಪೇನ್ಸಿಲು, ಟಾಕು, ಮಸಿ ಅಭ್ಯಸನ ಪುಸ್ತಕ ಮುಂತಾದವುಗಳನ್ನು ಕೊಟ್ಟರೆ ಅವನು ಅವುಗಳನ್ನು ಜತನದಿಂದಲೂ ಮಿತದಿಂದಲೂ ಉಪಯೋಗಿಸುವನು. ವರ್ಗದಲ್ಲಿ ತನ್ನ ಓರಿಗೆಯವನೊಬ್ಬನು ಅಕಸ್ಮಾತ್ತಾಗಿ ಯಾವದೊಂದು ಒಡವೆಯನ್ನು ತರಲಿಕ್ಕೆ ತಪ್ಪಿದರೆ ಇವನು ಸಹಾನುಭೂತಿಯಿಂದ ಅವನಿಗೆ ಕೊಟ್ಟು, ಸಾಹಾಯ್ಯ ಮಾಡಲು ಮುಂದಾಗುವನು. ಇದು ಅವನ ಔದಾರ್ಯ, ಸ್ನೇಹ ಮೊದಲಾದವುಗಳ ಪ್ರಥಮ ಪಾಠವೆಂದು ತಿಳಿಯಬಹುದು. ತನಗೇ

ಆ ವಸ್ತುಗಳಿಲ್ಲದ ಬಾಲಕರು ಅನ್ಯರಿಗೆ ನೆರವಾಗುವುದು ಹೇಗೆ? ಶ್ರೀಮಂತ ಪಾಲಕರು ತಮ್ಮ ಮಕ್ಕಳಿಗೆ ಈ ರೀತಿಯಿಂದ ಬಡವರ ಮಕ್ಕಳಿಗೆ ಸಹಾಯ್ಯಮಾಡಿ, ಆ ಸದ್ಗುಣಗಳನ್ನು ಕಲಿಯುವಂತೆ ಅನುಕೂಲತೆಗಳನ್ನು ಒದಗಿಸಿಕೊಡತಕ್ಕದ್ದು.



# ೯ನೆಯ ಪ್ರಕರಣ

## ಆಟಗಳು

ಚಿಕ್ಕ ಮಕ್ಕಳ ಸ್ವಭಾವದಲ್ಲಿ ಏನಾದರೂ ವೈಶಿಷ್ಟ್ಯವು ಕಂಡು-ಬರುತ್ತಿದ್ದರೆ ಅದು, ಆಟಕ್ಕೆ ಮೆಚ್ಚಿರುವ ಅವರ ಸ್ವಾಭಾವಿಕವಾದ-ಪ್ರವೃತ್ತಿಯಲ್ಲಿ ವ್ಯಕ್ತವಾಗುವುದು. ಚಿಕ್ಕ ವಯಸ್ಸಿನಲ್ಲಿಯೇ ಮಕ್ಕಳು ಆಟದ ಕಡೆಗೆ ಹೆಚ್ಚು ಲಕ್ಷ ಕೊಡುವುದು ಸ್ವಾಭಾವಿಕವೂ ಅನುಕೂಲವೂ ಆಗಿರುವುದು. ಮುಂದಿನ ಆಯುಷ್ಯದಲ್ಲಿ ಅನೇಕ ಪ್ರಕಾರದ ಹೊಣೆಗಾರಿಕೆಯ ಕೆಲಸಗಳು ಅವರ ಮೈಮೇಲೆ ಬೀಳುತ್ತ ಹೋಗುವುದರಿಂದ ಆಟದ ಪ್ರಮಾಣವು ತೀರ ಕಡಿಮೆಯಾಗುತ್ತದೆ. ಚಿಕ್ಕ ವಯಸ್ಸಿನಲ್ಲಿ ಬಾಲಕರು ತಮ್ಮ ಎಲ್ಲ ಕಾಲವನ್ನೂ ಉತ್ಸಾಹವನ್ನೂ ಆಟದಲ್ಲಿಯೇ ಉಪಯೋಗಿಸುವರು. ಕ್ವಚಿತ್ ಪ್ರಸಂಗದಲ್ಲಿ ಮಾತ್ರ ಪ್ರತಿಕೂಲ ಪರಿಸ್ಥಿತಿಯ ಮೂಲಕ ಮಕ್ಕಳಿಗೆ ಆಟದಲ್ಲಿ ಮನಸ್ಸು ಹಾಕುವುದು ತೀರ ಅಶಕ್ಯವಾಗುವುದು. ಆದುದರಿಂದ ಅವರ ಆಟದ ಪ್ರವೃತ್ತಿಗೆ ಪ್ರತಿಬಂಧವಾಗುತ್ತದೆ. ಊಟ ನಿದ್ದೆಗಳು ಮಕ್ಕಳಿಗೆ ಎಷ್ಟು ಸ್ವಾಭಾ-ವಿಕವಾಗಿರುವುವೋ ಅಷ್ಟೇ ಆಟಗಳು ಕೂಡ ಅವರಿಗೆ ಸ್ವಾಭಾವಿಕ ವಾಗಿರುವುವು.

ಚಿಗರಿಯ ಮರಿಗಳು, ನಾಯಿಯ ಕುನ್ನಿಗಳು, ಬೆಕ್ಕಿನ ಮರಿಗಳು, ಕುರಿಮರಿಗಳು ಆಡುತ್ತಿರುವುದನ್ನು ನಾವು ನೋಡುತ್ತೇವೆ. ಚಿನ್ನಾಟ ಮಾಡೋಣ, ಒಂದು ಮತ್ತೊಂದರ ಬೆನ್ನುಹತ್ತಿ ಓಡೋಣ. ಜಿಗಿಯೋಣ, ಇವೆಲ್ಲ ಕೃತಿಗಳು ಅವುಗಳ ಆಟಗಳಾಗಿರುತ್ತವೆ. ನಾಯಿಗಳು ತಮ್ಮತಮ್ಮೊಳಗೆ ಜಗಳಾಡುವ ಆಟಗಳನ್ನು ಆಡುತ್ತಿರು ತ್ತವೆ. ಇದರಿಂದ ಆಟದ ಪ್ರವೃತ್ತಿಯು ಮನುಷ್ಯ ಪ್ರಾಣಿಯಂತೆ ಇತರ ಕೆಲವು ಪ್ರಾಣಿಗಳಲ್ಲಿಯೂ ಉಂಟೆಂದು ಸಿದ್ಧವಾಗುತ್ತದೆ.

ಮನುಷ್ಯಪ್ರಾಣಿಯಲ್ಲಿ ಆಟದ ಈ ಪ್ರವೃತ್ತಿಯು ಬಹಳ ಬಲವತ್ತರವಾಗಿರುತ್ತದೆ. ಆಟದ ಸೇರಿಕೆಯು ಮನುಷ್ಯನ ಇಡೀ ಆಯುಷ್ಯದಲ್ಲಿ ಒಂದೇಸಮನೆ ಇರುವುದು. ಮನುಷ್ಯನು ಚಿಕ್ಕಂದಿನಲ್ಲಿಯೂ, ತಾರುಣ್ಯದಲ್ಲಿಯೂ ಆಟಗಳನ್ನು ಆಡುತ್ತಿರುವನಲ್ಲದೆ ಮುಪ್ಪಿನ ಕಾಲದಲ್ಲಿಯೂ ಅವನ ಆಟದ ಮೇಲಿನ ಪ್ರೀತಿಯು ಕಡಿಮೆಯಾಗುವುದಿಲ್ಲ.

ವಯೋಮಾನಕ್ಕನುಸರಿಸಿ ಆಟಗಳು ಮಾತ್ರ ಬದಲಾಗುವುವು. ಕೂಸು ಮೂರು ನಾಲ್ಕು ತಿಂಗಳದ್ದಾದ ಕೂಡಲೆ ಒಳ್ಳೇ ಕಸುವಿನಿಂದ ಕೈಕಾಲುಗಳನ್ನು ಅಲ್ಲಾಡಿಸತೊಡಗುವುದು. ಇಂತಹ ಕೆಲಸಗಳನ್ನು ಅದು ತಿಳುವಳಿಕೆಯಿಂದ ಉದ್ದೇಶಪೂರ್ವಕವಾಗಿ ಮಾಡುವುದಿಲ್ಲ; ಆ ಕೆಲಸಗಳು ಸ್ವಾಭಾವಿಕವಾಗಿಯೇ ಆಗುತ್ತಿರುತ್ತವೆ. ಆದರೆ ಈ ಕಾರ್ಯಗಳಿಂದ ಮಗುವಿಗೆ ಆನಂದವಾಗುತ್ತದೆ. ಕೈಕಾಲು ಅಲ್ಲಾಡಿಸುವ ಈ ಕ್ರಿಯೆಯು ಸಣ್ಣ ಮಕ್ಕಳ ಒಂದು ಬಗೆಯ ಆಟವೇ ಎಂದು ಹೇಳಲಿಕ್ಕೆ ಅಡ್ಡಿಯಿಲ್ಲ. ಕೂಸು ಸ್ವಲ್ಪ ದೊಡ್ಡದಾದ ಮೇಲೆ ವಸ್ತುಗಳನ್ನು ಕೈಯಲ್ಲಿ ಹಿಡಿಯುವುದು, ಅವುಗಳನ್ನು ಅಲ್ಲಾಡಿಸುವುದು, ನೆಲದ ಮೇಲೆ ಇಲ್ಲವೆ ತೊಟ್ಟಿಲದ ಪಟ್ಟಿಗಳ ಮೇಲೆ ಅಪ್ಪಳಿಸುವುದು ಈ ಮುಂತಾದ ಕಾರ್ಯಗಳನ್ನು ಮಗುವು ಮಾಡಲಾರಂಭಿಸುವುದು. ಗಿಲಗಂಚಿಯನ್ನಾಗಲಿ; ಗೆಜ್ಜೆಯನ್ನಾಗಲಿ, ಕೈಯಲ್ಲಿ ಹಿಡಿದು ಬಾರಿಸುವುದು ಮಕ್ಕಳಿಗೆ ಬಹು ಸಂತೋಷದ ಕೆಲಸವು. ತನ್ನ ಕೈಗೆ ಸಿಕ್ಕ ಕಾಗದವನ್ನು ಎರಡೂ ಕೈಗಳಿಂದ ಜಗ್ಗಿ ಹರಿಯುವುದರಲ್ಲಿ ಮಕ್ಕಳಿಗೆ ಬಹಳ ಆನಂದವೆನಿಸುತ್ತದೆ. ಮಗುವಿನ ಕೈಯಲ್ಲಿ ಯಾರಾದರೂ ಒಂದು ವಸ್ತುವನ್ನು ಕೊಟ್ಟರೆ, ಅದು ಒಮ್ಮೊಮ್ಮೆ ಅದನ್ನು ದೂರ ಬೀಸಾಡುವುದು; ಪುನಃ ಕೊಟ್ಟರೆ ಪುನಃ ಬೀಸಾಡುವುದು. ಈ ಪ್ರಕಾರ ಎಷ್ಟೋ ಸಾರೆ ಮಾಡಿ ಆನಂದಪಡುತ್ತಿರುವುದು. ಈ ಎಲ್ಲ ಪ್ರಕಾರಗಳು ಹುಡುಗರ ಆಟಗಳೇ ಆಗಿರುವುವು. ಹುಡುಗರು ಕೂಡಲಾರಂಭಿಸಿದರೆಂದರೆ ಕೈಯೊಳಗೆ ಒಂದು ಸಣ್ಣ ಬಡಿಗೆಯನ್ನು ಹಿಡಿದು ಪಾತ್ರೆಯನ್ನು ಬಾರಿಸುವ ಆಟವು ಅವರಿಗೆ ಬಹಳ ಸೇರುವುದು. ಎಷ್ಟೋ

ಹೊತ್ತಿನ ವರೆಗೆ ಮಗುವು ಪಾತ್ರೆಯನ್ನು ಬಾರಿಸುತ್ತಲೇ ಇರುವುದು. ಮಗುವು ಎರಡು ವರ್ಷದ್ದಾದ ಮೇಲೆ ತನ್ನ ಅಕ್ಕನು ಇಲ್ಲವೆ ಅಣ್ಣನು ಆಡುವ ಆಟಗಳನ್ನು ನೋಡಿ ಅವರನ್ನು ಅನುಕರಿಸಿ ತಾನೂ ಅವರಂತೆ ಆಟಗಳನ್ನು ಆಡತೊಡಗುವುದು. ಮೂರು ವರ್ಷಗಳಾದ ಮೇಲೆ ತನ್ನ ಅಕ್ಕನ ಅಥವಾ ಅಣ್ಣನ ಕೂಡ ಆಡುವುದರಲ್ಲಿ ಮಗುವಿಗೆ ಆನಂದ ವೆನಿಸುತ್ತದೆ. ಅಯ್ದು ವರ್ಷದ ಮಗುವು ಕುದುರೆಯ ಆಟ, ಕಣ್ಣು ಮುಚ್ಚಣಿಕೆಯ ಆಟ, ಕುಂಟ ಹಲಪಿ, ಸಳಿಯನ್ನು ತಿರುಗಿಸುತ್ತ ಓಡುವುದು. ಮುಂತಾದ ಆಟಗಳನ್ನು ಆಡುವುದು. ಆ ತರುವಾಯ ಹುಡುಗರು ತಮ್ಮತಮ್ಮೊಳಗೆ ಗುಂಪುಗಳನ್ನು ಮಾಡಿಕೊಂಡು ಆಟಗಳನ್ನು ಆಡುವರು; ಎಂಟು ಒಂಬತ್ತು ವರ್ಷದವರಾದರೆಂದರೆ ಫಣಿ-ಚಂಡು, ಗಾಳೀಪಟ, ಖೋಖೋ, ಹುತುತು, ಮುಂತಾದ ಆಟಗಳನ್ನು ಆಡುವರು ; ಹುಡುಗಿಯರು ಝಿಮ್ಮಾ ಫುಗಡಿ ಮುಂತಾದ ಆಟಗಳನ್ನು ಆಡುವರು. ಪ್ರಾಥಮಿಕ ಸಾಲೆಯೊಳಗಿನ ಮೇಲಿನ ಇಯತ್ತೆಯ ಹುಡುಗರೂ, ಮಾಧ್ಯಮಿಕಸಾಲೆಯ ಹುಡುಗರೂ ತಿಳ್ಳೀ, ಖೋಖೋ, ಕ್ರಿಕೆಟ್, ಫುಟ್‌ಬಾಲ, ಹಾಕಿ ಮುಂತಾದ ಪಂಗಡಗಳನ್ನು ಮಾಡಿಕೊಂಡು ಆಡುವ ಆಟಗಳನ್ನು ಆಡುವರು. ನಡನಡುವೆ ಹುಡುಗರು ಇಸ್ಪೇಟು, ಪಗಡಿ, ಕೇರಮ್ ಮುಂತಾದ ಮನೆಯಲ್ಲಿ ಒತ್ತಟ್ಟಿಗೆ ಕುಳಿತು ಆಡುವ ಆಟಗಳನ್ನೂ ಆಡುವರು.

ಈ ಮೇರೆಗೆ ಬೇರೆ ಬೇರೆ ವಯಸ್ಸಿನ ಹುಡುಗರು ಯಾವಾಗಲೂ ಆಟಕ್ಕೆ ಏಕೆ ಮೆಚ್ಚಿರುವರು ? ಆಯಾ ವಯಸ್ಸಿನಲ್ಲಿ ಅವರು ಆಡುವ ಆಟಗಳು ಅಂತಹವೇ ಏಕೆ ಇರುವವು ? ಈ ವಿಷಯವಾಗಿ ಅನೇಕ ಸಂಶೋಧಕರು ಬೇರೆ ಬೇರೆ ಕಾರಣಗಳನ್ನು ಹೇಳಿದ್ದಾರೆ ಅವುಗಳಲ್ಲಿ ಕೆಲವನ್ನು ಇಲ್ಲಿ ಬರೆಯುವೆನು.

**ಡಾ. ಶಿಲರ, ಹಾಗು ಸ್ಪೆನ್ಸರ ಎಂಬುವವರ ಅಭಿಪ್ರಾಯ:—** ಮಕ್ಕಳು ತಮ್ಮ ಮಿಂದುಳಿಸಲ್ಲಿರುವ ಪ್ರಚಂಡವಾದ ಉತ್ಸಾಹ ಶಕ್ತಿಯನ್ನು ಆಟದ ಸ್ವರೂಪದಿಂದ ಆಚರಣೆಯಲ್ಲಿ ತರುತ್ತಾರೆ. ಚಿಕ್ಕ

ಮಕ್ಕಳಲ್ಲಿ ಈ ಉತ್ಸಾಹಶಕ್ತಿಯು ಒಳ್ಳೇ ಬಲವತ್ತರವಾಗಿರುವುದರಿಂದ ಅವರು ಯಾವಾಗಲೂ ಆಟದಲ್ಲಿ ತೊಡಗಿರುವುದು ಕಂಡುಬರುವುದು. ಅಶಕ್ತನೂ ರೋಗಿಷ್ಠನೂ ದಣಿದವನೂ ಆದ ಹುಡುಗನಿಗಿಂತ, ಸುದೃಢನೂ, ಉತ್ಸಾಹಿಯೂ ಆದ ಹುಡುಗನು ಹೆಚ್ಚು ಆಡುತ್ತಿರುವುದು ದೃಷ್ಟಿಗೆ ಬೀಳುವುದು.

**ಪ್ರೋ. ಗ್ರೋಸರೆಂಬುವವರ ಅಭಿಪ್ರಾಯ :—** "ಮಕ್ಕಳು ತಮ್ಮ ಆಯುಷ್ಯದೊಳಗಿನ ಎಲ್ಲ ಪ್ರಕಾರದ ಪರಿಸ್ಥಿತಿಯ ಕೂಡ ಹೇಗೆ ಹೋರಾಡಬೇಕೆಂಬುವುದನ್ನು ಕಲಿಯಬೇಕಾಗಿರುವುದು ; ಅದನ್ನು ಅವರು ಆಟದಲ್ಲಿಯೇ ಕಲಿಯುವರು" ಕಡುಗಲಿಯಾದ ಡ್ಯೂಕ ಆಫ ವೆಲ್ಲಿಂಗಟನ್ನನು ಒಂದು ಸಂದರ್ಭದಲ್ಲಿ ಅಂದದ್ದೇನಂದರೆ "ವಾಟಲೂರ್ ಕದನವನ್ನು ಗೆಲ್ಲಲಿಕ್ಕೆ ಈಟನ್ನಿನ ಆಟದ ಮೈದಾನವೇ ಕಾರಣವು" ಜೀವನದ ಎಲ್ಲ ಸಂದರ್ಭಗಳಲ್ಲಿಯೂ ಬೇಕಾಗುವ ಸದ್ಗುಣಗಳೆಲ್ಲವನ್ನೂ ಸಾಧಿಸಿಕೊಳ್ಳುವುದಕ್ಕಾಗಿ ಇಂಗ್ಲಂಡದ ಜನರಲ್ಲಿ "ಆಟವಾಡಬೇಕು" ಎಂಬ ಈ ಮಾತು ಮಂಗಲ ಶ್ಲೋಕವಾಗಿದೆ.

**ಮಿಸ್ ಆಶಲ್ಟನ್**ರೆಂಬುವವರು ಪ್ರಾಣಿಶಾಸ್ತ್ರದ ತತ್ವವನ್ನು ಅವಲಂಬಿಸಿ ಮಕ್ಕಳ ಆಟದ ಪ್ರವೃತ್ತಿಯ ಉಪಪತ್ತಿಯನ್ನು ಹೇಳುವರು. ಅವರ ಮತವೇನಂದರೆ:— "ಪ್ರತಿ ಒಂದು ಆಟವು ವ್ಯಕ್ತಿಯ ಶಾರೀರಿಕ ರಚನೆಗೆ ಅನುಸರಿಸಿ ಇರುತ್ತದೆ. ಮತ್ತು ಅದು ಆ ವ್ಯಕ್ತಿಯ ಶಾರೀರಿಕ ಬೆಳವಣಿಗೆಗೆ ಅತ್ಯಂತ ಆವಶ್ಯಕವಾದ ಸಾಧನಗಳಿಂದ ಕೂಡಿದ್ದಾಗಿರುತ್ತದೆ." ಬೇರೆ ಬೇರೆ ವಯಸ್ಸಿನ ಹುಡುಗರು ಆಡುವ ಆಟಗಳು ಮೇಲೆ ವಿವರಿಸಲ್ಪಟ್ಟಿರುವುವು. ಆ ವಿವೇಚನದಿಂದ ಈ ಶಾಸ್ತ್ರಜ್ಞರು ಹೇಳುವ ಮಾತಿನ ನಿಜತ್ವವು ಗೊತ್ತಾಗುವುದು. ಚಿಕ್ಕ ವಯಸ್ಸಿನ ಆಟಗಳು ತೀರ ಸಾದಾತರದವೂ ಸುಲಭವಾದವುಗಳೂ ಇರುವುವು. ಯಾಕೆಂದರೆ: ಆಗಿನ ಅವರ ಅವಯವಗಳ ರಚನೆಯು ತೀರ ಸಾದಾತರದ್ದಿರುವುದರಿಂದ ಅವುಗಳಿಗೆ ಅನುಗುಣವಾಗಿ ಅವರು ತೀರ ಸಾದಾ ಆಟಗಳನ್ನು ಆಡುವರು. ಮುಂದೆ ಅವರ ವಯಸ್ಸು ಹೆಚ್ಚಾದಂತೆ ಶಾರೀರಿಕ

ಬೆಳವಣಿಗೆಯೂ ಮಾನಸಿಕ ವಿಕಾಸವೂ ಹೆಚ್ಚು ಹೆಚ್ಚು ಆಗುವುದರಿಂದ ಅವುಗಳಿಗನುಗುಣವಾಗಿ ಅವರು ಕಲ್ಪನಾಚಾತುರ್ಯ ಧೋರಣ ಈ ಮುಂತಾದವುಗಳನ್ನು ಉಪಯೋಗಿಸಿ ಬಹು ತೊಡಕಿನ ಆಟಗಳನ್ನು ಆಡುವರು. ಸಾರಾಂಶ, ಮಕ್ಕಳ ಆಟ, ಅವರ ವಯಸ್ಸು, ಶರೀರ ರಚನೆ, ಅವಯುವಗಳ ಬೆಳವಣಿಗೆ ಮನಸ್ಸಿನ ವಿಕಾಸ ಇವೆಲ್ಲವುಗಳಲ್ಲಿ ಅತಿ ನಿಕಟಸಂಬಂಧವಿರುತ್ತದೆ. ಮಕ್ಕಳ ಆಟಗಳು ಉಳಿದ ಎಲ್ಲ ಸಂಗತಿಗಳಿಗೆ ಅನುಗುಣವಾಗಿರುತ್ತವೆ.

ಶಿಕ್ಷಣದ ದೃಷ್ಟಿಯಿಂದ ಮಕ್ಕಳಿಗೆ ಆಟಗಳಿಂದ ಅನೇಕ ಲಾಭಗಳಾಗುತ್ತವೆ. ಮಕ್ಕಳ ಸ್ನಾಯುಗಳು ತಕ್ಕರೀತಿಯಿಂದ ಬಲಕಟ್ಟಾಗಿ, ಬೆಳೆದು ಅವುಗಳಲ್ಲಿ ಕೌಶಲ್ಯ ಚಪಲತೆಗಳನ್ನು ಉತ್ಪನ್ನಮಾಡುವ ವಿಷಯದಲ್ಲಿ ಆಟಗಳಿಂದ ಬಹಳ ಪ್ರಯೋಜನವಾಗುತ್ತದೆ. ರಕ್ತಾಭಿಸರಣವು ಹೆಚ್ಚಾಗಿ ರಕ್ತವು ಪರಿಶುದ್ಧವಾಗಿ ದೇಹಶಕ್ತಿಯು ಅಭಿವೃದ್ಧಿಯಾಗುವುದಕ್ಕೆ ಅವು ಒಳ್ಳೇ ಪ್ರಯೋಜನಕರಗಳಾಗುತ್ತವೆ. ವರ್ಗದ ಕೋಣೆಯಲ್ಲಿ ತಾಸು ತಾಸು ಕುಳಿತು ಮಾಡುವಂತಹ ಕೆಲಸಗಳಿಂದ ಕುಗ್ಗಿಹೋದ ಮನಸ್ಸಿನ ಉತ್ಸಾಹವನ್ನೂ ಆಸಕ್ತಿಯನ್ನೂ ಆಟಗಳು ಪುನಃ ಅಭಿವೃದ್ಧಿಗೊಳಿಸುವುವು. ಮನಸ್ಸು ಏಕಾಗ್ರತೆಯನ್ನು ಪಡೆಯುವುದರಿಂದ ಮಕ್ಕಳ ಮನಸಿನಲ್ಲಿ ಸಹಜವಾದ ಅವಧಾನಶಕ್ತಿಯು ವ್ಯಕ್ತವಾಗುವುದು. ಈ ಅವಧಾನಶಕ್ತಿಯ ಅಭಿವೃದ್ಧಿಯು ನಮ್ಮ ನಿತ್ಯ ಜೀವನದಲ್ಲಿ ಬಹಳ ಫಲಕಾರಿಯಾಗುವುದು.

ಆಟಗಳು ಮಕ್ಕಳ ಬುದ್ಧಿಶಕ್ತಿಗಳಲ್ಲಿಯೂ, ಸಂಚಲನವನ್ನುಂಟು ಮಾಡುವುವು. ಮತ್ತು ಶರೀರದ ಎಲ್ಲ ಅವಯುವಗಳೂ ತಮ್ಮ ತಮ್ಮ ಕೆಲಸಗಳಲ್ಲಿ ತೊಡಗುವಂತೆ ಜಾಗೃತಗೊಳಿಸಿ ಅನೇಕ ಪ್ರಕಾರದ ಅನುಭವ ಜ್ಞಾನವನ್ನು ತಂದುಕೊಟ್ಟು ಬುದ್ಧಿಶಕ್ತಿಗಳನ್ನು ಅಭಿವೃದ್ಧಿಪಡಿಸುವುವು.

ಈ ಮೇರೆಗೆ ಶಾರೀರಿಕ ಮಾನಸಿಕ ಶಕ್ತಿಗಳ ಬೆಳವಣಿಗೆಯು ನಡತೆಯ ಮೇಲೆ ಅಪ್ರತ್ಯಕ್ಷವಾಗಿ ಪರಿಣಮಿಸುವುದು; ಏಕೆಂದರೆ

ನಿರ್ಮಲವಾದ ದೇಹದ ಸ್ಥಿತಿಯು ನಡತೆಗೂ, ಮಾನಸಿಕ ಶಕ್ತಿಗೂ, ತಳಹದಿಯಾಗಿದೆ. ಕರ್ತವ್ಯತತ್ಪರತೆ, ಸತ್ಯದಲ್ಲಿ ಪ್ರೀತಿ, ಸ್ವಾವಲಂಬನೆ ತಾಳ್ಮೆ ಸಂಗಡಿಗರಲ್ಲಿ ನಂಬಿಕೆ, ಎಡರುಗಳನ್ನು ಎದುರಿಸುವ ಧೈರ್ಯ, ಇಂದ್ರಿಯ ನಿಗ್ರಹ, ಮನಸ್ಸು ಚಂಚಲವಾಗುವಂತಹ ಸಂದರ್ಭಗಳಲ್ಲಿಯೂ ಚಿತ್ತಸ್ಥೈರ್ಯ, ಈ ಮೊದಲಾದ ಸದ್ಗುಣಗಳು ಆಟಗಳಿಂದಲೇ ಮಕ್ಕಳಲ್ಲಿ ಉತ್ಪನ್ನವಾಗುವುವು.

ಸಾಂಘಿಕ ಆಟಗಳಿಂದ ಸಾರ್ವಜನಿಕ ಕೆಲಸಗಳ ಶಿಕ್ಷಣವು ದೊರೆಯುವುದು. ಗುಂಪಿನಲ್ಲಿ ತನ್ನನ್ನು ತಾನು ಮರೆತುಕೊಂಡು ಕೆಲಸಮಾಡುವುದು, ಗುಂಪಿನವರೆಲ್ಲರಲ್ಲಿಯೂ ಸಂಪೂರ್ಣ ಸಹಾನುಭೂತಿಯನ್ನು ತಾಳಿ ಪ್ರಬಲವಾದ ಒಕ್ಕಟ್ಟಿನಿಂದ ನಡೆಯುವುದು. ಸಂಘದ ನಿಯಮಗಳಿಂದ ಬದ್ಧನಾಗಿ ಆಟಗಳನ್ನು ಆಡುವುದು. ಯಾವನೊಬ್ಬನು ತಮ್ಮ ಗುಂಪಿಗೆ ವಿರೋಧಿಯಾದರೆ ಅವನನ್ನು ಗುಂಪಿನಿಂದ ತೊರೆದು ಬಹಿಷ್ಕರಿಸುವುದು, ಕಡೆಗೆ ಅವನು ತನ್ನ ತಪ್ಪು ಒಪ್ಪಿಕೊಂಡು, ಇತರರೊಡನೆ ಕೂಡಿಕೊಂಡು ನಡೆಯುವಂತೆ ಮಾಡುವುದು ಇವೆಲ್ಲ ಸಂಗತಿಗಳು ಸಾರ್ವಜನಿಕ ಕೆಲಸಕ್ಕೆ ಅತ್ಯಾವಶ್ಯಕ ಗುಣಗಳಾಗಿವೆ. ಇದಲ್ಲದೆ ಪ್ರಜಾಪ್ರಭುತ್ವದ ಮೂಲತತ್ವಗಳನ್ನು ಮಕ್ಕಳು ಆಟದ ಬೈಲಿನಲ್ಲಿಯೇ ಅರಿತುಕೊಳ್ಳುವರು. ಪರರ ಹಕ್ಕು ಬಾಧ್ಯತೆಗಳಿಗೆ ಗೌರವಕೊಡುವುದನ್ನೂ ಮುಂದಾಳುತನವನ್ನು ಒಪ್ಪಿಕೊಳ್ಳುವುದನ್ನೂ ಬಹುಮತಕ್ಕೆ ಪ್ರಾಶಸ್ತ್ಯ ಕೊಡುವುದನ್ನೂ ಅಲ್ಲಿಯೇ ಪ್ರಾರಂಭಕ್ಕೆ ಕಲಿತುಕೊಳ್ಳುವರು. ಸಾರಾಂಶ ಒಂದೇ ಮಾತಿನಲ್ಲಿ ಹೇಳುವುದಾದರೆ ಮಕ್ಕಳು ಆಟಗಳಿಂದ ಮಾನವತ್ವವನ್ನೇ ಕಲಿಯುತ್ತಾರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಸೋಲಲಿ, ಗೆಲ್ಲಲಿ, ಆಟದಲ್ಲಿ ಪ್ರಾಮಾಣಿಕತನವಿರಬೇಕು. ಸಂತೋಷದಿಂದ ಸೋಲನ್ನು ಅನುಭವಿಸಬೇಕು. ತಮಗೆ ಸೋಲು ಬರುವುದೆಂದು ಜಗಳ ತೆಗೆಯುವುದು ಕಲ್ಲಿನಿಂದ ಹೊಡೆಯುವುದು, ಮೊದಲಾದ ದುಷ್ಟ ಕಾರ್ಯಗಳಿಗೆ ಆಸ್ಪದ ಕೊಡಬಾರದು;

ಎದೆಗುಂದದೆ ಅಸಾಮಾನ್ಯಸ್ಥಿತಿಯಲ್ಲಿಯೂ ತನ್ನ ಕೈಲಾದಮಟ್ಟಿಗೂ ಹೆಣಗುವುದು, ನೀಚತನದಿಂದ ಎದುರಾಳಿಗಳ ಕಷ್ಟಸಮಯವನ್ನು ದುರುಪಯೋಗಮಾಡಿಕೊಳ್ಳದೆ ಎದುರಾಳಿಗಳನ್ನು ನ್ಯಾಯವಾದ ರೀತಿಯಲ್ಲಿಯೇ ಎದುರಿಸುವುದು, ನ್ಯಾಯವಾಗಲಿ, ಅನ್ಯಾಯವಾಗಲಿ ಆಟವನ್ನು ಗೆದ್ದರಾಯಿತೆಂದು ಭಾವಿಸದಿರುವುದು, ಇತ್ಯಾದಿ ಸದ್ಗುಣಗಳು ಆಟಗಳನ್ನಾಡುವಾಗ ಹುಡುಗರಿಗೆ ಸಹಜವಾಗಿ ದೊರಕುವುವು.

ಹೊರಗಿನ ಒತ್ತಾಯವು, ಇಲ್ಲವೆ ಪರರ ಭೀತಿಯು ಇಲ್ಲದೆ ಸ್ವಯಂಸ್ಫೂರ್ತಿಯಿಂದ ಮಕ್ಕಳು ಹೇಗೆ ಆಟದಲ್ಲಿ ಸೇರಿ ತಮ್ಮ ಇಚ್ಛೆಯಮೇರೆಗೆ ಆಡುವರೋ ಹಾಗೆ ಬೇರೆ ಬೇರೆ ವಿಷಯಗಳನ್ನೂ ಸ್ವಂತ ಸ್ಫೂರ್ತಿಯಿಂದ ಕಲಿಯುವಂತೆ ಮಾಡುವುದು ಬಹು ಮಹತ್ವದ ಸಂಗತಿಯಾಗಿದೆ.

ಚಿಕ್ಕಮಕ್ಕಳು ಶಾಲೆಗೆ ಬಂದಾಗ ಅವರ ವಯಸ್ಸು ೫-೬ ವರ್ಷದ್ದು ಇರುವದು. ಅವರ ಅಭ್ಯಾಸ ಕ್ರಮವು ಸಂಪೂರ್ಣವಾಗಿ ಆಟದ ಸ್ವರೂಪದಲ್ಲಿಯೇ ಇರತಕ್ಕದ್ದು. ಮಕ್ಕಳಿಗೆ ಮನೋರಂಜಕವಾದ ಕೆಲವು ವ್ಯವಸಾಯಗಳನ್ನು ಕೊಟ್ಟು ವಿಷಯಜ್ಞಾನವನ್ನು ಮಾಡಿಕೊಡುವುದರಿಂದ ಅವು ಅವರಿಗೆ ಒಂದುತರದ ಆಟಗಳೇ ಆಗಿ ಪರಿಣಮಿಸುವುವು. ಇಂತಹ ಕೆಲವು ವ್ಯವಸಾಯಗಳನ್ನು ಹಿಂದೆ **ಕೃತಿ-ಪ್ರೇಮ**ವೆಂಬ ಪ್ರಕರಣದಲ್ಲಿ ವಿವರಿಸಿದೆ. ಚಿಕ್ಕಮಕ್ಕಳ ಅಂಕೆಯ ಪಾಠಗಳಲ್ಲಿ ಮಣಿಗಳನ್ನಾಗಲಿ, ಕಡ್ಡಿಗಳನ್ನಾಗಲಿ, ಕೊಟ್ಟು ಹತ್ತರ ಗುಂಪುಗಳನ್ನು ಮಾಡಿಸಿ ಎಣಿಕೆಯನ್ನೂ ಬೇರೀಜು ವಜಾಬಾಕಿ ಮಗ್ಗಿ ಮೊದಲಾದವುಗಳನ್ನು ಮಾಡಿಸುವ ಕೃತಿಗಳು ಅವರಿಗೆ ಆಟಗಳಂತೆ ಬಹು ಮನೋರಂಜಕವಾಗುವುವು. ಮತ್ತು ವಿಷಯಜ್ಞಾನವೂ ಬಹಳ ಚೆನ್ನಾಗಿ ಆಗುವುದು. ಇದೇ ಪ್ರಕಾರ ಮುಂದಿನ ಇಯತ್ತೆಗಳಲ್ಲಿ ಸಂಖ್ಯಾಲೇಖನ, ವಿವಿಧಪರಿಮಾಣಗಳ ಕೋಷ್ಟಕಗಳು ಸಾಮಾನ್ಯ ಅಪೂರ್ಣಾಂಕಗಳು ಇವುಗಳಿಗೆ ಸಂಬಂಧಿಸಿದ ಅನೇಕತರದ ವ್ಯವಸಾಯಗಳನ್ನು ಕೊಟ್ಟು ವಿಷಯಗಳ ಜ್ಞಾನವನ್ನು ಮಾಡಿಕೊಡಬಹುದು.

ಕರವಸ್ತ್ರದಿಂದ ಮುಚ್ಚುವನು. ಆ ಬಳಿಕ ಹುಡುಗರು ಒಬ್ಬೊಬ್ಬರೇ ನೋಡಿದ ವಸ್ತುಗಳ ಹೆಸರುಗಳನ್ನು ಒಂದೊಂದನ್ನಾಗಿ ಹೇಳುವರು. ಮೊದಲನೆಯ ಇಯತ್ತೆಯವರು ಆ ವಸ್ತುಗಳ ಪಟ್ಟಿಯನ್ನು ಪಾಟಿಯ ಮೇಲೆ ಬರೆಯುವರು.

**ಮಕ್ಕಳ ಶ್ರವಣೇಂದ್ರಿಯಕ್ಕೆ ತಕ್ಕ ವ್ಯವಸಾಯವನ್ನು ಕೊಡುವ ಆಟವು:**—ತಾಮ್ರ, ಹಿತ್ತಾಳಿ, ಕಂಚು, ಕಬ್ಬಿಣಗಳ ಪಾತ್ರೆಗಳ ಅಥವಾ ಹಿತ್ತಾಳಿಯ ಗಂಟೆ, ಸಾಯಕಲ್ಲಿನ ಗಂಟೆ ಇವುಗಳ ಸಪ್ಪಳವನ್ನು ಬೇರೆ ಬೇರೆ ಮಾಡಿ ಹುಡುಗರು ನೆನಪಿಸಲ್ಲಿಟ್ಟುಕೊಳ್ಳುವಂತೆ ಮಾಡುವುದು. ಆ ಬಳಿಕ ಶಿಕ್ಷಕನು ಆ ವಸ್ತುಗಳಲ್ಲಿ ಯಾವದೊಂದು ವಸ್ತುವಿನ ಸಪ್ಪಳವನ್ನು ಫಳದ ಮರೆಗೆ ನಿಂತು ಮಾಡುವನು. ಹುಡುಗರು ಆ ಸಪ್ಪಳವು ಯಾವ ವಸ್ತುವಿನದೆಂಬುದನ್ನು ಹೇಳುವರು ; ಇಲ್ಲವೆ ಪಾಟಿಯ ಮೇಲೆ ಬರೆಯುವರು.

ಮತ್ತೊಮ್ಮೆ ಎಲ್ಲ ಹುಡುಗರು ಗಿಡದಬುಡದಲ್ಲಿ ದುಂಡಗೆ ಕುಳಿತುಕೊಳ್ಳುವರು. ಶಿಕ್ಷಕನು ಒಬ್ಬ ಹುಡುಗನನ್ನು ನಡುವೆ ನಿಲ್ಲಿಸಿ ಕರವಸ್ತ್ರದಿಂದ ಆತನ ಕಣ್ಣುಕಟ್ಟುವನು. ವರ್ತುಳದೊಳಗಿನ ಮತ್ತೊಬ್ಬ ಹುಡುಗನನ್ನು ಸನ್ನೆಮಾಡಿ ಎಬ್ಬಿಸುವನು. ಅವನು ಕಣ್ಣುಕಟ್ಟಿಸಿ ಕೊಂಡ ಹುಡುಗನನ್ನು ಹೆಸರುಗೊಂಡು ಕರೆಯುವನು. ಅವನು ಆತನ ಧ್ವನಿಯಿಂದ, ಕರೆಯುವ ಹುಡುಗನು ಇಂಥವನೇ ಎಂದು ಗುರುತುಹಿಡಿದು ಆತನ ಹೆಸರು ಹೇಳುವನು. ಸರಿಯಾಗಿ ಹೇಳಿದರೆ ಎಲ್ಲ ಹುಡುಗರೂ ಚಪ್ಪಳೆಯನ್ನು ಬಾರಿಸುವರು. ಇದೇ ಪ್ರಕಾರ ಎಲ್ಲ ಹುಡುಗರ ಸರತಿ ತೀರುವ ವರೆಗೆ ಆಡುವರು.

ಇದೇ ಪ್ರಕಾರ ಕಿವಿ, ಕಣ್ಣು, ಮೂಗು, ಸ್ಪರ್ಶ ಈ ಇಂದ್ರಿಯ ಗಳನ್ನು ಜಾಗ್ರೃತಗೊಳಿಸಿ ಅವುಗಳ ಶಕ್ತಿಯನ್ನು ಬೆಳಿಸುವಂತಹ ಆಟಗಳನ್ನು ಆಡಿಸಬಹುದು. ಅವುಗಳ ಬೇರೆಬೇರೆ ಪ್ರಕಾರಗಳನ್ನು ವಾಚಕರು 'ಶಾಲೆಯ ಆಟಗಳು' ಈ ಪುಸ್ತಕದಲ್ಲಿ ನೋಡಿಕೊಳ್ಳ ಬಹುದು.

ಹಿಂದೆ ಹೇಳಿದ ಎಲ್ಲ ಪ್ರಕಾರದ ಆಟಗಳಿಂದ ಆಗತಕ್ಕ ಶಾರೀರಿಕ, ಮಾನಸಿಕ, ನೈತಿಕ ಪ್ರಯೋಜನಗಳನ್ನು ಪಡೆಯಬೇಕಾದರೆ, ಮಕ್ಕಳ ಆಟಗಳು ಸರಿಯಾದ ಮೇಲ್ವಿಚಾರಣೆಗೆ ಒಳಪಟ್ಟಿರಲಿಕ್ಕೆಬೇಕು. ಎಷ್ಟೋ ಪ್ರಸಂಗಗಳಲ್ಲಿ ಮೇಲ್ವಿಚಾರಣೆಯಿಲ್ಲದ ಆಟದ ಬೈಲುಗಳು ಬಗೆಬಗೆಯ ದುರ್ವರ್ತನಕ್ಕೆ ಆಸ್ಪದವುಳ್ಳ ಸ್ಥಾನಗಳಾಗುತ್ತವೆ. ಆದಕಾರಣ ಅಧಿಕಾರ ಸಂಪನ್ನನಾದ ಒಬ್ಬ ಶಿಕ್ಷಕನು ಆಟದ ಬೈಲಿನಲ್ಲಿದ್ದು ಇಲ್ಲವೆ ತಾನೂ ಮಕ್ಕಳ ಆಟದಲ್ಲಿ ಸೇರಿ ಮಕ್ಕಳ ಸ್ವಾಭಾವಿಕವಾದ ಸುಗುಣಗಳು ಅಭಿವೃದ್ಧಿ ಹೊಂದುವಂತೆಯೂ,ದುರ್ಗುಣಗಳು ಹೊರಬೀಳದೆ ನಾಶಹೊಂದುವಂತೆಯೂ ನೋಡಿಕೊಳ್ಳುತ್ತಿದ್ದರೇ ಮಾತ್ರ ಆಟಗಳಿಂದ ಆಗತಕ್ಕ ಪ್ರಯೋಜನಗಳಾಗುವವು. ಆದುದರಿಂದ ಆಟಗಳಲ್ಲಿ ಅಭಿರುಚಿಯುಳ್ಳ ಹಾಗು ಚೆನ್ನಾಗಿ ಆಡಬಲ್ಲ ಶಿಕ್ಷಕನೊಬ್ಬನು ಆಟದ ಬೈಲಿನಲ್ಲಿ ಇದ್ದು, ಮೇಲ್ವಿಚಾರಣೆಯ, ಮಾರ್ಗದರ್ಶಿತ್ವದ, ಕರ್ತವ್ಯವನ್ನು ಕೈಕೊಳ್ಳತಕ್ಕದ್ದು. ಮಕ್ಕಳನ್ನು ಗುಂಪುಗಳನ್ನಾಗಿ ವಿಂಗಡಿಸುವುದು, ಬೇರೆ ಬೇರೆ ಗುಂಪಿನವರಿಗೆ ಆಟಗಳನ್ನಾಡಲು ಸ್ಥಳಗಳನ್ನೂ ಸೌಕರ್ಯಗಳನ್ನೂ ಒದಗಿಸಿಕೊಡುವುದೂ, ಯಾವ ಆಟಗಳನ್ನು ಆಡಬೇಕು, ಹೇಗೆ ಆಡಬೇಕು ಮುಂತಾದ ಸಂಗತಿಗಳನ್ನು ಹೊಸಬರಿಗೆ ತಿಳಿಸಿಹೇಳುವುದೂ, ಆಟವು ಪ್ರಾರಂಭವಾದಂದಿನಿಂದ ಮುಗಿಯುವತನಕ ಆಗಾಗ್ಗೆ ಒದಗಬಹುದಾದ ಸಣ್ಣಪುಟ್ಟ ಜಗಳಗಳನ್ನು ತೀರಿಸುವುದೂ, ಜಗಳಗಂಟರನ್ನೂ ನೀಚತನದ ಪ್ರವರ್ತಕರನ್ನೂ ನಿಗ್ರಹಿಸುವುದೂ, ಇವೆಲ್ಲ ಆ ಮೇಲ್ವಿಚಾರಕನಾದ ಶಿಕ್ಷಕನ ಕರ್ತವ್ಯಗಳಾಗಿವೆ. ಎಷ್ಟೋ ಪ್ರಸಂಗಗಳಲ್ಲಿ ದುಷ್ಟಪ್ರವೃತ್ತಿಗಳನ್ನು ತಪ್ಪಿಸುವುದಕ್ಕೆ ಶಿಕ್ಷಕನು ವಿಶೇಷ ಕಷ್ಟಪಡುವ ಅವಶ್ಯಕತೆಯೂ ಇರುವುದಿಲ್ಲ. ಅವನು ಆಟದ ಬೈಲಿನಲ್ಲಿ ಸ್ವತಃ ಇದ್ದರೆ ಸಾಕು. ಅವರ ವಿದ್ಯಾಭ್ಯಾಸಕ್ಕೆ ಮೇಲ್ವಿಚಾರಣೆಯು ಅವಶ್ಯವಿದ್ದಂತೆ, ಆಟಗಳಿಗೂ ಮೇಲ್ವಿಚಾರಣೆಯು ಅವಶ್ಯಕವು.

# ೧೦ ನೆಯ ಪ್ರಕರಣ

## ನೈತಿಕ ಶಿಕ್ಷಣ ( ಶೀಲ ಪರಿಪೋಷಣ )

ಶಾರೀರಿಕ ಬೌದ್ಧಿಕ ಶಿಕ್ಷಣಗಳಿಗಿಂತ ನೀತಿ ಶಿಕ್ಷಣದ ಮಹತ್ವವು ಹೆಚ್ಚಿರುವುದು. ಮನುಷ್ಯನ ಶರೀರಸಂಪತ್ತು ಎಷ್ಟು ಚೆನ್ನಾಗಿದ್ದರೂ ಅವನ ಬುದ್ಧಿಯು ಎಷ್ಟು ಚುರುಕಾಗಿದ್ದರೂ ಅವನಲ್ಲಿ ಶೀಲವು ಇರದಿದ್ದರೆ ಅವೆರಡೂ ವ್ಯರ್ಥವಾಗುವುವು. ಶೀಲದ ಹೊರತು ಮನುಷ್ಯನಿಗೆ ಆಯುಷ್ಯದಲ್ಲಿ ನಿಜವಾದ ಸೌಖ್ಯವು ಲಭಿಸಲಾರದು. ಸುಶೀಲರಾದ ಜನರ ಸಂಖ್ಯೆಯು ಹೆಚ್ಚಿಗಿರುವ ಸಮಾಜವು ಇಲ್ಲವೆ ರಾಷ್ಟ್ರವು ಉತ್ಕರ್ಷವನ್ನು ಹೊಂದುವಲ್ಲಿ ಸಂಶಯವಿಲ್ಲ. ಆದಕಾರಣ ಮಕ್ಕಳಲ್ಲಿ ಶೀಲವನ್ನುಂಟುಮಾಡುವುದು, ಅವರು ಸದ್ಗುಣಿಗಳಾಗುವಂತೆ ಮಾಡುವುದು ಶಿಕ್ಷಕನ ಮೊದಲನೆಯ ಕರ್ತವ್ಯವಾಗಿದೆ. ಮಕ್ಕಳ ತಾಯಿ-ತಂದೆಗಳು ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವಲ್ಲಿ ಅವರಿಗೆ ಅನೇಕ ವಿಷಯಗಳ ಜ್ಞಾನವಾಗಬೇಕೆಂಬುದಿಷ್ಟೇ ಉದ್ದೇಶವಿರುವುದಿಲ್ಲ. ಆದರೆ ತಮ್ಮ ಮಕ್ಕಳು ಒಳ್ಳೇ ನಡತೆಯವರಾಗಬೇಕೆಂತಲೂ, ಉತ್ತಮವಾದ ರೂಢಿಗಳು ಅವರಿಗೆ ಹತ್ತಬೇಕೆಂತಲೂ, ಅವರ ಉದ್ದೇಶಗಳಿರುವುವು. ಆದುದರಿಂದ ನೈತಿಕ ಶಿಕ್ಷಣದ ಕಡೆಗೆ ದುರ್ಲಕ್ಷ್ಯಮಾಡುವ ಶಿಕ್ಷಕನು ತನ್ನ ಕರ್ತವ್ಯಕ್ಕೆ ತಪ್ಪುವನೆಂದು ಹೇಳಬಹುದು. ನೀತಿ ಶಿಕ್ಷಣವನ್ನು ಕೊಡುವುದೆಂದರೆ ಹುಡುಗರಿಂದ ಹಲವು ನೀತಿಯ ಮಾತುಗಳನ್ನು ಪಾಠಮಾಡಿಸುವುದು. ಇಲ್ಲವೆ ಪ್ರಾಮಾಣಿಕತನ, ಸತ್ಯಭಾಷಣ, ಆತ್ಮಸಂಯಮನ ಇತ್ಯಾದಿ ವಿಷಯಗಳನ್ನು ಕುರಿತು ನಿಬಂಧಗಳನ್ನು ಬರೆಯಿಸುವದು ಅಥವಾ ಗೋಡೆಯ ಮೇಲೆ ನೀತಿಯ ಮಾತುಗಳನ್ನು ಬರೆದು ಹಚ್ಚುವುದು ಅಲ್ಲ; ಆದರೆ ಹುಡುಗರಿಂದ ಪ್ರತ್ಯಕ್ಷವಾಗಿ ಸನ್ಮಾರ್ಗದಿಂದಲೂ ಪ್ರಾಮಾಣಿಕತನದಿಂದಲೂ ನಡೆಯುವರೂಢಿಯನ್ನು ಮಾಡಿಸು

ವುದು, ಅವರ ಮನಸ್ಸಿನಲ್ಲಿ ಸುವಿಚಾರಗಳನ್ನು ಉತ್ಪನ್ನಮಾಡುವುದು, ಅವರ ಹೃದಯದಲ್ಲಿ ಉಚ್ಚಮನೋವೃತ್ತಿಗಳ ಪರಿಪೋಷಣವಾಗುವಂತೆ ಮಾಡುವುದು, ಅವರಲ್ಲಿ ಆತ್ಮಸಂಯಮನವನ್ನುಂಟುಮಾಡುವುದು, ಇತ್ಯಾದಿ. **ಇವು ನಿಜವಾಗಿ ನೈತಿಕಶಿಕ್ಷಣದ ಕಾರ್ಯಗಳಾಗಿವೆ.**

ಸಾಲೆಯಲ್ಲಿ ಕೊಡತಕ್ಕ ನೈತಿಕಶಿಕ್ಷಣಕ್ಕೆ ಗೃಹಶಿಕ್ಷಣದ ಜೋಡು ಬೇಕು. ಮಕ್ಕಳ ಪ್ರವರ್ತಕಶಕ್ತಿಯನ್ನು ವಿಕಾಸಗೊಳಿಸಿ, ಅವರು ಸುಶೀಲರಾಗುವಂತೆ ಮಾಡುವ ಕಾರ್ಯವು ಅತ್ಯಂತ ಮಹತ್ವದ್ದಾಗಿರುವುದು; ಈ ಕಾರ್ಯವನ್ನು ನೆರವೇರಿಸಲಿಕ್ಕೆ ತಾಯಿ-ತಂದೆಗಳೂ ಶಿಕ್ಷಕರೂ ಪ್ರಯತ್ನಮಾಡಬೇಕಾಗುವುದು. ಮಕ್ಕಳು ಶಾಲೆಯಲ್ಲಿ ಕಳೆಯುವ ವೇಳೆಗಿಂತ ಮನೆಯಲ್ಲಿಯೇ ಹೆಚ್ಚು ವೇಳೆಯನ್ನು ಕಳೆಯುವರು; ಇದಲ್ಲದೆ ಮಕ್ಕಳು ಸಂಪೂರ್ಣವಾಗಿ ತಾಯಿ-ತಂದೆಗಳನ್ನು ಅವಲಂಬಿಸಿರುವುದರಿಂದ ಅವರು ತಾಯಿ-ತಂದೆಗಳಿಗೆ ವಿಧೇಯರಾಗಿ ನಡೆದುಕೊಳ್ಳಬೇಕಾಗುವುದು. ಅದರಿಂದ ಅವರಿಗೆ ಮಕ್ಕಳ ನಡಾವಳಿಯನ್ನು ತಿದ್ದಿ ಅವರಲ್ಲಿ ಒಳ್ಳೇ ಶೀಲವನ್ನುಂಟುಮಾಡುವ ಅನೇಕ ಪ್ರಸಂಗಗಳು ದೊರಕುವುವು. ಸುಶಿಕ್ಷಿತರಾದ ತಾಯಿ-ತಂದೆಗಳು ತಮ್ಮ ಮಕ್ಕಳಲ್ಲಿ ಪ್ರೇಮ, ಸಹಾನುಭೂತಿ, ದಯೆ, ಈಶ್ವರಭಕ್ತಿ, ಓರಣ, ಸಭ್ಯತನ, ಹೊತ್ತಿಗೆ ಸರಿಯಾಗಿ ಕೆಲಸಮಾಡುವ ಚಟ, ಈ ಮೊದಲಾದ ಅನೇಕ ಸದ್ಗುಣಗಳನ್ನುಂಟುಮಾಡುವರು. ಸಾರಾಂಶ, ಕುಟುಂಬವು ಮಕ್ಕಳ ನೀತಿಶಿಕ್ಷಣದ ತಳಹದಿಯಾಗಿದೆ. ಅಲ್ಲಿಯೇ ಅವರ ಆತ್ಮಪ್ರೌಢಿ ಎಂಬ ಸಹಜಪ್ರವೃತ್ತಿಯು ವಿಕಾಸಹೊಂದಿ ಶೀಲಸಂವರ್ಧನವಾಗುವುದು.

ಹೀಗಿದ್ದರೂ ಸಾಲೆಯಲ್ಲಿ ಕೊಡಲ್ಪಡುವ ನೀತಿಶಿಕ್ಷಣವು ಕಡಿಮೆಯತರಗತಿಯದೆಂದು ತಿಳಿಯಕೂಡದು. ಇದರಿಂದಲೂ ಅವರಿಗೆ ಮುಂದಿನ ಆಯುಷ್ಯದಲ್ಲಿ ಉಪಯೋಗವಾಗತಕ್ಕ ಅನೇಕ ಸದ್ಗುಣಗಳು ಹತ್ತುವುವು. ಕುಟುಂಬದಲ್ಲಿರತಕ್ಕ ಜನರು ಪರಸ್ಪರ ಪ್ರೇಮದಿಂದ ಬದ್ಧರಾಗಿರುತ್ತಾರೆ. ಸಾಲೆಯಲ್ಲಿ ಸಮಾನವಯಸ್ಸಿನ ಅನೇಕ

ಹುಡುಗರು ಇರುವರು, ಅವರು ಬೇರೆಬೇರೆ ಜಾತಿಯವರು ಬೇರೆಬೇರೆ ಸ್ವಭಾವದವರು ಇರುವರು. ಇಂಥವರ ಸಂಗಡ ಹೇಗೆ ನಡಕೊಳ್ಳ ಬೇಕೆಂಬುದನ್ನು ಹುಡುಗರು ಸಾಲೆಯಲ್ಲಿಯೇ ಮೊದಲು ಕಲಿಯುವರು. ಮತ್ತು ಇಂಥ ಅನೇಕ ಹುಡುಗರು ಕೂಡಿ ಒಂದು ಕೆಲಸವನ್ನು ಒಮ್ಮನಸಿನಿಂದ ಮಾಡುವ ಪ್ರಸಂಗಗಳು ಸಾಲೆಯಲ್ಲಿ ಆಗಾಗ್ಗೆ ಬರುತ್ತಿರುತ್ತವೆ. ಇದಲ್ಲದೆ ಕುಟುಂಬದಲ್ಲಿ ತಾಯಿ-ತಂದೆ ಬಂಧು-ಬಳಗದವರ ಸಾಹಯ್ಯವು ಸಿಗುವಂತೆ ಸಾಲೆಯಲ್ಲಿ ದೊರೆಯುವುದಿಲ್ಲ. ಆದಕಾರಣ ಹುಡುಗರು ಆಗಾಗ್ಗೆ ತಮ್ಮಷ್ಟಕ್ಕೆ ತಾವೇ ವಿಚಾರ ಮಾಡಿ ಕೆಲಸ ಮಾಡಬೇಕಾಗುವುದು. ಅದರಿಂದ ಸ್ವತಂತ್ರವಿಚಾರ, ಸ್ವಾವಲಂಬನ, ಆತ್ಮವಿಶ್ವಾಸ ಮೊದಲಾದ ಗುಣಗಳು ಹುಟ್ಟಲಿಕ್ಕೆ ಅನುಕೂಲವಾಗುವುದು. ಮತ್ತು ಸಾಲೆಯು ಸ್ವರಾಜ್ಯದ ಒಂದು ಸಣ್ಣ ಮಾದರಿಯಾಗಿದೆ. ಈ ರಾಜ್ಯದಲ್ಲಿ ಹುಡುಗರು ಸ್ವಂತದ ಹಕ್ಕುಗಳನ್ನು ಕಾಯ್ದುಕೊಳ್ಳುವುದನ್ನೂ ಪರರ ಹಕ್ಕುಗಳಿಗೆ ಮಾನ ಕೊಡುವುದನ್ನೂ ಶಾಂತತೆ ಸುವ್ಯವಸ್ಥೆಗಳನ್ನೂ ವಿತ್ತ ಜೀವಿತಗಳ ರಕ್ಷಣೆಯನ್ನೂ ತೀರ ಸಣ್ಣ ಪ್ರಮಾಣದಿಂದ ಕಲಿಯುವರು; ಈ ಸಂಗತಿಯು ಬಹಳ ಮಹತ್ವವಾದದ್ದು. ಇದಲ್ಲದೆ ಸಾಲೆಯ ಎಲ್ಲ ಕೆಲಸಗಳು ಕೆಲವು ನಿಯಮಗಳಿಗನುಸರಿಸಿ ನಡೆಯುವುವು ಆ ನಿಯಮಗಳನ್ನು ಎಲ್ಲರೂ ತಪ್ಪದೆ ಪಾಲಿಸಬೇಕಾಗುವುದು. ಇದರಿಂದ ಹುಡುಗರಿಗೆ ನಿಯಮದಿಂದ ನಡೆಯುವ ರೂಢಿಯು ಹತ್ತುವುದು. ಒಳ್ಳೇ ನಾಗಿರಿಕರೆನಿಸಿಕೊಳ್ಳಬೇಕಾದರೆ ಬೇಕಾಗುವ ಎಲ್ಲ ಸದ್ಗುಣಗಳನ್ನು ಮಕ್ಕಳು ಸಾಲೆಯಲ್ಲಿಯೇ ಕಲಿಯಬಹುದು.

ಗೃಹಶಿಕ್ಷಣವು ಚೆನ್ನಾಗಿರುವ ಹುಡುಗರಿಗೆ ಶಾಲೆಯಲ್ಲಿ ನೀತಿ ಶಿಕ್ಷಣವನ್ನು ಕೊಡುವುದು ಸುಲಭವಾಗುವುದು. ಆದರೆ ಗೃಹಶಿಕ್ಷಣವಿಲ್ಲದ ಹುಡುಗರಿಗೆ ಶಾಲೆಯಲ್ಲಿ ನೈತಿಕ ಶಿಕ್ಷಣವನ್ನು ಕೊಡಲಿಕ್ಕೆ ಶಿಕ್ಷಕನಿಗೆ ಬಹಳ ತೊಂದರೆಯಾಗುವುದು ; ಯಾಕಂದರೆ ಮನೆಯಲ್ಲಿ ಹುಡುಗರ ಮನಸಿನ ಮೇಲೆ ಆದ ಕೆಟ್ಟ ಪರಿಣಾಮಗಳನ್ನು ಕಿತ್ತುಹಾಕಿ

ಒಳ್ಳೇ ರೂಢಿಗಳನ್ನು ಹಚ್ಚಬೇಕಾಗುವುದು. ಶಿಕ್ಷಕರು ಈ ಮಾತನ್ನು ಲಕ್ಷ್ಯದಲ್ಲಿಟ್ಟು ಶಾಂತಮನಸಿನಿಂದಲೂ, ದೃಢನಿಶ್ಚಯದಿಂದಲೂ ಹುಡುಗರ ನೀತಿಯನ್ನು ತಿದ್ದುವ ಕೆಲಸವನ್ನು ಕೈಕೊಳ್ಳಬೇಕಾಗುವುದು. ಕುಟುಂಬದ ಅಥವಾ ಸಮಾಜದ ಇಲ್ಲವೆ ರಾಷ್ಟ್ರದ ಭಾವೀ ಉನ್ನತಿಯು ಸುಶೀಲ ಹುಡುಗರನ್ನೇ ಅವಲಂಬಿಸಿರುವುದು.

ಮನುಷ್ಯನ ಸ್ವಭಾವವು ಸಂಪೂರ್ಣವಾಗಿ ಅವನ ಚಟಗಳನ್ನು ಅವಲಂಬಿಸಿರುವುದು. **ಒಂದೇ ಕೆಲಸವನ್ನು ಮೇಲೆ ಮೇಲೆ ಮಾಡುವುದರಿಂದ ಅದರ ಚಟವು ಬೀಳುವುದು.** ಆದಕಾರಣ ಶಿಕ್ಷಕರು ತಪ್ಪದೆ ಹುಡುಗರಿಂದ ಒಳ್ಳೇ ಕೆಲಸಗಳನ್ನು ಮಾಡಿಸಿ ಅವುಗಳ ರೂಢಿಯನ್ನು ಹಚ್ಚಬೇಕು. **ಒಳ್ಳೇ ರೂಢಿಗಳನ್ನು ಹಚ್ಚುವದೇ ನೀತಿಶಿಕ್ಷಣದ ಅಸ್ತಿವಾರವೆಂದು ಹೇಳಬಹುದು.**

## ಶಾಲೆಯಲ್ಲಿ ನೀತಿಶಿಕ್ಷಣವನ್ನು ಕೊಡುವ ಉಪಾಯಗಳು

೧. **ಸಾಲೆಯ ತಿದ್ದುವಿಕೆ.** ೨. **ಶಿಕ್ಷಕನ ಸದ್ವರ್ತನ.** ೩. **ಸರಿಕರೊಳಗೆ ಮಾನಗೇಡಿಯಾಗುವ ಭೀತಿ.** ೪. **ವ್ಯವಸ್ಥಿತವಾದ ಆಟಗಳು, ಕವಾಯಿತು, ವ್ಯಾಯಾಮ.** ೫. **ಸಾಲೆಯಲ್ಲಿ ನಡೆಯುವ ಅಭ್ಯಾಸಕ್ರಮ.** ೬. **ನೀತಿಯ ಪಾಠಗಳು.** ೭. **ಧಾರ್ಮಿಕ ಶಿಕ್ಷಣ.** ೮. **ಬಾಲವೀರಸಂಘ** (**ಸ್ಕೌಟ**); **ಕನ್ಯಾಸಂಘ** (ಗರ್ಲಗಾಯಿಡ)

೧. **ಸಾಲೆಯ ತಿದ್ದುವಿಕೆ:—** ಸಾಲೆಯ ತಿದ್ದುವಿಕೆಯು ವಿದ್ಯಾರ್ಥಿಗಳಲ್ಲಿ ಉತ್ತಮ ರೂಢಿಗಳನ್ನು ಹಚ್ಚುವ ಒಂದು ಉತ್ಕೃಷ್ಟ ಸಾಧನವಾಗಿದೆ. ಯಾವ ಶಾಲೆಯ ಶಿಕ್ಷಕರು ತಮ್ಮ ಕೆಲಸದಲ್ಲಿ ದಕ್ಷರಾಗಿರುವರೋ ತಿದ್ದುವಿಕೆಯು ಚೆನ್ನಾಗಿರುವುದೋ ಆ ಶಾಲೆಯ ಹುಡುಗರು ತಮ್ಮ ಕೆಲಸಗಳನ್ನು ಹೊತ್ತುಹೊತ್ತಿಗೆ ಮಾಡುವರು; ಸುಳ್ಳು, ಅಪ್ರಾಮಾಣಿಕತನ, ಮುಂತಾದ ದುರ್ಗುಣಗಳಿಂದ ದೂರವಾಗಿರುವರು.

ಇದಕ್ಕೆ ವಿಪರೀತವಾಗಿ ಯಾವ ಶಾಲೆಯ ತಿದ್ದುವಿಕೆಯು ಚೆನ್ನಾಗಿರುವುದಿಲ್ಲವೋ ಅಲ್ಲಿಯ ಹುಡುಗರು ಬೇಕಾದಾಗ ಸಾಲೆಗೆ ಬರುವರು; ಅವರು ಹೊತ್ತಿಗೆ ಸರಿಯಾಗಿ ಮನಃಪೂರ್ವಕವಾಗಿ ವ್ಯವಸ್ಥೆಯಿಂದ ತಮ್ಮ ಪಾಠಗಳನ್ನು ಕಲಿಯುವುದಿಲ್ಲ. ಸ್ವಚ್ಛವಾಗಿಯೂ ಅಚ್ಚುಕಟ್ಟಾಗಿಯೂ ಇರುವುದಿಲ್ಲ; ಒಬ್ಬರ ಪಾಟಿಯನ್ನು ನೋಡಿ ಮತ್ತೊಬ್ಬರು ಲೆಕ್ಕಗಳ ರೀತಿಗಳನ್ನು ಬರೆದುಕೊಳ್ಳುವುದು, ಪರರ ಉತ್ತರಗಳನ್ನು ಕೇಳಿ ಹಚ್ಚುವುದು, ಇತ್ಯಾದಿ ಸಂಗತಿಗಳಿಂದ ಅವರಿಗೆ ಅಪ್ರಾಮಾಣಿಕತನದ ರೂಢಿಯು ಹತ್ತುವುದು. ಇಂಥ ಶಾಲೆಗಳಲ್ಲಿ ಮಕ್ಕಳ ಅಭ್ಯಾಸವಂತೂ ಚೆನ್ನಾಗಿ ಆಗುವುದಿಲ್ಲ. ಕೆಟ್ಟ ರೂಢಿಗಳು ಮಾತ್ರ ಹತ್ತುವವು; ಅವುಗಳ ದುಷ್ಪರಿಣಾಮವನ್ನು ಸಾಯುವವರೆಗೆ ಅವರು ಅನುಭವಿಸಬೇಕಾಗುವುದು. ತಿದ್ದುವಿಕೆಯಿಂದ ಮಕ್ಕಳಿಗೆ ಅವರ ಮನೋವಿಕಾರಗಳನ್ನೂ ಇಚ್ಛೆಯನ್ನೂ ಅಧೀನದಲ್ಲಿಟ್ಟುಕೊಳ್ಳುವುದು ಶಕ್ಯವಿರುವುದು. ಹುಡುಗರು ಕೆಟ್ಟರೀತಿಯಿಂದ ನಡೆದಾಗ ಶಿಕ್ಷಕರು ಅವರಿಗೆ ತಪ್ಪದೆ ಶಿಕ್ಷೆಯನ್ನು ವಿಧಿಸಬೇಕು. ದುರ್ವರ್ತನದ ಸಲುವಾಗಿ ಶಿಕ್ಷೆಯನ್ನು ಕೊಡುವ ಶಿಕ್ಷಕನು ಆ ಹುಡುಗರ ಕಲ್ಯಾಣವನ್ನೇ ಮಾಡುತ್ತಾನೆಂದು ತಿಳಿಯತಕ್ಕದ್ದು. ತಪ್ಪಿಗೆ ಶಿಕ್ಷೆಯು ತಪ್ಪದೆ ಆಗುವುದೆಂಬ ಮಾತು ಹುಡುಗನ ಮನಸ್ಸಿನಲ್ಲಿ ಸ್ಪಷ್ಟವಾಗಿ ಬಿಂಬಿಸಿದರೆ ಅವರು ಸಾಲೆಯ ತಿದ್ದುವಿಕೆಗೆ ತಪ್ಪಿ ಎಂದೂ ನಡೆಯುವುದಿಲ್ಲ.

೨. **ಶಿಕ್ಷಕನ ಸದ್ವರ್ತನ:—** ಶಿಕ್ಷಕನ ಉಪದೇಶಕ್ಕಿಂತ ಆಚರಣೆಯು ಬಹಳೇ ಮಹತ್ವವಾದದ್ದು. ನೂರಾರು ಹುಡುಗರು ಅವನಿಗೆ ತಿಳಿಯದಂತೆ ಅವನ ನಡಾವಳಿಯನ್ನು ಅನುಕರಣಮಾಡುತ್ತಿರುವರು. ಆದಕಾರಣ ಶಿಕ್ಷಕರ ನಡತೆಯು ಶುದ್ಧವಾದದ್ದೂ ಅನುಕರಣೀಯವಾದದ್ದೂ ಇರಲಿಕ್ಕೆಬೇಕು. 'ನುಡಿದಂತೆ ನಡೆಯುವವನು ನಾಡಿಗೆ ಮಾನ್ಯನು.' ಎಂಬಂತೆ ಶಿಕ್ಷಕನು ಆಡಿದಂತೆ ತಪ್ಪದೆ ನಡೆಯುತ್ತಿರಬೇಕು. ಸತ್ಯ ಮಾತಾಡಬೇಕು. ಸೋಮಾರಿಯಾಗಿರಬಾರದು. ಬೆಳಗಿನಲ್ಲಿ ಬೇಗನೆ ಏಳಬೇಕು ಇತ್ಯಾದಿ ಉಪದೇಶಮಾಡಿ ತಾನೇ

ಇವುಗಳ ವಿರುದ್ಧವಾಗಿ ನಡೆದರೆ ಹುಡುಗರ ಮನಸಿನ ಮೇಲೆ ಆ ಉಪದೇಶದ ಪರಿಣಾಮವು ಎಷ್ಟುಮಾತ್ರಕ್ಕೂ ಆಗುವದಿಲ್ಲ. ಶಿಕ್ಷಕನ ಬಗೆಗೆ ಪೂಜ್ಯಬುದ್ಧಿಯು ಅವರ ಮನಸಿನಲ್ಲಿ ಉತ್ಪನ್ನವಾಗುವುದಿಲ್ಲ. ಅವರಾದರೂ ಶಿಕ್ಷಕನಂತೆ ದಾಂಭಿಕರಾಗಿ ನಡೆಯಲಾರಂಭಿಸುವರು. ಯಾವ ಶಿಕ್ಷಕರ ಆಚರಣೆಯು ಶುದ್ಧವಾಗಿರುವುದಿಲ್ಲವೋ ಅವರು ಶಿಕ್ಷಣದಂಥ ಪವಿತ್ರ ಉದ್ಯೋಗವನ್ನು ಕೈಕೊಳ್ಳಬಾರದು. ಸತ್ಯ ಭಾಷಣ, ಪ್ರಾಮಾಣಿಕತನ, ಸ್ವಚ್ಛತೆ, ನಿಯಮಿತತನ, ಉದ್ಯೋಗ, ತಾಳ್ಮೆ, ಕರ್ತವ್ಯದಕ್ಷತೆ ಆಜ್ಞಾಧಾರಕತನ ಮುಂತಾದ ಸದ್ಗುಣಗಳನ್ನು ಶಿಕ್ಷಕರು ತಮ್ಮ ಅನುಕರಣೀಯವಾದ ಆಚರಣೆಯಿಂದ ಮಕ್ಕಳಲ್ಲಿ ಉಂಟುಮಾಡತಕ್ಕದ್ದು.

**೩. ಸರಿಕರೊಳಗೆ ಮಾನಗೇಡಿಯಾಗುವ ಭೀತಿ**:– ಹುಡುಗರ ಮನಸಿನಲ್ಲಿ ಸದ್ಗುಣಗಳ ಬಗೆಗೆ ಆದರವನ್ನೂ ದುರ್ಗುಣಗಳ ಬಗೆಗೆ ತಿರಸ್ಕಾರವನ್ನೂ ಉತ್ಪನ್ನಮಾಡಬೇಕು. ತಮ್ಮ ಓರಿಗೆಯ ಗೆಳೆಯರೊಳಗೆ ಅಪಮಾನವಾದೀತೆಂಬ ಅಂಜಿಕೆಯಿಂದ ಅವರು ಕೆಟ್ಟಕೆಲಸಗಳನ್ನು ಎಂದೂ ಮಾಡುವುದಿಲ್ಲ. ಮುಂದೆ ಅವರು ದೊಡ್ಡವರಾದ ಮೇಲೆ ಸಹ ಸಮಾಜದ ಭೀತಿಯಿಂದ ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡುವರು. ಆದಕಾರಣ ಶಿಕ್ಷಕರು ಈ ತರದ ಸಮಾಜದ ಭೀತಿಯನ್ನು ಹುಡುಗರ ಮನಸಿನಲ್ಲಿ ಉತ್ಪನ್ನಮಾಡಲಿಕ್ಕೆ ಪ್ರಯತ್ನಮಾಡಬೇಕು.

**೪. ವ್ಯವಸ್ಥಿತವಾದ ಆಟಗಳು ಕವಾಯತು ವ್ಯಾಯಾಮ**:– ವ್ಯವಸ್ಥಿತವಾದ ಆಟಗಳನ್ನು ಆಡಿಸುವುದರಿಂದ ಹುಡುಗರಿಗೆ ಎಷ್ಟೋ ಸದ್ಗುಣಗಳು ಹತ್ತುವುವು; ಚಟುವಟಿಕೆ, ಧೈರ್ಯ, ಸಾಹಸ, ಓರಿಗೆಯವರ ಸಂಗಡ ಪ್ರೇಮ, ಈರ್ಷೆ, ಒಕ್ಕಟ್ಟು, ಸಹಾನುಭೂತಿ ಈ ಮೊದಲಾದ ಸದ್ಗುಣಗಳು ಉತ್ಪನ್ನವಾಗುವುವು. ಕೆಲಕೆಲವು ಆಟಗಳಿಂದ ಹುಡುಗರಿಗೆ ಇಕ್ಕಟ್ಟಿನೊಳಗಿಂದ ಪಾರಾಗುವ ಹಂಚಿಕೆಗಳು ತಿಳಿಯುವುವು. ಪಂಗಡಗಳನ್ನು ಮಾಡಿಕೊಂಡು ಆಡುವ ಆಟಗಳಿಂದ ಹುಡುಗರಲ್ಲಿ ತಮ್ಮ ಪಕ್ಷದವರ ಬಗೆಗೆ ಅಭಿಮಾನವು ಉತ್ಪನ್ನವಾಗಿ ಅವರು ತಮ್ಮ

ಪಕ್ಷಕ್ಕೆ ಜಯವನ್ನು ದೊರಕಿಸಿ ಕೊಡಲಿಕ್ಕೆ ಮನಃಪೂರ್ವಕವಾಗಿ ಯತ್ನಮಾಡುವರು. ಆದರೆ ಇಂಥ ಎಲ್ಲ ಆಟಗಳನ್ನು ಶಿಕ್ಷಕರು ಹುಡುಗರೊಳಗೆ ಕೂಡಿಕೊಂಡು ಇಲ್ಲವೆ ತಮ್ಮ ಮೇಲ್ವಿಚಾರಣೆಯ ಕೆಳಗೆ ಆಡಿಸಲಿಕ್ಕೆ ಬೇಕು. ಅದರಿಂದ ಶಿಕ್ಷಕರ ಬಗೆಗೆ ಹುಡುಗರ ಮನಸಿನಲ್ಲಿ ಪ್ರೇಮವು ಪೂಜ್ಯಬುದ್ಧಿಯೂ ಹುಟ್ಟುವುವು. ಇಲ್ಲದಿದ್ದರೆ ಹುಡುಗರಿಗೆ ಸೋಮಾರಿತನ, ಅವ್ಯವಸ್ಥೆ, ಸ್ವೇಚ್ಛಾಚಾರ, ಸುಳ್ಳು, ಪರಸ್ಪರ ದ್ವೇಷ, ಈ ಮೊದಲಾದ ದುರ್ಗುಣಗಳು ಹತ್ತುವುವು.

ಕವಾಯತಿಸಿಂದ ಹುಡುಗರಲ್ಲಿ ಆಜ್ಞಾಧಾರಕತನವೂ ವ್ಯವಸ್ಥಿತತನವೂ ಹುಟ್ಟುವುವು; ಏಕಾಗ್ರಮನಸಿಸಿಂದ ವ್ಯಾಯಾಮವನ್ನು ಮಾಡಲಿಕ್ಕೆ ಹಚ್ಚುವುದರಿಂದ ಹುಡುಗರಿಗೆ ಆತ್ಮಸಂಯಮನದ ಚಟವು ಹತ್ತುವುದು. ಆತ್ಮಸಂಯಮನವು ಸಕಲ ಸದ್ಗುಣಗಳ ತಾಯಿಯೆಂದು ಹೇಳಬಹುದು. ಇದಲ್ಲದೆ ವ್ಯಾಯಾಮದಿಂದ ಶರೀರದಂತೆ ಮನಸ್ಸಾದರೂ ಸುದೃಢವಾಗುವುದು. ದುರ್ಬಲ ಮನಸಿನಲ್ಲಿ ನಾನಾಬಗೆಯ ವಿಕಾರಗಳು ಉತ್ಪನ್ನವಾಗುವ ಸಂಭವವು ಹೆಚ್ಚಿರುವುದು.

**ಸಾಲೆಯಲ್ಲಿ ನಡೆಯುವ ಅಭ್ಯಾಸ ಕ್ರಮ:—** ಸಾಲೆಯಲ್ಲಿ ಕಲಿಸಲ್ಪಡುವ, ಭಾಷಾ, ಇತಿಹಾಸ, ಭೂಗೋಲ, ಗಣಿತ, ಮೊದಲಾದ ವಿಷಯಗಳಿಂದಲೂ ಮಕ್ಕಳಿಗೆ ನೀತಿ ಶಿಕ್ಷಣವು ದೊರೆಯುವುದು. ಆದರೆ ಈ ವಿಷಯಗಳನ್ನು ಶಿಕ್ಷಣಪದ್ಧತಿಯ ನಿಯಮಗಳಿಗನುಸಾರವಾಗಿ ಹುಡುಗರ ಮಾನಸಿಕ ಶಕ್ತಿಗಳು ವಿಕಾಸ ಹೊಂದುವಂತೆ ಕಲಿಸಲಿಕ್ಕೆ ಬೇಕು. ಅಂದರೆ ವಿವೇಕವು ಉತ್ಪನ್ನವಾಗುವುದು. ಈ ಯಾವತ್ತು ವಿಷಯಗಳನ್ನು ಕಲಿಸುವ ಮುಖ್ಯ ಉದ್ದೇಶವು ವಿವೇಕವನ್ನು ಉತ್ಪನ್ನ ಮಾಡುವದಾಗಿರಬೇಕು. ವಾಚನ ಪಾಠದಲ್ಲಿ ಅನೇಕ ನೀತಿಯ ಮಾತುಗಳು ಬಂದಿರುತ್ತವೆ. ಇತಿಹಾಸದ ಅಭ್ಯಾಸದಿಂದ ಸ್ವದೇಶದ ಪ್ರೀತಿಯೂ, ಸ್ವಜನಾಭಿಮಾನವೂ ಉತ್ಪನ್ನವಾಗುವುವು. ಸದ್ಗುಣಗಳಿಗೆ ಗೆಲವೂ ದುರ್ಗುಣಗಳಿಗೆ ಸೋಲೂ ಬರುವುದೆಂಬ ತತ್ವವು ಹುಡುಗರ ಮನಸಿನಲ್ಲಿ ಚನ್ನಾಗಿ ಬಿಂಬಿಸುವುದು. ಮತ್ತು ಸದ್ಗುಣಸಂಪನ್ನರಾದ

ಜನರ ಚರಿತ್ರೆಗಳನ್ನು ಅನುಕರಣಮಾಡಬೇಕೆಂಬ ಕಲ್ಪನೆಯು ಉತ್ಪನ್ನ ವಾಗುವುದು. ಭೂಗೋಲ ಜ್ಞಾನದಿಂದ ಮನಸು ವಿಶಾಲವಾಗುವುದು. ಬೇರೆ ಬೇರೆ ರಾಷ್ಟ್ರದವರ ಬಗ್ಗೆ ಆದರವು ಉತ್ಪನ್ನವಾಗುವುದು. ಮಹತ್ವಾಕಾಂಕ್ಷೆಯು ಬೆಳೆಯುವುದು. ಅಂಕಗಣಿತದ ಅಭ್ಯಾಸದಿಂದ ಸಂಶಯವಿಲ್ಲದ ತಿಳುವಳಿಕೆಯೂ ಸತ್ಯಪ್ರೀತಿಯೂ ನ್ಯಾಯಬುದ್ಧಿಯೂ ವ್ಯವಸ್ಥಿತತನವೂ, ಉತ್ಪನ್ನವಾಗುವುವು. ಮತ್ತು ವಿಚಾರದ ಚಟವು ಹತ್ತುವುದು. ಸೃಷ್ಟಿ ಜ್ಞಾನದ ಪಾಠಗಳಿಂದ ಶೋಧಕಬುದ್ಧಿಯು ಹುಟ್ಟುವುದಲ್ಲದೆ, ಸೃಷ್ಟಿಯೊಳಗಿನ ಅನಂತಪ್ರಾಣಿ ವನಸ್ಪತಿಗಳನ್ನೂ ಒಡವೆಗಳನ್ನೂ ಚಮತ್ಕಾರಗಳನ್ನೂ ಕಂಡು ಮನಸು ಆನಂದಭರಿತವಾಗು ವುದು. ಸೃಷ್ಟಿಕರ್ತನ ವಿಷಯವಾಗಿ ಕೃತಜ್ಞತೆಯೂ, ಭಕ್ತಿಯೂ ಉತ್ಪನ್ನವಾಗುವುವು. ಈ ಮೇರೆಗೆ ಎಲ್ಲ ಸದ್ಗುಣಗಳು ಉತ್ಪನ್ನವಾಗ ಬೇಕಾದರೆ ಮೇಲೆ ಹೇಳಿದ ಪ್ರತಿಒಂದು ವಿಷಯವನ್ನು ಶಿಕ್ಷಣಶಾಸ್ತ್ರ ಕ್ಕನುಸಾರವಾಗಿ ಕಲಿಸತಕ್ಕದ್ದು; ಪಾಠ ಮಾಡಿಸಿದರೆ ಮನಸಿಗೆ ಸಂಸ್ಕಾರವಾಗುವುದಿಲ್ಲ. ಅಂದಮೇಲೆ ಆ ಅಸಂಸ್ಕೃತ ಮನಸಿನಲ್ಲಿ ವಿವೇಕವು ಉತ್ಪನ್ನವಾಗುವ ಬಗೆ ಹೇಗೆ?

೫. **ನೀತಿಯ ಪಾಠಗಳು :—** ಶಾಲೆಯಲ್ಲಿ ಗಣಿತ, ಭಾಷಾ ಮೊದಲಾದ ವಿಷಯಗಳನ್ನು ಪದ್ಧತಿಗೆ ಸರಿಯಾಗಿ ಕಲಿಸುವಂತೆ ನೀತಿಯ ಉದಾತ್ತ ಕಲ್ಪನೆಗಳು ಹುಡುಗರ ಮನಸಿನಲ್ಲಿ ಉಳಿಯುವುದಕ್ಕಾಗಿ ಬೇರೆ ಬೇರೆ ವರ್ಗದವರಿಗೆ ನೀತಿಯ ಕಥೆಗಳಿಂದಲೂ ಮಹಾಪುರುಷರ ಜೀವನ ಚರಿತ್ರೆಗಳ ಸಾಹಾಯ್ಯದಿಂದಲೂ ನೀತಿಯಪಾಠಗಳನ್ನು ಕಲಿಸು ವುದೊಂದು ಗೌಣ ಸಾಧನವು ಇರುವುದು; ಆದರೆ ಅವರು ಅನೀತಿಯಿಂದ ನಡೆಯುವ ಕಾರಣವು, ಅವರಿಗೆ ಕೆಟ್ಟ ನಡತೆಯಾವುದು, ಚೆಲೋ ನಡತೆ ಯಾವುದು ಎಂಬುದರ ಜ್ಞಾನವಿರುವುದಿಲ್ಲೆಂಬುದಲ್ಲ. ಹುಡುಗರಿಗೆ ಸತ್ಯವೆಂದರೇನು, ಅದರಿಂದಾಗು ಪ್ರಯೋಜನಗಳು ಯಾವುವು ? ಸುಳ್ಳು ಆಡುವುದರಿಂದ ಆಗುವ ಹಾನಿಗಳು ಯಾವುವು ? ಇತ್ಯಾದಿ ಸಂಗತಿಗಳು ಗೊತ್ತಿರುತ್ತವೆ. ಆದರೆ ಲಾಭದ ಆಶೆ, ಶಿಕ್ಷೆಯ ಅಂಜಿಕೆ, ಒಣ ಡೌಲು

ಈ ಮೊದಲಾದ ಭಾವನೆಗಳ ಮೋಹದಿಂದ ಸುಳ್ಳುಹೇಳುವರು. ಆದಕಾರಣ ಅವರ ಮನಸಿನಲ್ಲಿ ಈ ಭಾವನೆಗಳು ಉತ್ಪನ್ನವಾಗದಂತೆಯೂ. ಸತ್ಯವನ್ನೇ ನುಡಿಯುವ ರೂಢಿ ಹತ್ತುವಂತೆಯೂ ಶಿಕ್ಷಕರು ಯತ್ನ ಮಾಡಬೇಕಾಗುವುದು. ಇದರಿಂದ ಸ್ಪಷ್ಟವಾಗುವುದೇನಂದರೆ, ನೀತಿಯ ಜ್ಞಾನಕ್ಕಿಂತ ನೀತಿಯ ಆಚರಣೆಯು ಮಹತ್ವವಾದದ್ದಿರುವುದು. ಊಟ ಮಾಡದೆ ಬರೇ ಊಟದ ಕಥೆಗಳನ್ನು ಹೇಳುವುದರಿಂದಲೂ, ಕೇಳುವುದರಿಂದಲೂ ಹೊಟ್ಟೆ ತುಂಬುವುದಿಲ್ಲ. ಅದೇ ಪ್ರಕಾರ ಹುಡುಗರಿಗೆ ಒಳ್ಳೇ ನಡತೆಯ ಕಥೆಗಳನ್ನು ಹೇಳುವುದರಿಂದ ಅವರಿಗೆ ಒಳ್ಳೇ ನಡತೆಯ ರೂಢಿಗಳು ಹತ್ತುವುದಿಲ್ಲ. ಅಂಥ ರೂಢಿಗಳು ಹತ್ತಬೇಕಾದರೆ ಸತತವಾಗಿ ಒಳ್ಳೇ ನಡತೆಯಿಂದ ನಡೆಯಲಿಕ್ಕೆಬೇಕು. ಸಾರಾಂಶ ನೀತಿಶಿಕ್ಷಣವನ್ನು ಕೊಡಲಿಕ್ಕೆ ನೀತಿಯ ಪಾಠಗಳಿಗಿಂತ, ಸಾಲೆಯ ತಿದ್ದುವಿಕೆ, ಶಿಕ್ಷಕನ ಸದ್ವರ್ತನ ಇವು ಹೆಚ್ಚು ಮಹತ್ವದ ಸಾಧನಗಳಾಗಿರುತ್ತವೆ.

ಯಾವ ಶಾಲೆಯ ತಿದ್ದುವಿಕೆಯು ಚೆನ್ನಾಗಿರುವುದಿಲ್ಲವೊ, ಶಿಕ್ಷಕನ ವರ್ತನವು ಶುದ್ಧವಾದದ್ದೂ ಅನುಕರಣೀಯವಾದದ್ದೂ ಇರುವುದಿಲ್ಲವೊ ಆ ಶಾಲೆಯ ಹುಡುಗರಲ್ಲಿ ಎಲ್ಲತರದ ದುರ್ನಡತೆಗಳು ಮನೆಮಾಡಿಕೊಂಡಿರುವುವು. ಶಾಲೆಯ ವಾರ್ಷಿಕ ಪರೀಕ್ಷೆಯಲ್ಲಿ ನೈತಿಕ ಶಿಕ್ಷಣದ ಪರೀಕ್ಷೆಯು ಆಗುವುದಿಲ್ಲ. ಆದರೆ ತನ್ನ ವಿದ್ಯಾರ್ಥಿಗಳ ಕಲ್ಯಾಣದ ಬಗ್ಗೆ ತಾನು ಹಗಲಿರುಳು ಮಾಡುತ್ತಿರುವ ಪ್ರಯತ್ನಗಳ ಬಗ್ಗೆ ನಿಜವಾದ ಶಿಕ್ಷಕನಿಗೆ ಆಗುತ್ತಿರುವ ಆನಂದವು ಬೇರೆ ಯಾವ ಸಂಗತಿಗಳಿಂದಲೂ ಆಗುವುದಿಲ್ಲ. ಮತ್ತು ಇಂಥ ಶಿಕ್ಷಕನ ವಿಷಯವಾಗಿ ಹುಡುಗರ ಮನಸಿನಲ್ಲಿ ಉತ್ಪನ್ನವಾದ ಪೂಜ್ಯಬುದ್ಧಿಯು ಅವರು ಜೀವದಿಂದಿರುವ ಮಟ್ಟಿಗೂ ನಷ್ಟವಾಗುವುದಿಲ್ಲ. ನಿಜವಾದ ಶಿಕ್ಷಕನು ತಾನು ಮಾಡಿದ ಕೆಲಸಕ್ಕೆ ಇದೇ ಶ್ರೇಷ್ಠವಾದ ಪ್ರತಿಫಲವೆಂದು ತಿಳಿಯುವನು.

**೭. ಧಾರ್ಮಿಕ ಶಿಕ್ಷಣ:—**ಸಾಲೆಯಲ್ಲಿ ಯಾವುದೊಂದು ವಿಶಿಷ್ಟವಾದ ಧರ್ಮಮತದ ಶಿಕ್ಷಣವನ್ನು ಕೊಡುವುದು ಶಿಕ್ಷಕನಿಗೆ ಶಕ್ಯವಿಲ್ಲ. ಯಾಕಂದರೆ ಹುಡುಗರು ಬೇರೆಬೇರೆ ಧರ್ಮಮತದವರಿರುವರು. ತಾಯಿತಂದೆಗಳು ತಮ್ಮ ಮಕ್ಕಳಿಗೆ ತಮ್ಮ ತಮ್ಮ ಧರ್ಮಮತದ ತತ್ವಗಳನ್ನೂ

ಆಚರಣೆಗಳನ್ನೂ ವಿಧಿನಿಷೇಧಗಳನ್ನೂ ತಮ್ಮ ಮನೆಯಲ್ಲಿಯೇ ಕಲಿಸ ತಕ್ಕದ್ದು. ಸಾಲೆಯಲ್ಲಿ ಶಿಕ್ಷಕರು ಅವರೆಲ್ಲರಲ್ಲಿ ಪರಸ್ಪರ ಪ್ರೇಮಾದರ ಗಳು ಹುಟ್ಟುವಂತೆಯೂ, ಪರಧರ್ಮಸಹಿಷ್ಣುತೆಯು ಉತ್ಪನ್ನವಾಗು ವಂತೆಯೂ, ಯತ್ನಮಾಡತಕ್ಕದ್ದು. ಮತ್ತು ಶಿಕ್ಷಕರು ಯಾವುದೊಂದು ಧರ್ಮಮತಕ್ಕೆ ಸೇರಿದವರಾಗಿದ್ದರೂ ಸಾಲೆಯಲ್ಲಿ ಎಲ್ಲ ಧರ್ಮದ ವಿದ್ಯಾರ್ಥಿಗಳ ಕೂಡ ಸಹಾನುಭೂತಿಯಿಂದಲೂ ಪ್ರೇಮದಿಂದಲೂ ನಡಕೊಳ್ಳತಕ್ಕದ್ದು. ಅದರಿಂದ ಅವರು ಎಲ್ಲ ಜನರ ಪ್ರೀತಿಗೂ ಮಾನಕ್ಕೂ ಪಾತ್ರರಾಗುವರು.

ಎಲ್ಲ ಧರ್ಮದ ಮೂಲ ತತ್ವಗಳು ಸತ್ಯ, ಭೂತದಯೆ, ತಾಳ್ಮೆ, ವಿಶ್ವಾಸ, ಮನೋನಿಗ್ರಹ, ಕೃತಜ್ಞತೆ, ಶಾಂತಿ ಈ ಮೊದಲಾದ ನೀತಿಯ ಸಂಗತಿಗಳನ್ನೇ ಅವಲಂಬಿಸಿರುವುವೆಂಬುದನ್ನು ಬೇರೆ ಬೇರೆ ಧರ್ಮದ ಸತ್ಪುರುಷರ ಜೀವನಚರಿತ್ರದೊಳಗಿನ ಉದಾಹರಣೆಗಳನ್ನು ಶಿಕ್ಷಕರು ಪ್ರಸಂಗಗಳು ಸಿಕ್ಕಾಗ ಹೇಳಿ ಜಾತಿಗೆ ಭೇದವಾದರೂ ನೀತಿಗೆ ಭೇದವಿಲ್ಲೆಂಬ ಸಂಗತಿಯು ಹುಡುಗರ ಮನಸಿನಲ್ಲಿ ಬಿಂಬಿಸುವಂತೆ ಮಾಡುತ್ತಿರಬೇಕು.

ಪೂಜ್ಯಬುದ್ಧಿ, ಆದರ ಇವು ಎಲ್ಲ ಧರ್ಮಮತಗಳ ಮುಖ್ಯ ಅಂಗ ಗಳಾಗಿರುತ್ತವೆ. ದೇವರ ಅಸ್ತಿತ್ವವೂ ಈ ಗುಣಗಳುಳ್ಳವರಿಗೇ ತಿಳಿಯು ವುದು. ಪ್ರಾತಃಕಾಲದ ಪ್ರಶಾಂತವೂ ರಮಣೀಯವೂ ಆದ ಶೋಭೆ ಯನ್ನೂ ಹುಣ್ಣಿಮೆಯ ಬೆಳದಿಂಗಳನ್ನೂ, ಅಮವಾಸ್ಯದ ನಿಬಿಡವಾದ ಕತ್ತಲೆಯನ್ನೂ, ವಿಶಾಲವಾದ ಆಕಾಶದಲ್ಲಿ ಬೆಳಗುವ ನಕ್ಷತ್ರ ರಾಶಿ ಗಳನ್ನೂ, ಅತ್ಯದ್ಭುತವಾದ ಗುಡುಗು ಮಿಂಚುಗಳಿಂದ ಕೂಡಿ ಕ್ಷಣ ಮಾತ್ರದಲ್ಲಿ ಸುತ್ತುಮುತ್ತು ನೀರೇನೀರುಮಾಡಿಬಿಡುವ ಮಳೆ ಯನ್ನೂ ಕಂಡು ಯಾವ ಮನುಷ್ಯನ ಮನಸಿನಲ್ಲಿ ಸೃಷ್ಟಿಕರ್ತನ ವಿಷಯವಾಗಿ ಪೂಜ್ಯಬುದ್ಧಿಯೂ ಆದರವು ಉತ್ಪನ್ನವಾಗಲಿಕ್ಕಿಲ್ಲ? ಶಿಕ್ಷಕರು ಚಿಕ್ಕ ಮಕ್ಕಳಿಗೆ ಸೃಷ್ಟಿಯಲ್ಲಿ ಕಾಣುವ ಇಂಥ ಚಮತ್ಕಾರ ಗಳನ್ನೂ ಪ್ರಾಣಿ ವನಸ್ಪತಿಗಳನ್ನೂ ಆಗಾಗ್ಗೆ ತೋರಿಸಿ ಸೃಷ್ಟಿಕರ್ತನ

ವಿಷಯವಾಗಿ ಪ್ರೇಮಾದರಗಳನ್ನು ಹುಟ್ಟಿಸಲಿಕ್ಕೆ ಯತ್ನಮಾಡ ತಕ್ಕದ್ದು.

**ಮತ್ತೊಂದು ಮಹತ್ವದ ಸಂಗತಿಯು ಯಾವುದೆಂದರೆ:—** ಪ್ರತಿದಿನಸ ಶಾಲೆಯ ಕೆಲಸವು ಪ್ರಾರಂಭವಾಗುವ ಮೊದಲು, ಎಲ್ಲ ವಿದ್ಯಾರ್ಥಿಗಳೂ ಶಿಕ್ಷಕರೂ ಒತ್ತಟ್ಟಿಗೆ ವ್ಯವಸ್ಥೆಯಿಂದ ನಿಂತುಕೊಂಡು ಜಗದೀಶನ ಪ್ರಾರ್ಥನೆಯನ್ನು ಮಾಡುವ ಪದ್ಧತಿಯು ಬಹಳ ಹಿತಕರವಾದದ್ದು. ಈ ತರದ ಪ್ರಾರ್ಥನೆಯಿಂದ ಮನಸ್ಸು ಪ್ರಸನ್ನವಾಗುವುದು ; ಕೆಲಸಕ್ಕೆ ಉತ್ಸಾಹವು ಬರುವುದು ; ಶಾಂತವೂ ಗಂಭೀರವೂ ಆದ ಈ ಪ್ರಾರ್ಥನೆಯ ದೃಶ್ಯವು ಚಿಕ್ಕಮಕ್ಕಳ ಕೋಮಲ ಮನಸಿನ ಮೇಲೆ ಒಳ್ಳೇ ಹಿತಕರವಾಗಿ ಪರಿಣಮಿಸುವುದು. ಯಾವುದೊಂದು ಕೆಲಸಕ್ಕೆ ಪ್ರಾರಂಭ ಮಾಡುವ ಮೊದಲು ಈ ಜಗತ್ತಿಗೆ ಒಡೆಯನಾದ ಈಶ್ವರನನ್ನು ಭಕ್ತಿಯಿಂದ ನಮಿಸಿ ಸದ್ಬುದ್ಧಿಯನ್ನು ಕೊಟ್ಟು ಸಾಹಾಯ್ಯ ಮಾಡೆಂದು ಬೇಡಿಕೊಳ್ಳುವ ರೂಢಿಯು ಮಕ್ಕಳಿಗೆ ಹತ್ತುವುದು.

ಈ ಪ್ರಾರ್ಥನೆಯ ಪದ್ಯವು ತೀರ ಸಾದಾ ಇರಬೇಕು; ಭಾಷೆಯು ಆದಷ್ಟು ಸುಲಭವಾದದ್ದಿರಬೇಕು. ಅದರ ಧಾಟಿಯು ಕೂಡ ಚಿಕ್ಕ ಮಕ್ಕಳಿಗೆ ಅನುಕೂಲವಾದದ್ದಿರಬೇಕು. ಮತ್ತು ಆ ಪದ್ಯದಲ್ಲಿ ಸಾಮಾನ್ಯವಾಗಿ ಸೃಷ್ಟಿಕರ್ತನ ದಯಾಳುತನವನ್ನೂ ಚಾತುರ್ಯವನ್ನೂ ಉಪಕಾರವನ್ನೂ ವರ್ಣಿಸಿರಬೇಕು. ಆದರೆ ಅದು ಯಾವುದೊಂದು ವಿಶಿಷ್ಟವಾದ ಧರ್ಮಮತಕ್ಕೆ ಸಂಬಂಧಪಟ್ಟದ್ದಿರಬಾರದು. ಮಾದರಿಯ ಸಲುವಾಗಿ ಇಲ್ಲಿ ಒಂದು ಪದ್ಯವು ಕೊಡಲ್ಪಟ್ಟಿರುವುದು.

## ಸಾಮಾನ್ಯ ಪ್ರಾರ್ಥನೆಯು

**ಕಾಯೊ ದೇವನೆ ಬಾಲರ ಸುಖದಾಯಕ, ಜಗದೀಶ್ವರ || ಪ ||**
**ನೀನೆ ಲೋಕವ ಮಾಡಿದೆ, ಶಶಿಭಾನು ತೇಜವ ನೀಡಿದೆ |**
**ಮಾನವಗೆ ನೆಲೆ ತೋರಿದೆ, ಅನಪಾನಗಳನು ಪೂರೈಸಿದೆ || ೧ ||**
**ವಂದಿಪೆವು ಕರುಣಾತ್ಮನೆ, ನಾವ್ಮಂದಮತಿಗಳು ದೇವನೆ |**
**ತಂದೆ ನೀನೆ ರಕ್ಷಿಸೈ, ನಿಜಬಂಧು ನೀನೇ ಪಾಲಿಸೈ || ೨ ||**

ಪ್ರೀತಿ ತಾಳ್ವನು ತಂದೆಯು, ತೊದಲ್ಮಾತು ಕೇಳುತ ಬಾಲರ,
ಈ ತರದ ಜನ ರೀತಿಯು, ಪ್ರಿಯ ತಾತ, ತಾಳ್ಮೆ ಈಶ್ವರ ॥ ೩ ॥

ಪ್ರಾರ್ಥನೆಯು ಪ್ರಾರಂಭವಾದ ಮೇಲೆ ಬಂದವರನ್ನು ಹೊರಗೆ ಸಾಲಾಗಿ ನಿಲ್ಲಿಸಬೇಕು. ಪ್ರಾರ್ಥನೆಯ ಅಭಿರುಚಿಯು ಹುಟ್ಟಿದ ಬಳಿಕ ಎಲ್ಲ ಹುಡುಗರೂ ಆ ಹೊತ್ತಿಗೆ ಸರಿಯಾಗಿ ಬರಲಿಕ್ಕೆ ಪ್ರಯತ್ನ ಮಾಡುವರು.

೮. **ಬಾಲವೀರರು ಹಾಗು ಕನ್ಯಾಸಂಘವು:—** ಬಾಲವೀರ ಸಂಸ್ಥೆಯ ಮಹತ್ವವು ನಮ್ಮ ಶಿಕ್ಷಕರಿಗೆ ತಿಳಿಯುಹತ್ತಿರುವುದು. ಎಷ್ಟೋ ಪ್ರಾಥಮಿಕ ಶಾಲೆಗಳಲ್ಲಿಯೂ ಬಾಲವೀರರ ಗುಂಪುಗಳು ಸಿದ್ಧವಾಗುತ್ತಲಿವೆ. ಮಕ್ಕಳಲ್ಲಿ ದಕ್ಷತೆ, ಚಪಲತನ, ವ್ಯವಸ್ಥಿತತನ, ಉದ್ಯೋಗದ ಸೇರಿಕೆ, ಸಹಾನುಭೂತಿ, ಪ್ರೇಮ, ಪ್ರಸಂಗಾವಧಾನ, ಸ್ವಾವಲಂಬನ ಈ ಮುಂತಾದ ಗುಣಗಳು ಈ ಬಾಲವೀರ ಪದ್ಧತಿಯ ಶಿಕ್ಷಣದಿಂದ ಉತ್ಪನ್ನವಾಗುವವು. ಇದರಂತೆ ಕನ್ಯಾಸಂಘಗಳ ಶಿಕ್ಷಣದಿಂದ ಹೆಣ್ಣು ಮಕ್ಕಳಲ್ಲಿ ಆ ಗುಣಗಳು ಹುಟ್ಟುವುವು. ಆದರೆ ಈ ಕನ್ಯಾಸಂಘಗಳ ಪ್ರಸಾರವು ಇನ್ನೂ ಆಗತಕ್ಕಷ್ಟು ಆಗಿರುವುದಿಲ್ಲ.



# ೧೧ನೆಯ ಪ್ರಕರಣ

## ಶಾರೀರಿಕ ಶಿಕ್ಷಣ

ಶಿಕ್ಷಣವು ಮನುಷ್ಯನ ಜೀವಿತಯಾತ್ರೆಯ ಸಿದ್ಧತೆಯಾಗಿರುತ್ತದೆ. ನಾವು ದೂರ ದೇಶಕ್ಕೆ ಪ್ರವಾಸದ ಸಲುವಾಗಿ ಹೊರಟರೆ ದಾರಿಯಲ್ಲಿ ನಮಗೆ ಯಾವ ತೊಂದರೆಗಳೂ ತಟ್ಟದಂತೆ ನಾನಾಪ್ರಕಾರದ ಸಿದ್ಧತೆಯನ್ನು ಮಾಡಿಕೊಳ್ಳುವುದು ಅತ್ಯವಶ್ಯವು. ಈ ಸಿದ್ಧತೆಯೆಂದರೆ ನಮ್ಮ ಶರೀರ ಹಾಗು ಮನಸ್ಸು ಈ ಎರಡನ್ನೂ ಸಮತೋಲವಾಗಿಯೂ, ಶಕ್ಯವಿದ್ದಷ್ಟು ಮಟ್ಟಿಗೆ ಪೂರ್ಣವಾಗಿಯೂ ವಿಕಾಸಗೊಳಿಸುವುದು. ಇವೆರಡರಲ್ಲಿ ಶಾರೀರಿಕ ವಿಕಾಸವನ್ನು ಕುರಿತು ಈ ಪ್ರಕರಣದಲ್ಲಿ ಆಲೋಚಿಸುವ.

ಗಂಡುಸಾಗಲಿ, ಹೆಂಗುಸಾಗಲಿ, ಪ್ರತಿ ಒಬ್ಬರು ತಮ್ಮ ಆಯುಷ್ಯದಲ್ಲಿ ಎಷ್ಟೋ ಕರ್ತವ್ಯಗಳನ್ನು ಜರಗಿಸಬೇಕಾಗುವುದು. ಅವುಗಳನ್ನು ಉತ್ತಮರೀತಿಯಿಂದ ಮಾಡಿ ಕೊನೆಗಾಣಿಸಬೇಕಾದರೆ ಶರೀರಸಂಪತ್ತಿಯ ಸಾಹಾಯ್ಯವು ಬೇಕು. ರೋಗಿಯೂ, ದುರ್ಬಲನೂ ಆದ ಮನುಷ್ಯನು ತನ್ನ ಕುಟುಂಬದ ಸಲುವಾಗಿಯೂ ಸಮಾಜದ ಸಲುವಾಗಿಯೂ ಏನು ಮಾಡಲಾಪನು? ಅವನ ಶುಶ್ರೂಷೆಯನ್ನು ಮಾಡುವುದರಲ್ಲಿ ಮನೆಯ ಜನರಿಗೆ ಸಾಕುಸಾಕಾಗುವುದು. ಇದಲ್ಲದೆ ಮನುಷ್ಯನ ಸುಖದ ಸಲುವಾಗಿ ಸೃಷ್ಟಿಕರ್ತನು ನಿರ್ಮಿಸಿದ ಅನೇಕ ವಸ್ತುಗಳ ಅನುಭವವನ್ನು ಪಡೆಯಲಿಕ್ಕೆ ಉತ್ಕೃಷ್ಟವಾದ ಶರೀರ ಸಂಪತ್ತು ಬೇಕು. ವೇಗದಿಂದ ಇಲ್ಲವೆ ಮಂದಗತಿಯಿಂದ ಹರಿಯುವ ನದಿಗಳು, ರಮಣೀಯವಾದ ತಡಸಲುಗಳು, ಸೂರ್ಯೋದಯ ಸೂರ್ಯಾಸ್ತಕಾಲದಲ್ಲಿ ವಿಲಕ್ಷಣ ಶೋಭೆಯನ್ನು ಹೊಂದಿದ ಗಿರಿ ಶಿಖರಗಳು ಈ ಮುಂತಾದ ದೃಶ್ಯಗಳನ್ನು ನೋಡುವುದರಿಂದ ಮನಸಿಗೆ

ಆಗುವ ಶುದ್ಧಾನಂದವು ಅವರ್ಣನೀಯವಾದದ್ದು. ಆದರೆ ರೋಗಿಷ್ಠ ಮನುಷ್ಯನ ಪಾಲಿಗೆ ಇವೆಲ್ಲವೂ ವ್ಯರ್ಥವೇ ಸರಿ. ಶರೀರವು ಸದೃಢ ವಾಗಿರದಿದ್ದರೆ ಅವನಿಂದ ಶಾರೀರಿಕ ಮಾನಸಿಕ ಶ್ರಮಗಳನ್ನು ತಾಳಿಕೊಳ್ಳುವುದಾಗುವುದಿಲ್ಲ. ಶ್ರಮದ ತರುವಾಯ ವಿಶ್ರಾಂತಿಯ ಸೌಖ್ಯವನ್ನು ಪಡೆಯುವುದೂ ಅವನಿಗೆ ಶಕ್ಯವಿಲ್ಲ. ಶರೀರಸಂಪತ್ತಿ ಯೊಂದು ಇರದಿದ್ದರೆ ಆತ್ಮಸಂಯಮನವನ್ನು ಮಾಡುವುದು ಕಠಿನ ವಾಗುವುದು. ಶರೀರವು ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳನ್ನು ಪಡೆಯಲಿಕ್ಕೆ ಮುಖ್ಯ ಸಾಧನವಾಗಿದೆ ಯೆಂದು ನಮ್ಮ ಪ್ರಾಚೀನರು ಹೇಳಿದ್ದಾರೆ. ಆದರೆ ಶರೀರವು ನಿರೋಗಿಯೂ ಸುದೃಢವೂ ಆಗಿದ್ದರೆ ಮಾತ್ರ ಅದು ನಿಜವಾಗಿ ಸಾಧನ ವಾಗಿ ಉಪಯೋಗಕ್ಕೆ ಬರುವುದು. ಆದಕಾರಣ ಪ್ರತಿ ಒಬ್ಬರು ತಮ್ಮ ಶರೀರವು ನಿರೋಗಿಯೂ ಸದೃಢವೂ ಆಗುವಂತೆ ಪ್ರಯತ್ನ ಮಾಡತಕ್ಕದ್ದು.

ಮಕ್ಕಳು ಪ್ರೌಢರಾದ ಮೇಲೆ ಮಾಡಬೇಕಾಗುವ ಅನೇಕ ಕರ್ತವ್ಯಗಳನ್ನು ಮಾಡುವ ಯೋಗ್ಯತೆಯನ್ನುಂಟುಮಾಡುವುದೇ ಶಾಲಾ ಶಿಕ್ಷಣದ ಹಾಗು ಗೃಹಶಿಕ್ಷಣದ ಉದ್ದೇಶವಿರುವುದು. ಈ ಯೋಗ್ಯತೆಯು ಉತ್ಪನ್ನವಾಗಬೇಕಾದರೆ, ಹಾಗು ಅವರ ಆಯುಷ್ಯ ಕ್ರಮವು ಸುಖಕರವಾಗಬೇಕಾದರೆ ಅವರು ಸದೃಢವೂ ನಿರೋಗಿಯೂ ಆದ ಶರೀರವುಳ್ಳವರೂ, ಚುರುಕುಬುದ್ಧಿಯುಳ್ಳವರೂ, ಉತ್ತಮವಾದ ಶೀಲವುಳ್ಳವರೂ ಆಗಿರಲಿಕ್ಕೆ ಬೇಕು. ಶಿಕ್ಷಣದಿಂದ ಈ ಮೂರೂ ಸಂಗತಿಗಳನ್ನು ಮಕ್ಕಳಲ್ಲಿ ಉಂಟುಮಾಡಬೇಕಾಗಿದೆ. ಚಿಕ್ಕ ವಯಸ್ಸಿ ನಲ್ಲಿಯೇ ಮಕ್ಕಳ ಶರೀರವು ನಿರೋಗಿಯಾದದ್ದೂ ಬಲಕಟ್ಟಾದದ್ದೂ ಆಗಿ ಶಾರೀರಿಕ ಶಕ್ತಿಗಳು ವಿಕಾಸಹೊಂದದಿದ್ದರೆ ಮುಂದಿನ ಆಯುಷ್ಯ ದಲ್ಲಿ ಅವರು ತಮ್ಮ ಕರ್ತವ್ಯಗಳನ್ನು ಹೇಗೆ ಜರಗಿಸುವರು? ಆಯುಷ್ಯ ದೊಳಗಿನ ನಾನಾಪ್ರಕಾರದ ಸಂಕಟಗಳನ್ನೆದುರಿಸುವ ಸಾಮರ್ಥ್ಯ ವಾದರೂ ಅವರಲ್ಲಿ ಹೇಗೆ ಉತ್ಪನ್ನವಾಗುವುದು? ಮತ್ತು ಅವರ

ಜೀವನವು ಹೇಗೆ ಆನಂದದಾಯಕವಾದೀತು. ಆದುದರಿಂದ ಶಾರೀರಿಕ ಶಿಕ್ಷಣವು ಬೌದ್ಧಿಕ ಶಿಕ್ಷಣದಷ್ಟೇ ಅಥವಾ ಅದಕ್ಕೂ ಹೆಚ್ಚು ಮಹತ್ವವಾದದ್ದೆಂದು ಹೇಳಬಹುದು. ಶಾರೀರಿಕ ಶಿಕ್ಷಣದಿಂದ ಮಕ್ಕಳ ಶರೀರವು ನಿರೋಗಿಯಾಗಿ ಉಳಿದು, ಕೈ, ಕಾಲು, ಕಣ್ಣು ಮುಂತಾದ ಅವಯವಗಳು ತಮ್ಮ ಕೆಲಸಗಳನ್ನು ವ್ಯವಸ್ಥೆಯಿಂದ ಮಾಡುವ ಶಕ್ತಿಯುಳ್ಳವುಗಳಾಗಬೇಕು. ಇದೇ ಕಾರಣದಿಂದ ಶಾರೀರಿಕ ಶಿಕ್ಷಣದಲ್ಲಿ ಹಸ್ತವ್ಯವಸಾಯಗಳಿಗೆ ವಿಶೇಷ ಮಹತ್ವವುಂಟು.

ಶರೀರಾರೋಗ್ಯವನ್ನು ಕಾಯ್ದುಕೊಳ್ಳಲಿಕ್ಕೆ ಸ್ವಚ್ಛವಾದ ಹವೆ, ಪೌಷ್ಟಿಕ ಆಹಾರ, ನಿರ್ಮಲ ನೀರು, ವ್ಯಾಯಾಮ, ವಿಶ್ರಾಂತಿ ಈ ಮೊದಲಾದ ಮುಖ್ಯ ಸಂಗತಿಗಳು ಅವಶ್ಯವಾಗಿ ಬೇಕೆಂಬುದು ಆರೋಗ್ಯ ಶಾಸ್ತ್ರದ ಅಭ್ಯಾಸದಿಂದ ಗೊತ್ತಾಗುವುದು. ಇವುಗಳಲ್ಲಿ ಬಹಳ ಸಂಗತಿಗಳು ತಾಯಿತಂದೆಗಳಿಗೂ ಪಾಲಕರಿಗೂ ಸಂಬಂಧಪಟ್ಟವುಗಳಾಗಿರುತ್ತವೆ. ಆದಾಗ್ಯೂ ಆಹಾರದ ಹೊರತಾಗಿ ಉಳಿದ ಸಂಗತಿಗಳ ಅನುಕೂಲತೆಯು ಸಾಲೆಯಲ್ಲಿ ಅದೆಯೋ ಇಲ್ಲವೋ ಎಂಬುದನ್ನು ಶಿಕ್ಷಕರು ನೋಡಬೇಕಾಗುತ್ತದೆ.

ಶಾರೀರಿಕ ಶಿಕ್ಷಣದ ದೃಷ್ಟಿಯಿಂದ ಶಿಕ್ಷಕನು ಮೂರು ಬಗೆಯಿಂದ ಲಕ್ಷ್ಯಕೊಡುವುದು ಶಕ್ಯವಿರುವುದು.

**೧ನೆಯದು**—ಸಾಲೆಯೊಳಗಿನ ಅಭ್ಯಾಸಕ್ರಮದಿಂದಲೂ, ವರ್ಗದ ಕೋಣೆ, ವೇಳಾಪತ್ರಿಕೆ ಈ ಮುಂತಾದ ವ್ಯವಸ್ಥೆಯಿಂದಲೂ ಮಕ್ಕಳ ಶರೀರಪ್ರಕೃತಿಯ ಮೇಲೆ ಕೆಟ್ಟ ಪರಿಣಾಮವಾಗದಂತೆ ಎಚ್ಚರಪಡತಕ್ಕದ್ದು.

**೨ನೆಯದು**— ಹುಡುಗರ ಶಾರೀರಿಕ ವ್ಯಾಪಾರಗಳು ಸರಿಯಾಗಿ ನಡೆದು, ಅವರ ಸ್ನಾಯುಗಳು ಬಲಕಟ್ಟಾಗುವುದಕ್ಕಾಗಿ ಅವರವರ ವಯೋಮಾನಕ್ಕನುಸರಿಸಿ ಆಟಗಳನ್ನು ಆಡಿಸತಕ್ಕದ್ದು; ವ್ಯಾಯಾಮವನ್ನೂ ಕವಾಯತನ್ನೂ ಮಾಡಿಸತಕ್ಕದ್ದು.

**೩ನೆಯದು—** ಹುಡುಗರ ಕೈ, ಕಣ್ಣು, ಈ ಅವಯವಗಳು ತಮ್ಮ ಕೆಲಸಗಳನ್ನು ವ್ಯವಸ್ಥೆಯಿಂದಲೂ, ಚಾತುರ್ಯದಿಂದಲೂ ಮಾಡುವ ಸಾಮರ್ಥ್ಯವುಳ್ಳವುಗಳಾಗುವಂತೆ ಕಾಗದಕತ್ತರಿಸುವುದು, ಮಣ್ಣಿನ ಆಟಿಕೆಗಳನ್ನು ಮಾಡುವುದು, ಹೊಲಿಯುವುದು ಇವೇ ಮೊದಲಾದ ಕೈಕೆಲಸಗಳನ್ನು ಮಾಡಿಸತಕ್ಕದ್ದು.

ಈ ಮೂರುಬಗೆಯ ಕೆಲಸಗಳಿಂದ ಮಕ್ಕಳ ಶರೀರಪ್ರಕೃತಿಯು ಸುಧಾರಿಸಿ ಅವರು ಸಶಕ್ತರೂ ನಿರೋಗಿಗಳೂ ಆಗುವರಲ್ಲದೆ ಅವರ ಬೌದ್ಧಿಕ ಶಿಕ್ಷಣಕ್ಕೂ ವಿಶೇಷವಾಗಿ ನೈತಿಕ ಶಿಕ್ಷಣಕ್ಕೂ ಸಾಹಾಯ್ಯವಾಗುವುದು.

## ೧ನೆಯದು:— ಶಾಲಾವ್ಯವಸ್ಥೆಯೂ ಶಾಲೆಯ ಅಭ್ಯಾಸಕ್ರಮವೂ

**ಬೆಳಕು:—** ಮಕ್ಕಳ ದೃಷ್ಟಿಗೆ ತೊಂದರೆಯಾಗದಂತೆ ಸಾಲೆಯಲ್ಲಿ ಸಾಕಷ್ಟು ಬೆಳಕುಬರುವಂತೆ ವ್ಯವಸ್ಥೆ ಇರಬೇಕು. ಆದರೆ ಅದರಿಂದ ಹುಡುಗರ ಕಣ್ಣುಕುಕ್ಕಿ ತೊಂದರೆಯಾಗುವಂತೆ ಇರಬಾರದು. ಬೆಳಕು ಯಾವಾಗಲೂ ಎಡಕಿನಿಂದ ಬರಬೇಕು. ಎದುರಿನಿಂದ ಬರಬಾರದು.

**ಹವೆ:—** ವರ್ಗದ ಕೋಣೆಯಲ್ಲಿಯೂ, ಆಟದ ಬೈಲಿನಲ್ಲಿಯೂ ಸಾಕಷ್ಟು ಸ್ವಚ್ಛವಾದ ಹವೆಯಾಡುತ್ತಿರಬೇಕು. ವರ್ಗದ ಕೋಣೆಯ ಕಿಡಿಕೆಗಳನ್ನೂ ಬಾಗಿಲುಗಳನ್ನೂ ಯಾವಾಗಲೂ ತೆರೆದು ಇಟ್ಟಿರಲಿಕ್ಕೆಬೇಕು.

**ಹುಡುಗರನ್ನು ಕೂಡಿಸುವ ವ್ಯವಸ್ಥೆ:—** ಹುಡುಗರು ಬಾಕಿನ ಮೇಲೆ ಕೂಡುತ್ತಿದ್ದರೆ, ಆ ಬಾಕುಗಳು ಅವರ ವಯಸ್ಸಿಗೆ ತಕ್ಕಂತೆ ಇರತಕ್ಕದ್ದು. ಅವು ಬಹಳ ಎತ್ತರವಾಗಿಯೂ ಇರಬಾರದು; ಬಹಳ ಕಿರಿಯವಾಗಿಯೂ ಇರಬಾರದು. ಬೆನ್ನಿಗೆ ಆನಿಕೆ ಇರಲಿಕ್ಕೆಬೇಕು. ಇಂಥ ಬಾಕುಗಳು ಇಲ್ಲದಿದ್ದರೆ, ಹುಡುಗರನ್ನು ನೆಲದ ಮೇಲೆ ಕೂಡಿಸುವದು ಒಳ್ಳೇದು. ಹುಡುಗರು ಯಾವಾಗಲು ನೀಟಾಗಿ ಕೂತು, ಕೆಲಸಮಾಡುತ್ತಿರಬೇಕು. ಬೊಗ್ಗಿ ಕೆಲಸಮಾಡುವದರಿಂದ

ಬೆನ್ನಹುರಿಯು ಮಣಿದು, ಬೇಗನೆ ಡೂಗುಹಾಯುವ ಸಂಭವವುಂಟು; ಫುಪ್ಫುಸಗಳು ಒತ್ತಲ್ಪಟ್ಟು ರಕ್ತಾಭಿಸರಣದ ಕಾರ್ಯವು ಚೆನ್ನಾಗಿ ನಡೆಯುವುದಿಲ್ಲ. ಸಾಕಷ್ಟು ಹವೆಯು ಒಳಗೆ ಸೇರದ್ದರಿಂದ ಎದೆಯು ಹರವಾಗದೆ ಗೂಡುಗಟ್ಟುತ್ತದೆ. ಕಪ್ಪು ಹಲಗೆಯ ಮೇಲೆ ಬರೆದದ್ದು ವರ್ಗದೊಳಗಿನ ಎಲ್ಲ ಹುಡುಗರಿಗೆ ಕಾಣುವಂತೆ ಅದನ್ನು ತಕ್ಕ ಸ್ಥಳದಲ್ಲಿ ಇರಿಸಬೇಕು. ಕಪ್ಪು ಹಲಗೆಯ ಮೇಲೆ ಬರೆಯುವ ಅಕ್ಷರಗಳೂ ಅಂಕೆಗಳೂ ಒಡೆದುಕಾಣುವಷ್ಟು ದೊಡ್ಡವಿರಬೇಕು. ಓದುವಾಗ ವಾಚಸ ಪುಸ್ತಕಗಳನ್ನು ಕಣ್ಣಿಗೆ ತೀರ ಸಮೀಪವಾಗಿ ಹಿಡಿಯದಂತೆ ಎಚ್ಚರಪಡತಕ್ಕದ್ದು.

**ವೇಳಾಪತ್ರಿಕ:—**ಗಣಿತ ಮುಂತಾದ ಮಾನಸಿಕ ಶ್ರಮದ ಪಾಠಗಳನ್ನು ಮನಸು ದಣಿಯದಿದ್ದಾಗ ಅಂದರೆ ಪ್ರಾರಂಭಕ್ಕೆ ಇಡಬೇಕು. ಒಂದರಹಿಂದೊಂದು ಮಾನಸಿಕ ಶ್ರಮದ ಪಾಠಗಳನ್ನೇ ಇಡಬಾರದು. ಉದಾಹರಣಾರ್ಥವಾಗಿ ಗಣಿತದ ತರುವಾಯ ವ್ಯಾಕರಣದ ಪಾಠವನ್ನಾಗಲಿ, ಶಾಸ್ತ್ರೀಯ ವಿಷಯದ ಪಾಠವನ್ನಾಗಲಿ ಇಡಬಾರದು. ನಡುವೆ ಗಾಯನ, ಚಿತ್ರಕಲೆ, ಆಟ, ಕವಾಯತು ಮೊದಲಾದ ಮನೋರಂಜಕ ವಿಷಯಗಳನ್ನು ಹಾಕಿರಬೇಕು. ಅಂದರೆ ಹುಡುಗರಿಗೆ ಮಾನಸಿಕ ಶ್ರಮದ ಪಾಠಗಳನ್ನು ಕಲಿಯಲಿಕ್ಕೆ ಬೇಸರವೆನಿಸುವವುಲ್ಲ. ಚಿಕ್ಕಮಕ್ಕಳನ್ನು ಬಹಳಹೊತ್ತಿನವರೆಗೆ ಒಂದೇ ಸ್ಥಿತಿಯಲ್ಲಿ ಕೂಡಿಸಬಾರದು. ಅವರಿಗೆ ಒಂದೊಂದು ಪಾಠವನ್ನು ಅರ್ಧತಾಸಿಗಿಂತ ಹೆಚ್ಚು ಹೊತ್ತು ಕಲಿಸಬಾರದು, ನಡನಡುವೆ ೧೦ ನಿಮಿಷ ವಿಶ್ರಾಂತಿಯನ್ನು ಕೊಡುತ್ತಿರಬೇಕು.

ಮೇಲೆ ಹೇಳಿದ ಸಂಗತಿಗಳು ಅಲ್ಪವೆಂದು ತೋರಿದರೂ ಶಾರೀರಿಕ ಶಿಕ್ಷಣದ ದೃಷ್ಟಿಯಿಂದ ಬಹಳ ಮಹತ್ವದವಿರುತ್ತವೆ. ಹುಡುಗರ ನಿತ್ಯದ ಅಭ್ಯಾಸದಲ್ಲಿ ಈ ಸಂಗತಿಗಳ ಕಡೆಗೆ ಶಿಕ್ಷಕರು ಎಚ್ಚರದಿಂದ ಲಕ್ಷ್ಯಕೊಡುತ್ತಿದ್ದರೆ ಅವರ ಶರೀರದ ಮೇಲೆ ಕೆಟ್ಟ ಪರಿಣಾಮಗಳೇನೂ ಆಗುವುದಿಲ್ಲ.

## ೨ನೆಯದು :— ಆಟಗಳು, ವ್ಯಾಯಾಮ, ಕವಾಯತು

ಆಟಗಳ ವಿಷಯವಾಗಿ ಹಿಂದೆ ೯ನೆಯ ಪ್ರಕರಣದಲ್ಲಿ ಸ್ವತಂತ್ರ ವಿವೇಚನೆಯು ಮಾಡಲ್ಪಟ್ಟಿರುವುದು. ಇಲ್ಲಿ ಶಾರೀರಿಕ ಶಿಕ್ಷಣದ ದೃಷ್ಟಿಯಿಂದ ವಿಚಾರಮಾಡಬೇಕಾಗಿದೆ.

ಶಾರೀರಿಕ ಶಕ್ತಿಗಳ ಬೆಳವಣಿಗೆಯ ದೃಷ್ಟಿಯಿಂದ ಮಕ್ಕಳ ಆಯುಷ್ಯದಲ್ಲಿ ನಾಲ್ಕು ಅವಧಿಗಳನ್ನು ಕಲ್ಪಿಸಬಹುದೆಂದು ಹಿಂದೆ ಹೇಳಿದೆ. ಸುಮಾರು ಮೊದಲಿನ ೨॥ ವರ್ಷಗಳು ಮೊದಲನೆಯ ಅವಧಿಯಲ್ಲಿ ಸೇರುವವು. ಈ ಅವಧಿಯಲ್ಲಿ ಮಗುವು ತೀರ ಪರಾಧೀನವಾಗಿರುವುದು. ಆದಾಗ್ಯೂ ಅದರ ಶಾರೀರಿಕ ಚಟುವಟಿಕೆಯು ವಿಶೇಷವಾಗಿರುತ್ತದೆ. ಈ ಚಟುವಟಿಕೆಯಿಂದ ಕೂಸಿಗೆ ಸಾಕಷ್ಟು ವ್ಯಾಯಾಮವಾಗುವುದು. ಅದರಿಂದ ಅದರ ಬೆಳವಣಿಗೆಯ ಕಾರ್ಯವು ಒಳ್ಳೇ ಭರದಿಂದ ಸಾಗುವುದು.

ಮಕ್ಕಳ ೮ ವರ್ಷದ ವಯಸ್ಸನ್ನು ಎರಡನೆಯ ಅವಧಿಯಲ್ಲಿ ಸೇರಿಸಬಹುದು. ಪರಾಧೀನತೆಯೋ ಮೊದಲನೆಯ ಅವಧಿಯ ಲಕ್ಷಣವಾಗಿತ್ತು. ಮಕ್ಕಳ ತೀವ್ರವಾದ ಶಾರೀರಿಕ ಬೆಳವಣಿಗೆ, ವಿಶ್ರಾಂತಿಯಿಲ್ಲದ ಚಟುವಟಿಕೆ, ಇವು ಈ ೨ನೆಯ ಅವಧಿಯ ಮುಖ್ಯ ಲಕ್ಷಣಗಳಾಗಿರುತ್ತವೆ. ಪ್ರಾಥಮಿಕ ಶಾಲೆಯೊಳಗಿನ ಕೆಳಗಿನ ಇಯತ್ತೆಯೊಳಗಿನ ಹುಡುಗರು ಈ ಗುಂಪಿನಲ್ಲಿ ಸೇರುವರು. ಇದು ಅವರ ಬಾಲ್ಯಾವಸ್ಥೆಯೆಂದು ಹೇಳಲ್ಪಡುವುದು. ಈ ಕಾಲಕ್ಕೆ ಅವರು ಜ್ಞಾನೇಂದ್ರಿಯಗಳನ್ನು ಉಪಯೋಗಿಸಿ ಮನಸಿನ ವಿಕಾಸವನ್ನು ಮಾಡಿಕೊಳ್ಳಲಿಕ್ಕೆ ಪ್ರಾರಂಭಿಸುತ್ತಿರುವರಾದ ಕಾರಣ ಅವರ ಶಾರೀರಿಕ ಚಟುವಟಿಕೆಗೆ ಸಾಕಷ್ಟು ಅವಕಾಶವನ್ನು ಕೊಡಲಿಕ್ಕೆ ಬೇಕು. ಈ ಚಟುವಟಿಕೆಗೆ ಪ್ರತಿಬಂಧಮಾಡುವುದರಿಂದ ಅವರ ಶಾರೀರಿಕ ಬೆಳವಣಿಗೆಯು ಕುಗ್ಗುವುದಲ್ಲದೆ ಮಾನಸಿಕ ವಿಕಾಸಕ್ಕೂ ಧಕ್ಕೆ ತಗಲುವುದು. ಈ ವಯಸ್ಸಿನ ಮಕ್ಕಳ ಮನಸ್ಸು ಬಹಳ ಚಂಚಲವಾಗಿರುವುದು. ಯಾವದೊಂದು ಕೆಲಸದಲ್ಲಿ ಅದು ಬಹಳ ಹೊತ್ತಿನ ವರೆಗೆ

ನಿಲ್ಲುವುದಿಲ್ಲ. ಮತ್ತು ಅಸ್ಥಿಷ್ಟಕ್ಕೆ ಅಸಮಾಧಾನವು ವ್ಯಕ್ತವಾಗುವುದು. ಅಂದರೆ ಭಾವನೆಗಳು ಒಳ್ಳೇ ಪ್ರಬಲವಾಗಿರುವುವು. ಈ ಸಂಗತಿಗಳನ್ನು ಲಕ್ಷದಲ್ಲಿಟ್ಟು ಶಿಕ್ಷಕರು ಅವರಿಗೆ ಆಟಗಳನ್ನು ಆಡಿಸಬೇಕು. ಅಂಥ ಕೆಲವು ಆಟಗಳನ್ನು ಇಲ್ಲಿ ಸೂಚಿಸುವೆವು.

ಒಂದು ಕಥೆಯನ್ನು ಹೇಳಿ ಆ ಕಥೆಯಲ್ಲಿ ಹೇಳಿದಂತೆ ಅಭಿನಯುಗಳನ್ನು ಮಾಡಿಸುವುದು, ಬೆಕ್ಕಾಗಿ ಇಲಿಗಳನ್ನು ಹಿಡಿಯುವುದು. ತೋಳವಾಗಿ ಕುರಿಗಳನ್ನು ಮುರಿಯುವುದು. ಕೋಳಿಯಾಗಿ ಮರಿಗಳಿಗೆ ಮೇಯಲಿಕ್ಕೆ ಕಲಿಸುವುದು. ಹಕ್ಕಿಗಳಾಗಿ ಕೈಗಳನ್ನು ರೆಕ್ಕೆಗಳಂತೆ ಉಪಯೋಗಿಸಿ ಹಾರುತ್ತ ಹೋಗುವುದು. ಇದೇ ಪ್ರಕಾರ ಒಕ್ಕಲಿಗರು, ಬಡಿಗರು, ಕಮ್ಮಾರರು, ಕೊರೆಯುವವರು ಬೀಸುವವರು ಒಗೆಯುವವರು, ನೀರು ಜಗ್ಗುವವರು, ಕಸ ಉಡುಗುವವರು, ರೊಟ್ಟೀ ಮಾಡುವವರು, ಇತ್ಯಾದಿ ಕೆಲಸಗಾರರು ಮಾಡುವ ಕೆಲಸಗಳ ಅನುಕರಣವನ್ನು ಮಾಡಿಸುವುದು, ಈ ವಯುಸ್ಸಿನ ಹುಡುಗರಿಗೆ ತಕ್ಕ ಆಟಗಳಾಗಿರುತ್ತವೆ. ಈ ವಯುಸ್ಸಿನ ಹುಡುಗರ ಸ್ನಾಯುಗಳಲ್ಲಿ ಅಪ್ಪಣೆಯ ಪ್ರಕಾರ ಚಲನವಲನಗಳನ್ನು ಮಾಡುವ ಶಕ್ತಿಯು ಬಂದಿರುವುದಿಲ್ಲಾದಕಾರಣ ಹುಡುಗರನ್ನು ದುಂಡಗೆ ನಿಲ್ಲಿಸಿ ಶಿಕ್ಷಕನು ತಾನು ಕೈಕಾಲುಗಳನ್ನು ಹಿಂದೆ, ಮುಂದೆ, ಮೇಲೆ ಕೆಳಗೆ ಮಾಡಿ, ಚಪ್ಪಳೆಯನ್ನು ಬಾರಿಸಿ, ತುದಿಗಾಲಿನಿಂದ ನಡೆದು, ಕಾಲು ಅಪ್ಪಳಿಸುತ್ತ ನಡೆದು, ಓಡಿ, ಇತ್ಯಾದಿ ಸ್ವತಃ ಮಾಡಿ ತೋರಿಸಿ ಅದರಂತೆ ಹುಡುಗರಿಗೆ ಮಾಡಲಿಕ್ಕೆ ಹೇಳಬೇಕು.

ಈ ವಯುಸ್ಸಿನ ಹೆಣ್ಣುಮಕ್ಕಳು ಹಗ್ಗದ ಮೇಲಿನ ಆಟವನ್ನು ಒಳ್ಳೇ ಪ್ರೀತಿಯಿಂದ ಆಡುವರು; ಬಾಲಕರ ಇಯತ್ತೆ, ಹಾಗು ೧ನೆಯ ಇಯತ್ತೆ ಈ ವರ್ಗಗಳೊಳಗಿನ ಬಾಲಕ-ಬಾಲಕಿಯರಿಗೆ ಅಭಿನಯ ಸಹಿತವಾದ ಹಾಡುಗಳ ಸಹಾಯ್ಯದಿಂದ ವ್ಯಾಯಾಮವನ್ನು ಮಾಡಿಸುವ ರೂಢಿಯು ಇತ್ತಿತ್ತಲಾಗಿ ಸುಧಾರಿಸಿದ ದೇಶಗಳಲ್ಲಿ ಭರದಿಂದ ಬೆಳೆಯುಹತ್ತಿದೆ.

ಹುಡುಗರು ಸುಮಾರು ಎಂಟುವರ್ಷದವರಾದಂದಿನಿಂದ ಸುಮಾರು ೧೪ ವರ್ಷದವರಾಗುವವರೆಗಿನ ಕಾಲವು ಶಾರೀರಿಕ ಶಿಕ್ಷಣದ ದೃಷ್ಟಿಯಿಂದ **೩ ನೆಯ ಅವಧಿ**ಯೆಂದು ಹೇಳಬಹುದು. ಇದು ಮಕ್ಕಳ ಕುಮಾರಾವಸ್ಥೆಯು; ಈ ಅವಧಿಯಲ್ಲಿಯೂ ಮಕ್ಕಳ ಶಾರೀರಿಕ ಚಟುವಟಿಕೆಯು ವಿಶೇಷವಾಗಿರುವುದು; ಮತ್ತು ಆ ಚಟುವಟಿಕೆಯನ್ನು ಸಹಿಸುವ ಸಾಮರ್ಥ್ಯವೂ ಅವರಲ್ಲಿ ಇರುವುದು. ಸ್ನಾಯುಗಳಲ್ಲಿ ಅಪ್ಪಣೆಯಂತೆ ಕೆಲಸಮಾಡುವ ಶಕ್ತಿಯು ಬರಹತ್ತಿರುವುದು. ಆದಕಾರಣ ಈ ಅವಧಿಯಲ್ಲಿ ಪದ್ಧತಿಗೆ ಸರಿಯಾಗಿ ಡ್ರಿಲ್, ಡಂಬೆಲ್ಸ್‌ಡ್ರಿಲ್, ಲಾಠಿ, ಲೇಝೀಮು ಗಳನ್ನು ಮಾಡಿಸಬಹುದು. ಲೇಝೀಮು ಹಳ್ಳಿಯ ಜನರಿಗೆ ಒಳ್ಳೇ ಸೇರಿಕೆಯ ವಿಷಯವಾಗಿದೆ. ಡ್ರಿಲ್ಲಿನಂತೆ ಇದರ ಬೇರೆ ಬೇರೆ ಪ್ರಕಾರಗಳನ್ನು ಹುಡುಗರಿಂದಲೂ ಹುಡುಗೆಯರಿಂದಲೂ ಮಾಡಿಸುವುದರಿಂದ ಅವರಿಗೆ ಮನೋರಂಜನವಾಗುವುದಲ್ಲದೆ ಸಾಕಷ್ಟು ವ್ಯಾಯಾಮವು ದೊರೆಯುವುದು. ಈ ಹುಡುಗರಿಗೆ ನಮಸ್ಕಾರಗಳನ್ನು ಹಾಕಿಸಬಹುದು; ನಮಸ್ಕಾರವು ಸುಲಭವಾದದ್ದೂ ಸಹಜವಾಗಿ ಸಾಧಿಸುವಂತಹದೂ ಆದ ಒಂದು ವ್ಯಾಯಾಮವಾಗಿದೆ. ಈ ವ್ಯಾಯಾಮವನ್ನು ನಿಯಮಿತತನದಿಂದ ಪದ್ಧತಿಗೆ ಸರಿಯಾಗಿ ಈ ವಯಸ್ಸಿನ ಬಾಲಬಾಲಕಿಯರಿಗೆ ಮಾಡಿಸಿದರೆ ಅವರ ಪ್ರಕೃತಿಯು ಚೆನ್ನಾಗಿ ಸುಧಾರಿಸುವುದು. ಈ ತರದ ಡ್ರಿಲ್ ಹಾಗು ವ್ಯಾಯಾಮಗಳಿಂದ ಹುಡುಗರಲ್ಲಿ ಆಜ್ಞಾಧಾರಕತನ, ಕೆಲಸದಲ್ಲಿ ತತ್ಪರತೆ, ಈಮೊದಲಾದ ಗುಣಗಳು ಹುಟ್ಟುವುವು, ಮತ್ತು ಅವರ ಅವಯವಗಳು ಪ್ರಮಾಣಕ್ಕೆ ಸರಿಯಾಗಿ ಬೆಳವಣಿಗೆ ಹೊಂದುವುವು. ಇಡೀ ಶರೀರಕ್ಕೆ ಕೈಕಾಲುಗಳೂ ಅವುಗಳ ಬೆರಳುಗಳೂ ಯಾವ ಪ್ರಮಾಣದಿಂದ ಇರತಕ್ಕದ್ದೋ ಅಷ್ಟಕ್ಕಿಂತ ಕಿರಿದಾಗಿರೋಣ, ಹೊಟ್ಟೆಯು ಮುಂದೆ ಬಂದಿರೋಣ ಟೊಂಕವು ಬೊಗ್ಗಿರೋಣ, ಈ ಮೊದಲಾದ ದೋಷಗಳು ಇಲ್ಲದಂತಾಗುವುವು. ಹುಡುಗರು ಸೊಟ್ಟ ಡೊಂಕ ಕೂಡುವುದರಿಂದಲೂ, ನಿಲ್ಲುವುದರಿಂದಲೂ ನಡೆಯುವುದರಿಂದಲೂ ಶರೀರದ ಎಷ್ಟೋ ಅವಯವಗಳಿಗೆ ಕೆಟ್ಟ ರೂಢಿಗಳು

ಹತ್ತಿರುವುವು. ಅವುಗಳನ್ನು ಡ್ರಿಲ್ಲಿನ ಕೆಲಕೆಲವು ಪ್ರಕಾರಗಳಿಂದ ತೆಗೆದುಹಾಕಿ ಸರಿಪಡಿಸಿಕೊಳ್ಳಲಿಕ್ಕೆ ಅನುಕೂಲವಾಗುವುದು. ಕೆಲವು ಹುಡುಗರಿಗೆ ಬಾಯಿಂದಲೇ ಉಸುರಾಡಿಸುವ ರೂಢಿಯು ಇರುವುದು. ಅದರಿಂದ ಪುಪ್ಪುಸದಲ್ಲಿ ಸಾಕಷ್ಟು ಹವೆಯು ಸೇರುವುದಿಲ್ಲ. ಹಾಗು ಯಾವಾಗಲು ಬಾಯಿ ತೆರೆದದ್ದೇ ಇರುವುದು. ಇಂಥ ಹುಡುಗರಿಗೆ "ಮೂಗಿನಿಂದ ಶ್ವಾಸವನ್ನು ಸಾವಕಾಶವಾಗಿ ಒಳಗೆ ತಕ್ಕೊಳ್ಳುವುದು ಕೆಲವು ಹೊತ್ತಿನವರೆಗೆ ಬಿಗಿಹಿಡಿಯುವುದು. ತರುವಾಯ ಶ್ವಾಸವನ್ನು ಸಾವಕಾಶವಾಗಿ ಹೊರಗೆ ಬಿಡುವುದು." (Long Breathing) ಈ ಅಭ್ಯಾಸವನ್ನು ಮೇಲೆ ಮೇಲೆ ಮಾಡಿಸುವುದರಿಂದ ಬಾಯಿಂದ ಉಸುರಾಡಿಸುವ ಅವರ ರೂಢಿಯು ತಪ್ಪಿಹೋಗುವುದು. ಈ ವಯಸ್ಸಿನ ಹುಡುಗರು ಸಾಧಾರಣವಾಗಿ ಚಂಡು ಚಿಣೀಫಣಿ, ಕಣ್ಣುಮುಚ್ಚಾಣಿಕೆ ಕುಂಟಹಲಿಪೆ, ಗಣೇಶನ ಆಟ ಈ ಮೊದಲಾದ ಆಟಗಳನ್ನು ಆಡುವರು. ಈ ಆಟಗಳಿಂದ ಅವರ ಮನೋರಂಜನವೂ ಶಾರೀರಿಕ ಮಾನಸಿಕ ಶಕ್ತಿಗಳ ಬೆಳವಣಿಗೆಗೆ ಅಲ್ಪ ಸ್ವಲ್ಪ ಪ್ರಮಾಣದಿಂದ ಸಹಾಯ್ಯವೂ ಆಗುವುದು. ಇಂಥ ಆಟಗಳನ್ನು ಆಡುವಾಗ ಹುಡುಗರಲ್ಲಿ ತಮ್ಮ ಎಲ್ಲ ಗೆಳೆಯರೊಳಗೆ ತಾವು ಮೇಲಾಗಬೇಕೆಂಬ ಹವಣಿಕೆಯು ವಿಶೇಷವಾಗಿರುವುದು.

ಶಾಲೆಯ ಇತರ ಅಭ್ಯಾಸಕ್ರಮದಷ್ಟೇ ಎಲ್ಲ ವಯಸ್ಸಿನ ಎಲ್ಲತರದ ಆಟಗಳಿಗೆ ಮಹತ್ವವಿರುವುದು. ಪ್ರತಿ ಎರಡು ತಾಸುಗಳ ಕೊನೆಗೆ ಮಕ್ಕಳಿಗೆ ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಕೊಡುವುದು ಅವಶ್ಯವು. ಅವರು ಆ ವೇಳೆಯನ್ನು ಆಟದಲ್ಲಿ ಕಳೆಯಬೇಕು. ಇಷ್ಟು ಸ್ವಲ್ಪ ವೇಳೆಯನ್ನು ಅವರು ಆಟದಲ್ಲಿ ಕಳೆದರೂ ಸಹ ಅವರ ಮನಸಿಗೆ ಉಲ್ಹಾಸವೆನಿಸುವುದು; ಹೊಸ ಹುರುಪು ಹುಟ್ಟುವುದು. ಮಿದುಳಿನಲ್ಲಿ ಜಾಗೃತಿಯು ಉತ್ಪನ್ನವಾಗುವುದು. ಆಟದ ಸಲುವಾಗಿ ಸಾಲೆಯ ಸುತ್ತುಮುತ್ತು ಆಟದ ಬೈಲು ಇದ್ದರೆ ವಿಶ್ರಾಂತಿಯ ವೇಳೆಯ ನಿಜವಾದ ಉಪಯೋಗವಾಗುವುದು.

ಹುಡುಗರ ೧೪ ವರ್ಷದ ಮುಂದಿನ ವಯಸ್ಸು ಶಾರೀರಿಕ ಬೆಳವಣಿಗೆಯ **ನಾಲ್ಕನೆಯ ಅವಧಿಯು.** ಈ ಕಾಲಕ್ಕೆ ಅವರು ತಕ್ಕಷ್ಟು ಪ್ರೌಢರಾಗಿರುವರು. ಇದು ಅವರ **ತಾರುಣ್ಯದ ಕಾಲವೆಂದು** ಅನ್ನಬಹುದು. ಈಗ ಅವರಿಗೆ ಸಮಾಜದ ಕಲ್ಪನೆಯು ಆಗುವಷ್ಟು ತಿಳವಳಿಕೆಯು ಬಂದಿರುವುದು. **ಕುಮಾರಾವಸ್ಥೆಯಲ್ಲಿ** ಅವರ ಮನಸಿನ ಒಲವು ತಮ್ಮ ಸರಿಕರೊಳಗೆ ಮೇಲಾಗುವ ಕಡೆಗೇ ಇರುತ್ತಿತ್ತು. ಈಗ ಅವರು ಪಂಗಡಗಳನ್ನು ಮಾಡಿಕೊಂಡು ಆಡುವರು. ಮತ್ತು ತಮ್ಮ ಯಾವತ್ತು ಶಾರೀರಿಕ ಮಾನಸಿಕ ಶಕ್ತಿಗಳನ್ನು ಕೇವಲ ತಮ್ಮ ಸಲುವಾಗಿಯೇ ಉಪಯೋಗಿಸಿಕೊಳ್ಳದೆ ತಮ್ಮ ಪಂಗಡದವರ ಸಲುವಾಗಿ ಉಪಯೋಗಿಸಿ, ಅವರಿಗೆ ಜಯಸಂಪಾದಿಸಿಕೊಡಲಿಕ್ಕೆ ಯತ್ನಮಾಡುವರು. ಈ ಕಾಲಕ್ಕೆ ಹುಡುಗರಲ್ಲಿ ಸ್ವಜನಪ್ರೀತಿ, ಸಹಾನುಭೂತಿ, ಈರ್ಷೆ, ಧೈರ್ಯ, ಸಾಹಸ, ಕರ್ತವ್ಯದಕ್ಷತೆ, ಮಹತ್ವಾಕಾಂಕ್ಷೆ, ವಿವೇಕ, ನ್ಯಾಯಾನ್ಯಾಯಗಳ ವಿಚಾರ ಇವೇ ಮೊದಲಾದ ಸದ್ಗುಣಗಳು ಮೊಳೆದೋರುವುವು. ಅವುಗಳ ಸಂಗಡಲೇ ವಿರುದ್ಧಪಂಗಡದವರ ವಿಷಯವಾಗಿ ಕೋಪ, ದ್ವೇಷ, ಅಸೂಯೆ ಮೊದಲಾದ ದುರ್ಗುಣಗಳೂ ತೋರುವುವು. ತಮ್ಮ ಪಕ್ಷದ ಅಭಿಮಾನದಿಂದಲೂ ತಮ್ಮ ಜತೆಗಾರರ ಮೇಲಿನ ಪ್ರೀತಿಯಿಂದಲೂ, ತಮ್ಮೊಳಗಿರುವ ದೋಷಗಳು ಕಾಣದಂತಾಗುವುವು. ಅದೇ ವಿರುದ್ಧಪಂಗಡದವರ ಸಣ್ಣಪುಟ್ಟ ದೋಷಗಳೂ ಕೂಡ ಒಡೆದುಕಾಣುವುವು. ಅದರಿಂದ ನಾನಾ ಪ್ರಕಾರದ ಮನೋವಿಕಾರಗಳು ಉತ್ಪನ್ನವಾಗುವುವು. ಇಂಥ ಪ್ರಸಂಗಗಳಲ್ಲಿ ಉದಾತ್ತಗುಣಮಂಡಿತನೂ, ಗುಣಗ್ರಾಹಿಯೂ, ಜಾಣನೂ, ವ್ಯವಹಾರ ಚತುರನೂ ಆದ ಶಿಕ್ಷಕನು ಆ ಹುಡುಗರೊಳಗೆ ಕೂಡಿಕೊಂಡಿದ್ದು, ಅವರು ಪರಿಪೂರ್ಣವಾದ ಬಾಳುವೆಗೆ ತಕ್ಕವರಾಗುವಂತೆ ಯಾವ ಯಾವ ಗುಣಗಳಿಗೆ ಉತ್ತೇಜನವನ್ನು ಕೊಡಬೇಕೆಂಬ ಬಗ್ಗೆಯೂ, ಯಾವ ಯಾವ ಮನೋವಿಕಾರಗಳನ್ನು ಎಷ್ಟರಮಟ್ಟಿಗೆ ಹತ್ತೊತ್ತಬೇಕೆಂಬ ಬಗ್ಗೆಯೂ ನಿಷ್ಪಕ್ಷಪಾತ ಬುದ್ಧಿಯಿಂದ ಆಯಾ ಪ್ರಸಂಗಗಳಲ್ಲಿ ವಿಚಾರ

ಮಾಡಿ ಹುಡುಗರಿಗೆ ನಿರ್ಣಯವನ್ನು ಹೇಳಬೇಕಾಗುವದು. ಮತ್ತು ಆಟಗಳಲ್ಲಿಯೂ, ಅಭ್ಯಾಸದಲ್ಲಿಯೂ ಕೆಲಸಗಳಲ್ಲಿಯೂ ಉದಾತ್ತವಾದ ಧ್ಯೇಯವನ್ನು ಮುಂದೆ ಇಟ್ಟುಕೊಂಡು ನಡೆಯುವ ರೀತಿಯನ್ನು ತನ್ನ ಸ್ವಂತ ಉದಾಹರಣೆಯಿಂದ ತಿಳಿಸಿಕೊಡಬೇಕಾಗುವದು.

ಈ ಅವಧಿಯಲ್ಲಿ ಹುಡುಗರು, ಖೋ ಖೋ, ತಿಳ್ಳಿ, ಹುತುತು, ಕ್ರಿಕೆಟ್, ಟೆನಿಸ್, ಫುಟ್‌ಬಾಲ, ಹಾಕಿ ಮೊದಲಾದ ಆಟಗಳನ್ನು ಆಡುವರು. ಈ ಎಲ್ಲ ಆಟಗಳಲ್ಲಿಯೂ ಪಂಗಡಗಳನ್ನು ಮಾಡಿಕೊಳ್ಳ ಬೇಕಾಗುವದು.

ಈ ವಯಸ್ಸಿನ ಹುಡುಗರಿಗೆ ಮೇಲೆ ಹೇಳಿದ್ದಕ್ಕಿಂತ ಹೆಚ್ಚು ಕಠಿಣ ವಾದ ಡ್ರಿಲ್ಲಿನ ಎಕ್ಸರಸಾಯಿಜುಗಳನ್ನೂ ಮಲಖಾಂಬ, ಹಾರಿಝಾಂಟಲ ಬಾರ ಪ್ಯಾರಲಲ್‌ಬಾರ, ದಾಂಡಪಟ್ಟಿಗಳನ್ನು ತಿರುಮೋಣ ಮೊದಲಾದ ಕಸರತ್ತುಗಳನ್ನು ಮಾಡಿಸಬಹುದು. ಆದರೆ ಈ ಎಲ್ಲ ಕೆಲಸಗಳನ್ನು ಮಾಡಿಸುವುದರಲ್ಲಿ ಶಿಕ್ಷಕರು ಒಂದು ಮಾತನ್ನು ಲಕ್ಷದಲ್ಲಿಡತಕ್ಕದ್ದು. ಅದು ಯಾವುದೆಂದರೆ:- ಶಾಲೆಯಲ್ಲಿ ಮಾಡಿಸುವ ಈ ತರದ ವ್ಯಾಯಾಮ ದಿಂದ ವಿದ್ಯಾರ್ಥಿಗಳು ಜಟ್ಟಿಗಳು ಅಥವಾ ಕಸರತ್ತಿನ ಆಟವನ್ನಾಡು ವವರು ಆಗಬೇಕೆಂಬ ಉದ್ದೇಶವಿರುವುದಿಲ್ಲ. ಆದರೆ ಅವರ ಇಡೀ ಶರೀರವು ತಕ್ಕ ಪ್ರಮಾಣದಿಂದ ಬೆಳವಣಿಗೆಹೊಂದಬೇಕೆಂತಲೂ, ಸ್ನಾಯುಗಳು ಬಲಕಟ್ಟಾಗಬೇಕೆಂತಲೂ, ಮಾನಸಿಕ ಶಕ್ತಿಗಳ ವಿಕಾಸಕ್ಕೆ ಸಹಾಯ್ಯ ವಾಗಬೇಕೆಂತಲೂ, ಎಷ್ಟೋ ಸದ್ಗುಣಗಳ ಪೋಷಣವಾಗಬೇಕೆಂತಲೂ, ಈ ವ್ಯಾಯಾಮಗಳು ಮಾಡಿಸಲ್ಪಡುವವು.

**೩ ನೆಯದು ಹಸ್ತವ್ಯವಸಾಯಗಳು :—** ಹುಡುಗರ ಕಣ್ಣು ಗಳಿಗೂ ಕೈಬೆರಳುಗಳಿಗೂ ತಕ್ಕ ವ್ಯಾಯಾಮವು ದೊರೆತು ಅವರಲ್ಲಿ ಸೂಕ್ಷ್ಮವಾದ ನಿರೀಕ್ಷಣಶಕ್ತಿಯೂ, ಸೌಂದರ್ಯಪ್ರೀತಿಯೂ, ಕೌಶಲ್ಯವೂ ಉತ್ಪನ್ನವಾಗಲಿಕ್ಕೆ ಅನೇಕ ಪ್ರಕಾರದ ಹಸ್ತವ್ಯವಸಾಯ ಗಳನ್ನು ಮಾಡಿಸಬೇಕು. ಈ ಕೆಲಸದಲ್ಲಿ ಅವರ ಪ್ರೀತಿ ಆಸಕ್ತಿಗಳು

ತೋರುವುವು. ಈ ಪಾಠಗಳಾದರೂ ಅವರ ವಯಸ್ಸಿಗೆ ಅನುಗುಣವಾಗಿರಬೇಕು. ಮತ್ತು ಅವು ಗಣಿತ, ವಸ್ತುಪಾಠ, ಭೂಗೋಲ ಮೊದಲಾದ ಬೇರೆ ವಿಷಯಗಳಿಗೆ ಸಂಬಂಧಪಟ್ಟವುಗಳಾಗಿರಬೇಕು. ಹೀಗೆ ಮಾಡುವುದರಿಂದ ಅವರ ಮಾನಸಿಕ ಶಿಕ್ಷಣಕ್ಕೂ ಸಾಹಾಯ್ಯವಾಗುವುದು. ಹುಡುಗರು ಮಾಡುವ ಈ ತರದ ಕೆಲಸಗಳಲ್ಲಿ ವಿಶೇಷ ಸೂಕ್ಷ್ಮತ್ವವನ್ನೂ ಜಾಣತನವನ್ನೂ ಅಪೇಕ್ಷಿಸಬಾರದು. ಸ್ಥೂಲಮಾನದಿಂದ ಅವರ ಕಲ್ಪನೆಯು ವ್ಯಕ್ತವಾದರೆ ಸಾಕು.

ಈ ಬಗೆಯ ಕೆಲವು ಹಸ್ತವ್ಯವಸಾಯಗಳನ್ನು ಇಲ್ಲಿ ಸೂಚಿಸುವೆನು.

೧. **ಮಣಿಗಳನ್ನು ಪೋಣಿಸುವುದು:—** ಈ ಕೆಲಸದಿಂದ ಚಿಣ್ಣ ಸಂಖ್ಯೆಗಳ ಜ್ಞಾನವಾಡಿಕೊಡಲಿಕ್ಕೆ ಅನುಕೂಲವಾಗುವುದು.

೨. **ಕಾಗದಗಳನ್ನು ಮಡಿಚಿ ಬೇರೆಬೇರೆ ಆಕೃತಿಗಳನ್ನು ಮಾಡಿಸುವುದು.**

೩. **ಚಿತ್ರಗಳನ್ನು ತೆಗೆಯುವುದು:—**ವಸ್ತುಗಳನ್ನು ಸೂಕ್ಷ್ಮವಾಗಿ ನೋಡುವ ಚಟವು ಹತ್ತುವುದು.

೪. **ಮಣ್ಣಿನಿಂದ ಬೇರೆಬೇರೆ ಆಕೃತಿಗಳನ್ನು ಮಾಡಿಸುವುದು** ಈ ವಿಷಯದಿಂದಲೂ, ಚಿತ್ರಕಲೆಯಂತೆ ವಸ್ತುಗಳನ್ನು ಸೂಕ್ಷ್ಮವಾಗಿ ಅವಲೋಕನಮಾಡುವ ಅಭ್ಯಾಸವಾಗುವುದು.

ಇದಲ್ಲದೆ ತೋಟದಲ್ಲಿ ತರತರದ ಗಿಡಗಳನ್ನು ಹಚ್ಚುವುದು ಅವುಗಳನ್ನು ಜೋಪಾನಮಾಡುವುದು, ಓದಿದ ಅಥವಾ ಕೇಳಿದ ಕಥೆಗಳನ್ನು ಬರೆಯುವುದು ಇತ್ಯಾದಿ ಕೆಲಸಗಳನ್ನು ಮೇಲಿನ ವರ್ಗದ ಹುಡುಗರಿಂದ ಮಾಡಿಸಬಹುದು.

ಈ ಎಲ್ಲ ಹಸ್ತವ್ಯವಸಾಯಗಳ ಪಾಠಗಳನ್ನು ಏರಿಕೆಯ ಕ್ರಮದಿಂದ ಹೇಗೆ ರಚಿಸಿಕೊಳ್ಳಬೇಕೆಂಬುದನ್ನೂ ಆ ಪಾಠಗಳನ್ನು ಹೇಗೆ ಕಲಿಸ-

ಬೇಕೆಂಬುದನ್ನೂ ಯಾವ ಉಪಕರಣಗಳು ಬೇಕೆಂಬುದನ್ನೂ ಸ್ವತಂತ್ರ ವಾಗಿ ವಿವೇಚನೆಮಾಡತಕ್ಕದ್ದಿರುವುದು.

ಇನ್ನು ಶಾರೀರಿಕ ಶಿಕ್ಷಣದ ಬಗ್ಗೆ ಅವಶ್ಯವಾಗಿ ಹೇಳತಕ್ಕ ಇನ್ನೊಂದು ಮಾತನ್ನು ಹೇಳಿ ಈ ಪ್ರಕರಣವನ್ನು ಮುಗಿಸುವೆನು.

ತಾಯಿತಂದೆಗಳೂ, ಶಿಕ್ಷಕರೂ ಮಕ್ಕಳ ಶಾರೀರಿಕ ಶಿಕ್ಷಣದ ಬಗ್ಗೆ ಬಹಳ ಅನಾಸ್ಥೆಯನ್ನು ತೋರಿಸುವರು. ಹಿತ್ತಲಲ್ಲಿ ಒಂದು ಗಿಡವನ್ನು ಹಚ್ಚಿ ಅದನ್ನು ಒಳ್ಳೇ ಎಚ್ಚರಿಕೆಯಿಂದ ಜೋಪಾನಮಾಡ ಬಲ್ಲರು ; ಆದರೆ ತಮ್ಮ ಮಕ್ಕಳು ಸಶಕ್ತರೂ, ಆರೋಗ್ಯವಂತರೂ ಆಗಿ ಯೋಗ್ಯವಾಗಿ ಬೆಳವಣಿಗೆಯನ್ನು ಹೊಂದುವರೋ ಇಲ್ಲವೋ ಎಂಬುದನ್ನು ತಾಯಿತಂದೆಗಳು ನೋಡುವುದಿಲ್ಲ. ಶಾಲೆಯಲ್ಲಿ ಮಾನಸಿಕ ಶಿಕ್ಷಣವನ್ನು ಕೊಟ್ಟರೆ ತಮ್ಮ ಕರ್ತವ್ಯವು ಮುಗಿಯಿತೆಂದು ಶಿಕ್ಷಕರು ತಿಳಿಯುತ್ತಾರೆ. ಆದರೆ ಇತ್ತೀತ್ತಲಾಗಿ ಈ ವಿಚಾರವು ಬದಲಾಗಿ ಪ್ರತಿಒಂದು ಶಾಲೆಯಲ್ಲಿಯೂ ಶಿಕ್ಷಕರು ಶಾರೀರಿಕ ಶಿಕ್ಷಣದ ಬಗ್ಗೆ ಲಕ್ಷ್ಯಕೊಡುತ್ತಿರುವುದು ಸಂತೋಷದ ಸಂಗತಿಯಾಗಿರುತ್ತದೆ.

ಚಿಕ್ಕಮಕ್ಕಳ ಸ್ನಾಯುಗಳಿಗೆ ಸರಿಯಾದ ರೂಢಿಗಳು ಹತ್ತ ಬೇಕೆಂತಲೂ, ಪ್ರತಿಒಂದು ಸ್ನಾಯುವಿಗೆ ಸಾಕಷ್ಟು ವ್ಯವಸಾಯವು ದೊರೆತು ಅದರ ಚಪಲತನವೂ, ಕಸುವೂ ಬೆಳೆಯಬೇಕೆಂತಲೂ ಇಂಗ್ಲಂಡದ ಎಜ್ಯುಕೇಶನ್ ಬೋರ್ಡಿನವರು ಆಟಗಳ ಒಂದು ಹೊಸ ಅಭ್ಯಾಸಕ್ರಮವನ್ನು ಸಿದ್ಧಪಡಿಸಿದ್ದಾರೆ. ಈ ಆಟಗಳಿಂದ ಹುಡುಗರ ಮನೋರಂಜನವಾಗುವುದಲ್ಲದೆ ಅವರಿಗೆ ನೈತಿಕ ಬೌದ್ಧಿಕ ಶಿಕ್ಷಣವೂ ದೊರೆಯುವುದು. ಈ ಆಟಗಳಿಗೆ ಸಾಹಿತ್ಯಗಳೂ ವಿಶೇಷವಾಗಿ ಬೇಕಾಗುವುದಿಲ್ಲ. ಇವುಗಳಲ್ಲಿ ಎಷ್ಟೋ ಆಟಗಳನ್ನು ನಮ್ಮ ಶಾಲೆ ಗಳಲ್ಲಿಯೂ ಆಡಿಸಲಿಕ್ಕೆ ಬರುವಂತಿರುವುದು.

ಮಕ್ಕಳಿಗೆ ಸ್ವಚ್ಛತೆಯ ಚಟಗಳನ್ನು ಹಚ್ಚುವುದು, ಅವರಿಗೆ ತಮ್ಮ ಹಲ್ಲು, ಕಣ್ಣು, ಮೂಗು, ಕೂದಲು, ಮೈಕೈ ಸ್ವಚ್ಛವಾಗಿಟ್ಟು

ಕೊಳ್ಳಲಿಕ್ಕೆ ಕಲಿಸುವುದು, ಸ್ವಚ್ಛವಾದ ನೀರಿನ, ಪೌಷ್ಟಿಕ ಅನ್ನದ, ಮಹತ್ವವನ್ನು ಅವರ ಮನಸಿನ ಮೇಲೆ ಬಿಂಬಿಸುವುದು, ಇತ್ಯಾದಿ ಸಂಗತಿಗಳು ಶಾರೀರಿಕ ಶಿಕ್ಷಣದಲ್ಲಿ ಸಮಾವೇಶವಾಗುವುವು. ಶಕ್ಯವಿದ್ದರೆ ಮಕ್ಕಳ ಆರೋಗ್ಯವನ್ನು ವರ್ಷಕ್ಕೊಂದು ಸಲ ಡಾಕ್ಟರರಿಂದ ಪರಿಕ್ಷಿಸುತ್ತಿರಬೇಕು. ವಿಶೇಷ ಸಂಗತಿಗಳೇನಾದರೂ ಇದ್ದರೆ ಪಾಲಕರಿಗೆ ಸೂಚನೆಗಳನ್ನು ಕಳಿಸಬೇಕು. ಪ್ರತಿ ಒಬ್ಬ ಹುಡುಗನ ತೂಕ, ಎತ್ತರಳತೆ, ಎದೆಯ ಸುತ್ತಳತೆ ಇವುಗಳ ಆಳತೆಯನ್ನು ತಿಂಗಳಿಗೊಂದು ಸಾರೆ ಬರೆದಿಡಬೇಕು. ಅದರಿಂದ ಅವರ ಶರೀರಾರೋಗ್ಯವೂ, ಬೆಳವಣಿಗೆಯೂ ತಿಳಿಯುವುವು.



## ೧೨ನೆಯ ಪ್ರಕರಣ

### ಶಾಲೆಯ ತಿದ್ದುವಿಕೆ

ಶಾಲೆಯ ಎಲ್ಲ ಕೆಲಸಗಳು ಸುಸೂತ್ರವಾಗಿ ಸಾಗಬೇಕಾದರೆ ತಿದ್ದುವಿಕೆಯು ಚೆನ್ನಾಗಿ ನೆಲೆಗೊಂಡಿರಬೇಕು. ಮಕ್ಕಳ ಶೀಲ ಪರಿಪೋಷಣೆಗೂ, ಬುದ್ಧಿಯ ಸಂಸ್ಕಾರಕ್ಕೂ ತಿದ್ದುವಿಕೆಯು ಅವಶ್ಯವಾಗಿ ಬೇಕು. ಆಟಗಳನ್ನು ಆಡುವಾಗಲೂ, ಕವಾಯತು ಮಾಡುವಾಗಲೂ ತಿದ್ದುವಿಕೆಯಿಲ್ಲದಿದ್ದರೆ ಸಾಗುವಂತೆ ಇಲ್ಲ. ಒಟ್ಟಾರೆ, ತಿದ್ದುವಿಕೆಯು ಶಾಲೆಯ ಕೆಲಸದಲ್ಲಿ ಬಹಳ ಮಹತ್ತ್ವದ ಅಂಗವಾಗಿದೆ. ಅದು ಈ ಪ್ರಕರಣದಲ್ಲಿ ವಿವರಿಸಲ್ಪಟ್ಟಿದೆ.

**ತಿದ್ದುವಿಕೆಯು ನೆಲೆಗೊಂಡ ಶಾಲೆ:—** ಶಾಲೆಯ ಎಲ್ಲ ಕೆಲಸಗಳು ಸುಸೂತ್ರವಾಗಿ ಸಾಗಬೇಕಾದರೆ ಶಾಲೆಯಲ್ಲಿ ತಿದ್ದುವಿಕೆಯು ಚೆನ್ನಾಗಿ ನೆಲೆಗೊಂಡಿರಬೇಕು. ತಿದ್ದುವಿಕೆ ಇಲ್ಲದ ಶಾಲೆಯಲ್ಲಿ ಶಾರೀರಿಕ, ಬೌದ್ಧಿಕ ಹಾಗು ನೈತಿಕ ಶಿಕ್ಷಣವು ದೊರೆಯುವುದಿಲ್ಲ. ತಿದ್ದುವಿಕೆಯು ನೆಲೆಗೊಂಡಿರುವ ಶಾಲೆಯ ಹುಡುಗರು ತಮ್ಮ ಶಾಲೆಯ ನಿಯಮಗಳನ್ನು ಬಹಳ ಆನಂದದಿಂದ ಪಾಲಿಸುವರು ; ತಮ್ಮ ಶಿಕ್ಷಕನಿಗೆ ಸನ್ಮಾನಕೊಟ್ಟು ಅವನ ಕೂಡ ಪ್ರೇಮದಿಂದಲೂ, ಆದರದಿಂದಲೂ ನಡಕೊಳ್ಳುವರು. ಅವನ ಆಜ್ಞೆಯನ್ನು ಎಂದೂ ಉಲ್ಲಂಘಿಸುವುದಿಲ್ಲ. ಹುಡುಗರು ತಮ್ಮತಮ್ಮೊಳಗೆ ಸಹಾನುಭೂತಿಯಿಂದ ನಡಕೊಳ್ಳುವರು. ತಮ್ಮತಮ್ಮ ಕೆಲಸಗಳನ್ನು ನಿಯಮದಿಂದಲೂ ವ್ಯವಸ್ಥೆಯಿಂದಲೂ ಅಂತಃಕರಣಪೂರ್ವಕವಾಗಿಯೂ ಮಾಡುವರು. ಇಂಥ ಹುಡುಗರಿಂದಲೇ ಯಾವುದೊಂದು ದೊಡ್ಡಕಾರ್ಯವು ಪರಸ್ಪರ ಸಹಕಾರಿತೆಯಿಂದ ನೆರವೇರುವುದು ಶಕ್ಯವಿರುವುದು. ಆ ಹುಡುಗರು ನಿಷ್ಕಾರಣವಾಗಿ ಎರಡನೆಯವರನ್ನು ಅವಲಂಬಿಸುವುದಿಲ್ಲ. ಅವರು ಯಾವಾಗಲೂ ಸತ್ಯವನ್ನೇ

ನುಡಿಯುವರು. ಸುಳ್ಳು ಮಾತಾಡುವ ಪ್ರಸಂಗವು ಅವರಿಗೆ ಎಂದೂ ಒದಗುವುದಿಲ್ಲ. ಆಕಸ್ಮಿಕವಾಗಿ ಅವರಿಂದ ತಪ್ಪು ಸಂಭವಿಸಿದರೆ ಅದನ್ನು ಒಪ್ಪಿಕೊಳ್ಳುವುದು ಕೀಳುತನವೆಂದು ಅವರು ತಿಳಿಯುವುದಿಲ್ಲ. ಮತ್ತು ಹಾಗೆ ಮಾಡಲಿಕ್ಕೆ ಅವರು ಎಳ್ಳಷ್ಟಾದರೂ ಹೆದರುವುದಿಲ್ಲ. ಇಂಥ ಶಾಲೆಯಲ್ಲಿ ಹುಡುಗರಿಗೆ ಆತ್ಮಸಂಯಮನದ ಪಾಠವು ದೊರೆಯುವುದು. ಸ್ವಾಭಿಮಾನವೂ ವಿನಯವೂ ಉತ್ಪನ್ನವಾಗುವುವು. ಉದ್ಯೋಗದ ಚಟವು ಹತ್ತುವುದು. ಈ ಮೇರೆಗೆ ಯಾವ ಸದ್ಗುಣಗಳಿಂದ ಮುಂದಿನ ಆಯುಷ್ಯದಲ್ಲಿ ಅವರು ಕೈಕೊಂಡ ಕೆಲಸದಲ್ಲಿ ಯಶವು ದೊರೆಯುವುದೋ ಅವರ ಕಾಲವು ಸುಖದಿಂದ ಹೋಗುವುದೋ ಅಂಥ ಸದ್ಗುಣಗಳು ಶಾಲೆಯ ಒಳ್ಳೇ ತಿದ್ದುವಿಕೆಯಿಂದ ಹುಡುಗರಿಗೆ ಚಿಕ್ಕಂದಿನಿಂದಲೇ ಹತ್ತುವುವು.

**ತಿದ್ದುವಿಕೆ ಇಲ್ಲದ ಶಾಲೆಯ ಸ್ಥಿತಿಯು** ಮೇಲಿನ ವರ್ಣನೆಗೆ ತೀರ ವಿಪರೀತವಾಗಿರುತ್ತದೆ. ಈ ಶಾಲೆಯೊಳಗಿನ ಹುಡುಗರು ನಿಯಮದಿಂದ ಹೊತ್ತಿಗೆ ಸರಿಯಾಗಿ ಶಾಲೆಗೆ ಬರುತ್ತಿರುವುದಿಲ್ಲ. ಮನಸುಗೊಟ್ಟು ಪಾಠಗಳನ್ನು ಕಲಿಯುತ್ತಿರುವುದಿಲ್ಲ. ಶಿಕ್ಷಕರು ಪಾಠಗಳನ್ನು ಕಲಿಸುತ್ತಿರುವಾಗ ಕೆಲವು ಹುಡುಗರು ಪಾಠದ ಕಡೆಗೆ ಲಕ್ಷವನ್ನು ಕೊಡುತ್ತಿರುವರು ; ಕೆಲವರು ತಮ್ಮತಮ್ಮೊಳಗೆ ಮಾತನಾಡುತ್ತಿರುವರು. ಬೇರೆ ಕೆಲವರು ತಮ್ಮ ನೆರೆಯಲ್ಲಿ ಕುಳಿತವರಿಗೆ ಏನಾದರೂ ಚೇಷ್ಟೆಮಾಡಿ ವಿನೋದದಿಂದ ಕಾಲಕಳೆಯುತ್ತಿರುವರು. ಅಂಕಗಣಿತದ ಪಾಠವು ನಡೆದಾಗ ಕೆಲವು ಹುಡುಗರು ಕೊಟ್ಟ ಉದಾಹರಣೆಯನ್ನು ಬಿಡಿಸುತ್ತಿರುವರು. ಕೆಲವರು ಎರಡನೆಯವರ ಪಾಟಿಯನ್ನು ನೋಡಿಕೊಂಡು ಬರಕೊಳ್ಳುತ್ತಿರುವರು. ಬೇರೆ ಕೆಲವರು ಸ್ವಸ್ಥವಾಗಿ ಕುಳಿತುಕೊಂಡಿರುವರು. ಶಿಕ್ಷಕನು ಏನಾದರೂ ಒಂದು ಪ್ರಶ್ನವನ್ನು ಕೇಳಿದರೆ ಅದರ ಉತ್ತರವನ್ನು ಬೇಕಾದವನು ಕೊಡುವನು. ಇಲ್ಲವೆ ನಾಲ್ಕೈದು ಹುಡುಗರು ಒಮ್ಮೆಲೆ ಎದ್ದುನಿಂತು ಗೊಂದಲವನ್ನು ಎಬ್ಬಿಸುವರು. ಈ ಸ್ಥಿತಿಯು ದಿನಾಲು ಆ ಶಾಲೆಯಲ್ಲಿ ವೃಷ್ಟಿಗೆ ಬೀಳುವುದು. ಆದರಿಂದ

ಹುಡುಗರಿಗೆ ಅವ್ಯಸ್ಥಿತತನ, ಅನಿಯಮಿತತನ, ಸೋಮಾರಿತನ, ಬೇಸರಿಕೆ ಮೊದಲಾದ ದುರ್ಗುಣಗಳು ಅಂಟಿಕೊಳ್ಳುವುವು. ಪರಸ್ಪರ ಸಹಾನುಭೂತಿಯಿಂದಲೂ ಸಹಕಾರಿತೆಯಿಂದಲೂ ನಡಕೊಳ್ಳುವ ಪ್ರಸಂಗಗಳು ಬಂದಿರುವದಿಲ್ಲಾದ ಕಾರಣ ಈ ಸದ್ಗುಣಗಳು ಅವರಿಗೆ ಹತ್ತುವುದಿಲ್ಲ. ಹೊತ್ತುಬಂದಾಗ ಏನಾದರೂ ಹೇಳಿದರೆ ಪಾರಾಗುವುದು ಶಕ್ಯವಿರುವುದೆಂಬ ನಂಬಿಗೆ ಇರುವುದರಿಂದ ಅವರಿಗೆ ಅಪ್ರಾಮಾಣಿಕತನ, ಅಸತ್ಯಭಾಷಣ ಇವೇ ಮೊದಲಾದ ದುರ್ಗುಣಗಳು ಹತ್ತುವುವು. ಮನಸ್ಸನ್ನು ಅಂಕಿತದಲ್ಲಿಟ್ಟುಕೊಂಡು ನಿಯಮಗಳಂತೆ ನಡೆಯುವ ರೂಢಿಯು ಇಲ್ಲದ್ದರಿಂದಲೂ ಯಾವಾಗಲೂ ಸ್ವಚ್ಛಂದವೃತ್ತಿಯಿಂದ ನಡೆದದ್ದರಿಂದಲೂ ಈ ಶಾಲೆಯ ಹುಡುಗರಿಗೆ ಆತ್ಮಸಂಯಮನದ ರೂಢಿಯು ಎಂದೂ ಹತ್ತುವುದಿಲ್ಲ. ಒಂದು ದಿವಸ ಪಾಠವನ್ನು ಕಲಿಯುವುದು ಒಂದು ದಿವಸ ಬಿಟ್ಟುಬಿಡುವುದು ಈ ಕ್ರಮವು ಯಾವಾಗಲೂ ನಡೆಯುತ್ತಿರುವುದರಿಂದ ಅವರಿಗೆ ಸತತವಾಗಿ ಉದ್ಯೋಗಮಾಡುವ ಚಟವು ಹತ್ತುವುದಿಲ್ಲ. ಶಾಲೆಯ ಕೆಲಸಗಳು ವ್ಯವಸ್ಥೆಯಿಂದ ನಡೆಯುತ್ತಿರುವುದಿಲ್ಲಾದ ಕಾರಣ ಆ ಶಾಲೆಯ ಹುಡುಗರಲ್ಲಿ ವಿನಯ, ಆಜ್ಞಾಪಾಲನ, ಸ್ವಾಭಿಮಾನ ಮೊದಲಾದ ಸದ್ಗುಣಗಳು ಹುಟ್ಟುವುದಿಲ್ಲ. ಸಾರಾಂಶ: ತಿದ್ದುವಿಕೆ ಇಲ್ಲದ ಶಾಲೆಯಲ್ಲಿ ಕಲಿತ ಹುಡುಗರಿಗೆ, ಮನುಷ್ಯನು ಮುಂದಿನ ಆಯುಷ್ಯದಲ್ಲಿ ಯಶಸ್ವಿಯೂ ಸುಖಿಯೂ ಆಗಲಿಕ್ಕೆ ಆವಶ್ಯಕವಾಗಿರುವ ಸದ್ಗುಣಗಳು ಹತ್ತುವುದಿಲ್ಲ. ಇಷ್ಟೇ ಅಲ್ಲ, ದುರ್ಗುಣಗಳೂ ಕೆಟ್ಟ ಚಟಗಳೂ ಹತ್ತಿ ಅವು ಅವರ ಮುಂದಿನ ಆಯುಷ್ಯದಲ್ಲಿ ಪ್ರಬಲವಾಗುವುವು. ಅವುಗಳಿಂದ ಅವರು ಕೀರ್ತಿಗೂ ಸುಖಕ್ಕೂ ಎರವಾಗುವರು.

ಅಭ್ಯಾಸದ ದೃಷ್ಟಿಯಿಂದ ವಿಚಾರಮಾಡಲು ತಿದ್ದುವಿಕೆಯು ಚೆನ್ನಾಗಿರುವ ಶಾಲೆಯಲ್ಲಿ ಆಗುವ ಅಭ್ಯಾಸದ ನಾಲ್ಕನೆಯ ಪಾಲಷ್ಟು ಸಹ, ತಿದ್ದುವಿಕೆ ಇಲ್ಲದ ಶಾಲೆಯಲ್ಲಿ ಆಗುವುದಿಲ್ಲ; ಶಿಕ್ಷಕನು ಕಲಿಸಿದ ಪಾಠವು ಹುಡುಗರಿಗೆ ಚೆನ್ನಾಗಿ ತಿಳಿದು ಅವರ ಸ್ಮರಣದಲ್ಲಿ ಉಳಿಯಬೇಕಾದರೆ ಪಾಠವು ನಡೆದಾಗ ಎಲ್ಲ ಹುಡುಗರು ಅದರ ಕಡೆಗೆ ಲಕ್ಷ್ಯವನ್ನು

ಕೊಡಲಿಕ್ಕೆಬೇಕು. ಶಿಕ್ಷಕನು ಕೇಳಿದ ಪ್ರಶ್ನೆಗಳಿಗೆ ವಿಚಾರಮಾಡಿ ಉತ್ತರಗಳನ್ನು ಕೊಡಲಿಕ್ಕೆಬೇಕು. ಅವನು ಹೇಳಿದಂತೆ ಕೃತಿಗಳನ್ನು ಮಾಡಲಿಕ್ಕೆಬೇಕು. ತಿದ್ದುವಿಕೆ ಇಲ್ಲದ ಶಾಲೆಯಲ್ಲಿ ಈ ಎಲ್ಲ ಕೆಲಸಗಳು ವ್ಯವಸ್ಥೆಯಿಂದ ನಡೆಯುತ್ತಿರುವುದಿಲ್ಲಾದ ಕಾರಣ ಅವರ ಅಭ್ಯಾಸವು ಚೆನ್ನಾಗಿ ಆಗುವುದಿಲ್ಲ. ಒಬ್ಬ ಗ್ರಂಥಕಾರನು ಬರೆಯುವುದೇನೆಂದರೆ:- "ಇಂಥ ಶಾಲೆಗಳಲ್ಲಿ ಚುರುಕು ಬುದ್ಧಿಯ ಹುಡುಗರಿಗೆ ಅಲ್ಪಸ್ವಲ್ಪ ಜ್ಞಾನವಾಗುವುದು; ಉಳಿದವರಿಗೆ ಏನೂ ಪ್ರಯೋಜನವಾಗುವುದಿಲ್ಲ. ಆ ಅಲ್ಪಸ್ವಲ್ಪ ಜ್ಞಾನವು ಕೂಡ ಶಿಕ್ಷಕನ ಶಿಕ್ಷಣದಿಂದ ದೊರೆತದ್ದಲ್ಲ. ಅವರು ತಮ್ಮ ಸ್ವಬುದ್ಧಿಯಿಂದ ದೊರಕಿಸಿದ ಜ್ಞಾನವಾಗಿರುವುದೆಂದು ಅನ್ನಬಹುದು".

ಹುಡುಗರಿಗೆ ತಿದ್ದುವಿಕೆಯು ಸೇರುವುದಿಲ್ಲೆಂಬಂತಿಲ್ಲ. ಅದನ್ನು ನೆಲೆಗೊಳಿಸಲಿಚ್ಛಿಸುವ ಶಿಕ್ಷಕನಿಗೆ ಅವರು ಮನಃಪೂರ್ವಕವಾಗಿ ಸಹಾಯವನ್ನೇ ಮಾಡುವರು. ವ್ಯವಸ್ಥೆಯಿಂದಲೂ ನಿಯಮದಿಂದಲೂ ನಡೆಯುವ ರೂಢಿಗಳು ಹತ್ತುವ ತನಕ ಹುಡುಗರಿಗೆ ಮೊದಮೊದಲು ಬಹಳ ತೊಂದರೆಯಾಗುವುದು ಒಮ್ಮೆ ತಿದ್ದುವಿಕೆಯು ನೆಲೆಗೊಂಡು ಹುಡುಗರಿಗೆ ರೂಢಿಗಳು ಹತ್ತಿದವೆಂದರೆ ಶಾಲೆಯ ನಿಯಮಗಳನ್ನು ಪಾಲಿಸುವುದರಲ್ಲಿ ಅವರಿಗೆ ಅಭಿಮಾನವೂ ಆನಂದವೂ ಎನಿಸುವುದು. ಯಾವನಾದರೂ ಒಬ್ಬ ಹುಡುಗನು ನಿಯಮಗಳಿಗೆ ತಪ್ಪಿ ನಡೆದರೆ ಹುಡುಗರೇ ಅವನನ್ನು ತಿರಸ್ಕರಿಸುವರು. ಶಾಲೆಯಲ್ಲಿ ವಿದ್ಯಾರ್ಥಿಗಳೂ ಶಿಕ್ಷಕರೂ ಕೂಡಿ ೫-೬ ತಾಸು ವೇಳೆಯನ್ನು ಕಳೆಯುವರು. ವಿದ್ಯಾರ್ಥಿಗಳ ಆಯುಷ್ಯದಲ್ಲಿ ಅವರು ಶಾಲೆಯಲ್ಲಿ ಕಳೆಯುವ ವೇಳೆಯು ಬಹಳ ಮಹತ್ವವಾದದ್ದು. ಯಾಕಂದರೆ ಅವರ ಮುಂದಿನ ಆಯುಷ್ಯದ ಸುಖ ದುಃಖಗಳು ಶಾಲೆಯಲ್ಲಿ ದೊರಕಿಸುವ ಶಿಕ್ಷಣವನ್ನು ಅವಲಂಬಿಸಿರು ವುವು; ಶಾಲೆಯಲ್ಲಿ ತಿದ್ದುವಿಕೆಯು ಚೆನ್ನಾಗಿದ್ದರೆ ಮಾತ್ರ ಅಲ್ಲಿ ಶಿಕ್ಷಕ ರಿಗೂ ವಿದ್ಯಾರ್ಥಿಗಳಿಗೂ ಆನಂದವೆನಿಸುವುದು; ತಮ್ಮತಮ್ಮ ಕೆಲಸ ಗಳನ್ನು ಮಾಡಲಿಕ್ಕೆ ಉತ್ಸಾಹವೆನಿಸುವುದು. ತಿದ್ದುವಿಕೆಯು ಇಲ್ಲ

ಬಿದ್ದರೆ ಉಭಯತರಿಗೂ ಬೇಸರವೆನಿಸುವುದು. ಹುಡುಗರ ಗೊಂದಲಕ್ಕೆ ಶಿಕ್ಷಕನ ಮನಸ್ಸು ತೊಂದರೆಗೊಳ್ಳುವುದು. ಅವನು ಸೀಡಕ ಸ್ವಭಾವದವನಾಗುವನು.

ಸಾರಾಂಶ, ಹುಡುಗರ ಅಭ್ಯಾಸವು ಚೆನ್ನಾಗಿ ಆಗಬೇಕೆಂತಲೂ ಅವರಿಗೆ ಒಳ್ಳೇ ರೂಢಿಗಳು ಹತ್ತಬೇಕೆಂತಲೂ ಅವರು ಸದ್ಗುಣಿಗಳಾಗಬೇಕೆಂತಲೂ ಅವರಿಗೂ ಶಿಕ್ಷಕನಿಗೂ ತಮ್ಮ ತಮ್ಮ ಕೆಲಸಗಳನ್ನು ಮಾಡಲಿಕ್ಕೆ ಆನಂದವೂ ಉತ್ಸಾಹವೂ ಉಂಟಾಗಬೇಕೆಂತಲೂ ಸಾಲೆಯಲ್ಲಿ ಆ ಉಭಯತರಿಗೂ ಪರಸ್ಪರರಿಂದ ಸುಖವಾಗಬೇಕೆಂತಲೂ ಶಿಕ್ಷಕರು ಸಾಲೆಯಲ್ಲಿ ತಿದ್ದುವಿಕೆಯನ್ನು ಕಾಯ್ದುಕೊಳ್ಳುವುದು ಅವಶ್ಯವಿರುತ್ತದೆ.

ಸಾಲೆಯಲ್ಲಿ ತಿದ್ದುವಿಕೆಯನ್ನು ಕಾಯ್ದುಕೊಳ್ಳಲಿಕ್ಕೆ ಶಿಕ್ಷಕನಲ್ಲಿ ಕೆಲವು ಮಹತ್ವದ ಗುಣಗಳು ಬೇಕಾಗುವುವು. ಅವು ಮುಂದೆ ಶಿಕ್ಷಕನ ವ್ಯಕ್ತಿತ್ವವೆಂಬ ಪ್ರಕರಣದಲ್ಲಿ ಸ್ವತಂತ್ರವಾಗಿ ವಿವೇಚಿಸಲ್ಪಡುವುವು. ಇಲ್ಲಿ ಸಾಲೆಯ ತಿದ್ದುವಿಕೆಗೆ ಸಂಬಂಧಪಟ್ಟ **ಆಳಿಕೆಯ ಸಾಮರ್ಥ್ಯ, ಸ್ಥಿರತ್ವ, ದಕ್ಷತೆ, ವ್ಯವಹಾರಚಾತುರ್ಯ, ಮನುಷ್ಯಸ್ವಭಾವದ ಜ್ಞಾನ,** ಈ ಅಯ್ದು ಗುಣಗಳ ವಿಷಯವಾಗಿ ಹೇಳಿದೆ. ಶಿಕ್ಷಕನಿಗೆ ಹುಡುಗರನ್ನು ಆಳುವ ಅಧಿಕಾರವು ಸ್ವಾಭಾವಿಕವಾಗಿಯೇ ಪ್ರಾಪ್ತವಾಗುವುದು. ಆ ಅಧಿಕಾರಕ್ಕೆ ಯಾವಕಾರಣದಿಂದಲೂ ಭಂಗಬರಕೂಡದು. ತಮಗೆ ದೊರೆತ ಈ ಅಧಿಕಾರದ ವರ್ಚಸ್ಸಿನಿಂದ ಶಿಕ್ಷಕರು ಸಾಲೆಯಲ್ಲಿ ತಿದ್ದುವಿಕೆಯನ್ನು ನೆಲೆಗೊಳಿಸಿ ಕಾಯ್ದುಕೊಳ್ಳುವರು. ಹುಡುಗರನ್ನು ಅಂಕೆಯಲ್ಲಿಟ್ಟುಕೊಳ್ಳಲಿಕ್ಕೆ ಸ್ಥಿರತ್ವವು ಮೇಲಾದ ಸಾಧನವಾಗಿರುತ್ತದೆ. ಶಿಕ್ಷಕನು, ಪ್ರೀತಿಯ ನಡಾವಳಿಯುಳ್ಳವನೂ ಕೆಲಸದಲ್ಲಿ ಆಸಕ್ತಿಯುಳ್ಳವನೂ ವಿದ್ವಾಂಸನೂ ಆಗಿದ್ದು ಸ್ಥಿರತ್ವವು ಇಲ್ಲದಿದ್ದರೆ ಆ ಗುಣಗಳಿಂದ ಏನೂ ಉಪಯೋಗವಾಗುವುದಿಲ್ಲ. ಯಾವನೊಬ್ಬ ಹುಡುಗನು ಸಾಲೆಯ ನಿಯಮಗಳಿಗೆ ತಪ್ಪಿ ನಡೆದರೆ ಸ್ಥಿರತ್ವವಿಲ್ಲದ ಶಿಕ್ಷಕನು ಅವನನ್ನು ಶಿಕ್ಷಿಸಲಿಕ್ಕೆ ಹಿಂದುಮುಂದು ನೋಡುವನು. ಈ ಸಂಗತಿಯು

ಹುಡುಗರಿಗೆ ತಿಳಿದರೆ ಸಾಕು. ಅವರೆಲ್ಲರೂ ನಿಯಮಗಳನ್ನು ಮುರಿಯು ಲಿಕ್ಕೆ ಹವಣಿಸುವರು. ಒಬ್ಬನು ಒಂದು ನಿಯಮವನ್ನು ಮುರಿಯುವನು; ಮತ್ತೊಬ್ಬನು ಮತ್ತೊಂದು ಮುರಿಯುವನು ಹೀಗೆ ಇಡೀ ವರ್ಗದಲ್ಲಿ ಗೊಂದಲವೇ ಏಳುವುದು. ಅದನ್ನು ವ್ಯವಸ್ಥೆಗೊಳಿಸುವುದು ಶಿಕ್ಷಕನ ಕೈಮೀರಿಹೋಗುವುದು. ಅದರಿಂದ ಸಾಲೆಯ ಕೆಲಸವೆಲ್ಲ ಕೆಟ್ಟುಹೋಗುವುದು. ಶಿಕ್ಷಕನ ಸದ್ಗುಣಗಳಿಂದ ವಿದ್ಯಾರ್ಥಿಗಳಿಗೆ ಪ್ರಯೋಜನವಾಗುವುದಿಲ್ಲ.

ಸೃಷ್ಟಿಯ ನಿಯಮಗಳಿಗೆ ತಪ್ಪಿನಡೆದರೆ ಹೇಗೆ ಶಿಕ್ಷೆಯಾಗುವುದೋ ಹಾಗೆ ಶಾಲೆಯ ನಿಯಮಗಳನ್ನೂ ಶಿಕ್ಷಕನ ಅಪ್ಪಣೆಗಳನ್ನೂ ಮುರಿಯುವವರಿಗೆ ತಪ್ಪದೆ ಶಿಕ್ಷೆಯಾಗುವುದೆಂಬ ತಿಳುವಳಿಕೆಯು ಹುಡುಗರಿಗೆ ಇರಲಿಕ್ಕೆಬೇಕು. ಹುಡುಗರ ತಪ್ಪುಗಳಿಗೆ ಶಿಕ್ಷೆಯನ್ನು ಕೊಡದೆ ಇರುವುದು, ಅವುಗಳನ್ನು ದುರ್ಲಕ್ಷಿಸುವುದು ಶಿಕ್ಷಕರ ದಯಾಳುತನದ ಲಕ್ಷಣವಲ್ಲ. ಅದರಿಂದ ಅವರ ಮನಸ್ಸಿನ ದೌರ್ಬಲ್ಯವು ಮಾತ್ರ ವ್ಯಕ್ತವಾಗುವುದು. ಈ ದೌರ್ಬಲ್ಯದ ಮೂಲಕವಾಗಿ ವಿದ್ಯಾರ್ಥಿಗಳ ಆಯುಷ್ಯದ ಹಾನಿಯಾಗುವುದು.

ಶಾಲೆಯ ನಿಯಮಗಳನ್ನು ಮಾತ್ರ ಶಿಕ್ಷಕರು ಒಳ್ಳೇ ವಿಚಾರದಿಂದ ಗೊತ್ತುಮಾಡಬೇಕು. ಈ ನಿಯಮಗಳ ಬಗ್ಗೆ ಒಬ್ಬ ಶಿಕ್ಷಣಶಾಸ್ತ್ರಜ್ಞನು ಬರೆದ ಸಂಗತಿಗಳ ಸಾರಾಂಶವನ್ನು ಕೆಳಗೆ ಕೊಟ್ಟಿದ್ದೇವೆ.

೧. ಇಂಥ ಇಂಥ ನಿಯಮಗಳನ್ನು ಮಾಡುವುದು ಅವಶ್ಯವಿರುವುದೆಂಬದನ್ನು ಮೊದಲು ಪೂರ್ಣವಾಗಿ ಆಲೋಚಿಸಿ ನಿಶ್ಚಯವನ್ನು ಮಾಡಬೇಕು. ತರುವಾಯ ಆ ನಿಯಮಗಳನ್ನು ತಪ್ಪದೆ ಪಾಲಿಸಬೇಕು.

೨. ಹೆಚ್ಚು ಮಹತ್ವದ ನಿಯಮಗಳನ್ನು ಪ್ರತಿ ಒಂದು ವರ್ಗದೊಳಗೆ ಒಡೆದು ಕಾಣುವ ಸ್ಥಳದಲ್ಲಿ ಬರೆದು ಹಚ್ಚಬೇಕು. ಇಂಥ ನಿಯಮಗಳು ತೀರ ಸ್ವಲ್ಪವೇ ಇರಬೇಕು. ಸಣ್ಣಸಣ್ಣವಿರಬೇಕು. ಸಂದಿಗ್ಧವಾಗಿರಬಾರದು. ಮತ್ತು ಬರೆದು ಹಚ್ಚಿದ ನಿಯಮಗಳನ್ನು ಆಗಾಗ್ಗೆ ಬದಲುಮಾಡಬಾರದು.

೩. ಯಾವ ನಿಯಮಗಳನ್ನು ನಡೆಸುವುದು ಶಕ್ಯವಿಲ್ಲವೋ ಅಂಥ ನಿಯಮಗಳನ್ನು ಮಾಡಲೇಬಾರದು.

೪. ವಿದ್ಯಾರ್ಥಿಗಳಿಗೆ ಕೊಟ್ಟ ಅಪ್ಪಣೆಯಂತೆ ಅವರು ನಡೆಯುವರೋ ಇಲ್ಲವೋ ಎಂಬುದನ್ನು ಶಿಕ್ಷಕರು ಎಚ್ಚರದಿಂದ ನೋಡುತ್ತಿರಬೇಕು. ದುರ್ಲಕ್ಷಮಾಡಬಾರದು. ಶಿಕ್ಷಕನು ನಮಗೆ ಅಪ್ಪಣೆಯನ್ನು ಕೊಟ್ಟ ಪ್ರಕಾರ ನಾವು ನಡೆಯದಿದ್ದರೆ ಅವನು ಒತ್ತಾಯದಿಂದಾದರೂ ನಮ್ಮಿಂದ ಕೆಲಸಮಾಡಿಸುವನೆಂದು ವಿದ್ಯಾರ್ಥಿಗಳ ಮನವರಿಕೆಯಾಗಲಿಕ್ಕೆ ಬೇಕು.

೫. ತಾವು ಕೊಟ್ಟ ಅಪ್ಪಣೆಯನ್ನು ಮುರಿದರೂ ಸಾಗುವುದೆಂಬ ಅರ್ಥವು ಹೊರಡುವಂಥ ಮಾತುಗಳನ್ನು ವಿದ್ಯಾರ್ಥಿಗಳ ಮುಂದೆ ಎಂದೂ ಆಡಬಾರದು. ಕೊಟ್ಟ ಅಪ್ಪಣೆಯನ್ನು ಪಾಲಿಸುವ ಬಗ್ಗೆ ಸುಳ್ಳು ಬೆದರಿಕೆಯನ್ನು ತೋರಿಸುವುದರಿಂದ ಕಾರ್ಯವಾಗುವದಂತು ಒತ್ತಟ್ಟಿಗಿರಲಿ, ದಿಟ್ಟರಾದ ಕೆಲವು ವಿದ್ಯಾರ್ಥಿಗಳು ಶಿಕ್ಷಕರ ಅಪ್ಪಣೆಯನ್ನು ಬುದ್ಧಿಪೂರ್ವಕವಾಗಿ ಮುರಿಯಲಿಕ್ಕೆ ಹವಣಿಸುವರು. ಇದಲ್ಲದೆ ಗುರುಶಿಷ್ಯರಲ್ಲಿರುವ ಪ್ರೇಮಭಾವವೂ ನಂಬಿಗೆಯೂ ನಷ್ಟವಾಗುವುವು. ವಿದ್ಯಾರ್ಥಿಗಳು ತಮ್ಮ ಅಪ್ಪಣೆಯನ್ನು ಪಾಲಿಸುವ ಬಗ್ಗೆ ಯಾವಾಗಲೂ ಉತ್ಸುಕರಾಗಿರುವರೆಂಬ ತಿಳುವಳಿಕೆಯಿಂದಲೇ ಶಿಕ್ಷಕರು ನಡೆಯುತ್ತಿರಬೇಕು. ಹಾಗು ವಿದ್ಯಾರ್ಥಿಗಳು ಶಿಕ್ಷಕರ ನಂಬಿಗೆಯನ್ನು ಕಾಯ್ದುಕೊಳ್ಳುವದರ ಸಲುವಾಗಿ ಅಪ್ಪಣೆಗಳನ್ನು ಪಾಲಿಸುವಂತೆ ಮಾಡಲಿಕ್ಕೆಬೇಕು.

೬. ಅಪ್ಪಣೆಯನ್ನು ಕೊಡುವಾಗ ಶಿಕ್ಷಕರ ಸ್ವರವು ಗಂಭೀರವಾದದ್ದೂ ಸ್ಥಿರತ್ವವುಳ್ಳದ್ದೂ ಇರಲಿಕ್ಕೆ ಬೇಕು. ಹೆಚ್ಚಾಗಿ ಅಬ್ಬರ ಮಾಡಬಾರದು. ಆಡಿದ ಮಾತುಗಳನ್ನೇ ಪುನಃ ಪುನಃ ಉಚ್ಚರಿಸಬಾರದು. ಸಮಾಧಾನದಿಂದ ಒಂದೇ ಸಾರೆ ಕೊಟ್ಟ ಅಪ್ಪಣೆಯ ಪರಿಣಾಮವು ಹುಡುಗರ ಮನಸಿನ ಮೇಲೆ ಚೆನ್ನಾಗಿ ಆಗುವುದು. ಸುವ್ಯವಸ್ಥಿತವಾದ ಶಾಲೆಯಲ್ಲಿ ಅಪ್ಪಣೆಗಳನ್ನು ಮಾತುಗಳಿಂದ

ಕೊಡುವ ಪ್ರಸಂಗವೇ ಇರುವುದಿಲ್ಲ. ಏಳುವದು, ಕೂಡ್ರುವದು, ಸ್ಥಳಾಂತರವನ್ನು ಮಾಡುವುದು ಪುಸ್ತಕಗಳನ್ನು ತೋರಿಸುವುದು — ಈ ಮೊದಲಾದ ಕೆಲಸಗಳೆಲ್ಲ ಬೆರಳುಗಳ ಸಂಕೇತಗಳಿಂದ ಅಥವಾ ಅಂಕೆಗಳ ಸಂಜ್ಞೆಗಳಿಂದ ನಡೆಯುವುವು. ಪಾಠವು ನಡೆದಾಗ ಎಷ್ಟೋ ಅಪ್ಪಣೆಗಳನ್ನು ಕಣ್ಣುಸನ್ನೆಗಳಿಂದಲೂ ಕೊಡುವುದುಂಟು.

೭. ಪುಸ್ತಕ ಪಾಟಿಗಳನ್ನು ಉಪಯೋಗಿಸುವುದು, ಇಡುವದು, ನಂಬರುಗಳನ್ನು ಬದಲಿಸುವುದು ಒಂದು ವರ್ಗದಿಂದ ಮತ್ತೊಂದು ವರ್ಗಕ್ಕೆ ಹೋಗುವುದು ಪಾಠನಡೆದಾಗ ಉತ್ತರವನ್ನು ಕೊಡುವುದು. ಈ ಎಲ್ಲ ಸಂಗತಿಗಳು ಹೀಗೇ ನಡೆಯಬೇಕೆಂದು ಗೊತ್ತಾಗಿರಲಿಕ್ಕೆ ಬೇಕು. ಮತ್ತು ಆ ಪ್ರಕಾರವೇ ಎಲ್ಲ ಹುಡುಗರು ದಿನಾಲು ನಡೆಯುತ್ತಿರಬೇಕು.

೮. ಸಾಲೆಯಲ್ಲಿ ಇರುವಷ್ಟು ಕಾಲದಲ್ಲಿ ಪ್ರತಿ ಒಂದು ವರ್ಗವು ಒಂದಿಲ್ಲೊಂದು ಕೆಲಸದಲ್ಲಿ ತೊಡಗಿರುವಂತೆ ವೇಳಾಪತ್ರಕವನ್ನು ರಚಿಸಲಿಕ್ಕೆಬೇಕು ಕೆಲಸವಿಲ್ಲದಿದ್ದರೆ ಹುಡುಗರು ಸುಮ್ಮನೆ ಕೂಡದೆ ಹರಟೆಯನ್ನು ಕೊಚ್ಚುವದರಲ್ಲಿಯೂ ಚೇಷ್ಟೆಗಳನ್ನು ಮಾಡುವುದರಲ್ಲಿಯೂ ಕಾಲವನ್ನು ಕಳೆಯುವರು.

ಸಾಲೆಯಲ್ಲಿ ತಿದ್ದುವಿಕೆಯನ್ನು ಕಾಯ್ದುಕೊಳ್ಳಲಿಕ್ಕೆ ಶಿಕ್ಷಕನಲ್ಲಿ ದಕ್ಷತೆಯೆಂಬ ಗುಣವು ಅವಶ್ಯವಾಗಿರಬೇಕು. ಎಲ್ಲ ಹುಡುಗರ ಮೇಲೆ ಶಿಕ್ಷಕನ ಲಕ್ಷ್ಯವು ಸರಿಯಾಗಿರಲಿಕ್ಕೆಬೇಕು. ಶಿಕ್ಷಕನು ನಮ್ಮನ್ನು ನೋಡುವುದಿಲ್ಲೆಂದು ಹುಡುಗರಿಗೆ ತಿಳಿದಕೂಡಲೆ ಅವರು ಪಾಠವನ್ನು ದುರ್ಲಕ್ಷಮಾಡಿ ಕುಚೇಷ್ಟೆಯಲ್ಲಿ ತೊಡಗುವ ಮೋಹವು ಅವರಿಗೆ ಉತ್ಪನ್ನವಾಗುವುದು; ನಮ್ಮ ಮೇಲೆ ಶಿಕ್ಷಕನ ಲಕ್ಷವು ಇರುವುದು, ಅವನು, ಪಾಠದ ಕಡೆಗೆ ನಮ್ಮ ಲಕ್ಷವು ಅದೆಯೋ ಇಲ್ಲವೋ ಎಂಬುದನ್ನು ಯಾವಾಗಲೂ ನೋಡುತ್ತಿರುತ್ತಾನೆ, ನಮಗೆ ವಿಷಯವು ತಿಳಿದದ್ದೂ ತಿಳಿಯದೆ ಇದ್ದದ್ದೂ ಸಹ ಅವನ ಲಕ್ಷದಲ್ಲಿ ಬರುವುದು, ಇತ್ಯಾದಿ ಸಂಗತಿಗಳು ಹುಡುಗರಿಗೆ ಗೊತ್ತಾದರೆ ಅವರು ತಮ್ಮ ಕೆಲಸಗಳನ್ನು

ವ್ಯವಸ್ಥೆಯಿಂದ ಮಾಡುವರು; ಪಾಠದ ಕಡೆಗೆ ಲಕ್ಷ್ಯವನ್ನು ಕೊಡುವರು; ಅವರ ಕುಚೇಷ್ಟೆಗಳಿಗೂ ಹರಟೆಗೂ ಆಸ್ಪದವಿಲ್ಲದಂತಾಗುವುದು.

ಮನುಷ್ಯಸ್ವಭಾವದ ಜ್ಞಾನ, ವ್ಯವಹಾರಚಾತುರ್ಯ ಈ ಎರಡು ಗುಣಗಳಿಂದಲೂ ಸಾಲೆಯಲ್ಲಿ ತಿದ್ದುವಿಕೆಯನ್ನು ಕಾಯ್ದುಕೊಳ್ಳಲಿಕ್ಕೆ ಸಹಾಯ್ಯವಾಗುವುದು. ಪ್ರತಿ ಒಬ್ಬ ಹುಡುಗನ ಸ್ವಭಾವವು ಬೇರೆ ಬೇರೆ ಇರುವುದು. ಆದಾಗ್ಯೂ ಮನುಷ್ಯಸ್ವಭಾವಕ್ಕೆ ಕೆಲವು ಮೂಲ ತತ್ವಗಳು ಇದ್ದೇ ಇರುವುವು, ಚಿಕ್ಕಮಕ್ಕಳನ್ನು ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿದರೆ, ಅವರಲ್ಲಿ **ಕುತೂಹಲ** ಅಥವಾ **ಜ್ಞಾನಸಂಪಾದಿಸುವ ಇಚ್ಛೆ, ಕಾರ್ಯಪ್ರೀತಿ, ಮಹತ್ವಾಕಾಂಕ್ಷೆ** ಈ ಮೊದಲಾದ ಸಹಜ ಪ್ರವೃತ್ತಿಗಳು ಸ್ವಾಭಾವಿಕವಾಗಿ ಕಂಡುಬರುವುವು. ಅವುಗಳನ್ನು ಹಿಂದೆ ವಿವರಿಸಿದೆ. ಶಿಕ್ಷಕನು ಯುಕ್ತಿಯಿಂದ ಅವುಗಳಿಗೆ ಉತ್ತೇಜನ ಕೊಟ್ಟರೆ ಅವುಗಳಿಂದ ಅನಾಯಾಸವಾಗಿ ಶಿಕ್ಷಣದ ಕಾರ್ಯವು ಕೈಗೂಡುವುದು. ಅವುಗಳನ್ನು ಚಾತುರ್ಯದಿಂದ ಉಪಯೋಗಿಸದಿದ್ದರೆ ಕೂತೂಹಲವು ಚಾಂಚಲ್ಯವಾಗಿಯೂ, ಕಾರ್ಯಪ್ರೀತಿಯು ಕಿಡಿಗೇಡಿತನವಾಗಿಯೂ ಮಹತ್ವಾಕಾಂಕ್ಷೆಯು ಮತ್ಸರವಾಗಿಯೂ ಪರಿಣಮಿಸುವುವು.

ಈ ಮೇರೆಗೆ ಸಾಲೆಯಲ್ಲಿ ತಿದ್ದುವಿಕೆಯನ್ನು ಕಾಯ್ದುಕೊಳ್ಳುವ ಮುಖ್ಯ ಉಪಾಯಗಳಲ್ಲಿ (೧) **ಶಿಕ್ಷಕನ ಸದ್ಗುಣಗಳ ವರ್ಚಸ್ಸು,** (೨) **ವಿದ್ಯಾರ್ಥಿಗಳ ಸಹಜ ಪ್ರವೃತ್ತಿಗಳು,** ಈ ಎರಡು ಉಪಾಯಗಳು ಮೇಲೆ ವಿವರಿಸಲ್ಪಟ್ಟವು. ಇನ್ನು ೩ನೆಯ ಉಪಾಯವು **ಶಿಕ್ಷೆಯೂ ಇನಾಮುಗಳೂ;** ಇವು ಗೌಣಸಾಧನಗಳು. ಸಂಪೂರ್ಣವಾಗಿ ಇವುಗಳನ್ನೇ ಅವಲಂಬಿಸುವುದರಿಂದ ಹಿತವಾಗುವುದಿಲ್ಲ; ಶಿಕ್ಷೆಯು ಔಷಧದಂತೆ ಇರುವುದು. ಪ್ರಕೃತಿಯು ತೀರ ಕೆಟ್ಟಾಗ ಮಾತ್ರ ಔಷಧವನ್ನು ಉಪಯೋಗಿಸುವರು. ಮೇಲೆ ಮೇಲೆ ಔಷಧವನ್ನು ತೆಗೆದುಕೊಂಡರೆ ಹೇಗೆ ಗುಣವಾಗುವುದಿಲ್ಲವೋ ಹಾಗೆ ಮೇಲೆ ಮೇಲೆ ಶಿಕ್ಷೆಯ ಉಪಯೋಗವನ್ನು ಮಾಡಿದರೆ ಅದರಿಂದ ಉಪಯೋಗವಾಗುವುದಿಲ್ಲ. ಬೌದ್ಧಿಕ ದೋಷದ ಸಲುವಾಗಿ ಅಂದರೆ ಪಾಠಶಕ್ತಿಯು ಕಡಿಮೆ

ಇರೋಣ, ಅಥವಾ ತಿಳಿಸಿ ಹೇಳಿದ ಕವಿತೆಯು ಇಲ್ಲವೆ ಗಣಿತದ ಉದಾಹರಣೆಯು ತಿಳಿಯದಿರೋಣ ಇದಕ್ಕಾಗಿ ಶಿಕ್ಷೆಯನ್ನು ಎಂದೂ ಕೊಡಬಾರದು. ಸಣ್ಣ ಶಿಕ್ಷೆಯಿಂದ ಕಾರ್ಯವಾಗುತ್ತಿದ್ದರೆ ದೊಡ್ಡ ಶಿಕ್ಷೆಯನ್ನು ಕೊಡಬಾರದು, ದೇಹದಂಡನ ಶಿಕ್ಷೆಯನ್ನಂತೂ ಕ್ವಚಿತ್ತಾಗಿ ಕೊಡಬೇಕು. ಶಿಕ್ಷೆಯ ಉದ್ದೇಶವು ಸೇಡುತೀರಿಸಿಕೊಳ್ಳುವುದಕ್ಕಾಗಿ ಇರದೆ ವಿದ್ಯಾರ್ಥಿಗಳ ಸುಧಾರಣೆಯ ಸಲುವಾಗಿ ಇರುವುದು. ಮತ್ತು ಅಪರಾಧಕ್ಕೆ ಶಿಕ್ಷೆಯು ತಪ್ಪದೆ ಆಗುವದೆಂಬ ತಿಳುವಳಿಕೆಯು ವಿದ್ಯಾರ್ಥಿಗಳ ಮನಸಿನಲ್ಲಿ ಇದ್ದರೆ ಮಾತ್ರ ಶಿಕ್ಷೆಯಿಂದ ಪ್ರಯೋಜನವಾಗುವುದು. ಶಿಕ್ಷೆಯ ಕಠಿಣತ್ವದ ಮಾನದಿಂದ ಅದರ ಬೇರೆ ಬೇರೆ ಪ್ರಕಾರಗಳು ಕೆಳಗೆ ಅನುಕ್ರಮವಾಗಿ ಕೊಡಲ್ಪಟ್ಟಿರುವುವು.

೧. ಹುಡುಗರ ಯಾವದೊಂದು ಕೆಲಸಕ್ಕೆ ತನ್ನ ಒಪ್ಪಿಗೆ ಇಲ್ಲೆಂಬುದನ್ನು ಶಿಕ್ಷಕನು ಕಣ್ಣಿನಿಂದಲೂ ಸಿಟ್ಟಿನ ಮುಖಮುದ್ರೆಯಿಂದಲೂ ತೋರಿಸುವುದು. ೨ ಸಿಟ್ಟು ಮಾಡುವುದು. ೩ ವರ್ಗದಲ್ಲಿ ಎದ್ದು ನಿಲ್ಲಿಸುವುದು. ೪ ಗುಣಗಳನ್ನು ಕಡಿಮೆಮಾಡುವುದು. ೫ ವರ್ಗದಲ್ಲಿ ಕೆಳಗೆ ಕೂಡಿಸುವುದು. ೬ ಕೆಲವು ಹೊತ್ತಿನವರೆಗೆ ವರ್ಗದ ಹೊರಗೆ ನಿಲ್ಲಿಸುವುದು. ೭ ಆಟಕ್ಕೆ ಕರಕೊಳ್ಳದೆ ಇರುವುದು. ೮ ಸಾಲೆ ಬಿಟ್ಟ ಬಳಿಕ ವರ್ಗದಲ್ಲಿ ಕೂಡ್ರಿಸಿ ಬರೆಯಲಿಕ್ಕೆ ಹೇಳುವುದು. ೯ ಪುಸ್ತಕ ನೋಡಿ ಕೆಲವು ಸಾಲು ಬರಕೊಂಡು ಬರಲಿಕ್ಕೆ ಅಥವಾ ಪಾಠಮಾಡಿಕೊಂಡು ಬರಲಿಕ್ಕೆ ಹೇಳುವುದು. ೧೦ ಶಾರೀರಿಕ ಶಿಕ್ಷೆಯನ್ನು ವಿಧಿಸುವುದು. ೧೧ ದಂಡಮಾಡುವುದು ೧೨ ಕೆಲವು ದಿವಸ ಸಾಲೆಗೆ ಬರಬೇಡೆಂದು ಹೇಳುವುದು ೧೩ ಸಾಲೆಯ ರಜಿಸ್ಟರದಿಂದ ಹೆಸರು ಕಿತ್ತಿ ಹಾಕುವುದು.

ಈ ಶಿಕ್ಷೆಗಳನ್ನು ಎಂಥ ಶಾಲೆಗಳಲ್ಲಿ ಯಾವ ಪರಿಸ್ಥಿತಿಯಲ್ಲಿ ಉಪಯೋಗಿಸಬೇಕು; ಹಾಗು ಅವುಗಳ ಗುಣಾವಗುಣಗಳು ಯಾವವು, ಎಂಬುದನ್ನು ಶಿಕ್ಷಕರು ವಿಚಾರದಿಂದಲೂ ಅನುಭವದಿಂದಲೂ ಅರಿತು ಕೊಳ್ಳಬೇಕು.

**ಇನಾಮುಗಳು:—** ಹುಡುಗರು ಮಾಡಿದ ಯಾವದೊಂದು ಕೆಲಸಕ್ಕೆ ಹಿರಿಯರು ತಲೆದೂಗಿದರೆ, ಅಥವಾ ಭಲೆ, ಶಾಬಾಸ ಎಂಬ ಶಬ್ದಗಳಿಂದ ಹೊಗಳಿದರೆ ಇಲ್ಲವೆ ಬೇರೆ ಯಾವದೊಂದು ರೀತಿಯಿಂದ ತಮ್ಮ ಮೆಚ್ಚಿಕೆಯನ್ನು ತೋರಿಸಿದರೆ ಅವರಿಗೆ ಆನಂದವಾಗುವುದು. ಮತ್ತು ಅಂಥ ಕೆಲಸಗಳನ್ನು ಮಾಡಲಿಕ್ಕೆ ಉತ್ತೇಜನವು ದೊರೆಯುವುದು. ಈ ತರದ ಸ್ತುತಿಪರಶಬ್ದಗಳೂ ಅಭಿನಂದನವೂ ಇನಾಮುಗಳಲ್ಲಿಯೇ ಎಣಿಸಲ್ಪಡುವುವು. ಈ ದೃಷ್ಟಿಯಿಂದ ವಿಚಾರಮಾಡಲು ಶಿಕ್ಷಕರು ಹುಡುಗರಿಗೆ ಪ್ರೋತ್ಸಾಹನವನ್ನು ಕೊಡುವಂಥ ಅವರ ಕೆಲಸಗಳಿಂದ ತಮಗಾದ ಸಂತೋಷವನ್ನು ವ್ಯಕ್ತಪಡಿಸುವಂಥ ಕೆಲವು ಪ್ರಕಾರಗಳು ಸಾಲೆಗಳಲ್ಲಿ ಉಪಯೋಗಿಸಲ್ಪಡುವುವು. ಅವು ಯಾವವೆಂದರೆ:—

೧ ಹುಡುಗರು ಮಾಡಿದ ಯಾವದೊಂದು ಕೆಲಸದಿಂದ ತಮಗಾದ ಸಂತೋಷವನ್ನು ಕಣ್ಣಿನಿಂದಲೂ ಮುಖಮುದ್ರೆಯಿಂದಲೂ ವ್ಯಕ್ತಮಾಡುವುದು. ೨ ಭಲೆ, ಶಾಬಾಸ ಇತ್ಯಾದಿ ಶಬ್ದಗಳಿಂದ ಅಭಿನಂದನವನ್ನು ಮಾಡುವುದು. ೩ ಗುಣಗಳನ್ನು ಕೊಡುವುದು; ವರ್ಗದಲ್ಲಿ ಮೇಲೆ ನಂಬರು ಕೊಡುವುದು. ೪ ಹಿರೇಮಣಿಯ ಅಧಿಕಾರವನ್ನು ಕೊಡುವುದು. ೫ ಪದಕ, ಹೂವು ಮುಂತಾದ ಸನ್ಮಾನದರ್ಶಕ ಚಿಹ್ನಗಳನ್ನು ಉಪಯೋಗಿಸಲಿಕ್ಕೆ ಕೊಡುವುದು. ೬ ಪುಸ್ತಕ, ಹಣ ಆಟದ ಅಥವಾ ಉಪಯೋಗದ ಒಡವೆ ಇವುಗಳನ್ನು ಇನಾಮಾಗಿ ಕೊಡುವುದು.

ಈ ಪ್ರಕಾರಗಳು ಕ್ರಮವಾಗಿ ಒಂದಕ್ಕಿಂತ ಒಂದು ಹೆಚ್ಚು ಯೋಗ್ಯತೆಯವಾಗಿರುತ್ತವೆ.

ಇನಾಮುಗಳನ್ನು ಕೊಡುವ ಸಂಬಂಧದಿಂದ ಕೆಳಗೆ ಹೇಳಿದ ಸಂಗತಿಗಳನ್ನು ಲಕ್ಷ್ಯದಲ್ಲಿಡತಕ್ಕದ್ದು.

೧. ಇನಾಮುಗಳನ್ನು ಮೇಲೆ ಮೇಲೆ ಕೊಡಬಾರದು. ಉತ್ತಮ ಕೆಲಸಮಾಡಲಿಕ್ಕೆ ಇನಾಮಿನ ರೂಢಿಯು ಹತ್ತದಂತೆ ಎಚ್ಚರಪಡಬೇಕು.

೨. ಬುದ್ಧಿಯ ಶ್ರೇಷ್ಠತೆಯ ಸಲುವಾಗಿ ಅಥವಾ ಸ್ವಾಭಾವಿಕವಾದ ಹಸ್ತಕೌಶಲ್ಯದ ಸಲುವಾಗಿ ಇನಾಮುಗಳನ್ನು ಕೊಡಬಾರದು. ಮನಃಪೂರ್ವಕವಾಗಿ ಪ್ರಯತ್ನಮಾಡುವ ಹುಡುಗರಿಗೂ ಸದ್ವರ್ತನವುಳ್ಳ ಹುಡುಗರಿಗೂ ಇನಾಮುಗಳು ಸಿಗುವುದು ಯೋಗ್ಯವು.

೩. ಸಾಲೆಯಲ್ಲಿ ಕೊಡಲ್ಪಡುವ ಇನಾಮುಗಳು ಸನ್ಮಾನದರ್ಶಕವಾಗಿರುವುದರಿಂದ ಅವುಗಳ ಬೆಲೆಯು ಬಹಳಿರಬಾರದು.

೪. ಹುಡುಗರು ದೊಡ್ಡವರಾದಂತೆ ಇನಾಮುಗಳ ಸಂಖ್ಯೆಯು ಕಡಿಮೆ ಆಗಬೇಕು. ಚಿಕ್ಕ ವಯಸ್ಸಿನವರಿಗೆ ಇನಾಮುಗಳು ಹೆಚ್ಚಿರಬೇಕು.

೫. ಪ್ರತಿ ಒಬ್ಬ ವಿದ್ಯಾರ್ಥಿಯು ತನ್ನ ಕರ್ತವ್ಯವನ್ನು ಮನಃಪೂರ್ವಕವಾಗಿ ಮಾಡಲಿಕ್ಕೇಬೇಕು. ಅದರಿಂದ ಅವನ ಹಿತವು ಸಾಧಿಸಲಿ, ಸಾಧಿಸದಿರಲಿ, ಅದನ್ನು ಕಂಡು ಬೇರೆಯವರು ಸ್ತುತಿಸಲಿ, ನಿಂದಿಸಲಿ. ಯಾವದನ್ನೂ ಮನಸಿನಲ್ಲಿ ತರಕೂಡದು ಕರ್ತವ್ಯಗಳನ್ನು ಮಾಡುವುದರಿಂದ ತಮ್ಮ ಮನಸಿಗೆ ಆಗುವ ಸಮಾಧಾನವೇ ಅವುಗಳಿಗೆ ನಿಜವಾದ ಇನಾಮು, ಈ ಉದಾತ್ತವಾದ ಧ್ಯೇಯವನ್ನು ಶಿಕ್ಷಕರು ಹುಡುಗರ ಮುಂದೆ ಇಟ್ಟು ಅದರಂತೆ ಅವರು ನಡಕೊಳ್ಳುವಂತೆ ಉಪದೇಶಗಳಿಂದಲೂ ಸ್ವಂತದ ಉದಾಹರಣೆಗಳಿಂದಲೂ ಪ್ರಯತ್ನವನ್ನು ಮಾಡುತ್ತಿರಬೇಕು.

**ಶಿಕ್ಷಕನ ಕಣ್ಣು :—** ಶಿಕ್ಷಕನು ತನ್ನ ಕಣ್ಣಿನ ಉಪಯೋಗವನ್ನು ಸರಿಯಾಗಿ ಮಾಡುವುದರಿಂದ ಸಾಲೆಯ ತಿದ್ದುವಿಕೆಯಲ್ಲಿಯೂ ಶಿಕ್ಷಣದಲ್ಲಿಯೂ ಅನೇಕ ಒಳ್ಳೇ ಸಂಗತಿಗಳನ್ನು ಅಲ್ಪಶ್ರಮದಿಂದ ಸಾಧಿಸಬಹುದು.

ವರ್ಗದಲ್ಲಿ ತಿದ್ದುವಿಕೆಯನ್ನು ಕಾಯ್ದುಕೊಳ್ಳಲಿಕ್ಕೆ ಶಿಕ್ಷಕರ ಕಣ್ಣು ಮೇಲಾದ ಸಾಧನವಾಗಿದೆ. ಮಕ್ಕಳ ತಪ್ಪು ಒಪ್ಪುಗಳನ್ನೂ ಕೂಡಲೆ ಕಂಡುಹಿಡಿಯುವುದಕ್ಕೆ ಅವರ ಕಣ್ಣುಗಳು ಒಳ್ಳೇ ಅಭ್ಯಾಸ

ವನ್ನು ಪಡೆದಿರಲಿಕ್ಕೆಬೇಕು. ಮತ್ತು ಮಕ್ಕಳು ಮಾಡುವ ಎಲ್ಲ ಕೆಲಸಗಳ ಮೇಲೆ ಶಿಕ್ಷಕರ ದೃಷ್ಟಿಯು ಇರುವುದೆಂಬ ಸಂಗತಿಯು ಅವರಿಗೆ ಗೊತ್ತಿರಲಿಕ್ಕೆಬೇಕು. ಅದರಿಂದ ಮಕ್ಕಳ ಪ್ರಗತಿಯು ಬಹು ಬೇಗ ಸಾಗುವುದು.

ಶಿಕ್ಷಕರ ಕಣ್ಣಿನಲ್ಲಿ ನಿಯಾಮಕಶಕ್ತಿಯು ಹೆಚ್ಚು ಹೆಚ್ಚು ಬೆಳೆದಂತೆ ಸಾಲೆಯ ಕೆಲಸವು ಒಳ್ಳೇ ಸುಸೂತ್ರವಾಗಿ ಸಾಗುವುದು. ಮಕ್ಕಳು ಶಿಕ್ಷಕರ ಇಚ್ಛೆಯನ್ನು ಅವರ ಕಣ್ಣುಗಳಿಂದ ಕಂಡುಹಿಡಿದು ಅದರಂತೆ ನಡೆಯಲು ಸಮರ್ಥರಾಗುವರು. ಮಾತಿನ ಆವಶ್ಯಕತೆಯು ಕಡಿಮೆಯಾಗುತ್ತ ಹೋಗುವುದು. ಈ ಮೇರೆಗೆ ಇಡೀ ವರ್ಗವನ್ನು ಶಿಕ್ಷಕರು ತಮ್ಮ ಕಣ್ಣುಗಳಿಂದಲೇ ಅಂಕಿತದಲ್ಲಿಟ್ಟುಕೊಳ್ಳಬೇಕಾದರೆ ಅವರು ಖುರ್ಚಿಯಮೇಲೆ ಒರಗಿಕೊಂಡು ಕೂಡಬಾರದು ; ಮೇಜಿಗೆ ಆತುಕೊಂಡು ನಿಲ್ಲಬಾರದು ; ಅದರಿಂದ ಅವರ ಸೋಮಾರಿತನವೂ ದೌರ್ಬಲ್ಯವೂ ಸೂಚಿತವಾಗುವುವು. ಶಿಕ್ಷಕರು ಇಡೀ ವರ್ಗದ ಮೇಲೆ ತಮ್ಮ ದೃಷ್ಟಿಯು ಬೀಳುವಂತೆ ದೂರ ಒಂದು ಸ್ಥಳದಲ್ಲಿ ನಿಂತು ಪಾಠವನ್ನು ಕಲಿಸತಕ್ಕದ್ದು. ಯಾವನಾದರೊಬ್ಬ ಹುಡುಗನು ತಮ್ಮ ದೃಷ್ಟಿಯ ಹೊರಗೆ ಉಳಿದರೆ ಪಾಠದ ಕಡೆಗೆ ದುರ್ಲಕ್ಷ ಮಾಡಲಿಕ್ಕೆ ಆವನಿಗೆ ಆಸ್ಪದವು ದೊರೆಯುವುದು. ಆದಕಾರಣ ಎಲ್ಲ ಹುಡುಗರೂ ಶಿಕ್ಷಕನ ದೃಷ್ಟಿಯ ಅಳವಿನೊಳಗೆ ಬರುವಂತೆ ವರ್ಗದ ರಚನೆಯು ಇರಲಿಕ್ಕೆಬೇಕು.

ವಿದ್ಯಾರ್ಥಿಗಳು ಶಿಕ್ಷಕರ ಕಣ್ಣುಗಳಿಂದಲೇ ಅವರ ಚಟುವಟಿಕೆ ಗಳನ್ನು ಅರಿತುಕೊಳ್ಳುವರು. ಆದರೆ ಶಿಕ್ಷಕರು ಯಾವಾಗಲೂ ಸಹಾನುಭೂತಿಯಿಂದಲೂ ಕರುಣಾದೃಷ್ಟಿಯಿಂದಲೂ ನೋಡತಕ್ಕದ್ದು. ಕಠೋರತನದ ದರ್ಪವು ಅವರ ಕಣ್ಣುಗಳಲ್ಲಿ ಎಂದೂ ತೋರತಕ್ಕದ್ದಲ್ಲ. ಶಿಕ್ಷಕನು ತನ್ನ ಕಾರ್ಯದಲ್ಲಿ ಯಶಪಡೆಯಬೇಕಾದರೆ ಅವನು ತನ್ನ ಮನಸಿನಿಂದ ವರ್ಗದೊಳಗಿನ ಪ್ರತಿ ಒಬ್ಬ ವಿದ್ಯಾರ್ಥಿಯ ಹೃದಯವನ್ನು ಪ್ರವೇಶಿಸಲಿಕ್ಕೆಬೇಕು. ಈ ತರದ ಪ್ರವೇಶವನ್ನು ಅವನು ಅನೇಕ ಮಾರ್ಗ

ಗಳಿಂದ ಸಾಧಿಸಬಹುದಾದರೂ ಆತನ ಕಣ್ಣುಗಳು ಬಹಳ ಹೆಚ್ಚಿನ ಸಾಧನಗಳಾಗಿವೆ ಅವುಗಳನ್ನೇ ಅವರು ಬಹಳವಾಗಿ ಉಪಯೋಗಿಸುವುದು ಶಕ್ಯವಿರುವುದು. ಈ ಮೇರೆಗೆ ಶಿಕ್ಷಕರು ತಮ್ಮ ಕಣ್ಣುಗಳಿಂದ ಅವರ ಹೃದಯವನ್ನು ಪ್ರವೇಶಿಸಿದ ಮೇಲೆ ಅಲ್ಲಿ ಅದರಿಂದಾಗುವ ಪರಿಣಾಮವನ್ನು ಕಿತ್ತುಹಾಕಲಿಕ್ಕೆ ಎಂಥ ಪ್ರಯತ್ನವೂ ಕೂಡ ಈಡೇರಲಾರದು. ವರ್ಗದಲ್ಲಿ ಪಾಠವು ನಡೆದಿರುವಾಗ ಅದಕ್ಕೆ ಏನೂ ತೊಂದರೆಯಾಗದಂತೆ ಶಿಕ್ಷಕರ ಕಣ್ಣು ವಿದ್ಯಾರ್ಥಿಗಳ ಹೃದಯದಲ್ಲಿ ಸೇರಿ ಅವರ ಸದ್ಭಾವನೆಗಳ ಸುದ್ದಿಗಳನ್ನು ನಿಶ್ಚಿತವಾಗಿಯೂ, ಮೌನವಾಗಿಯೂ, ರಹಸ್ಯವಾಗಿಯೂ ತಂತಿಗಳ ಸುದ್ದಿಯಷ್ಟು ತೀವ್ರವಾಗಿಯೂ ಸರಳವಾದ ಮಾತುಗಳಂತೆ ವಿದ್ಯಾರ್ಥಿಗಳಿಗೆ ತಿಳಿಯಪಡಿಸುವುದು.



# ೧೩ ನೆಯ ಪ್ರಕರಣ

## ಪಾಠದ ಸಿದ್ಧತೆ

ಈ ಪ್ರಕರಣದಲ್ಲಿ ಕಲಿಸತಕ್ಕ ಪಾಠದ ಸಿದ್ಧತೆ, ಕಲಿಸುವ ಮೂಲತತ್ವಗಳು, ಪಾಠದ ಟಿಪ್ಪಣೆ ಈ ವಿಷಯಗಳ ವಿವೇಚನೆಯು ಮಾಡಲ್ಪಡುವುದು.

**ಪಾಠದ ಸಿದ್ಧತೆ:—** ಪ್ರಾಥಮಿಕ ಸಾಲೆಗಳಲ್ಲಿ ಕಲಿಸುವ ವಿಷಯಗಳು ಎಲ್ಲರಿಗೂ ಗೊತ್ತೇ ಇರುವವು; ಅಂದಮೇಲೆ ಅವುಗಳನ್ನು ಕಲಿಸಲಿಕ್ಕೆ ಸಿದ್ಧತೆ ಏತಕ್ಕೆಬೇಕೆಂದು ಅನೇಕರು ಪ್ರಶ್ನಮಾಡಬಹುದು. ಆದರೆ ನಿಜವಾದ ಶಿಕ್ಷಕನು ಈ ಭ್ರಾಂತಿಮೂಲಕವಾದ ಕಲ್ಪನೆಯನ್ನು ತನ್ನ ಮನಸಿನಲ್ಲಿ ಎಂದೂ ತರುವುದಿಲ್ಲ. ಹುಡುಗರಿಗೆ ನಾವು ಕಲಿಸಿದ ವಿಷಯವು ಚೆನ್ನಾಗಿ ತಿಳಿಯಬೇಕೆಂತಲೂ ಅದು ಅವರ ಮನಸಿನಲ್ಲಿ ಸ್ಥಿರವಾಗಿ ಉಳಿಯಬೇಕೆಂತಲೂ ಆ ವಿಷಯುವನ್ನು ಕಲಿಸುವ ಉದ್ದೇಶಗಳೆಲ್ಲ ಈಡೇರಬೇಕೆಂತಲೂ ಶಿಕ್ಷಕನ ಮನಸಿನಲ್ಲಿದ್ದರೆ ಅವನು ಸರಿಯಾಗಿ ಆಲೋಚನೆಮಾಡಿ ಹೊಂದಿಕೆಮಾಡಿಕೊಂಡು ಕಲಿಸಲಿಕ್ಕೆಬೇಕು. ಕಲಿಸತಕ್ಕ ವಿಷಯದಲ್ಲಿ ಇಂದು ಕಲಿಸತಕ್ಕ ಭಾಗವು ಯಾವದು; ಅದರಲ್ಲಿ ಮುಖ್ಯ ಸಂಗತಿಗಳು ಯಾವವು, ಅವುಗಳನ್ನು ಹುಡುಗರ ಮನಸಿನಲ್ಲಿ ಬಿಂಬಿಸುವಂತೆ ಹೇಗೆ ಮಾಡಬೇಕು, ಮಕ್ಕಳ ಪೂರ್ವಜ್ಞಾನವು ಎಷ್ಟಿರುವುದು, ಅದಕ್ಕೂ ಹೊಸ ಜ್ಞಾನಕ್ಕೂ ಸಂಬಂಧವನ್ನು ಹೇಗೆ ಹಚ್ಚತಕ್ಕದ್ದು, ಯಾವ ಯಾವ ಉಪಕರಣಗಳು ಬೇಕಾಗಬಹುದು, ಅವುಗಳನ್ನು ಎಲ್ಲೆಲ್ಲಿ ಉಪಯೋಗಿಸತಕ್ಕದ್ದು, ಇತ್ಯಾದಿ ಅನೇಕ ಸಂಗತಿಗಳನ್ನು ಮನೆಯಲ್ಲಿ ಕುಳಿತು ಶಾಂತ ಮನಸಿನಿಂದ ಆಲೋಚನೆಮಾಡಿದ ಹೊರತು ಒಮ್ಮೆಲೆ ಕಲಿಸಲಿಕ್ಕೆ ಎಂದೂ ಬರಲಾರದು.

**ಪಾಠದ ಉದ್ದೇಶಗಳು:—** ಕಲಿಸತಕ್ಕ ಪಾಠದ ಉದ್ದೇಶಗಳು ಯಾವವೆಂಬುದನ್ನು ಶಿಕ್ಷಕರು ಸ್ಪಷ್ಟವಾಗಿ ಅರಿತುಕೊಳ್ಳಲಿಕ್ಕೆಬೇಕು. ಪ್ರತಿ ಒಂದು ವಿಷಯುವನ್ನು ಕಲಿಸುವಲ್ಲಿ ಒಂದು ಅಥವಾ ಹೆಚ್ಚು ಉದ್ದೇಶಗಳು ಇರಲಿಕ್ಕೆಬೇಕು. ಮಕ್ಕಳಿಗೆ ವಿಷಯುಜ್ಞಾನವಾಗ ಬೇಕೆಂಬುದು ಮೊದಲನೆಯ ಉದ್ದೇಶವು; ಭಾಷಾ, ಗಣಿತ, ಇತಿಹಾಸ, ಭೂಗೋಲ ಮೊದಲಾದ ವಿಷಯುಗಳನ್ನು ಕಲಿಯುವುದರಿಂದ ಮಕ್ಕಳಿಗೆ ಆಯಾ ವಿಷಯುಗಳ ಜ್ಞಾನವು ಬೆಳೆಯುವುದು. ವಿಷಯು ಜ್ಞಾನವಲ್ಲದೆ ಮಕ್ಕಳ ಒಂದು ಅಥವಾ ಹೆಚ್ಚು ಬೌದ್ಧಿಕ ಶಕ್ತಿಗಳನ್ನು ವಿಕಾಸಪಡಿಸು ವುದು ಎರಡನೆಯು ಮಹತ್ವದ ಉದ್ದೇಶವಿರುವುದು. ನೈತಿಕ ಬೋಧವು ಅಥವಾ ಶೀಲ ಪರಿಪೋಷಣೆಯು ಮೂರನೆಯು ಉದ್ದೇಶವು. ಸಾಮಾನ್ಯವಾಗಿ ಪ್ರತಿ ಒಂದು ಪಾಠದಲ್ಲಿ ಈ ಮೂರು ಉದ್ದೇಶಗಳು ಹೆಚ್ಚು ಕಡಿಮೆ ಪ್ರಮಾಣದಿಂದ ಇದ್ದೇ ಇರುವುವು. ಆ ಉದ್ದೇಶಗಳು ಸಾಧಿಸುವಂತೆ ಶಿಕ್ಷಕನು ಪಾಠದ ಸಿದ್ಧತೆಯುನ್ನು ಮಾಡಿಕೊಳ್ಳಲಿಕ್ಕೆ ಬೇಕು. ಉದಾಹರಣಾರ್ಥವಾಗಿ ಒಬ್ಬ ಶಿಕ್ಷಕನು ಶುದ್ಧ ಬರೆಹದ ಪಾಠವನ್ನು ಕಲಿಸುತ್ತಾನೆಂದು ತಿಳಿಯುವ. ಮಕ್ಕಳಿಗೆ ಶುದ್ಧವಾಗಿ ಬರೆಯುಲಿಕ್ಕೆ ಬರಬೇಕೆಂಬ ಉದ್ದೇಶವಂತು ನಿಜವು. ಅದಲ್ಲದೆ ಅವರಿಗೆ ಅಚ್ಚುಕಟ್ಟುತನ ಹಾಗು ಏಕಾಗ್ರತೆಯು ರೂಢಿಯು ಹತ್ತಬೇಕೆಂಬ ಉದ್ದೇಶಗಳು ಈ ಪಾಠದಿಂದ ಸಾಧಿಸಬೇಕಾಗಿದೆ. ಅದಕ್ಕಾಗಿ ಶಿಕ್ಷಕನು ಶಬ್ದಗಳನ್ನು ಹೇಳುವಾಗ ಹುಡುಗರು ಮನಃಪೂರ್ವಕವಾಗಿ ಲಕ್ಷ್ಯಕೊಡ ಬೇಕಾಗುವುದು. ಅದರಿಂದ ಅವರಿಗೆ ಸಹಜವಾಗಿಯೇ ಏಕಾಗ್ರತೆಯು ರೂಢಿಯು ಹತ್ತುವುದು. ಆದರೆ ಈ ಉದ್ದೇಶವು ಸಾಧಿಸಬೇಕಾದರೆ ಹೇಳತಕ್ಕ ಶಬ್ದಗಳನ್ನು ಇಲ್ಲವೆ ಶಬ್ದಸಮೂಹವನ್ನು ಶಿಕ್ಷಕರು ಒಂದೇ ಸಾರೆ ಉಚ್ಚರಿಸಲಿಕ್ಕೆ ಬೇಕು. ಎರಡು ಸಾರೆ ಇಲ್ಲವೆ ಹೆಚ್ಚು ಸಾರೆ ಉಚ್ಚರಿಸಿದರೆ ಹುಡುಗರು ಅದರ ಕಡೆಗೆ ಲಕ್ಷ್ಯಕೊಡುವುದಿಲ್ಲ. ಮಕ್ಕಳಲ್ಲಿ ಏಕಾಗ್ರತೆಯುನ್ನು ಹುಟ್ಟಿಸುವ ಪ್ರಸಂಗವೇ ಈ ಪಾಠದಿಂದ ದೊರೆಯು ವುದಿಲ್ಲ. ಹುಡುಗರಿಗೆ ಹೇಳಿದ ಶಬ್ದಸಮೂಹವನ್ನು ಶುದ್ಧವಾಗಿ

ಬರೆಯುವ ಜ್ಞಾನವಾದಾಗ್ಯೂ ಮತ್ತು ಅವರು ಅಕ್ಷರಗಳನ್ನು ದುಂಡಾಗಿಯೂ ಸಾಲುಗಳನ್ನು ಅಚ್ಚುಕಟ್ಟಾಗಿಯೂ ವ್ಯವಸ್ಥಿತವಾಗಿಯೂ ಬರೆದಾಗ್ಯೂ ಪಾಠದ ಎಲ್ಲ ಉದ್ದೇಶಗಳು ನೆರವೇರಿದಂತಾಗಲಿಲ್ಲ.

ಎಷ್ಟೋ ಪಾಠಗಳಲ್ಲಿ ಮೇಲೆ ಹೇಳಿದ ಉದ್ದೇಶಗಳಲ್ಲದೆ ಇನ್ನೂ ಒಂದೆರಡು ಉದ್ದೇಶಗಳು ಹೆಚ್ಚಿರಬಹುದು. ಅಥವಾ ಆ ಉದ್ದೇಶಗಳಲ್ಲಿ ಒಂದು ಉದ್ದೇಶವು ಸಾಧಿಸಲಿಕ್ಕಿಲ್ಲ. ಉದಾಹರಣಾರ್ಥವಾಗಿ ಹಸ್ತವ್ಯವಸಾಯದ ಪಾಠವನ್ನು ಕಲಿಸುವಾಗ, ಅಥವಾ ಚಿತ್ರಕಲೆ, ಮಣ್ಣಿನಿಂದ ಮಾದರಿಗಳನ್ನು ಮಾಡೋಣ ಈ ಮೊದಲಾದ ಪಾಠಗಳಿಂದ ಹುಡುಗರಿಗೆ ವಿಷಯಜ್ಞಾನವು ಆಗುವುದು; ಅವರ ಕೈಬೆರಳುಗಳಲ್ಲಿ ಚಪಲತೆಯು ಉತ್ಪನ್ನವಾಗುವುದು; ಅವರ ನಿರೀಕ್ಷಣಶಕ್ತಿಯು ಬೆಳೆಯುವುದು; ಕಲ್ಪನಾ ವಿಚಾರಶಕ್ತಿಗಳಿಗೆ ವ್ಯವಸಾಯವು ದೊರಕುವುದು; ಸೌಂದರ್ಯದ ಅಭಿರುಚಿಯು ಉತ್ಪನ್ನವಾಗುವುದು. ಹಸ್ತವ್ಯವಸಾಯದ ಪಾಠವು ಸರಿಯಾಗಿ ಕಲಿಸಲ್ಪಟ್ಟರೆ ಈ ಎಲ್ಲ ಉದ್ದೇಶಗಳು ಈಡೇರುವುವು.

**ವರ್ಗದ ರಚನೆ :—** ಪಾಠವನ್ನು ಕಲಿಸಲಿಕ್ಕೆ ಪ್ರಾರಂಭಿಸುವ ಮೊದಲು ಕಲಿಸತಕ್ಕ ವಿಷಯಕ್ಕೆ ಅನುಗುಣವಾಗಿಯೂ ಶಿಕ್ಷಕನಿಗೂ ಹುಡುಗರಿಗೂ ಅನುಕೂಲವಾಗುವಂತೆಯೂ, ವರ್ಗವನ್ನು ರಚಿಸಿಕೊಳ್ಳುವುದು ಉತ್ತಮವು. ಇಲ್ಲದಿದ್ದರೆ ಹಿಂದಿನಿಂದ ಅನೇಕ ತೊಂದರೆಗಳು ತಟ್ಟುವುವು. ಅದರಿಂದ ಪಾಠದ ಉದ್ದೇಶಗಳು ನೆರವೇರುವುದಿಲ್ಲ. ಎಲ್ಲ ವಿಷಯಗಳನ್ನು ಕಲಿಸುವಾಗ ಒಂದೇರೀತಿಯಿಂದ ಮಕ್ಕಳನ್ನು ಕೂಡಿಸುವುದು ಸರಿಯಲ್ಲ. ಚಿಕ್ಕಮಕ್ಕಳ ವರ್ಗಕ್ಕೆ ವಾಚನ ಅಥವಾ ಕವಿತಾ ಪಾಠವನ್ನು ಕಲಿಸುವಾಗ ಹುಡುಗರು ಶಿಕ್ಷಕನ ಸುತ್ತುಮುತ್ತು ಅರ್ಧವರ್ತುಳಾಕಾರವಾಗಿ ಕುಳಿತರೆ ಹೆಚ್ಚು ಪ್ರಯೋಜನವಾಗುವುದು. ಒಬ್ಬರು ಓದಿದ್ದು ಶಿಕ್ಷಕನಿಗೂ, ಇಡೀ ವರ್ಗಕ್ಕೂ ಕೇಳಿಸುವುದು. ಉದ್ದಕ್ಕೆ ಎರಡು ಸಾಲುಗಳನ್ನು ಇದಿರುಬದರಾಗಿ ಕೂಡಿಸಿದರೆ ಕಡೆಯ ಹುಡುಗರ ವಾಚನವು ಶಿಕ್ಷಕನಿಗೂ ಪ್ರಾರಂಭದ ಹುಡುಗರಿಗೂ

ಕೇಳಬರುವುದಿಲ್ಲ. ಕಪ್ಪು ಹಲಿಗೆಯ ಮೇಲೆ ಬರೆದದ್ದನ್ನು ನೋಡುವುದಿದ್ದಾಗ ಆ ಹಲಗೆಯ ಮುಂದೆ ಒಂದರ ಹಿಂದೊಂದು ಸಾಲುಮಾಡಿ ಎತ್ತರಾದವರನ್ನು ಹಿಂದೆಯೂ, ಗಿಡ್ಡರನ್ನು ಮುಂದೆಯೂ ಕೂಡಿಸುವ ವ್ಯವಸ್ಥೆಯನ್ನು ಮಾಡುವುದು ಒಳ್ಳೆಯದು.

**ಮಕ್ಕಳ ಪೂರ್ವಜ್ಞಾನ :—** ಕಲಿಸತಕ್ಕ ವಿಷಯದ ಜ್ಞಾನವು ಹುಡುಗರಿಗೆ ಎಷ್ಟು ಆಗಿರುವುದು. ಅದರ ಮುಂದೆ ಇಂದು ಯಾವ ಭಾಗವನ್ನು ಕಲಿಸತಕ್ಕದ್ದಿರುವುದು, ಈ ಮಾತಿನ ನಿಷ್ಕರ್ಷವನ್ನು ಶಿಕ್ಷಕರು ಸ್ಪಷ್ಟವಾಗಿ ಮಾಡಿಕೊಳ್ಳತಕ್ಕದ್ದು. ಯಾಕೆಂದರೆ, ಹೊಸ ಪಾಠದಲ್ಲಿ ಬರತಕ್ಕ ಕಲ್ಪನೆಗಳಿಗೂ ಹಿಂದೆ ಅವರು ಕಲಿತ ಪಾಠಗಳೊಳಗಿನ ಕಲ್ಪನೆಗಳಿಗೂ ತಳಕುಹಾಕಿಕೊಟ್ಟ ಹೊರತು ಹುಡುಗರಿಗೆ ಹೊಸ ಜ್ಞಾನವು ಚೆನ್ನಾಗಿ ತಿಳಿಯಲಾರದು. ಆದಕಾರಣ ಪಾಠದ ಪ್ರಾರಂಭಕ್ಕೆ ಪೀಠಿಕೆಯು ಅಥವಾ ಉಪೋದ್ಘಾತವು ಅವಶ್ಯವಾದದ್ದು. ಉಪೋದ್ಘಾತದಲ್ಲಿ ಶಿಕ್ಷಕನು ಹಿಂದೆ ಕಲಿಸಿದ್ದ ವಿಷಯದ ಅವರ್ತನವನ್ನು ಅಥವಾ ಮುಂದೆ ಕಲಿಸತಕ್ಕ ವಿಷಯಕ್ಕೆ ಸಹಾಯ್ಯಕವಾದ ಸಂಗತಿಗಳನ್ನು ಕೇಳಿಕೊಳ್ಳತಕ್ಕದ್ದು. ಉದಾಹರಣಾರ್ಥವಾಗಿ ಲಘುತಮಸಾಧಾರಣ ವಿಭಾಜ್ಯ ಈ ಪಾಠವನ್ನು ಕಲಿಸುವಾಗ ಅವಯವ ಅಂದರೇನು, ಭಾಜ್ಯ, ಭಾಜ್ಯಕಗಳೆಂದರೇನು, ಈ ಸಂಗತಿಗಳ ಜ್ಞಾನವು ಹುಡುಗರಿಗೆ ಇರಲಿಕ್ಕೆ ಬೇಕು. ಅವು ಈ ಮೊದಲೇ ಕಲ್ಪಿಸಲ್ಪಟ್ಟಿರುವುವು. ಅದನ್ನು ಪೀಠಿಕೆಯಲ್ಲಿ ಕೇಳಿಕೊಂಡು ಪಾಠವನ್ನು ಪ್ರಾರಂಭಿಸತಕ್ಕದ್ದು. ಇದೇ ಪ್ರಕಾರ ಮುಂಬಯಿ ಇಲಾಖೆಯ ಪ್ರಾಕೃತಿಕ ಸ್ವರೂಪವನ್ನು ಕಲಿಸುವದಿದ್ದಾಗ ಹುಡುಗರು ಈ ಮೊದಲೇ ಕಲಿತ ಕರ್ನಾಟಕದ ಪ್ರಾಕೃತಿಕ ಸ್ವರೂಪದ ಜ್ಞಾನವು ಹುಡುಗರಿಗೆ ಎಷ್ಟರಮಟ್ಟಿಗೆ ಆಗಿರುವುದೆಂಬುದನ್ನು ತಿಳಕೊಳ್ಳುವುದಕ್ಕೆ ಪೀಠಿಕೆಯಲ್ಲಿ ಆ ವಿಷಯವಾಗಿ ಪ್ರಶ್ನೆಗಳನ್ನು ಕೇಳುವುದು ಅವಶ್ಯವು. ಅದಕ್ಕೆ ಸಂಬಧಿಸಿಯೇ ಮುಂದಿನ ವಿಷಯಗಳನ್ನು ಕಲಿಸಬೇಕಾಗುವುದು. ಕೆಲವು ಪಾಠಗಳಲ್ಲಿ ಹಿಂದೆ ಕಲಿಸಿದ ವಿಷಯದ ಸಂಬಂಧವೇನೂ ಇಲ್ಲದೆ ಪ್ರಸ್ತುತ ವಿಷಯದ ಸಂದರ್ಭ

ವನ್ನು ಗೊತ್ತುಮಾಡಿಕೊಡುವುದಕ್ಕಾಗಿ ಕೆಲವು ವಿವರಣೆಯನ್ನು ಪೀಠಿಕೆಯಲ್ಲಿ ಹೇಳಬೇಕಾಗುವುದು; ಉದಾಹರಣಾರ್ಥವಾಗಿ ಘೋಷ ಯಾತ್ರೆ ಈ ಪಾಠವನ್ನು ಕಲಿಸುವುದಿದ್ದಾಗ ಪಾಂಡವರ ವನವಾಸದ ವೃತ್ತಾಂತವನ್ನು ಪಾಠದ ಪ್ರಾರಂಭಕ್ಕೆ ಹೇಳಬೇಕಾಗುವುದು. ಒಟ್ಟಿನ ಮೇಲೆ ಕಲಿಸತಕ್ಕ ಹೊಸ ವಿಷಯಗಳಿಗೆ ಸಂಬಂಧಪಟ್ಟ ವಿಷಯಗಳು ಪೀಠಿಕೆಯಲ್ಲಿ ಬರತಕ್ಕದ್ದೆಂದು ಹೇಳಿದರೆ ಶಿಕ್ಷಕರು ಪೀಠಿಕೆಯ ಸ್ವರೂಪ ವನ್ನು ಸಮಯೋಚಿತವಾಗಿ ಕಲ್ಪಿಸಿಕೊಳ್ಳಬಹುದು.

ಅನುಭವವಿಲ್ಲದ ತರುಣ ಶಿಕ್ಷಕರು ಪೀಠಿಕೆಗಾಗಿ ಬಹಳ ಕಾಲವನ್ನು ಕಳೆಯುವರು. ಆದರಿಂದ ಪಾಠದ ಮಹತ್ತ್ವದ ವಿಷಯ ಗಳಿಗೆ ವೇಳೆಯು ಉಳಿಯುವುದಿಲ್ಲ. ಸಾಧಾರಣವಾಗಿ ಇಡೀ ವೇಳೆಯ ೧/೮ ಭಾಗವನ್ನು ಪೀಠಿಕೆಯಲ್ಲಿ ಕಳೆಯಬಹುದು.

**ಪಾಠದ ಭಾಗಗಳೂ ಉಪಭಾಗಗಳೂ, ವಿವರಣೆಯೂ:—** ಉಪೋದ್ಘಾತದ ಪ್ರಶ್ನೆಗಳೂ ವಿವರಣೆಯೂ ಮುಗಿದ ಮೇಲೆ ಕಲಿಸತಕ್ಕ ವಿಷಯದ ಭಾಗಗಳನ್ನು ಕ್ರಮಕ್ರಮವಾಗಿ ವಿವರಿಸುತ್ತಹೋಗಬೇಕು. ಈ ಪ್ರಸಂಗದಲ್ಲಿ ಶಿಕ್ಷಕನು ತಾನು ಕಲಿಸತಕ್ಕ ವಿಷಯದ ಮುಖ್ಯ ಮುಖ್ಯ ಭಾಗಗಳು ಯಾವವು; ಒಂದೊಂದು ಭಾಗದ ಉಪಭಾಗಗಳು ಯಾವವು, ಒಂದು ಭಾಗಕ್ಕೂ ಅದರ ಮುಂದಿನ ಭಾಗಕ್ಕೂ ಸಂಬಂಧ ವೇನು; ಪ್ರತಿ ಒಂದು ಭಾಗವನ್ನು ಕಲಿಸಲಿಕ್ಕೆ ಯಾವ ಸಾಧನಗಳು (ಚಿತ್ರಗಳು, ನಕಾಶಗಳು, ಮಾಡೆಲುಗಳು, ಪ್ರಶ್ನೆಗಳು) ಬೇಕಾಗು ವುವು; ಈ ಮೊದಲಾದ ಸಂಗತಿಗಳನ್ನು ಬಹು ಸೂಕ್ಷ್ಮವಾಗಿ ವಿಚಾರಮಾಡಿ ಗೊತ್ತುಮಾಡಿಟ್ಟುಕೊಳ್ಳಬೇಕು. ಒಂದು ಭಾಗವು ಮುಗಿದ ಕೂಡಲೆ ಮತ್ತೊಂದು ಭಾಗವು ಸಹಜವಾಗಿ ಬಂದಿರಬೇಕು; ಆದರಿಂದ ಹುಡುಗರಿಗೆ ವಿಷಯವು ಚನ್ನಾಗಿ ತಿಳಿದು ಇಡೀ ಪಾಠವು ಅವರ ನೆನಪಿನಲ್ಲಿ ಉಳಿಯುವುದು. ಕೃತ್ರಿಮ ರಚನೆಯಿಂದ ಪಾಠವು ಹುಡುಗರಿಗೆ ತಿಳಿಯದೆ ದುರ್ಲಕ್ಷ್ಯಮಾಡಲಿಕ್ಕೆ ಕಾರಣವಾಗುವುದು; ವಿಷಯಗ್ರಹಣವು ಸುಲಭವಾಗಿ ಆಗುವುದಿಲ್ಲ; ಬುದ್ಧಿಗೆ ಸಂಸ್ಕಾರವು

ಆಗುವುದಿಲ್ಲ; ಬುದ್ಧಿಸಂಸ್ಕಾರವು ಒಂದು ಕ್ರಮಕ್ಕನುಸರಿಸಿ ಹೇಳಿದರೆ ಮಾತ್ರ ಬೆಳೆಯುವುದು. ಉದಾಹರಣಾರ್ಥವಾಗಿ ತ್ರೈರಾಶಿಕದ ಪಾಠವನ್ನು ಕಲಿಸಬೇಕಾಗಿದೆ ಎಂದು ತಿಳಿಯುವ. ಈ ಪಾಠದಲ್ಲಿಯ ಮುಖ್ಯ ಭಾಗಗಳ ಸಹಜವಾದ ಕ್ರಮವು ಯಾವುದೆಂದರೆ ಶಿಕ್ಷಕನು ಮೊದಲು ಗುಣೋತ್ತರವೆಂದರೇನೆಂಬುದನ್ನು ಹುಡುಗರಿಗೆ ತಿಳಿಸಿಹೇಳಬೇಕು; ಆ ಬಳಿಕ ಎರಡು ಗುಣೋತ್ತರಗಳ ಸಮತ್ವಕ್ಕೆ ಪ್ರಮಾಣವೆನ್ನುತ್ತಾರೆಂಬುದನ್ನು ತಿಳಿಸಿ ಹೇಳಬೇಕು; ಆ ಬಳಿಕ ಪ್ರಮಾಣದಲ್ಲಿರುವ ನಾಲ್ಕು ಪದಗಳಲ್ಲಿ ಬೇಕಾದ ಮೂರು ಪದಗಳನ್ನು ಕೊಟ್ಟರೆ ನಾಲ್ಕನೆಯ ಪದವನ್ನು ತೆಗೆಯಲಿಕ್ಕೆ ಬರುತ್ತದೆ ಎಂಬುದನ್ನು ತಿಳಿಸಿ ಕೊಡಬೇಕು. ಆ ತರುವಾಯ ವ್ಯವಹಾರದ ಉದಾಹರಣೆಗಳು ಪ್ರಮಾಣಕ್ಕೆ ಹೇಗೆ ಸಂಬಂಧಪಟ್ಟಿರುವುವು, ಎಂಬುದನ್ನು ಅನೇಕ ಉದಾಹರಣೆಗಳಿಂದ ಮನವರಿಕೆ ಮಾಡಿಕೊಡಬೇಕು. ಕಟ್ಟಕಡೆಗೆ ತ್ರೈರಾಶಿಕವೆಂದರೇನೆಂಬುದನ್ನು ಹೇಳಿ ಅದನ್ನು ಬರೆಯುವ ಕ್ರಮವನ್ನೂ ಉತ್ತರವನ್ನು ತೆಗೆಯುವ ರೀತಿಯನ್ನೂ ತಿಳಿಸುವುದು. ಹೀಗೆ ಮಾಡದೆ ಒಮ್ಮೆಲೇ ತ್ರೈರಾಶಿಕವನ್ನು ಹೇಗೆ ಬರೆಯಬೇಕೆಂಬುದನ್ನು ಹೇಳಿ ಆಬಳಿಕ ಗುಣೋತ್ತರ ಪ್ರಮಾಣ ಅಂದರೇನೆಂಬುದನ್ನು ತಿಳಿಸುವ ಪ್ರಯತ್ನ ಮಾಡಿದರೆ ಹುಡುಗರಿಗೆ ಪಾಠದ ಕ್ರಮವಾದ ಕಲ್ಪನೆಯು ಆಗುವುದಿಲ್ಲ.

ಪಾಠದ ಒಟ್ಟು ಕಾಲದಲ್ಲಿ ಪೀಠಿಕೆಯ ಕಾಲವು ಹೋಗಲಾಗಿ ಉಳಿದ ಕಾಲವನ್ನು ಭಾಗೋಪಭಾಗಗಳು ಹಾಗು ಉಪಸಂಹಾರ ಇವುಗಳಲ್ಲಿ ವ್ಯವಸ್ಥೆಯಿಂದ ಹಂಚಿ ಮೊದಲೇ ಗೊತ್ತುಮಾಡಿಟ್ಟುಕೊಂಡಿರಬೇಕು. ಇಲ್ಲದಿದ್ದರೆ ಮಾತಿನ ಓಘದಲ್ಲಿ ಕಲಿಸತಕ್ಕ ವಿಷಯವು ಪೂರ್ಣವಾಗದೆ ವೇಳೆಯು ಮುಗಿದುಹೋಗುವ ಸಂಭವವಿರುವುದು.

**ಪಾಠದ ಸಾಧನಗಳು:—**ಈ ವಿಷಯವಾಗಿ ಮುಂದಿನ ಪ್ರಕರಣಗಳಲ್ಲಿ ಸ್ವತಂತ್ರವಾಗಿ ವಿವೇಚನೆಯನ್ನು ಮಾಡತಕ್ಕದ್ದಿರುವುದರಿಂದ ಇಲ್ಲಿ ಬರೆಯುವ ಆವಶ್ಯಕತೆಯು ಇರುವುದಿಲ್ಲ.

**ಜ್ಞಾನದ ಉಪಯೋಗ:—** ಕಲಿಸಿದ ಜ್ಞಾನದ ಉಪಯೋಗ ಮಾಡುವುದಕ್ಕೆ ಸಾಕಷ್ಟು ಅವಕಾಶವು ಹುಡುಗರಿಗೆ ದೊರಕಲಿಕ್ಕೆ ಬೇಕು. ಆ ಪ್ರಕಾರ ಅವಕಾಶವು ದೊರೆಯದಿದ್ದರೆ ಅದು ಪಾಠದ ಒಂದು ದೋಷವೆಂದು ತಿಳಿಯಬೇಕು. ವಾಚನ ಪಾಠವು ನಡೆದಾಗ ಎಷ್ಟೋ ಶಿಕ್ಷಕರು ಪಾಠದ ಎಲ್ಲ ವೇಳೆಯನ್ನು ಸ್ಪಷ್ಟೀಕರಣದಲ್ಲಿ ಕಳೆದು ಬಿಡುತ್ತಾರೆ. ಉಳಿದ ನಾಲ್ಕಾರು ನಿಮಿಷಗಳಲ್ಲಿ ಆ ಪಾಠವನ್ನು ಅಲ್ಲಿ ಇಲ್ಲಿ ಮೂರು ನಾಲ್ಕು ಹುಡುಗರಿಂದ ಓದಿಸಿ ಪಾಠವನ್ನು ಮುಗಿಸಿ ಬಿಡುವರು. ಅಂಕಗಣಿತದ ಪಾಠವು ನಡೆದಿರುವಾಗ ನಿಯಮವನ್ನು ತಿಳಿಸಿಕೊಡುವುದರಲ್ಲಿಯೇ ಬಹಳ ವೇಳೆಯನ್ನು ಕಳೆಯುವುದರಿಂದ ಅಭ್ಯಾಸದ ಸಲುವಾಗಿ ಉದಾಹರಣೆಗಳನ್ನು ಹೇಳಿ ಮಾಡಿಸಲಿಕ್ಕೆ ಹೊತ್ತೇ ಉಳಿಯುವುದಿಲ್ಲ.

**ಶಿಕ್ಷಕನ ಭಾಷೆ:—** ಶಿಕ್ಷಕನ ಭಾಷೆಯು ಶಿಕ್ಷಣಕ್ಕೆ ಬಹಳ ಸಹಕಾರಿಯಾದದ್ದು. ಶಿಕ್ಷಕನ ವಿಚಾರಗಳು ಮಕ್ಕಳಿಗೆ ತಿಳಿಯಲಿಕ್ಕೆ ಮುಖ್ಯ ಸಾಧನವಾದದ್ದು. ಆದುದರಿಂದ ಶಿಕ್ಷಕರು ಅಚ್ಚ ತಿಳಿಗನ್ನಡದಲ್ಲಿ ಲಲಿತವಾಗಿಯೂ ಸರಳವಾಗಿಯೂ ಮಾತಾಡಬೇಕು. ಶಿಕ್ಷಕರು ತೊದಲುವುದರಿಂದ ಅಥವಾ ತಡವರಿಸುವುದರಿಂದ ಮಕ್ಕಳ ಮನಸಿನ ಅವಧಾನವು ಕೆಟ್ಟುಹೋಗುವುದು. ಅವರಿಗೆ ವಿಷಯಜ್ಞಾನವಾಗುವುದಿಲ್ಲ. ಶಿಕ್ಷಕನು ಬಹಳ ಮಿತಭಾಷಿಯಾಗಿರಬೇಕು. ಅಲ್ಪ ವಿಷಯವನ್ನು ತಿಳಿಸಿ ಹೇಳಲಿಕ್ಕೆ ಉದ್ದುದ್ದ ಭಾಷಣಗಳನ್ನು ಮಾಡಬಾರದು. ವಾಕ್ಯಗಳು ಸರಳವಾಗಿರಬೇಕಲ್ಲದೆ ಸಣ್ಣವಾಗಿಯೂ ಇರಬೇಕು; ಧ್ವನಿಯು ಮಿತಿಮೀರಿ ದೊಡ್ಡದಿರಬಾರದು. ಕೂಗಿ ಕೂಗಿ ಮಾತಾಡುವುದರಿಂದ ಮಕ್ಕಳ ಮನಸ್ಸು ಚದರಿಹೋಗುವುದು; ಶಿಕ್ಷಕನಿಗೆ ಮಾತ್ರ ವ್ಯರ್ಥವಾಗಿ ಹೆಚ್ಚು ಶ್ರಮವಾಗುವುದು.

**ಕಲಿಸುವ ಮೂಲತತ್ವಗಳು:—** ಶಿಕ್ಷಕನು ಯಾವದೊಂದು ಪಾಠವನ್ನು ಕಲಿಸುತ್ತಿರುವಾಗ ಕೆಳಗೆ ಕೊಟ್ಟ ಹತ್ತು ಮೂಲತತ್ವಗಳನ್ನು ಯಾವಾಗಲೂ, ಲಕ್ಷ್ಯದಲ್ಲಿಟ್ಟು ಅವುಗಳನ್ನು ತನ್ನ ಕೆಲಸದಲ್ಲಿ

ಉಪಯೋಗಿಸುತ್ತಿರಬೇಕು. ಆ ತತ್ವಗಳಿಗನುಸರಿಸಿ ಕಲಿಸುವ ಶಿಕ್ಷಕನ ಶಿಕ್ಷಣದಲ್ಲಿ ಬಹುಶಃ ತಪ್ಪುಗಳಾಗುವುದಿಲ್ಲ. ಆ ಮೂಲತತ್ವಗಳು ಯಾವುವೆಂದರೆ—

೧. **ಇಂದ್ರಿಯಗಳ ದ್ವಾರದಿಂದಲೇ ಶಿಕ್ಷಣವನ್ನು ಕೊಡತಕ್ಕದ್ದು :—** ಈ ವಿಷಯವು ಹಿಂದೆ ಬೌದ್ಧಿಕ ಶಿಕ್ಷಣದ ಪ್ರಕರಣದಲ್ಲಿ ವಿಶೇಷವಾಗಿ ವಿವರಿಸಲ್ಪಟ್ಟಿರುವುದು ; ಆದಕಾರಣ ಇಲ್ಲಿ ಮತ್ತೆ ವಿವರಿಸುವ ಆವಶ್ಯಕತೆಯು ಇಲ್ಲ.

೨. **ಮೊದಲು ಅವಲೋಕನ, ತರುವಾಯ ವಿಚಾರ, ಆ ಬಳಿಕ ಸ್ಮರಣ :—** ಈ ಕ್ರಮವನ್ನು ಅನುಸರಿಸತಕ್ಕದ್ದು. ಹೀಗೆ ಮಾಡುವುದರಿಂದ ಇಂದ್ರಿಯಗಳ ಶಕ್ತಿಗಳೂ ವಿಚಾರಸಾಮರ್ಥ್ಯವೂ ಜಾಗೃತವಾಗಿ ವಿಕಾಸಹೊಂದುವುವು. ಪುಸ್ತಕದೊಳಗಿನ ಸಂಗತಿಗಳನ್ನು ಬರಿಯ ಪಾಠ ಮಾಡಿ ಕಲಿತದ್ದಕ್ಕಿಂತ ಈ ರೀತಿಯಿಂದ ಕಲಿತ ಸಂಗತಿಗಳು ಹುಡುಗರ ಮನಸ್ಸಿನಲ್ಲಿ ಹೆಚ್ಚು ದೃಢವಾಗಿ ನಿಲ್ಲುವುವು. ಅವಲೋಕನವಿಲ್ಲದೆ ವಿಚಾರಮಾಡದೆ ಸುಮ್ಮನೆ ಪಾಠ ಮಾಡತೊಡಗಿದರೆ ಆ ಕೆಲಸವು ಮಕ್ಕಳಿಗೆ ಬಹಳ ಜಡವೆನಿಸುವುದು; ಬೇಸರವನ್ನುಂಟು ಮಾಡುವುದು; ಮತ್ತು ಹಾಗೆ ನೆನಪಿಟ್ಟ ಸಂಗತಿಗಳಿಂದ ಮನಸು ವಿಕಾಸ ಹೊಂದುವುದಿಲ್ಲ ಆದಕಾರಣ ಮಾಡಿದ ಶ್ರಮವು ವ್ಯರ್ಥವಾಗುವುದು. ಮೇಲೆ ಹೇಳಿದ ಕ್ರಮವನ್ನು ಅನುಸರಿಸುವಾಗ ಶಿಕ್ಷಕನು ಅವರಿಗೆ ಸಹಾಯ್ಯಕನಾಗಿರಬೇಕು. ಅವನ ಪ್ರಶ್ನೆಗಳಿಂದ ಅವರಿಗೆ ಅವಲೋಕನದ ಮಾರ್ಗವೂ ವಿಚಾರದ ಸರಣಿಯೂ ತಿಳಿಯಬೇಕು ; ನೆನಪಿಡತಕ್ಕ ಸಂಗತಿಗಳನ್ನು ಅವನು ಸಂಕ್ಷೇಪವಾಗಿ ಕಪ್ಪು ಹಲಗೆಯ ಮೇಲೆ ಬರೆಯಬೇಕು.

೩. **ವಿದ್ಯಾರ್ಥಿಗಳಿಗೆ ಆದಷ್ಟು ಕಡಿಮೆ ಹೇಳಬೇಕು:—** ಶಿಕ್ಷಕನು ತೀರ ಸ್ವಲ್ಪಮಾತಾಡಿ ವಿದ್ಯಾರ್ಥಿಗಳಿಗೆ ಸಹಾಯ್ಯಮಾಡಿ ಶಕ್ಯವಿದ್ದಷ್ಟುಮಟ್ಟಿಗೆ ಹೊರಡಿಸಲಿಕ್ಕೆ ಯತ್ನಮಾಡತಕ್ಕದ್ದು. ಶಿಕ್ಷಕನು ಹುಡುಗರಿಗೆ ಅನೇಕ ಸಂಗತಿಗಳನ್ನು ಹೇಳಿ, ಅವರ ನೆನಪಿನಲ್ಲಿ ಇಡಿಸು

ವುದು ಸರಿಯಾದ ಶಿಕ್ಷಣವಲ್ಲ; ವಿಚಾರಕ್ಕೆ ಆಸ್ಪದಕೊಟ್ಟು ಅವರ ವಿಚಾರಗಳನ್ನು ಕೇಳಿಕೊಳ್ಳುವುದು, ಅವರ ತಪ್ಪುಗಳನ್ನು ತಿದ್ದುವುದು ಶಿಕ್ಷಣದಲ್ಲಿ ಬಹಳ ಮಹತ್ವದ ಸಂಗತಿಯು. ಇದರಿಂದ ಯಾವದೊಂದು ಸಂಗತಿಯ ಬಗೆಗೆ ಅವರಿಗೆ ಎಷ್ಟರಮಟ್ಟಿಗೆ ವಿಚಾರಮಾಡಲಿಕ್ಕೆ ಬರುವು ದೆಂಬ ಸಂಗತಿಯು ಶಿಕ್ಷಕನಿಗೆ ತಿಳಿದಂತಾಗುವುದು. ವಿದ್ಯಾರ್ಥಿಯು ಸಾಲೆಯಲ್ಲಿ ಕಲಿತ ಎಲ್ಲ ಸಂಗತಿಗಳನ್ನು ನೆನಪಿನಲ್ಲಿಟ್ಟುಕೊಳ್ಳುವುದರಿಂದ ವಿಶೇಷ ಲಾಭವಿಲ್ಲ. ಆದರೆ ಅವನಿಗೆ ವಿಚಾರಮಾಡುವ ರೂಢಿಯು ಹತ್ತಿದರೆ ಅವನು ವ್ಯವಹಾರಚತುರನೂ ಒಳ್ಳೆ ನಾಗರಿಕನೂ ಆಗುವನು.

**೪. ಕೃತಿಗಳನ್ನು ಮಾಡುತ್ತಾ ಪಾಠವನ್ನು ಕಲಿಯಲಿ:—** ವಿದ್ಯಾರ್ಥಿಗಳು ಪಾಠವನ್ನು ಕಲಿಯುವಾಗ ಆ ಪಾಠಕ್ಕೆ ಸಂಬಂಧಿಸಿದ ಯಾವದೊಂದು ಕೃತಿಯನ್ನು ಮಾಡುವುದರಿಂದ ಆ ಪಾಠದ ಯಥಾರ್ಥ ಜ್ಞಾನವಾಗಲಿಕ್ಕೆ ಹೆಚ್ಚು ಸಹಾಯ್ಯವಾಗುವುದು. ಈ ವಿಷಯವಾಗಿ ಹಿಂದೆ ಕೃತಿ ಪ್ರೇಮ ಹಾಗು ಆಟ ಈ ಪ್ರಕರಣಗಳಲ್ಲಿ ವಿವರವು ಮಾಡಲ್ಪಟ್ಟಿರುವುದು.

**೫. ಗೊತ್ತಿದ್ದ ಸಂಗತಿಯಿಂದ ಗೊತ್ತಿಲ್ಲದ ಸಂಗತಿಯ ಕಡೆಗೆ ಸಾಗುವುದು:—** ಈ ತತ್ವಕ್ಕನುಸರಿಸಿಯೇ ಪಾಠದ ಪ್ರಾರಂಭ ದಲ್ಲಿ ಪೀಠಿಕೆಯನ್ನು ಅಥವಾ ಉಪೋದ್ಘಾತವನ್ನು ಮಾಡಬೇಕಾಗು ವುದು. ಈ ವಿಷಯದ ವಿವರವು ಹಿಂದೆ ಬಂದದೆ. ಹೊಸದಾಗಿ ಯಾವ ದೊಂದು ಸಂಗತಿಯನ್ನು ಕಲಿಸುವುದಿದ್ದಾಗ ಈ ತತ್ವವನ್ನು ಅನುಸರಿಸ ಬೇಕಾಗುವುದು. ಉದಾಹರಣಾರ್ಥವಾಗಿ ಗುಣಾಕಾರದ ಪ್ರಾರಂಭ ವನ್ನು ಬೇರೀಜಿನ ಉದಾಹರಣೆಗಳಿಂದ ಕಲಿಸಬೇಕು. ದಶಾಂಶ ಅಪೂರ್ಣಾಂಕಗಳ ಸಂಖ್ಯಾಲೇಖನವನ್ನು ಪೂರ್ಣಾಂಕಗಳ ಸಂಖ್ಯಾ ಲೇಖನದ ಸಹಾಯ್ಯದಿಂದ ಕಲಿಸಿದರೆ ಹುಡುಗರಿಗೆ ಸುಲಭವಾಗಿ ತಿಳಿಯುವುದು.

**೬. ವಿಶೇಷ ಉದಾಹರಣೆಗಳಿಂದ ಸಾಮಾನ್ಯ ನಿಯಮ ವನ್ನು ಕಲಿಸತಕ್ಕದ್ದು:—** ಉದಾಹರಣಾರ್ಥವಾಗಿ ಬೆಕ್ಕಿನ ಹಲ್ಲು

ಗಳನ್ನೂ ನಾಯಿಯ ಹಲ್ಲುಗಳನ್ನೂ ಆಕಳ ಹಲ್ಲುಗಳನ್ನೂ ತೋರಿಸುವುದು. ಬೆಕ್ಕಿನ ಹಲ್ಲುಗಳೂ ನಾಯಿಯ ಹಲ್ಲುಗಳೂ ಆಕಳ ಹಲ್ಲುಗಳಂತೆ ಇಲ್ಲ ಆದೇಕೆ? ಬೆಕ್ಕು ನಾಯಿಗಳು ಯಾವ ಆಹಾರವನ್ನು ತಿಂದು ಬದುಕುವುವು? ಆಕಳು ಏನನ್ನು ತಿನ್ನುವುದು? ಅಂದಮೇಲೆ ಮಾಂಸವನ್ನು ತಿನ್ನುವ ಪ್ರಾಣಿಗಳಿಗೆ ಎಂಥ ಹಲ್ಲುಗಳು ಇರುವುವು? ಇತ್ಯಾದಿ ಈ ಉದಾಹರಣೆಯಲ್ಲಿ ನಾಯಿ, ಬೆಕ್ಕು ಈ ಎರಡು ವಿಶೇಷ ಉದಾಹರಣೆಗಳಿಂದ ಸಾಮಾನ್ಯವಾಗಿ ಮಾಂಸಾಹಾರಿಯಾದ ಪ್ರಾಣಿಗಳ ವಿಷಯಕ್ಕೆ ಕಲಿಸಿದಂತಾಯಿತು. ಇದೇ ಉದ್ಗಾವಿಾ ಪದ್ಧತಿಯ ಶಿಕ್ಷಣವು ಅಥವಾ ವಿಗಮನ ಪದ್ಧತಿಯ ಶಿಕ್ಷಣವು ಎಂದು ಹಿಂದೆ ಹೇಳಿದೆ. ಈ ಪದ್ಧತಿಯನ್ನು ಅಂಕಗಣಿತ, ವ್ಯಾಕರಣ, ಸೃಷ್ಟಿಜ್ಞಾನ ಇತಿಹಾಸ, ಭೂಗೋಲ ಮೊದಲಾದ ವಿಷಯಗಳನ್ನು ಕಲಿಸುವಾಗ ಅನುಸರಿಸಬೇಕಾಗುವುದು.

೭. **ವಸ್ತುವಾಚಕದಿಂದ ಭಾವವಾಚಕಕ್ಕೆ ಸಾಗು :—** ಚಿಕ್ಕ ಮಕ್ಕಳಿಗೆ ವಸ್ತುಗಳ ಜ್ಞಾನವು ಸುಲಭವಾಗಿ ಆಗುವಂತೆ ಅವುಗಳ ಗುಣಧರ್ಮಗಳನ್ನು ತಿಳಕೊಂಡು ಅವುಗಳ ವಿಷಯವಾಗಿ ವಿಚಾರ ಮಾಡುವುದು ಸುಲಭವಾಗುವುದಿಲ್ಲ. ಅಂಕೆಗಳು, ಸಂಖ್ಯೆಗಳು, ವ್ಯಾಕರಣದ ವಿಷಯಗಳು ವಸ್ತುಗಳ ಗುಣಧರ್ಮಗಳಿಗೆ ಸಂಬಂಧಿಸಿದ ವಿಷಯಗಳಾಗಿವೆ. ಆದಕಾರಣ ಅಂಕೆಯ ಪಾಠಗಳನ್ನು ಕಲಿಸುವಾಗ ಹುಡುಗರ ಮುಂದೆ ವಸ್ತುಗಳನ್ನು ಇರಿಸಿ ಕಲಿಸಬೇಕಾಗುವುದು. ಉದಾಹರಣಾರ್ಥವಾಗಿ ನಾಲ್ಕರಲ್ಲಿ ಮೂರು ಕೂಡಿಸಿದರೆ ಏಳು ಆಗುವುವೆಂಬ ಸಂಗತಿಯನ್ನು ಕಲಿಸುವಾಗ ಹುಡುಗರ ಮುಂದೆ ನಾಲ್ಕು ಗುಂಡುಗಳನ್ನು ಮೂರು ಗುಂಡಗಳನ್ನು ಬೇರೆ ಬೇರೆ ಇಡಿಸಿ ಅವೆರಡು ಗುಂಪುಗಳನ್ನು ಕೂಡಿಸಿ ಎಣಿಸಲಿಕ್ಕೆ ಹಚ್ಚುವುದರಿಂದ ಏಳು ಗುಂಡುಗಳಾದವೆಂಬುದು ಅವರಿಗೆ ಸುಲಭವಾಗಿ ಮನಸವರಿಕೆಯಾಗುವುದು. ಇದೇ ಪ್ರಕಾರ ಒಡವೆಯ ಹೆಸರಿಗೆ ನಾಮವೆನ್ನುತ್ತಾರೆ. ಈ ವ್ಯಾಖ್ಯೆಯನ್ನು ಕಲಿಸುವಾಗ ಹುಡುಗರ ಮುಂದೆ ಇರುವ ಕಾಗದ, ಪುಸ್ತಕ,

ಪಾಟಿ, ಮೇಜು, ಈ ಮುಂತಾದ ವಸ್ತುಗಳನ್ನು ತೋರಿಸಿ ಅವುಗಳ ಹೆಸರುಗಳನ್ನು ಕೇಳಿ ಕಪ್ಪು ಹಲಗೆಯ ಮೇಲೆ ಬರೆದು ಈ ಹೆಸರುಗಳು ನಾವುವೆಂತಲೂ ಒಡವೆಗಳು ಬೇರೆ, ಒಡವೆಯ ಹೆಸರುಗಳು ಬೇರೆ ಎಂತಲೂ ತಿಳಿಸಿಹೇಳಿದರೆ ಆ ವ್ಯಾಖ್ಯೆಯು ಸ್ಪಷ್ಟವಾಗಿ ತಿಳಿಯುವುದು. ಇದೇ ಕಾರಣದ ಸಲುವಾಗಿ ಭೂಗೋಲದ ಪಾಠಗಳಲ್ಲಿ ನಕಾಶಗಳನ್ನೂ ಮಾಡೆಲ್‌ಗಳನ್ನೂ ಚಿತ್ರಗಳನ್ನೂ ಉಪಯೋಗಿಸಲಿಕ್ಕೆಬೇಕು. ಮತ್ತು ಹುಡುಗರನ್ನು ಶಾಲೆಯ ಹೊರಗೆ ಕರಕೊಂಡುಹೋಗಿ ಅನೇಕ ಸಂಗತಿಗಳನ್ನು ತೋರಿಸಬೇಕು. ಮೇಲಿನ ಇಯತ್ತೆಗಳಲ್ಲಿ ಕಲಿಯಬೇಕಾಗಿರುವ ಭೂಗೋಲದ ಅನೇಕ ಸಂಗತಿಗಳ ಜ್ಞಾನವು ಕೆಳಗಿನ ಇಯತ್ತೆಯಲ್ಲಿ ಪ್ರವಾಸದಿಂದ ಪ್ರತ್ಯಕ್ಷವಾಗಿ ನೋಡಿದ ಸಂಗತಿಗಳ ಜ್ಞಾನವನ್ನು ವಿಶೇಷವಾಗಿ ಅವಲಂಬಿಸಿರುವುದು.

೮. **ಪಾಠವು ಚಿತ್ತಾಕರ್ಷಕವಾಗುವಂತೆ ಪ್ರಯತ್ನಮಾಡತಕ್ಕದ್ದು**— ಈ ನಿಯಮವೂ ಬಹಳ ಮಹತ್ವವಾದದ್ದು. ಹುಡುಗರ ಲಕ್ಷ್ಯವು ಪಾಠದ ಕಡೆಗೆ ಸ್ವಾಭಾವಿಕವಾಗಿಯೇ ಹತ್ತುವಂತೆ ಮಾಡತಕ್ಕದ್ದು. ಬಲಾತ್ಕಾರದಿಂದ ಅದು ಎಂದೂ ಹತ್ತಲಾರದು. ವಿಷಯಕ್ಕೆ ಸುಲಭರೂಪವನ್ನು ಕೊಡುವುದರಿಂದಲೂ ಮನಸ್ಸನ್ನು ಎಳೆದುಕೊಳ್ಳುವಂಥ ಭಾಷೆಯಿಂದಲೂ, ಗಂಭೀರವಾದ ಧ್ವನಿಯಿಂದಲೂ ತಕ್ಕ ದೃಷ್ಟಾಂತಗಳಿಂದಲೂ, ಹುಡುಗರು ಸ್ವಾಭಾವಿಕವಾಗಿಯೇ ಪಾಠದ ಕಡೆಗೆ ಲಕ್ಷ್ಯಕೊಡುವರು. ಈ ಎಲ್ಲ ಸಾಧನಗಳಿಂದ ಒಮ್ಮೆ ಅವರ ಮನಸ್ಸಿನಲ್ಲಿ ಪಾಠದ ಅಭಿರುಚಿಯು ಉತ್ಪನ್ನವಾದರೆ ತೀರಿತು. ಅವರ ಲಕ್ಷ್ಯವು ಪಾಠವನ್ನು ಬಿಟ್ಟು ಅತ್ತಿತ್ತ ಕದಲುವುದಿಲ್ಲ. ಜಿಜ್ಞಾಸೆಯಿಂದ ಅನೇಕ ತರದ ಪ್ರಶ್ನೆಗಳನ್ನು ತಾವಾಗಿಯೇ ಕೇಳಹತ್ತುವರು. ಆ ಪ್ರಶ್ನೆಗಳಿಗೆ ತಕ್ಕ ಉತ್ತರಗಳನ್ನು ಕೊಟ್ಟು ಅವರಿಗೆ ಸಮಾಧಾನವನ್ನುಂಟುಮಾಡುವುದರಿಂದ ಕಲಿಯುವುದರಲ್ಲಿ ಅಭಿರುಚಿಯು ಉತ್ಪನ್ನವಾಗುವುದು. ಅವರ ಪ್ರಶ್ನೆಗಳಿಗೆ ಸರಿಯಾದ ಉತ್ತರವು ದೊರಕದಿದ್ದರೆ ಅವರ ಉತ್ಸಾಹವು ಕುಗ್ಗಿಹೋಗುವುದು.

ಈ ತತ್ವಕ್ಕೆ ಅನುಸಾರವಾಗಿ ಪಾಠವನ್ನು ಸಾಗಿಸುವಾಗ ಶಿಕ್ಷಕರು ತಾವಾಗಿಯೇ ಯಾವ ಸಂಗತಿಯನ್ನು ಹೇಳದೆ, ಮೊದಲು ಹುಡುಗರಿಂದ ಕೂಡಲೆ ಉತ್ತರ ಹೊರಡುವಂಥ ಸಣ್ಣಸಣ್ಣ ಪ್ರಶ್ನೆಗಳನ್ನು ಕೇಳಬೇಕು; ಅದಕ್ಕೆ ಉತ್ತರವು ದೊರೆತಕೂಡಲೆ ಅದಕ್ಕೆ ಸಂಬಂಧಿಸಿದ ಮತ್ತೊಂದು ಪ್ರಶ್ನೆಯನ್ನು ಕೇಳಬೇಕು; ಈ ರೀತಿಯ ಪ್ರಶ್ನೋತ್ತರಗಳಿಂದ ಕಲಿಸತಕ್ಕ ಸಂಗತಿಯು ಹುಡುಗರ ಮನಸಿಗೆ ತನ್ನಿಂದ ತಾನೇ ಹೊಳೆಯುವಂತೆ ಮಾಡತಕ್ಕದ್ದು. ಕಡೆಗೆ ಸಂಪೂರ್ಣವಾದ ಸಂಗತಿಯನ್ನು ಅವರಿಗೇ ವಿವರಿಸಿ ಹೇಳಲಿಕ್ಕೆ ಹಚ್ಚಬೇಕು.

೯. **ಸ್ವಂತ ಶಿಕ್ಷಣಕ್ಕೆ ಉತ್ತೇಜನವನ್ನು ಕೊಡಿರಿ:—**ಪರರು ಹೇಳಿದ ಸಂಗತಿಗಳಿಗಿಂತ ನಮ್ಮ ಅನುಭವಕ್ಕೆ ಬಂದ ಸಂಗತಿಗಳು ಬಹುಕಾಲ ಸ್ಥಿರವಾಗಿ ಲಕ್ಷದಲ್ಲಿ ಉಳಿಯುವವು. ಈ ಮಾತನ್ನು ಲಕ್ಷದಲ್ಲಿಟ್ಟು ವಿದ್ಯಾರ್ಥಿಗಳು ಹೊಸ ಸಂಗತಿಗಳನ್ನು ತಾವಾಗಿಯೇ ಅರಿತುಕೊಳ್ಳಲಿಕ್ಕೆ ಪ್ರಯತ್ನಮಾಡುವಂತೆ ಅವರಿಗೆ ತಕ್ಕ ಪ್ರಸಂಗಗಳನ್ನು ಒದಗಿಸಿಕೊಡಬೇಕು. ಸೂಚಕ ಪ್ರಶ್ನೆಗಳಿಂದ ಅವರ ಶೋಧಕ ಬುದ್ಧಿಯನ್ನು ಜಾಗೃತಗೊಳಿಸಬೇಕು. ಡಾ. ಮಾಂಟಿಸೋರಿ ಎಂಬ ಶಿಕ್ಷಣ ಸುಧಾರಕಳು ಸಿದ್ಧಪಡಿಸಿದ ಆಟಿಗೆಗಳು ಮಕ್ಕಳ ಸ್ವಂತ ಶಿಕ್ಷಣಕ್ಕೆ ಆಸ್ಪದಕೊಡುವಂಥವೇ ಇರುತ್ತವೆ.

**೧೦. ಸೃಷ್ಟಿಕ್ರಮಕ್ಕೆ ಅನುಸರಿಸಿ ಶಿಕ್ಷಣವನ್ನು ಕೊಡತಕ್ಕದ್ದು:—**

(ಅ) ಸೃಷ್ಟಿಯಲ್ಲಿ ಪ್ರಾಣಿವನಸ್ಪತಿಗಳ ಬೆಳವಣಿಗೆಯು ಹೇಗೆ ಕ್ರಮಕ್ರಮವಾಗಿ ಆಗುವುದೋ ಅದೇ ನಿಯಮಕ್ಕನುಸಾರವಾಗಿ ಚಿಕ್ಕಮಕ್ಕಳ ಮನಸ್ಸಿನ ಶಕ್ತಿಗಳನ್ನು ಕ್ರಮಕ್ರಮವಾಗಿ ವಿಕಾಸಗೊಳಿಸಿ ಪರಿಪೂರ್ಣಸ್ಥಿತಿಗೆ ಒಯ್ಯತಕ್ಕದ್ದು.

(ಬ) ಈ ಸೃಷ್ಟಿಯಲ್ಲಿ ಪ್ರಾಣಿಗಳ ಶಕ್ತಿಗಳೂ ಬುದ್ಧಿಯೂ ಅಭ್ಯಾಸದಿಂದಲೂ ಉಪಯೋಗದಿಂದಲೂ ವಿಕಾಸಹೊಂದುತ್ತಿರುವು

ದನ್ನು ನಾವು ನೋಡುತ್ತೇವೆ. ಶಿಕ್ಷಕನು ಈ ಸಂಗತಿಯನ್ನು ಲಕ್ಷವಲ್ಲಿಟ್ಟು ಚಿಕ್ಕಮಕ್ಕಳ ಅವಯವಗಳನ್ನೂ ಬುದ್ಧಿಯನ್ನೂ ಉಪಯೋಗಕ್ಕೆ ಹಚ್ಚಿ-ಅಭ್ಯಾಸದಿಂದ ಅವುಗಳ ಶಕ್ತಿಯು ಬೆಳೆಯುವಂತೆ ಮಾಡತಕ್ಕದ್ದು.

**ಪಾಠದ ಟಿಪ್ಪಣಿ:—** ಇಲ್ಲಿಯ ವರೆಗೆ ಯಾವದೊಂದು ಪಾಠದ ಸಿದ್ಧತೆಯನ್ನು ಹೇಗೆ ಮಾಡಿಕೊಳ್ಳಬೇಕೆಂಬದನ್ನೂ ಯಾವ ತತ್ವಗಳಿಗನುಸರಿಸಿ ಕಲಿಸಬೇಕೆಂಬುದನ್ನೂ ಸಂಕ್ಷೇಪವಾಗಿ ವಿವರಿಸಿದಂತಾಯಿತು.

ಶಿಕ್ಷಕನು ಎಷ್ಟು ಬಹುಶ್ರುತನೂ ಪಂಡಿತನೂ ಆದಾಗ್ಯೂ ವರ್ಗಕ್ಕೆ ಕಲಿಸುವ ಪಾಠಗಳನ್ನು ಪ್ರತಿದಿವಸ ಆಲೋಚಿಸಿ ಸಿದ್ಧಮಾಡಿಕೊಂಡು ಹೋಗುವುದು ಅವಶ್ಯವಾದದ್ದು. ಈ ಪ್ರಕಾರ ಪೂರ್ವಸಿದ್ಧತೆಯಿಂದ ಕಲಿಸಿದರೆ ಕೆಲಸವು ಭರದಿಂದ ಸಾಗುವದು; ಹುಡುಗರ ನಡೆನುಡಿಗಳಲ್ಲಿ ತಿದ್ದುಪಾಟು ಆಗುವುದು. ಆಲಸ್ಯಕ್ಕೆ ಆಸ್ಪದವಿಲ್ಲದಂತಾಗುವದು. ಸಾರಾಂಶ, ಶಿಕ್ಷಣದ ನಿಜವಾದ ಉದ್ದೇಶವು ಈಡೇರುವುದು. ಆದಕಾರಣ ಪ್ರತಿ ಒಬ್ಬ ಶಿಕ್ಷಕನು ತಾನು ಕಲಿಸತಕ್ಕ ಪಾಠಗಳನ್ನು ಸ್ವತಃ ಆಲೋಚಿಸಿ ಟಿಪ್ಪಣಿಯನ್ನು ಸಿದ್ಧಮಾಡಿಕೊಂಡು ಕಲಿಸಲಿಕ್ಕೆ ಯತ್ನಮಾಡತಕ್ಕದ್ದು. ಆದರಿಂದ ಅವನಿಗೆ ತನ್ನ ಕೆಲಸದ ಅನುಭವವೂ, ಶಿಕ್ಷಣದ ಕಲೆಯಲ್ಲಿ ಕೌಶಲ್ಯವೂ ದೊರಕುವುವು.

**ಪಾಠದ ಟಿಪ್ಪಣಿಗಳೆಂದರೇನು?:—** ಕಲಿಸತಕ್ಕ ವಿಷಯವು ಯಾವದು? ಅದನ್ನು ಯಾವ ವಿದ್ಯಾರ್ಥಿಗಳಿಗೆ ಕಲಿಸಬೇಕಾಗಿರುವದು? ಅವರ ಸರಾಸರಿ ವಯಸ್ಸೆಷ್ಟು? ಅವರಿಗೆ ಆ ವಿಷಯದ ಸಂಬಂಧದಿಂದ ಪೂರ್ವಜ್ಞಾನವು ಎಷ್ಟಿರುವುದು? ಈಹೊತ್ತು ಕಲಿಸತಕ್ಕ ವಿಷಯದ ಮುಖ್ಯ ಉದ್ದೇಶವು ಯಾವುದು? ಆ ಉದ್ದೇಶವು ಈಡೇರುವಂತೆ ಹೇಳತಕ್ಕ ಸಂಗತಿಗಳನ್ನೆಲ್ಲ ಕ್ರಮದಿಂದ ಹೊಂದಿಕೆ ಮಾಡಿಕೊಂಡು ಒಂದೊಂದೇ ಸಂಗತಿಯನ್ನು ಯಾವ ಕ್ರಮದಿಂದ ಕಲಿಸತಕ್ಕದ್ದು?

ಯಾವ ಯಾವ ದೃಷ್ಟಾಂತಗಳನ್ನೂ ಯಾವ ಯಾವ ಉಪಕರಣಗಳನ್ನೂ ಉಪಯೋಗಿಸತಕ್ಕದ್ದು? ಪಾಠವನ್ನು ಆರಂಭಿಸುವುದು ಹೇಗೆ? ಮುಗಿಸುವುದು ಹೇಗೆ? ಇತ್ಯಾದಿ ಸಂಗತಿಗಳನ್ನು ಮುಂಚಿತವಾಗಿ ಆಲೋಚಿಸಿ ವ್ಯವಸ್ಥಿತವಾಗಿ ಬರೆದು ತಯಾರಿಸಿದ ಕಾಗದವೇ ಪಾಠದ ಟಿಪ್ಪಣಿ ಎಂದು ಹೇಳಲ್ಪಡುವುದು.

ಮೇಲೆ ಬರೆದ ಸಂಗತಿಗಳಿಂದ ಪಾಠದ ಟಿಪ್ಪಣಿಯಲ್ಲಿ ಯಾವ ಯಾವ ಸಂಗತಿಗಳು ಸಮಾವೇಶವಾಗಿರಬೇಕೆಂಬುದು ಗೊತ್ತಾಗುವದು. ಟಿಪ್ಪಣಿಯನ್ನು ಯಾರು ಓದಿದರೂ ಶಿಕ್ಷಕನು ಪಾಠವನ್ನು ಹೇಗೆ ಕಲಿಸುತ್ತಾನೆಂಬುದು ತಿಳಿಯುವಂತಿರಬೇಕು. ಕಲಿಸುವ ಶಿಕ್ಷಕನೇ ಪಾಠದ ಟಿಪ್ಪಣಿಯನ್ನು ಸಿದ್ಧಮಾಡಿಕೊಳ್ಳಬೇಕು. ಎರಡನೆಯವರು ಬರೆದ ಟಿಪ್ಪಣಿಗಳ ಸಹಾಯ್ಯದಿಂದ ಪಾಠವನ್ನು ಕಲಿಸಹೋದರೆ ಅದರಿಂದ ವಿದ್ಯಾರ್ಥಿಗಳಿಗೂ ಶಿಕ್ಷಕನಿಗೂ ಹಿತವಾಗುವ ಸಂಭವವಿಲ್ಲ.

ಪಾಠದ ಟಿಪ್ಪಣಿಯನ್ನು ಬರೆಯುವಾಗ ಸಾಧಾರಣವಾಗಿ ಐದು ಮೆಟ್ಟುಗಳನ್ನು ಕಲ್ಪಿಸಿಕೊಳ್ಳಬಹುದು. ಅವು ಬಹುಶಃ ಎಲ್ಲ ವಿಷಯಗಳಿಗೂ ಹತ್ತುವವು.

(೧) ಎಲ್ಲಕ್ಕೂ ಮೊದಲು, ಕಲಿಸತಕ್ಕ ಹೊಸ ಪಾಠದ ಉದ್ದೇಶವು ಹುಡುಗರಿಗೆ ಸ್ಪಷ್ಟವಾಗಿ ತಿಳಿಯುವಂತೆ ಪಾಠದ ಉಪೋದ್ಘಾತವನ್ನು ಮಾಡುವುದು. ಇದರಿಂದ ಇಂದು ಕಲಿಯತಕ್ಕ ಹೊಸ ಪಾಠದ ಬಗ್ಗೆ ಹುಡುಗರ ಮನಸ್ಸು ತಯಾರಾಗುವುದು. ಮತ್ತು ಹೊಸ ಪಾಠದ ಕಡೆಗೆ ಲಕ್ಷವು ಹತ್ತುವುದು. ಜಿಜ್ಞಾಸೆಯು ಜಾಗೃತವಾಗುವುದು.

(೨) ಕಲಿಸತಕ್ಕ ಹೊಸ ವಿಷಯದ ಭಾಗೋಪಭಾಗಗಳನ್ನು ಕ್ರಮವಾಗಿ ಒಂದೊಂದನ್ನೇ ವಿವರಿಸುವುದು.

(೩) ಹಿಂದೆ ಈ ವಿಷಯವಾಗಿ ಗೊತ್ತಾದ ಸಂಗತಿಗಳಿಗೂ ಈವೊತ್ತು ಗೊತ್ತು ಮಾಡಿಕೊಟ್ಟ ಸಂಗತಿಗಳಿಗೂ ಅವಶ್ಯ ವಿದ್ದರೆ ತುಲನೆಮಾಡಲಿಕ್ಕೆ ಹಚ್ಚಿ ಅವುಗಳಿಗೆ ತಳಕು ಹಾಕುವುದು. ಇದರಿಂದ ಹೊಸದಾಗಿ ಕಲಿತ ಸಂಗತಿಗಳು ಹುಡುಗರ ಮನಸಿನಲ್ಲಿ ಹೆಚ್ಚು ದೃಢವಾಗಿ ನಿಲ್ಲುವುವು.

(೪) ಈವೊತ್ತು ಕಲಿಸಿದ ಪಾಠದ ಸಾರಾಂಶವನ್ನು ಅಥವಾ ಸಾಮಾನ್ಯ ಸಂಗತಿಗಳನ್ನು ಹೊರಡಿಸಿಕೊಳ್ಳುವುದು.

(೫) ಕಟ್ಟಕಡೆಗೆ ಕಲಿಸಿದಸಂಗತಿಗಳು ಸರಿಯಾಗಿ ತಿಳಿದಿರುವವೋ ಇಲ್ಲವೋ ಎಂಬದನ್ನು ಅರಿತುಕೊಳ್ಳಲಿಕ್ಕೆ ಪರೀಕ್ಷೆಯ ಪ್ರಶ್ನಗಳನ್ನಾಗಲಿ ಅಭ್ಯಾಸಕ್ಕೋಸ್ಕರ ಉದಾಹರಣೆಗಳನ್ನಾಗಲಿ ಕೇಳಿ ಉಪಸಂಹಾರವನ್ನು ಮಾಡಬೇಕು.

ಈ ಮೆಟ್ಟುಗಳು ಸಾಮಾನ್ಯವಾಗಿ ಎಲ್ಲ ವಿಷಯಗಳಿಗೂ ಹತ್ತುವುವು. ಡ್ರಾಯಿಂಗ, ಬರಹ, ಕೈಕೆಲಸ ಮುಂತಾದ ಕೆಲವು ವಿಷಯಗಳಿಗೆ ಈ ಅಯ್ದೂ ಮೆಟ್ಟುಗಳ ಅವಶ್ಯಕತೆಯು ಇರುವುದಿಲ್ಲ. ಗಣಿತ, ಭಾಷಾ, ಇತಿಹಾಸ, ಭೂಗೋಲ, ಶಾಸ್ತ್ರೀಯವಿಷಯ ಈ ಎಲ್ಲ ವಿಷಯಗಳನ್ನು ಈ ಮೆಟ್ಟುಗಳಿಗನುಸರಿಸಿ ಕಲಿಸಬಹುದು.



# ೧೪ ನೆಯ ಪ್ರಕರಣ

## ಶಿಕ್ಷಣದ ಸಾಧನಗಳು

ಕಲಿಸೋಣವೆಂದರೆ ಅನೇಕ ಸಂಗತಿಗಳನ್ನು ಹುಡುಗರಿಗೆ ಹೇಳಿ ನೆನಪಿನಲ್ಲಿ ಇಡಿಸುವದಲ್ಲ; ಕಲಿಸೋಣವೆಂದರೆ ಮಕ್ಕಳನ್ನು ಕಲಿಯಲಿಕ್ಕೆ ಹಚ್ಚುವುದು. ಅವರು ಕಲಿಯಹತ್ತಿದರೆಂದರೆ ಅವರ ವಿಷಯಜ್ಞಾನವು ದಿನದಿನಕ್ಕೆ ಬೆಳೆಯುತ್ತ ಹೋಗಬೇಕು ; ಅವರ ಬೌದ್ಧಿಕ ಶಕ್ತಿಗಳಿಗೆ ವ್ಯವಸಾಯವು ದೊರೆತು ಅವು ಸಂಸ್ಕಾರವನ್ನು ಹೊಂದಬೇಕು. ಈ ಮೇರೆಗೆ ಬೌದ್ಧಿಕ ಶಕ್ತಿಗಳಿಗೆ ವ್ಯವಸಾಯವು ದೊರೆಯದ ಶಿಕ್ಷಣವು ಶಿಕ್ಷಣವೇ ಅಲ್ಲೆಂದು ಖಂಡಿತವಾಗಿ ಹೇಳಬಹುದು.

ಬೌದ್ಧಿಕ ಶಕ್ತಿಗಳು ಜಾಗ್ರತವಾಗಿ ಅಭಿವೃದ್ಧಿಹೊಂದಬೇಕಾದರೆ ಶಿಕ್ಷಕರು ತಮ್ಮ ಶಿಕ್ಷಣದಲ್ಲಿ ನಾಲ್ಕು ಪ್ರಕಾರದ ಸಾಧನಗಳನ್ನು ಮುಖ್ಯವಾಗಿ ಉಪಯೋಗಿಸಬೇಕು. ಅವು ಯಾವವೆಂದರೆ:—

೧. ಶಿಕ್ಷಕನ ವ್ಯಕ್ತಿತ್ವ ( ಅವನಲ್ಲಿರುವ ಅನೇಕ ಸದ್ಗುಣಗಳು )

೨. (ಅ) ಪ್ರಶ್ನೆಗಳು.

(ಬ) ವಿದ್ಯಾರ್ಥಿಗಳ ಉತ್ತರಗಳು.

೩. ಕಪ್ಪು ಹಲಗೆ.

೪. ದೃಷ್ಟಾಂತಗಳು ಅಥವಾ ನಿದರ್ಶನಗಳು. (ಪ್ರತ್ಯಕ್ಷ ವಸ್ತುಗಳು, ಮಾದರಿಗಳು, ಚಿತ್ರಗಳು, ಶಬ್ದ ಚಿತ್ರಗಳು ಮುಂ.)

ಈ ನಾಲ್ಕು ಪ್ರಕಾರದ ಸಾಧನಗಳಲ್ಲಿ; ಮೊದಲಿನ ಮೂರು ಸಾಧನಗಳು ಮುಂದಿನ ನಾಲ್ಕು ಪ್ರಕರಣಗಳಲ್ಲಿ ಸ್ವತಂತ್ರವಾಗಿ ವಿವರಿಸಲ್ಪಟ್ಟಿವೆ. ನಾಲ್ಕನೆಯ ಸಾಧನವನ್ನು ಕುರಿತು ಇಲ್ಲಿ ಆಲೋಚಿಸುವ.

## ದೃಷ್ಟಾಂತಗಳು ಅಥವಾ ನಿದರ್ಶನಗಳು

ಕಲಿಸುವ ವಿಷಯವು ವಿದ್ಯಾರ್ಥಿಗಳಿಗೆ ಮನದಟ್ಟಾಗಬೇಕಾದರೆ ಮತ್ತು ಪರಿಣಾಮಕರವಾಗಬೇಕಾದರೆ ದೃಷ್ಟಾಂತಗಳು ಅಥವಾ ನಿದರ್ಶನಗಳು ಅವಶ್ಯವಾದವುಗಳು. ದೃಷ್ಟಾಂತಗಳು ಅಥವಾ ನಿದರ್ಶನ ಗಳು ಅಯ್ದು ಪ್ರಕಾರದವಿರುವುವು.

೧. ಪ್ರತ್ಯಕ್ಷ ವಸ್ತುಗಳು ಯಾವುದಾದರೊಂದು ಪ್ರಾಣಿಯು ಅಥವಾ ಪದಾರ್ಥಗಳ ವಿಷಯವಾಗಿ ಹೇಳುವುದಿದ್ದಾಗ ಆ ಪ್ರಾಣಿ ಗಳನ್ನೇ ಇಲ್ಲವೆ ಪದಾರ್ಥಗಳನ್ನೇ ಹುಡುಗರ ಮುಂದೆ ತಂದು ತೋರಿ ಸುವುದು. ಮೊಲದ ವಿಷಯವಾಗಿ ಹೇಳುವುದಿದ್ದಾಗ ಒಂದು ಜೀವಂತ ಮೊಲವನ್ನೇ ತಂದು ಹುಡುಗರಿಗೆ ತೋರಿಸುವುದು.

೨. ಪ್ರತ್ಯಕ್ಷ ಪದಾರ್ಥವು ದೊರೆಯದಿದ್ದಲ್ಲಿ ಅದರ ಮಣ್ಣಿನ ಮಾದರಿಯನ್ನಾಗಲಿ ಅರಿವೆ, ಕಾಜುಗಳಿಂದ ಮಾಡಿದ ಮಾದರಿಯನ್ನಾ ಗಲಿ, ತೋರಿಸಿ ಹೇಳುವುದು. ಗಂಡಕದ ವಿಷಯವಾಗಿ ಹೇಳುವು ದಿದ್ದಾಗ ಮಣ್ಣಿನಿಂದ ಮಾಡಿದ ಅಥವಾ ಅರಿವೆಯಿಂದ ಸಿದ್ಧಪಡಿಸಿದ ಗಂಡಕದ ಮಾದರಿಯನ್ನು ಉಪಯೋಗಿಸಬಹುದು. ವಿಮಾನದ ವಿಷಯ ವಾಗಿ ಹೇಳುವುದಿದ್ದಾಗ ಪೇಟೆಯಲ್ಲಿ ದೊರೆಯುವ ಮಾದರಿಯ ಸಣ್ಣ ವಿಮಾನವನ್ನು ತೋರಿಸಬಹುದು.

೩. ಪ್ರತ್ಯಕ್ಷ ಪದಾರ್ಥವೂ ಮಾದರಿಯೂ ದೊರೆಯದಿದ್ದಾಗ ಚಿತ್ರಪಟದಿಂದ ಕೆಲಸವನ್ನು ಸಾಗಿಸಬಹುದು. ಅಂಥ ಚಿತ್ರಪಟಗಳು ವರ್ತಮಾನಪತ್ರಗಳಲ್ಲಿಯೂ ಮಾಸಿಕಪುಸ್ತಕಗಳಲ್ಲಿಯೂ ದೊರೆಯು ವುವು. ಅವುಗಳನ್ನು ಶಿಕ್ಷಕನು ಸಂಗ್ರಹಿಸಿಟ್ಟುಕೊಂಡು ಸಮಯೋಚಿತ ವಾಗಿ ಉಪಯೋಗಿಸಿಕೊಳ್ಳಬೇಕು. ವಿಮಾನ, ಮೋಟಾರ, ಆನೆ, ಒಂಟೆ, ಸಮುದ್ರ, ಹಡಗು ಈ ಮೊದಲಾದವುಗಳ ಅತ್ಯುತ್ತಮವಾದ ಚಿತ್ರಗಳನ್ನು ದೊರಕಿಸಿ ತಕ್ಕ ಸಮಯದಲ್ಲಿ ಉಪಯೋಗಿಸಿಕೊಳ್ಳಬೇಕು.

೪. ಅಚ್ಚುಹಾಕಿದ ಚಿತ್ರಗಳು ಹೊತ್ತಿಗೆ ದೊರೆಯದಿದ್ದರೆ ಕಪ್ಪು ಹಲಗೆಯಮೇಲೆ ಗೆರೆಗಳಿಂದ ಶಿಕ್ಷಕರು ಸಾದಾ ಚಿತ್ರಗಳನ್ನು

ತೆಗೆದು ತೋರಿಸಬಹುದು ; ಈ ಚಿತ್ರಗಳು ಚಿತ್ರಕಲೆಯ ನಿಯಮಕ್ಕೆ ಅನುಸರಿಸಿರಬೇಕೆಂಬುವ ಹಾಗಿಲ್ಲ. ಮಕ್ಕಳಿಗೆ ಸಾಧಾರಣ ಕಲ್ಪನೆಯು ಬಂದರೆ ಸಾಕು.

೫. ಕೆಲವು ಪ್ರಸಂಗಗಳಲ್ಲಿ ಮೇಲೆ ಹೇಳಿದ ಯಾವ ಸಾಧನ ಗಳೂ ಉಪಯೋಗಕ್ಕೆ ಬರುವಂತಿರುವುದಿಲ್ಲ. ಅಂಥ ಪ್ರಸಂಗದಲ್ಲಿ ಕೇವಲ ವರ್ಣನೆಯಿಂದ ಶಬ್ದಚಿತ್ರವನ್ನು ಹುಡುಗರ ಕಣ್ಣುಮುಂದೆ ನಿಲ್ಲಿಸಬಹುದು. ಉದಾಹರಣಾರ್ಥವಾಗಿ ಮಕ್ಕಳು ತಂದೆಯನ್ನು ಗೌರವಿಸುವಂತೆ ವಿದ್ಯಾರ್ಥಿಗಳು ಶಿಕ್ಷಕನನ್ನೂ ಗೌರವಿಸಬೇಕು.

ಮೇಲೆ ಹೇಳಿದ ಅಯ್ದು ಪ್ರಕಾರದ ದೃಷ್ಟಾಂತಗಳಲ್ಲಿ ಯಾವು ದನ್ನು ಎಂಥ ಸಂದರ್ಭದಲ್ಲಿ ಉಪಯೋಗಿಸಬೇಕೆಂಬುದನ್ನು ಶಿಕ್ಷಕನು ತಿಳಿದಿರುವುದು ಅತ್ಯವಶ್ಯವು. ತಿಳಿಯದೆ ದೃಷ್ಟಾಂತಗಳನ್ನು ಉಪಯೋಗಿ ಸಿದರೆ ಪ್ರಯೋಜನಕ್ಕೆ ಬದಲಾಗಿ ಹಾನಿಯು ತಟ್ಟುವ ಸಂಭವವುಂಟು. ಈ ವಿಷಯವಾಗಿ ಒಬ್ಬ ಗ್ರಂಥಕಾರನು ನಾಲ್ಕು ನಿಯಮಗಳನ್ನು ಹೇಳಿದ್ದಾನೆ.

೧. ಮೇಲೆ ಹೇಳಿದ ಅಯ್ದು ಪ್ರಕಾರದ ದೃಷ್ಟಾಂತಗಳು ಸ್ಥೂಲ ದಿಂದ ಪ್ರಾರಂಭವಾಗಿ ಕ್ರಮಕ್ರಮವಾಗಿ ಹೆಚ್ಚು ಹೆಚ್ಚು ಸೂಕ್ಷ್ಮತೆಗೆ ಮುಟ್ಟಿರುವುವು. ಪ್ರತ್ಯಕ್ಷ ವಸ್ತುವು ಅತ್ಯಂತ ಸ್ಥೂಲವಾದದ್ದು. ಶಬ್ದಚಿತ್ರವು ಅತಿಸೂಕ್ಷ್ಮವಾದದ್ದು. ಚಿಕ್ಕಮಕ್ಕಳಿಗೆ ಸ್ಥೂಲ ದೃಷ್ಟಾಂತಗಳನ್ನೇ ಉಪಯೋಗಿಸಿ ಕಲಿಸತಕ್ಕದ್ದು. ವಿದ್ಯಾರ್ಥಿಗಳು ಹೆಚ್ಚು ಹೆಚ್ಚು ಪ್ರೌಢರಾಗಿದ್ದಂತೆ ಹೆಚ್ಚು ಹೆಚ್ಚು ಸೂಕ್ಷ್ಮನಿದರ್ಶನ ಗಳನ್ನು ಉಪಯೋಗಿಸಬೇಕು.

೨. ಹೊಸದಾಗಿಯೇ ಯಾವದೊಂದು ಪದಾರ್ಥದ ಇಲ್ಲವೆ ಪ್ರಾಣಿಯ ವಿಷಯವಾಗಿ ಹೇಳುವುದಿದ್ದಾಗ ವಯಸ್ಸಿನ ವಿಚಾರ ಮಾಡದೆ ಸ್ಥೂಲ ದೃಷ್ಟಾಂತಗಳನ್ನೇ ಉಪಯೋಗಿಸತಕ್ಕದ್ದು.

೩. ಶಿಕ್ಷಣದಲ್ಲಿ ವಿಷಯಜ್ಞಾನ ಹಾಗು ಬೌದ್ಧಿಕ ಶಕ್ತಿಗಳ ಬೆಳವಣಿಗೆ ಹೀಗೆ ಎರಡು ಉದ್ದೇಶಗಳು ಇರುವುವು. ಸ್ಥೂಲ

ದೃಷ್ಟಾಂತಗಳಿಂದ ವಿಷಯಜ್ಞಾನವು ಚನ್ನಾಗಿ ಆಗುವುದು. ಆದರೆ ಬೌದ್ಧಿಕ ಶಕ್ತಿಗಳ ವಿಕಾಸಕ್ಕೆ ಆಸ್ಪದವಿಲ್ಲದಂತಾಗುವುದು. ಯಾಕಂದರೆ ಪ್ರತ್ಯಕ್ಷ ವಸ್ತುವು ಇಲ್ಲವೆ ಮಾದರಿಯು ಕಣ್ಣು ಮುಂದೆ ಇರುವುದು. ಅವು ಇಲ್ಲದಾಗ ಸೂಕ್ಷ್ಮ ದೃಷ್ಟಾಂತಗಳನ್ನು ಉಪಯೋಗಿಸಿದರೆ ಸ್ಮರಣ, ಕಲ್ಪನಾ, ವಿಚಾರ ತುಲನೆ, ನಿರ್ಣಯ ಮುಂತಾದ ಮಾನಸಿಕ ಶಕ್ತಿಗಳಿಗೆ ಕೆಲಸವು ದೊರೆತು ಅವು ಅಭಿವೃದ್ಧಿ ಹೊಂದುವುವು. ಈ ವಿಚಾರದಿಂದ ಸ್ಪಷ್ಟವಾಗುವುದೇನಂದರೆ— ವಿಷಯವು ಸುಲಭವಾಗಿ ತಿಳಿಯಬೇಕೆಂಬ ಭ್ರಾಂತಿಯಿಂದ ಸ್ಥೂಲ ದೃಷ್ಟಾಂತಗಳು ಬೇಕಿಲ್ಲದ ಸಂದರ್ಭದಲ್ಲಿ ಅವುಗಳನ್ನು ಉಪಯೋಗಿಸುವದೂ ಸೂಕ್ಷ್ಮ ದೃಷ್ಟಾಂತ ಗಳ ಸಹಾಯದಿಂದ ವಿಷಯವು ಸುಲಭವಾಗಿ ತಿಳಿಯುವಂತಿದ್ದಾಗ ಸ್ಥೂಲವಾದ ದೃಷ್ಟಾಂತಗಳನ್ನು ಉಪಯೋಗಿಸುವುದು ತಪ್ಪೆಂದು ಹೇಳಬಹುದು.

೪. ವಿಷಯವು ಸುಲಭವಾಗಿ ತಿಳಿಯಬೇಕೆಂತಲೂ, ಅಪರಿಚಿತ ವಾದ ವಸ್ತುವಿನ ಕಲ್ಪನೆಯು ಹುಡುಗರ ಮನಸಿನಲ್ಲಿ ಬರಬೇಕೆಂತಲೂ ದೃಷ್ಟಾಂತಗಳನ್ನು ಉಪಯೋಗಿಸತಕ್ಕದ್ದಿರುವದು. ಅಂದ ಮೇಲೆ ಮೂಲ ವಿಷಯಕ್ಕಿಂತ ದೃಷ್ಟಾಂತಗಳು ಸುಲಭವಾದವುಗಳು ಹುಡುಗರ ಮನಸಿಗೆ ಬೇಗನೆ ಹೊಳೆಯುವಂತಹವೂ ಇರಬೇಕೆಂಬುದು ಸ್ಪಷ್ಟವು. ಆದರೆ ಇದಕ್ಕೆ ವಿಪರೀತವಾಗಿ ಬೆಕ್ಕು ಹುಲಿಯಂತೆ ಇರುವುದೆಂದು ಹೇಳುವುದೂ, ಪಕ್ಷಿಗಳು ವಿಮಾನದಂತೆ ಇರುವುವೆಂದು ಹೇಳುವುದೂ ಸರಿಯಲ್ಲ.

ಪಾಠಕ್ಕೆ ಸುಲಭ ರೂಪವನ್ನು ಕೊಡುವದಕ್ಕಾಗಿ ಅಮೂರ್ತ ಸಂಗತಿಗಳನ್ನು ಮೂರ್ತಸ್ವರೂಪಕ್ಕೆ ತರುವುದಕ್ಕಾಗಿ ಶಿಕ್ಷಕರು ಅನೇಕ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳಬೇಕಾಗುತ್ತದೆ. ಅವು ಸಹ ಶಿಕ್ಷಣದ ಸಾಧನಗಳಾಗಿರುತ್ತವೆ. ಉದಾಹರಣಾರ್ಥವಾಗಿ ಭೂಗೋಲ ಪಾಠದಲ್ಲಿ ಪ್ರಾಕೃತಿಕಸ್ವರೂಪ, ಮಳೆ, ಬೆಳೆಗಳನ್ನು ಮಾತ್ರ ತಿಳಿಸು ವಂಥಾ ನಕಾಶಗಳು, ಮಾಡೆಲುಗಳು, ಅಂಕಗಣಿತದ ವಿಷಯವನ್ನು

ಕಲಿಸುವಾಗ ಎಣಿಕೆಯ ಪಟಗಳು, ಮಗ್ಗಿಯ ಪಟಗಳು, ಅಪೂರ್ಣಾಂಕಕ್ಕೆ ಸಂಬಂಧಿಸಿದ ಪಟಗಳು, ಇತಿಹಾಸದ ಪಾಠದಲ್ಲಿ ಅರಸರ ಚಿತ್ರಗಳು, ವಂಶಾವಳಿಗಳು. ರಣಭೂಮಿಯ ನಕಾಶಗಳು, ಇತ್ಯಾದಿ ಸಾಧನಗಳಿಂದ ವಿಷಯವು ಹುಡುಗರಿಗೆ ಚನ್ನಾಗಿ ತಿಳಿಯುವುದು. ಒಟ್ಟಿನ ಮೇಲೆ ಶಿಕ್ಷಕನು ತನ್ನ ಮಾತಿನಿಂದಲೇ ಪಾಠವನ್ನು ಕಲಿಸಲಿಕ್ಕೆ ಯತ್ನ ಮಾಡದೆ ಮೇಲೆ ಹೇಳಿದ ತತ್ವಗಳಿಗನುಸರಿಸಿ ದೃಷ್ಟಾಂತಗಳನ್ನು ಅಥವಾ ನಿದರ್ಶನಗಳನ್ನು ಇಲ್ಲವೆ ಉಪಕರಣಗಳನ್ನು ಉಪಯೋಗಿಸಿ ಪಾಠವು ಹುಡುಗರಿಗೆ ಮನೋರಂಜಕವಾಗುವಂತೆಯೂ ಸಹಜವಾಗಿ ತಿಳಿಯುವಂತೆಯೂ ಮಾಡತಕ್ಕದ್ದು.



## ೧೫ನೆಯ ಪ್ರಕರಣ

## ಶಿಕ್ಷಣದ ಸಾಧನಗಳು

### I ಶಿಕ್ಷಕನ ವ್ಯಕ್ತಿತ್ವ

೦ದೆ ಶಾರೀರಿಕ ಮಾನಸಿಕ ನೈತಿಕ ಶಿಕ್ಷಣಗಳನ್ನು ಕುರಿತು ವು ಮಾಡಲ್ಪಟ್ಟಿರುವುದು. ಆದರಿಂದ ಶಿಕ್ಷಕನು ಚುರುಕು ಳ್ಳವನೂ, ಸುದೃಢವೂ ನಿರೋಗಿಯೂ ಆದ ಶರೀರವುಳ್ಳವನೂ ಬವಂತನೂ ಆಗಿರಬೇಕೆಂಬುದು ಸ್ಪಷ್ಟವಾಗುವುದು. ಉತ್ತಮ ಸಿಕೊಳ್ಳಬೇಕಾದರೆ ಈ ಗುಣಗಳಲ್ಲದೆ ಇನ್ನೂ ಕೆಲವು ಅವನಲ್ಲಿರಬೇಕಾಗುವುದು. ಅವುಗಳಿಂದ ಶಿಕ್ಷಕನಲ್ಲಿ ಒಂದು ಸ್ಸುಂಟಾಗುವುದು. ಆದರಿಂದ ಸಾಲೆಯ ತಿದ್ದುವಿಕೆಗೂ, ಬಹಳಸಹಾಯ್ಯವಾಗುವುದು. ವಿದ್ಯಾರ್ಥಿಗಳೂ ಪಾಲಕರೂ ರೋಗ್ಯ ಗೌರವವನ್ನು ಕೊಟ್ಟು ಸಹಾಯ್ಯಮಾಡುವರು. ಕ್ಷಕನ **ವ್ಯಕ್ತಿತ್ವ**ವೆಂದು ಹೇಳಬಹುದು.

ಕನು ತಾನು ಕಲಿಸತಕ್ಕ ವಿಷಯವನ್ನು ಎಷ್ಟೇ ಮನೋರಂ ಕಲಿಸಲಿ, ಕಲಿಸುವ ಪದ್ಧತಿಯು ಎಷ್ಟೇ ಶಾಸ್ತ್ರೀಯ ನ್ನು ಅನುಸರಿಸಿರಲಿ ವರ್ಗದಲ್ಲಿ ತಿದ್ದುವಿಕೆಯನ್ನು ಎಷ್ಟೇ ಕಾಯ್ದುಕೊಂಡಿರಲಿ, ಆತನಲ್ಲಿ ವ್ಯಕ್ತಿತ್ವವು ಇಲ್ಲದಿದ್ದರೆ ಮನಸಿಗೂ ಕಲಿಯುವ ಮನಸಿಗೂ ಸಂಪರ್ಕವಾಗದೆ ವ್ಯರ್ಥವಾಗುವುದು. ಶಿಕ್ಷಕನ ವ್ಯಕ್ತಿತ್ವವನ್ನು ಅಥವಾ ಬೇಕಾದ ಸದ್ಗುಣಗಳನ್ನು ಇಲ್ಲಿ ಸಂಕ್ಷೇಪವಾಗಿ ಹೇಳುವೆನು.

ಧಾರಣವಾಗಿ ಶಿಕ್ಷಕನ ದೇಹವು ಪುಷ್ಟವಾಗಿರಬೇಕು; ವುಳ್ಳದ್ದಿರಬೇಕು; ಮುಖವು ನಗೆಮೋರೆಯುಳ್ಳದ್ದಾಗಿರಬೇಕು;

ಉಡುಪು ಸಾದಾತರದ್ದಿದ್ದು ಸ್ವಚ್ಛವಾದದ್ದೂ ಅಚ್ಚುಕಟ್ಟಾದದ್ದೂ ಇರಬೇಕು: ಡಾಂಭಿಕತನವಿರಬಾರದು; ನಡಿಗೆಯು ಮಂದವಾಗಿರದೆ ಚಟುವಟಿಕೆಯುಳ್ಳದ್ದಾಗಿರಬೇಕು. ಕಣ್ಣುಗಳಲ್ಲಿ ಯಾವಾಗಲು ಹೊಳಪು ಇರಬೇಕು. ಆತನ ಸ್ವರವು ಮಧುರವಾಗಿದ್ದು ಚಿಕ್ಕಮಕ್ಕಳ ಮನಸ್ಸನ್ನು ಆಕರ್ಷಿಸುವಂತಹುದಿರಬೇಕು. ಆತನ ರೀತಿ-ನಡತೆಗಳೂ ಕಾರ್ಯಗಳೂ ಮಕ್ಕಳಲ್ಲಿ ಆತನಿಗಿರುವ ಪ್ರೇಮಾದರಗಳನ್ನು ವ್ಯಕ್ತಮಾಡುತ್ತಿರಬೇಕು. ಈ ದೃಶ್ಯಸ್ವರೂಪದಿಂದ ನೋಡುವವರಿಗೆ ಶಿಕ್ಷಕನ ವಿಷಯವಾಗಿ ಒಮ್ಮೆಲೆ ಉತ್ತಮಗ್ರಹವಾಗುವುದು. ಇಲ್ಲದಿದ್ದರೆ ವಿಪರೀತ ಗ್ರಹವಾಗುವ ಸಂಭವವುಂಟು.

ಉತ್ತಮ ಶಿಕ್ಷಕನೆನಿಸಿಕೊಳ್ಳಬೇಕಾದರೆ ಅವನಲ್ಲಿ ಕೆಲವು ಸದ್ಗುಣಗಳು ಇರಬೇಕಾಗುವುದೆಂದು ಮೇಲೆ ಹೇಳಿದೆ. ಅವುಗಳಲ್ಲಿ **ತನ್ನ ಹೋರೆಯ ವಿಷಯವಾಗಿ ಗೌರವವನ್ನು ತಾಳುವುದು ಮೊದಲನೆಯ ಗುಣವಾಗಿದೆ.** ತನಗೆ ಏನೂ ಗತಿಯಿಲ್ಲ, ಇದು ಕಟ್ಟಕಡೆಯ ಉಪಾಯವೆಂದು ತಿಳಿದು ಈ ಹೋರೆಯನ್ನು ಕೈಕೊಳ್ಳುವುದು ಸರಿಯಲ್ಲ. ಇದು ಪವಿತ್ರವಾದ ಕೆಲಸ, ಇದರಲ್ಲಿ ಮನಸ್ಸು ಹಾಕಿ ದುಡಿದರೆ ಯಶಸ್ಸು ಸಿಕ್ಕುವುದು; ಪರೋಪಕಾರವು ಲಭಿಸುವುದು; ಇತ್ಯಾದಿ ವಿಚಾರಮಾಡಿ ಈ ಕಾರ್ಯವನ್ನು ಕೈಕೊಳ್ಳತಕ್ಕದ್ದು. ಒಮ್ಮೆ ಕೈಕೊಂಡಮೇಲೆ ಹಿಂಜರಿಯದೆ ಇದು ನನ್ನ ಪ್ರೀತಿಯ ಹೋರೆ, ಜೀವದಿಂದಿರುವ ಮಟ್ಟಿಗೂ ವಿಘ್ನಗಳಿಗೆ ಹೆದರದೆ ಸಾಹಸ ಪಡುವುದು, ನನ್ನ ಕರ್ತವ್ಯವೆಂದು ತಿಳಿದು ಪ್ರಯತ್ನಮಾಡತಕ್ಕದ್ದು. ಬಹುಶಃ ಎಲ್ಲ ಜನರು ತಮಗೆ ಸೇರುವ ಒಂದು ಉದ್ಯೋಗವನ್ನು ಕೈಕೊಂಡು ಅದರ ಬೆನ್ನುಹತ್ತುತ್ತಾರೆ. ಇತರ ಹೋರೆಗಳಲ್ಲಿ ಅವರು ಮನಸುಹಾಕುವುದಿಲ್ಲ. ಶಿಕ್ಷಕನಾದರೂ ಹಾಗೇ ಮಾಡಬೇಕು, ಅಂದರೆ ಮಾತ್ರ ಅವರಿಗೆ ಅದರಲ್ಲಿ ಯಶವು ದೊರೆಯುವುದು. ಯಾವ ಕೆಲಸವೇ ಇರಲಿ ಅದನ್ನು ಮನವಿಟ್ಟು ಮಾಡುವುದರಿಂದ ಅದರಲ್ಲಿ ಯಶವು ಸಿಕ್ಕೇಸಿಗುವುದು. ಬಾಯಬಲ್ಲಿನಲ್ಲಿ ಒಂದುಕಡೆಗೆ ಹೇಳಿದ್ದೇನಂದರೆ:– " ನೀನು ಕೈಕೊಂಡ

ಕೆಲಸವನ್ನು ನಿನ್ನಲ್ಲಿದ್ದಷ್ಟು ಸಾಮರ್ಥ್ಯದಿಂದ ಮಾಡು. " ಇದು ಬಹು ಗೌರವದ ಬೋಧನೆಯು; ಆದರೆ ಇದನ್ನು ತೀರ ಸ್ವಲ್ಪ ಜನರು ಮಾತ್ರ ಅನುಸರಿಸುವರು. ಮನುಷ್ಯನು ತಾನು ವಹಿಸಿದ ಕೆಲಸದಲ್ಲಿ ಕೈಲಾದ ಮಟ್ಟಿಗೆ ಶ್ರಮವನ್ನೂ ವಿಚಾರವನ್ನೂ ವೆಚ್ಚ ಮಾಡತಕ್ಕದ್ದು. ಈ ಗುಣಕ್ಕೆ 'ಆಸಕ್ತಿ' ಎಂಬ ಹೆಸರು. **ಕರ್ತವ್ಯದಕ್ಷತೆಯೆಂತಲೂ** ಹೇಳಬಹುದು. ಶಿಕ್ಷಣದ ಹೋರೆಯಲ್ಲಂತೂ ಈ ಗುಣವು ಅತ್ಯವಶ್ಯವಾದದ್ದು. ವಿದ್ಯಾರ್ಥಿಗಳಿಗೆ ಕಲಿಸತಕ್ಕ ಪಾಠಗಳನ್ನು ಮೊದಲೇ ಸಿದ್ಧಮಾಡಿಟ್ಟುಕೊಳ್ಳುವುದೂ ಆಗಾಗ್ಯೆ ಒದಗುವ ತೊಂದರೆಗಳನ್ನು ಲಕ್ಷ್ಯದಲ್ಲಿಟ್ಟು ಅವುಗಳನ್ನು ನೀಗುವ ಉಪಾಯಗಳನ್ನು ಶೋಧಿಸುತ್ತಿರುವುದೂ ಬಲ್ಲವರು ತಮ್ಮ ಕೆಲಸಗಳಲ್ಲಿ ತೋರಿಸುವ ಚಾತುರ್ಯವನ್ನು ನಿರೀಕ್ಷಿಸುವುದೂ ಕರ್ತವ್ಯದಕ್ಷನಾದ ಶಿಕ್ಷಕನ ಕೆಲಸಗಳಾಗಿರುತ್ತವೆ. ಅವನು ತನ್ನ ವರ್ಗವನ್ನು ಕಂಡು ಹಿಗ್ಗುವನು. ಕಲಿಸತಕ್ಕ ವಿಷಯವನ್ನು ಉಲ್ಲಾಸದಿಂದ ಪ್ರಶ್ನೆಗಳನ್ನು ಕೇಳುತ್ತ ಕಲಿಸುವನು. ಹುಡುಗರು ಕೊಡುವ ಉತ್ತರಗಳ ಉಗಮಗಳನ್ನು ಗೊತ್ತುಹಚ್ಚಿ ಅವರ ಸಂಶಯಗಳನ್ನು ಪರಿಹರಿಸಿ ಬುದ್ಧಿಯನ್ನು ವಿಕಾಸಪಡಿಸುವನು. ವಿದ್ಯಾರ್ಥಿಗಳು ಇಂಥ ಶಿಕ್ಷಕನನ್ನು ನಿಜವಾಗಿಯೂ ಪ್ರೀತಿಸುವರು; ಮತ್ತು ಅವನ ಬಾಯಿಂದ ಹೊರಟ ಮಾತುಗಳನ್ನು ಸರಸ್ವತಿಯ ಪ್ರಸಾದವೆಂದು ಭಾವಿಸಿ ಲಕ್ಷ್ಯದಲ್ಲಿಟ್ಟುಕೊಳ್ಳುವರು. ಸಂಜ್ಞೆಯಿಂದ ಸೂಚಿಸಿದ ಸಂಗತಿಗಳನ್ನು ತಲೆಯಲ್ಲಿ ಹೊತ್ತು ಮಾಡುವರು. ಹಾವಾಡಿಗನ ಪುಂಗಿಯ ಸ್ವರವನ್ನು ಹಾವು ಅನುಸರಿಸುವಂತೆ ಬಾಲಕರು ಇಂಥ ಶಿಕ್ಷಕನನ್ನು ಹಿಂಬಾಲಿಸುವರು. ಸೂಜಿಗಲ್ಲಿಗೆ ಸೂಜಿಯು ಅಂಟಿಕೊಳ್ಳುವ ಹಾಗೆ ಮಕ್ಕಳು ಇಂಥ ಶಿಕ್ಷಕನನ್ನು ಬಿಡುವುದಿಲ್ಲ. ಅವನು ವರ್ಗಕ್ಕೆ ಯಾವಾಗ ಬರುವನೋ ಎಂದು ಎದುರುನೋಡುವರು. ಆತನನ್ನು ಕಂಡಕೂಡಲೆ ಹಾಸ್ಯಮುಖದಿಂದ ಸನ್ಮಾನಿಸುವರು. ಉತ್ತಮ ಶಿಕ್ಷಕರೆನಿಸುವವರು ತಮ್ಮ ಶ್ರಮಕ್ಕೆ ಇದೇ ಪ್ರತಿಫಲವೆಂದು ತಿಳಿಯುವರು.

ಪ್ರೊಫೆಸರ ಟೆಂಡೆಲನೆಂಬ ಘನವಿದ್ವಾಂಸನು ಈ ಲೋಕದೊಳಗೆ

ಶಿಕ್ಷಕನ ಹೋರೆಯೇ ಎಲ್ಲಕ್ಕೂ ಮೇಲಾದ ಹೋರೆಯು. ಶಿಕ್ಷಕರಿಗೆ ಎಲ್ಲರೂ ಸನ್ಮಾನವನ್ನು ಕೊಡತಕ್ಕದ್ದು." ಎಂದು ಹೇಳಿದ್ದಾನೆ. ಸ್ವಾರ್ಥಬುದ್ಧಿಯಿಂದಲೂ ಅಯೋಗ್ಯತನದಿಂದಲೂ ಈ ಹೋರೆಯಿಂದಾಗುವಷ್ಟು ಹಾನಿಯೂ ಬೇರೆ ಯಾವ ಹೋರೆಯಿಂದಲೂ ಆಗುವುದಿಲ್ಲ. ಶಿಕ್ಷಣದ ಹೋರೆಗೂ ಬೇರೆ ಹೋರೆಗಳಿಗೂ ಒರೆಹಚ್ಚಿ ನೋಡಿದರೆ ಬೇರೆ ಹೋರೆಗಳಲ್ಲಿ ಹೊಸಬರು ಸೇರಿದರೆ ಅವರ ಸ್ವಂತದ ಹಾನಿಯಾಗುತ್ತದೆ. ಆದರೆ ಅನುಭವವಿಲ್ಲದ ವೈದ್ಯನ ಕೈಯಲ್ಲಿ ರೋಗಿಯು ಸಿಕ್ಕರೆ ರೋಗಿಗೆ ಹಾನಿತಟ್ಟುವಂತೆ ಅನುಭವವಿಲ್ಲದ ಶಿಕ್ಷಕರಿಂದ ವಿದ್ಯಾರ್ಥಿಗಳಿಗೆ ಹಾನಿಯಾಗುವುದು. ಮತ್ತು ವೈದ್ಯನಿಗೆ ಅನುಭವವಿಲ್ಲೆಂದು ತಿಳಿದಬಳಿಕ ಮತ್ತೊಬ್ಬ ವೈದ್ಯನಿಂದ ತಪ್ಪುತಿದ್ದಿಸಿಕೊಳ್ಳಲಿಕ್ಕೆ ಬರುವುದು. ಆದರೆ ಅನುಭವವಿಲ್ಲದ ಶಿಕ್ಷಕನಿಂದ ಆದ ತಪ್ಪನ್ನು ತಿದ್ದುವುದು ಅಶಕ್ಯವು; ಚಿಕ್ಕಮಕ್ಕಳ ಕೋಮಲ ಮನಸಿನಮೇಲೆ ಒಮ್ಮೆ ಉಂಟುಮಾಡಿದ ಪರಿಣಾಮಗಳನ್ನು ಅಳಿಸುವುದು ಶಕ್ಯವೇ ಇಲ್ಲ. ಆದಕಾರಣ ಆದರ್ಶ ಶಿಕ್ಷಕರೆನಿಸಿಕೊಳ್ಳುವವರು ಪ್ರಾರಂಭದಿಂದಲೇ ಒಳ್ಳೇ ಮನಃಪೂರ್ವಕವಾಗಿ ಕೆಲಸಮಾಡಿ ಅನುಭವವನ್ನು ಪಡೆಯತಕ್ಕದ್ದು.

ಶಿಕ್ಷಕನು ತನ್ನ ಹೋರೆಯನ್ನು ಮನಃಪೂರ್ವಕವಾಗಿ ಪ್ರೀತಿಸುವಂತೆ ಚಿಕ್ಕಮಕ್ಕಳನ್ನು ಪ್ರೀತಿಸುತ್ತಿರುವುದು ಅವನ ಎರಡನೆಯ ಮಹತ್ವದ ಗುಣವಾಗಿದೆ. ಮಕ್ಕಳ ಮೇಲೆ ಪ್ರೀತಿ ಇಲ್ಲದವರು ಶಿಕ್ಷಕರ ಹೋರೆಯನ್ನು ಕೈಕೊಳ್ಳಲೇಬಾರದು. ಮಕ್ಕಳು ಪ್ರೀತಿ ಮಾಡುವವರ ಕೈಗೊಂಬೆಗಳು. ಅವರು ಯಾವಾಗಲು ಸಿಡಿಪಿಡಿ ಮಾಡುವವರ ಹತ್ತಿರ ಸಹ ಹಾಯುವುದಿಲ್ಲ. ಅವರ ಮನಸಿನಲ್ಲಿ ಹೊಕ್ಕು ಅವರ ಮನೋವೃತ್ತಿಗಳಿಗನುಸರಿಸಿ ನಡೆಯುವ ಶಿಕ್ಷಕನ ಬಳಿಯಲ್ಲಿ ಮಕ್ಕಳು ಚೆನ್ನಾಗಿ ಕಲಿಯುವರು. ಇಂಥ ಶಿಕ್ಷಕನ ವರ್ಗದಲ್ಲಿ ತಿದ್ದುವಿಕೆಯೂ ಚೆನ್ನಾಗಿರುವುದು. ಪ್ರೀತಿಯ ಶಿಕ್ಷಕನ ಮಾತುಗಳನ್ನು ಹುಡುಗರು ಲಕ್ಷ್ಯಪೂರ್ವಕವಾಗಿ ಕೇಳುವರು. ಆದರಿಂದ ಅವರಿಗೆ ಒಳ್ಳೇ ರೂಢಿ

ಗಳನ್ನು ಹಚ್ಚಲಿಕ್ಕೆ ಶಿಕ್ಷಕನಿಗೆ ಅನುಕೂಲವಾಗುವುದು. ಹುಡುಗರ ಯಾವಾಗಲು ತಮ್ಮ ಪ್ರೀತಿಯ ತಂದೆಯಂತೆ ಇಂಥ ಶಿಕ್ಷಕನ ಸಹವಾಸ ವನ್ನು ಬಯಸುವರು. ತಮ್ಮ ಸಂಶಯಗಳನ್ನು ಶಿಕ್ಷಕನ ಮುಂದೆ ಸ್ವಚ್ಛಮನಸಿನಿಂದ ಮಾತಾಡಿ ಸಮಾಧಾನಮಾಡಿಕೊಳ್ಳುವರು. ಅದರಿಂದ ಪಾಠಗಳು ಅವರಿಗೆ ಸರಿಯಾಗಿ ತಿಳಿಯುವುವು. ಶಿಕ್ಷೆಯ ಅಂಜಿಕೆಯನ್ನು ತೋರಿಸುವ ಪ್ರಸಂಗವು ಅಥವಾ ಒತ್ತಾಯಮಾಡುವ ಪ್ರಸಂಗವು ಶಿಕ್ಷಕರಿಗೆ ಎಂದೂ ಬರುವುದಿಲ್ಲ. ಅದರಿಂದ ಗುರುಶಿಷ್ಯರ ಪ್ರೇಮಭಾವವು ಉತ್ತರೋತ್ತರ ಬೆಳೆಯುತ್ತ ಹೋಗುವುದು.

**ಆನಂದವೃತ್ತಿಯು ಶಿಕ್ಷಕನ ಮೂರನೆಯ ಮಹತ್ವದ ಗುಣವು :—** ಚಿಕ್ಕಮಕ್ಕಳಿಗೆ ಈ ಜಗತ್ತು ಹೊಸದು. ಸೃಷ್ಟಿಯಲ್ಲಿ ಕಾಣುವ ಬೇರೆ ಬೇರೆ ಪ್ರಾಣಿಗಳನ್ನೂ ವನಸ್ಪತಿಗಳನ್ನೂ ತರತರದ ಎಲೆ, ಹೂವು, ಕಾಯಿ, ಹಣ್ಣುಗಳನ್ನೂ ಚಂದ್ರ, ಸೂರ್ಯ, ನಕ್ಷತ್ರ ಮೊದಲಾದವುಗಳನ್ನು ಕಂಡು ಅವರಿಗೆ ಬಹಳ ಸಂತೋಷವಾಗುವುದು. ಅವರಲ್ಲಿ ಕುತೂಹಲವು ಜಾಗೃತವಾಗಿ ನಾನಾಬಗೆಯ ಪ್ರಶ್ನಗಳನ್ನು ಕೇಳುವರು. ಅವರ ಜಿಜ್ಞಾಸೆಯನ್ನು ತೃಪ್ತಿಪಡಿಸುವ ಶಿಕ್ಷಕನೂ ಕೂಡ ಆನಂದವೃತ್ತಿಯುಳ್ಳವನೇ ಆಗಿರಬೇಕು. ಶಿಕ್ಷಕನು ತನ್ನ ಮನಸಿನೊಳಗಿನ ಸಾವಿರಾರು ಚಿಂತೆಗಳನ್ನು ಬದಿಗಿಟ್ಟು ಮಕ್ಕಳ ಕೂಡ ಆನಂದವೃತ್ತಿಯಿಂದ ನಡಕೊಳ್ಳುತ್ತ ಅವರು ಕೇಳುವ ಪ್ರಶ್ನಗಳಿಗೆ ಉತ್ತರಗಳನ್ನು ಕೊಡುತ್ತಿರಬೇಕು. ಮಕ್ಕಳಿಗೆ ಕೆಲಸ ಮಾಡುವುದರಲ್ಲಿ ಆನಂದವು ಬಹಳ; ಹಿಂದೆ ಕೃತಿಪ್ರೇಮವೆಂಬ ಪ್ರಕರಣದಲ್ಲಿ ಹೇಳಿದಂತೆ ಬೇರೆ ಬೇರೆ ವಿಷಯಗಳಿಗೆ ಸಂಬಂಧಿಸಿದ ವ್ಯವಸಾಯಗಳನ್ನು ರಚಿಸಿ ಅವರನ್ನು ಕೆಲಸಕ್ಕೆ ಹಚ್ಚಿದರೆ ಅವರು ಆನಂದದಿಂದ ಕೆಲಸಮಾಡುತ್ತ ಪಾಠಗಳನ್ನು ಕಲಿಯುವರು. ಆಟಗಳಲ್ಲಿಯೂ ಸಂಭಾಷಣ ಪಾಠಗ ಳಲ್ಲಿಯೂ ಮಕ್ಕಳು ಒಳ್ಳೇ ಆನಂದದಿಂದ ಭಾಗವಹಿಸುವರು. ಈ ಎಲ್ಲ ಪ್ರಸಂಗಗಳಲ್ಲಿ ಶಿಕ್ಷಕನು ಹುಬ್ಬುಗಂಟಿಕ್ಕಿಕೊಂಡು ಸೀಡಕತನದಿಂದ ನಡೆದರೆ ಅವರಿಗೆ ಆನಂದವಾಗಬಹುದೆ? ಇಂಥ ತಾಮಸವೃತ್ತಿಯವರ

ಸಹವಾಸವನ್ನು ಪ್ರೌಢರು ಕೂಡ ಅಪೇಕ್ಷಿಸಲಾರರು ; ಇನ್ನು ದೇವಾಂಶರೆಂದೆನಿಸಿಕೊಳ್ಳುವ ಚಿಕ್ಕ ಚಿಕ್ಕ ಬಾಲಕರು ಅವರ ಸಹವಾಸ ದಲ್ಲಿದ್ದು ಪಾಠಗಳನ್ನು ಹೇಗೆ ಕಲಿಯುವರು ? ಕಲಿಯುವುದಕ್ಕೆ ಬದಲು ಅವರೂ ತಾಮಸವೃತ್ತಿಯವರೂ ಸೀಡಕರೂ ಆಗುವರು. ಅದರಿಂದ ಸಾಲೆಯ ಅಭ್ಯಾಸವು ಅವರಿಗೆ ಸೇರದಂತಾಗುವುದು. ಕಡೆಗೆ ಸಾಲೆಯು ಸಹ ಬೇಸರಾಗುವುದು. ಎಷ್ಟು ತೊಂದರೆಗಳು ಸಂಭವಿಸಿದಾಗ್ಯೂ ಆನಂದವೃತ್ತಿಯನ್ನು ಬಿಡದಿರುವ ಶಿಕ್ಷಕರು ದಿನಾಲು ಹೊಸ ಹೊಸ ಸಂಗತಿಗಳನ್ನೂ ಹೇಳಿ, ಹೊಸ ಹೊಸ ವಸ್ತುಗಳನ್ನೂ ಚಿತ್ರಗಳನ್ನೂ ತೋರಿಸಿ ಅವರ ಮನಸಿಗೆ ಆನಂದವನ್ನುಂಟುಮಾಡುವರು ; ಮತ್ತು ಅವರ ಆನಂದವನ್ನು ಕಂಡು ತಾನೂ ಮನಸಿನಲ್ಲಿ ಆನಂದಪಡುವನು. ಉತ್ತಮ ಶಿಕ್ಷಕರಿಗೆ ಇದೇ ಫಲವು !

ಮಕ್ಕಳ ಮೇಲಿನ ಪ್ರೀತಿ ಹಾಗು ಆನಂದವೃತ್ತಿ ಈ ಎರಡು ಗುಣಗಳುಳ್ಳ **ಶಿಕ್ಷಕನಲ್ಲಿ ಆತ್ಮಸಂಯಮನವೆಂಬ ಗುಣವು ತನ್ನಷ್ಟಕ್ಕೆ ತಾನೇ ಬರುವುದು. ಇದು ನಾಲ್ಕನೆಯ ಗುಣವು.** ಮಕ್ಕಳ ಮನಸ್ಸು ಸ್ವಾಭಾವಿಕವಾಗಿಯೇ ತೀರ ಚಂಚಲವಿರುವುದು ; ಶಿಕ್ಷಕರ ಮನಸಿನಲ್ಲಿ ತಾವು ಕಲಿಸುತ್ತಿರುವುದನ್ನು ಹುಡುಗರು ಲಕ್ಷ್ಯಗೊಟ್ಟು ಕೇಳಬೇಕೆಂದಿರುವುದು ; ಆದರೆ ಪಾಠವು ಮನೋರಂಜಕವಾಗದಿದ್ದರೆ, ಇಲ್ಲವೆ ತಕ್ಕಷ್ಟಕ್ಕಿಂತ ಬಹಳ ಉದ್ದವಾದರೆ ಅವರ ಮನಸ್ಸು ಪಾಠದ ಕಡೆಗೆ ಹತ್ತುವುದಿಲ್ಲ. ಅದರಿಂದ ಅವರು ಅನ್ಯಾಸಕ್ತರಾಗುವರು. ಅದರಲ್ಲಿ ಅವರದೇನೂ ತಪ್ಪಿಲ್ಲವಾದರೂ ಶಿಕ್ಷಕನ ಮನಸಿನ ಶಾಂತಿಯು ಭಂಗವಾಗಿ ಅವನಿಗೆ ಸಿಟ್ಟು ಬರುವ ಸಂಭವವುಂಟು, ಆದರೆ ಚಿಕ್ಕಮಕ್ಕಳು ಬಹಳ ಹೊತ್ತಿನ ವರೆಗೆ ಒಂದೇ ವಿಷಯದ ಕಡೆಗೆ ಲಕ್ಷ್ಯ ಕೊಡಲಾರರೆಂಬ ವಿಚಾರವನ್ನು ಮನಸಿನಲ್ಲಿಟ್ಟು ಶಿಕ್ಷಕರು ಆತ್ಮಸಂಯಮನವನ್ನೇ ಮಾಡಿಕೊಳ್ಳಲಿಕ್ಕೆ ಬೇಕು. ಮತ್ತು ಮಕ್ಕಳ ಮೇಲಿನ ಪ್ರೀತಿಯಿಂದ ತಮ್ಮ ಆನಂದವೃತ್ತಿಗೆ ಭಂಗತಂದುಕೊಳ್ಳಬಾರದು. ಮನಸಿನ ಶಾಂತಿಯನ್ನು ಕಾಯ್ದುಕೊಳ್ಳಬೇಕು. ಸಿಟ್ಟಿನ ಭರದಲ್ಲಿ

ಅವರನ್ನು ಶಿಕ್ಷಿಸಿದರೆ ಅನ್ಯಾಯವಾಗುವುದು. ಮಕ್ಕಳು ಈ ಅನ್ಯಾಯದ ಶಿಕ್ಷೆಯನ್ನು ಸುಮ್ಮನೆ ಅನುಭವಿಸಿದರೂ ಗುರುಶಿಷ್ಯರ ಪ್ರೇಮಭಾವವು ನಷ್ಟವಾಗುವುದು; ಪರಸ್ಪರ ಪ್ರೇಮವು ನಷ್ಟವಾಗಲು ಸಾಲೆಯ ಅಭ್ಯಾಸಕ್ಕೆ ತೊಂದರೆಯು ತಟ್ಟುವುದು. ಆದಕಾರಣ ಮಕ್ಕಳ ವಿಷಯವಾಗಿ ಶಿಕ್ಷಕರಲ್ಲಿ ತಾಳ್ಮೆಯೂ, ಭೂತದಯೆಯೂ ಇರಬೇಕು. ಅದರಿಂದ ಶಿಕ್ಷಕನು ವಿಕಾರವಶನಾಗಿ ಮಕ್ಕಳನ್ನು ಶಿಕ್ಷಿಸುವ ಪ್ರಸಂಗವು ಬಹುಶಃ ಬರುವುದಿಲ್ಲ; ಅದರಿಂದ ಮಕ್ಕಳ ಮನಸಿನ ಸುಧಾರಣೆಯು ಬಹು ಸೂಕ್ಷ್ಮವಾಗಿಯೂ ಚೆನ್ನಾಗಿಯೂ ಆಗುವುದು. ವರ್ಗದಲ್ಲಿ ತಿದ್ದುವಿಕೆಯೂ ಚೆನ್ನಾಗಿ ಉಳಿಯುವುದು.

**ಶಿಕ್ಷಕನ ಸದ್ವರ್ತನವು ಅಯ್ದನೆಯ ಗುಣವು:—** ಯಾವ ಮನುಷ್ಯನು ಪರರಿಗೆ ನೀತಿಬೋಧವನ್ನು ಮಾಡಿ ಅವರನ್ನು ಸನ್ಮಾರ್ಗಕ್ಕೆ ಹಚ್ಚತಕ್ಕವನಿರುವನೋ ಅವನ ಸ್ವಂತದ ನಡಾವಳಿಯು ಅತ್ಯಂತ ಶುದ್ಧವಾದದ್ದಿರಬೇಕೆಂಬುದು ಸ್ಪಷ್ಟವಿರುತ್ತದೆ. ನೂರಾರು ಹುಡುಗರಿಗೆ ಮಾದರಿಯಾಗಿರುವ ಶಿಕ್ಷಕನು ಮಾನಸಿಕ, ಶಾರೀರಿಕ, ನೈತಿಕ, ಸದ್ಗುಣಗಳ ಪಡಿಯಚ್ಚಾಗಿರತಕ್ಕದ್ದು. ತನ್ನ ಶಿಷ್ಯರು ಹೇಗೆ ಆಗಬೇಕೆಂದು ಶಿಕ್ಷಕರ ಅಪೇಕ್ಷೆ ಇರುವುದೋ ಹಾಗೆ ತಾವೇ ಮೊದಲು ಇದ್ದೇವೆಂಬುದನ್ನು ತಮ್ಮ ಆಚರಣೆಯಿಂದ ತೋರಿಸಿಕೊಡಬೇಕು. ಉಪದೇಶದಂತೆ ಆಚರಣೆಯು ಇರದಿದ್ದರೆ ಆ ಉಪದೇಶದಿಂದ ಫಲವೇನು? ಶಿಕ್ಷಕರ ಉಪದೇಶಕ್ಕಿಂತ ಅವರ ಕೃತಿಯ ಕಡೆಗೆ ಹುಡುಗರ ಲಕ್ಷ್ಯವು ಹೆಚ್ಚಿರುವುದು. ಅವರು ಒಳ್ಳೇ ಅನುಕರಣಪ್ರಿಯರಿರುವರು. ತಮ್ಮ ತಾಯಿ ತಂದೆ ಶಿಕ್ಷಕರ ನಡೆನುಡಿಗಳಂತೆ ತಮ್ಮ ನಡೆನುಡಿಗಳನ್ನು ಇಡಲು ಯಾವಾಗಲೂ ಯತ್ನಿಸುತ್ತಿರುವರು. ಅವರಷ್ಟು ಸೂಕ್ಷ್ಮನಿರೀಕ್ಷಣ ಮಾಡುವವರು ಯಾರೂ ಇರುವುದಿಲ್ಲ. ಪರರ ನಡಾವಳಿಯನ್ನು ಒಳ್ಳೇ ಸೂಕ್ಷ್ಮದೃಷ್ಟಿಯಿಂದ ನಿರೀಕ್ಷಿಸಿ ಅವರ ತಪ್ಪುಗಳನ್ನು ಕಂಡುಹಿಡಿಯುವರು. ಅವರ ಕಣ್ಣುಕಟ್ಟುವುದು ಬಲು ಕಠಿಣವಾದ ಸಂಗತಿಯು. ಈ ಕಾರಣಗಳ ಮೂಲಕವಾಗಿ ಶಿಕ್ಷಕನು ತನ್ನ ನುಡಿಯಂತೆ ನಡೆಯನ್ನು

ಇಟ್ಟುಕೊಳ್ಳಲಿಕ್ಕೆ ಬಹಳ ಎಚ್ಚರಪಡಬೇಕು. ಬರಿಯ ಉಪದೇಶದಿಂದ ಏನೂ ಪ್ರಯೋಜನವಾಗುವುದಿಲ್ಲ. ಆದರಿಂದ ಹುಡುಗರು ದಾಂಭಿಕ ರಾಗುವ ಸಂಭವವುಂಟು. ಸದಾಚರಣೆಯ ವರ್ಚಸ್ಸು ಹುಡುಗರ ಮೇಲೆ ಬೀಳಲಿಕ್ಕೆ ಬೇಕು. ಸಾಲೆಯ ಹೊರಗೆ ಸಹ ಇಂಥ ಸದಾಚಾರಿಯಾದ ಶಿಕ್ಷಕನ ವರ್ಚಸ್ಸು, ವಿದ್ಯಾರ್ಥಿಗಳ ಮೇಲೆಯೂ, ಜನರ ಮೇಲೆಯೂ ಬೀಳುವುದು. ಅವರು ಶಿಕ್ಷಕನ ಕೂಡ ಸಹಾನುಭೂತಿಯಿಂದ ನಡಕೊಂಡು ಶಿಕ್ಷಣದ ಕೆಲಸದಲ್ಲಿ ಅವನಿಗೆ ಯಾವಾಗಲೂ ನೆರವಾಗುವರು. ಈ ಮೇರೆಗೆ ಶಿಕ್ಷಕರಿಗೂ ಪಾಲಕರಿಗೂ ಪರಸ್ಪರ ಪ್ರೇಮವೂ ಸಹಾನುಭೂತಿಯೂ ಉಂಟಾದರೆ ಶಾಲಾಶಿಕ್ಷಣಕ್ಕೆ ಗೃಹಶಿಕ್ಷಣದ ಜೋಡು ಸಿಕ್ಕು ಹುಡುಗರ ಶೀಲವನ್ನು ತಿದ್ದುವ ಕೆಲಸವು ಸುಲಭವಾಗುವುದು.


**ವಿದ್ಯಾವ್ಯಾಸಂಗವು ಶಿಕ್ಷಕನ ಆರನೆಯ ಗುಣವು** :—ಶಿಕ್ಷಕನು ತಾನು ಏನು ಕಲಿಸತಕ್ಕದ್ದು, ಹೇಗೆ ಕಲಿಸತಕ್ಕದ್ದು, ಹಾಗೆ ಯಾಕೆ ಕಲಿಸತಕ್ಕದ್ದು, ಇತ್ಯಾದಿ ಸಂಗತಿಗಳು ಅವನಿಗೆ ಸಂಪೂರ್ಣವಾಗಿ ಗೊತ್ತಿರಬೇಕು. ತನ್ನ ವಿದ್ಯಾರ್ಥಿಗಳು ಒಳ್ಳೇ ತಾಯಿತಂದೆಗಳೂ ಕರ್ತೃತ್ವಶಾಲಿಗಳಾದ ನಾಗರಿಕರೂ ಆಗತಕ್ಕದ್ದೆಂಬ ಧ್ಯೇಯವನ್ನಿಟ್ಟುಕೊಂಡು ತನ್ನ ಪ್ರಯತ್ನಗಳನ್ನು ಮಾಡುತ್ತಿರಬೇಕು. ಕಾಲಕಾಲಕ್ಕೆ ಶಿಕ್ಷಣಶಾಸ್ತ್ರದಲ್ಲಿ ಆಗುವ ಸುಧಾರಣೆಗಳನ್ನು ಅರಿತುಕೊಳ್ಳಬೇಕು. ಮಕ್ಕಳಿಗೆ ಸುಲಭವಾಗಿ ಜ್ಞಾನಮಾಡಿಕೊಡಲಿಕ್ಕೆ ಪರದೇಶದರು ಕಂಡು ಹಿಡಿದ ಉಪಾಯಗಳನ್ನು ತಿಳಿದುಕೊಳ್ಳಬೇಕು. ಕಲ್ಪನಾಶಕ್ತಿಯು ಅವನಲ್ಲಿ ಪ್ರಬಲವಾಗಿರತಕ್ಕದ್ದು. ತನ್ನ ಮನಸ್ಸಿನಲ್ಲಿರುವ ನಾನಾ ಬಗೆಯ ಕಲ್ಪನೆಗಳನ್ನು ಶಬ್ದಚಿತ್ರಗಳಿಂದ ಹುಡುಗರ ಮನಸಿನಲ್ಲಿ ಬಿಂಬಿಸುವಂತೆ ಮಾತನಾಡುವ ಯೋಗ್ಯತೆಯು ಶಿಕ್ಷಕನಲ್ಲಿರತಕ್ಕದ್ದು. ಇದಕ್ಕಾಗಿ ಶಿಕ್ಷಕನು ತನ್ನ ಜ್ಞಾನವನ್ನು ಯಾವಾಗಲೂ ಬೆಳಿಸಿಕೊಳ್ಳುತ್ತಿರಬೇಕು. ಅಂದರೆ ವಿದ್ಯಾವ್ಯಾಸಂಗಿಯಾಗಿರಬೇಕು. ಶಿಕ್ಷಕನು ಟ್ರೇನಿಂಗ ಕಾಲೇಜದ ಯೋಗ್ಯತಾಪತ್ರ (ಸರಟೀಫಿಕೇಟ) ವನ್ನು

ಹೊಂದಿದ ಕೂಡಲೆ ನಾನು ಸರ್ವಜ್ಞನಾದೆನೆಂದು ಭಾವಿಸಿ ಗ್ರಂಥಾವಲೋಕನವನ್ನು ಬಿಟ್ಟುಬಿಡುವುದು ಸರಿಯಲ್ಲ. ಒಳ್ಳೇ ಶಿಕ್ಷಕನಾಗಲಿಚ್ಛಿಸುವವನು ಯಾವಾಗಲೂ ಗ್ರಂಥಾವಲೋಕನವನ್ನು ಮಾಡಿ, ಜ್ಞಾನವನ್ನು ಸಂಗ್ರಹಿಸುತ್ತಿರಬೇಕು. ಕೇವಲ ಕಲಿಸುವ ವಿಷಯಕ್ಕೇ ಸಂಬಂಧಿಸಿದ ಪುಸ್ತಕಗಳನ್ನಷ್ಟೇ ಓದುವುದರಲ್ಲಿ ವೇಳೆಯನ್ನು ಕಳೆಯದೆ ಅನೇಕ ವಿಷಯಗಳನ್ನು ಕುರಿತು ವಿದ್ವಾಂಸರು ಬರೆದ ಹೊಸ ಹೊಸ ಪುಸ್ತಕಗಳನ್ನೂ ಮಾಸಿಕಪುಸ್ತಕಗಳನ್ನೂ ಓದುತ್ತಿರಬೇಕು. ಅದರಿಂದ ಬಹುಶ್ರುತತ್ವವು ಉಂಟಾಗುವುದು. ಅನೇಕ ಸಾರೆ ಒಂದೇ ವಿಷಯವನ್ನು ಕಲಿಸಿ ಕಲಿಸಿ ಬೇಸತ್ತ ಮನಸು ವಾಚನದಿಂದ ವಿಶ್ರಾಂತಿಗೊಳ್ಳುವುದು. ಅದರಿಂದ ಕೆಲಸದಲ್ಲಿ ಹೊಸ ಹುರುಪು ಉಂಟಾಗುವುದು. ಇದಲ್ಲದೆ ಬಹುಶ್ರುತತ್ವದ ಪರಿಣಾಮವು ಅವನ ಶಿಕ್ಷಣದಲ್ಲಿ ಕಂಡುಬರುವುದು. ತನ್ನ ಪಾಠಕ್ಕೆ ಮನೋರಂಜಕ ಸ್ವರೂಪವನ್ನು ಕೊಡಲಿಕ್ಕೆ ವಿವಿಧ ವಿಷಯಗಳ ವಾಚನವು ಅತ್ಯವಶ್ಯವಾದದ್ದು. ಒಂದು ವಿಷಯದ ಪೂರ್ಣ ಜ್ಞಾನವನ್ನೂ ಅನುಷಂಗಿಕ ವಿಷಯಗಳ ಸ್ವಲ್ಪ ಸ್ವಲ್ಪ ಜ್ಞಾನವನ್ನೂ ಮಾಡಿಕೊಂಡವನೇ ಒಳ್ಳೇ ಶಿಕ್ಷಕನಾಗುವನು.

ಈ ಆರು ಗುಣಗಳಲ್ಲದೆ ಸಾಲೆಯ ತಿದ್ದುವಿಕೆಗೆ ಅವಶ್ಯವಿರುವ ಆಳಿಕೆಯ ಸಾಮರ್ಥ್ಯ, ಸ್ಥಿರತ್ವ, ದಕ್ಷತೆ, ವ್ಯವಹಾರಚಾತುರ್ಯ, ಮನುಷ್ಯಸ್ವಭಾವ ಜ್ಞಾನ ಈ ಐಯ್ದು ಗುಣಗಳ ವರ್ಣನೆಯನ್ನು ಸಾಲೆಯ ತಿದ್ದುವಿಕೆ ಈ ಪ್ರಕರಣದಲ್ಲಿ ಕೊಟ್ಟಿದೆ. ಮುಖ್ಯವಾಗಿ ಈ ಹನ್ನೊಂದು ಗುಣಗಳಿಂದ ಶಿಕ್ಷಕನ ವ್ಯಕ್ತಿತ್ವವು ತೋರಿಬರುವುದು. ಅದರಿಂದ ಸಾಲೆಯ ತಿದ್ದುವಿಕೆ ಹಾಗು ಶಿಕ್ಷಣ ಈ ಎರಡೂ ಕೆಲಸಗಳಿಗೆ ಬಹಳ ಸಹಾಯ್ಯವಾಗುವುದು.

ಶಿಕ್ಷಕನು ಒಂಟಿಗನಾಗಿರಬಾರದು. ಅವನು ಸಮಾಜದಲ್ಲಿ ವಿಶೇಷವಾಗಿ ಮಕ್ಕಳ ಪಾಲಕರಲ್ಲಿ ಕೂಡಿಕೊಂಡಿರಬೇಕು. ಪಾಲಕರ ಸಹಾನುಭೂತಿಯಿಂದ ಸಾಲೆಯ ತಿದ್ದುವಿಕೆಗೆ ಬಹಳ ಸಹಾಯ್ಯವಾಗುವುದು; ಶಿಕ್ಷಕನಿಗೆ ಪಾಲಕರ ಪರಿಚಯವಿಲ್ಲದಿದ್ದರೆ ಹುಡುಗರು ಎಷ್ಟೋ

ಸಾರೆ ಸಾಲೆಯ ತಿದ್ದುವಿಕೆಯ ನಿಯಮಗಳಿಗೆ ತಪ್ಪಿನಡೆದು ಏನಾದರೂ ಹೇಳಿ ಶಿಕ್ಷಕನನ್ನು ಮೋಸಗೊಳಿಸುವ ಸಂಭವ ಉಂಟು. ಆಗಾಗ್ಗೆ ಶಿಕ್ಷಕರಿಗೂ ಪಾಲಕರಿಗೂ ಸಂಘಟನವಾಗುತ್ತಿದ್ದರೆ ಇಂಥ ಪ್ರಸಂಗಗಳು ಒದಗುವುದಿಲ್ಲ. ಶಿಕ್ಷಿಕೆಯರು ಹುಡುಗಿಯರ ತಾಯಂದಿರ ಸಹಾನುಭೂತಿಯನ್ನು ಸಂಪಾದಿಸಬೇಕು. ತಾವು ಕಲಿತವರೆಂತಲೂ ಹಳ್ಳಿಯ ಸ್ತ್ರೀಯರು ಅಶಿಕ್ಷಿತರೆಂತಲೂ ಭ್ರಾಂತಿಮೂಲಕವಾದ ಕಲ್ಪನೆಯನ್ನು ಮನಸಿನಲ್ಲಿ ಮಾಡಿಕೊಳ್ಳಬಾರದು. ಊರೊಳಗಿನ ಪಕ್ಷ-ಪಂಗಡಗಳಲ್ಲಿ ಶಿಕ್ಷಕರು ಎಂದೂ ಸೇರಬಾರದು.



# ೧೬ನೆಯ ಪ್ರಕರಣ

## ಶಿಕ್ಷಣದ ಸಾಧನಗಳು

## II (ಅ) ಪ್ರಶ್ನಗಳು

ಶಿಕ್ಷಣದಲ್ಲಿ ಪ್ರಶ್ನಮಾಡುವ ಕೌಶಲ್ಯವು ಉತ್ತಮ ಶಿಕ್ಷಕನ ಲಕ್ಷಣವಾಗಿರುತ್ತದೆ. ಎಷ್ಟೋ ಶಿಕ್ಷಕರು ತಮ್ಮ ಕೆಲಸವನ್ನು ಪ್ರಶ್ನೋತ್ತರ ಪದ್ಧತಿಯಿಂದ ಸಾಗಿಸಿ ಅದರಲ್ಲಿ ಯಶವನ್ನು ಪಡೆಯುವರು. ಪ್ರಶ್ನೋತ್ತರಪದ್ಧತಿಯು ಶಿಕ್ಷಣದ ಒಂದು ಮಹತ್ವದ ಅಂಗವಾಗಿರಲಿಕ್ಕೆ ಬೇಕು.

ಪ್ರಶ್ನಗಳನ್ನು ಕೇಳುವಲ್ಲಿ ಮುಖ್ಯವಾಗಿ ಎರಡು ಉದ್ದೇಶಗಳು ಇರುತ್ತವೆ. ವಿದ್ಯಾರ್ಥಿಗಳ ಜ್ಞಾನವನ್ನು ಪರೀಕ್ಷಿಸುವುದು ಮೊದಲನೆಯ ಉದ್ದೇಶವಾಗಿರುತ್ತದೆ. ಜ್ಞಾನವನ್ನು ಪರೀಕ್ಷಿಸುವ ರೀತಿಗಳಾದರೂ ಬೇರೆ ಬೇರೆ ಇರುತ್ತವೆ. ಪಾಠದ ಪ್ರಾರಂಭದಲ್ಲಿ ಕೇಳಲ್ಪಡುವ ಪರೀಕ್ಷೆಯ ಪ್ರಶ್ನಗಳು ಬೇರೆ, ಪಾಠವು ಮುಗಿದ ಮೇಲೆ ಉಪಸಂಹಾರ ರೂಪದಿಂದ ಕೇಳುವ ಪ್ರಶ್ನಗಳು ಬೇರೆ; ಕಲಿಸಿದ ಜ್ಞಾನವನ್ನು ಉಪಯೋಗಿಸಲಿಕ್ಕೆ ಬರುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸುವ ಪ್ರಶ್ನಗಳು ಬೇರೆ; ಈ ಬೇರೆ ಬೇರೆ ಪ್ರಕಾರಗಳಲ್ಲಿ ಒಂದೊಂದನ್ನೇ ಕ್ರಮವಾಗಿ ವಿವರಿಸುವ.

**ಪಾಠದ ಪ್ರಾರಂಭದಲ್ಲಿ ಕೇಳತಕ್ಕ ಪರೀಕ್ಷೆಯ ಪ್ರಶ್ನಗಳು:—**

ಇಂಥ ಪ್ರಶ್ನಗಳಿಗೆ ಪೀಠಿಕೆಯ ಪ್ರಶ್ನಗಳು ಅಥವಾ ಉಪೋದ್ಘಾತದ ಪ್ರಶ್ನಗಳು ಎಂದು ಅನ್ನಬಹುದು. ಯಾಕಂದರೆ ಇಂಥ ಪ್ರಶ್ನಗಳಿಂದ ಹುಡುಗರ ಪೂರ್ವಜ್ಞಾನವೆಷ್ಟಿರುವುದೆಂಬುದನ್ನು ಪರೀಕ್ಷಿಸಿ ಮುಂದೆ ಕಲಿಸತಕ್ಕ ವಿಷಯವನ್ನು ಗ್ರಹಿಸಲಿಕ್ಕೆ ಅವರ

ಮನಸ್ಸು ತಕ್ಕದ್ದಾಗುವಂತೆ ಅದನ್ನು ಸಿದ್ಧಪಡಿಸುತ್ತೇವೆ. ಇಂಥ ಪ್ರಶ್ನಗಳಿಂದ ಹುಡುಗರ ಜ್ಞಾನದ ಸೀಮೆಯು ಎಲ್ಲಿಯ ವರೆಗೆ ಇರುವ ದೆಂಬದೂ ಕಲಿಸತಕ್ಕ ವಿಷಯವನ್ನು ಅವರು ಎಷ್ಟರಮಟ್ಟಿಗೆ ಅರಿತಿರುವ ರೆಂಬುದೂ ತಿಳಿಯುವುದು, ಅವರ ವಿಚಾರಗಳು ಗೊತ್ತಾಗುವುವು. ಅವರ ಈ ವಿಚಾರಗಳ ತಳಹದಿಯ ಮೇಲೆಯೇ ಮುಂದೆ ನಮ್ಮ ಶಿಕ್ಷಣದ ಕಟ್ಟಡವನ್ನು ಕಟ್ಟಬೇಕಾಗಿರುವುದು. ಪರೀಕ್ಷೆಯ ಪ್ರಶ್ನಗಳಂತೆಯೇ ಈ ಪೀಠಿಕೆಯ ಪ್ರಶ್ನಗಳನ್ನಾದರೂ ತೀವ್ರವಾಗಿಯೂ, ಸಂಕ್ಷಿಪ್ತ ವಾಗಿಯೂ ಕೇಳತಕ್ಕದ್ದು. ಆದರೆ ಇಂಥ ಪ್ರಶ್ನಗಳನ್ನು ಬಹಳವಾಗಿ ಕೇಳಬಾರದು. ಅವುಗಳಿಂದ ಹುಡುಗರ ಜಿಜ್ಞಾಸೆಯು ಜಾಗೃತ ವಾಗತಕ್ಕದ್ದು. ಅಂದರೆ ಪಾಠದ ಉದ್ದೇಶವು ಅವರಿಗೆ ತಿಳಿದು ಅದನ್ನು ಅರಿತುಕೊಳ್ಳಬೇಕೆಂಬ ಮನಃಪೂರ್ವಕವಾದ ಲವಲವಿಕೆಯು ಅವರಲ್ಲಿ ಉತ್ಪನ್ನವಾಗಲಿಕ್ಕೆ ಬೇಕು.

ಒಂದು ಪಾಠವನ್ನು ಪ್ರಶ್ನೋತ್ತರಪದ್ಧತಿಯಿಂದ ಕಲಿಸಿದ ಬಳಿಕ ಕೊನೆಗೆ, ಅಥವಾ ಆ ಪಾಠದ ಒಂದೊಂದು ಭಾಗವು ಮುಗಿದ ಮೇಲೆ ಮತ್ತೊಂದು ಬಗೆಯ ಪರೀಕ್ಷೆಯ ಪ್ರಶ್ನಗಳನ್ನು ಕೇಳುವೆವು; ಈ ಪ್ರಶ್ನಗಳಿಗೆ **ಆವರ್ತನದ ಪ್ರಶ್ನಗಳು** ಅಥವಾ **ಉಪಸಂಹಾರದ ಪ್ರಶ್ನ ಗಳು** ಎಂದು ಅನ್ನಬಹುದು. ಈ ಪ್ರಶ್ನಗಳಿಂದ ಕಲಿಸಿದಪಾಠದ ಸಾರಾಂಶ ವನ್ನು ಮತ್ತೊಮ್ಮೆ ಕೇಳಿದಂತಾಗುವುದು. ಈ ಪ್ರಶ್ನಗಳ ಸಂಬಂಧ ದಿಂದ ಲಕ್ಷ್ಯದಲ್ಲಿಡತಕ್ಕ ಸಂಗತಿಗಳು ಯಾವವೆಂದರೆ:— ಕಲಿಸಿದ ಸಂಗತಿಗಳ ಸಲುವಾಗಿ ಮಾತ್ರ ಇಂಥ ಪ್ರಶ್ನಗಳನ್ನು ಕೇಳತಕ್ಕದ್ದು; ಅವು ಪಾಠದ ಮುಖ್ಯ ಮುಖ್ಯ ಮಾತುಗಳನ್ನು ಹುಡುಗರ ಲಕ್ಷ್ಯಕ್ಕೆ ತಂದುಕೊಡುವಂಥವಿರಬೇಕು. ಅಂದರೆ ಅವರು ಕ್ರಮಿಸಿ ಬಂದ ಜ್ಞಾನಮಾರ್ಗದೊಳಗಿನ ಮೈಲುಗಲ್ಲುಗಳನ್ನು ನೆನಪಿಗೆ ತಂದುಕೊಡು ವಂತಹವು ಆಗಿರತಕ್ಕದ್ದು. ಈ ತರದ ಪ್ರಶ್ನಗಳ ಧೋರಣವು ಮೂರು ಬಗೆಯಾಗಿ ಇರತಕ್ಕದ್ದು.

## ೧. ಕಲಿಸಿದ ಜ್ಞಾನವನ್ನು ದೃಢಪಡಿಸುವುದು.

**೨. ವಿದ್ಯಾರ್ಥಿಗಳ ಕಲ್ಪನೆಗಳನ್ನು ವ್ಯವಸ್ಥೆಗೊಳಿಸುವುದು.**

**೩. ಜ್ಞಾನವು ಸುಸಂಗತವಾಗುವಂತೆ ಮಾಡುವುದು.**

ಇಂಥ ಪ್ರಶ್ನಗಳನ್ನು ಆದಷ್ಟು ತೀವ್ರವಾಗಿ ಕೇಳಿದರೆ ಮಾತ್ರ ಇವು ಬೆಲೆಯುಳ್ಳವಾಗುವುವು.

ಸಲ್ಲಾಪದ ರೂಪದಿಂದ ಪಾಠವನ್ನು ಹೇಳಿ ಮುಗಿಸಿದ ಬಳಿಕ ನಾವು ವಾಡಿಕೆಯಾಗಿ ಹುಡುಗರಿಗಾದ ಜ್ಞಾನವನ್ನು ಉಪಯೋಸಲಿಕ್ಕೆ ಹಚ್ಚುವೆವು. ಈಬಗೆಯ ಕೆಲಸಕ್ಕೆ ಪಾಠದ ಅಭ್ಯಾಸವೆಂದು ಅನ್ನ ಬಹುದು. ಈಪ್ರಸಂಗಕ್ಕೆ ತಕ್ಕಂಥ ಕೆಲವು ಪರೀಕ್ಷೆಯ ಪ್ರಶ್ನಗಳನ್ನು ಕೇಳುವೆವು. **ಇಂಥ ಪ್ರಶ್ನೆಗಳಿಗೆ ಅಭ್ಯಾಸದ ಪ್ರಶ್ನೆಗಳೆಂದು ಅನ್ನ ಬಹುದು.** ಅಂಕಗಣಿತದಲ್ಲಿ ನಿಯಮಗಳನ್ನು ಕಲಿಸಿದ ಬಳಿಕ ಆ ನಿಯಮ ಗಳ ಅಭ್ಯಾಸವು ಬೇರೆಬೇರೆ ಉದಾಹರಣೆಗಳಿಂದ ಆಗುವಂತೆ ಕೆಲವು ಪ್ರಶ್ನಗಳನ್ನು ಕೊಡುವೆವು. ಅದೇ ಪ್ರಕಾರ ಬೇರೆ ವಿಷಯಗಳಲ್ಲಿಯೂ ಇಂಥ ಪ್ರಶ್ನಗಳನ್ನು ಕೇಳಬೇಕಾಗುವುದು. ಈ ಅಭ್ಯಾಸದ ಪ್ರಶ್ನೆ ಗಳಿಗೆ ಉತ್ತರವನ್ನು ಕೊಡುವುದಕ್ಕಾಗಿ ಹುಡುಗರು ತಾವು ಸಂಪಾದಿ ಸಿದ ಜ್ಞಾನವನ್ನು ಲಕ್ಷ್ಯಕ್ಕೆ ತಂದು ಅದನ್ನು ವ್ಯವಸ್ಥೆಪಡಿಸಿಕೊಂಡು ಅದನ್ನು ಉಪಯೋಗಿಸಕೊಳ್ಳಬೇಕಾಗುವುದು. ಇದರಿಂದ ಆ ಜ್ಞಾನವು ಚನ್ನಾಗಿ ಬಿಂಬಿಸುವುದಲ್ಲದೆ, ಅದು ಅವರ ಸ್ವಂತದ್ದಾಗಿ ಅವರ ಮನಸಿ ನಲ್ಲಿ ಸ್ಥಿರವಾಗಿ ನಿಲ್ಲುವುದು. ಇದು ಶಿಕ್ಷಣದಲ್ಲಿ ಅತಿ ಮಹತ್ವದ ಸಂಗತಿಯಾಗಿರುತ್ತದೆ. ಥ್ರಿಂಗನೆಂಬ ಶಿಕ್ಷಣಶಾಸ್ತ್ರಜ್ಞನು ಈ ವಿಷಯ ವಾಗಿ ಹೇಳಿದ್ದೇನಂದರೆ:— "ಚಾತುರ್ಯದಿಂದ ಪ್ರಶ್ನಗಳನ್ನು ಕೇಳಿ ಮನಸಿಗೆ ಕಲಿಯಲಿಕ್ಕೂ, ಕಲಿತ ಜ್ಞಾನವನ್ನು ವ್ಯವಸ್ಥೆಗೊಳಿಸಲಿಕ್ಕೂ, ಆ ಜ್ಞಾನದ ಉಪಯೋಗಮಾಡಿಕೊಳ್ಳಲಿಕ್ಕೂ, ಒತ್ತಾಯಪಡಿಸುವುದೇ ನಿಜವಾದ ಶಿಕ್ಷಣವು."

ಒಮ್ಮೊಮ್ಮೆ ಇಡೀ ಪಾಠವು ಇಲ್ಲವೆ ಅದರ ಬಹಳ ಭಾಗವು ಆವರ್ತನದ ಸ್ವರೂಪದ್ದಿರತಕ್ಕದ್ದು:— ಶಿಕ್ಷಕರು ಈ ಬೆಲೆಯುಳ್ಳ ಕೆಲಸದ ಕಡೆಗೆ ದುರ್ಲಕ್ಷ್ಯಮಾಡುವದುಂಟು– ಆವರ್ತನ ಪಾಠದಲ್ಲಿ

ಮುಖ್ಯವಾಗಿ ಮೇಲೆ ಹೇಳಿದ ಮಾದರಿಯ ಸ್ವರೂಪದ ಅಭ್ಯಾಸದ ಪ್ರಶ್ನಗಳೇ ಇರತಕ್ಕದ್ದು.

ಇನ್ನು ಪ್ರಶ್ನಗಳನ್ನು ಕೇಳುವಲ್ಲಿ ಎರಡನೆಯ ಅತಿ ಮಹತ್ವದ ಉದ್ದೇಶವನ್ನು ಕುರಿತು ಆಲೋಚಿಸುವ.

ನಾವು ಮನಸಿಗೆ ಶಿಕ್ಷಣವನ್ನು ಕೊಡತಕ್ಕದ್ದಿರುವುದು ; ಅಂದರೆ ಮನಸಿಗೆ ತಕ್ಕ ಅಭ್ಯಾಸವನ್ನು ಕೊಟ್ಟು ಅದನ್ನು ವಿಕಾಸಪಡಿಸತಕ್ಕದ್ದಿರುವದು; ಅಥವಾ ಹುಡುಗರ ವಿಚಾರಗಳನ್ನು ತಕ್ಕ ಮಾರ್ಗಕ್ಕೆ ಹಚ್ಚಿ ಅವುಗಳನ್ನು ಉನ್ನತಸ್ಥಿತಿಗೆ ಒಯ್ಯುವುದಿರುತ್ತದೆ. ಈ ಮಾತನ್ನು ಶಿಕ್ಷಕರಾದ ನಾವು ಚನ್ನಾಗಿ ಲಕ್ಷದಲ್ಲಿಡತಕ್ಕದ್ದು. ಎರಡನೆಯ ಪ್ರಕಾರದ ಪ್ರಶ್ನಗಳು ಈ ವಿಷಯಕ್ಕೆ ಸಂಬಂಧಪಟ್ಟವುಗಳಾಗಿರುತ್ತವೆ. ಈ ಪ್ರಶ್ನೆಗಳಿಗೆ "**ಶಿಕ್ಷಣದ ಪ್ರಶ್ನಗಳು**" ಅಥವಾ "**ಬುದ್ಧಿವಿಕಾಸದ ಪ್ರಶ್ನಗಳು**" ಎಂದು ಅನ್ನಬಹುದು. ಇಂಥ ಪ್ರಶ್ನಗಳಿಂದ ಹುಡುಗರಲ್ಲಿ ಮಾನಸಿಕ ಚಟುವಟಿಕೆಯು ಉತ್ಪನ್ನವಾಗುವುದು. ಅವರಿಗೆ ತುಲನೆ ಮಾಡಲಿಕ್ಕೂ ಅವರಲ್ಲಿ ಹೊಸ ಹೊಸ ಕಲ್ಪನೆಗಳನ್ನು ಉತ್ಪನ್ನಮಾಡಲಿಕ್ಕೂ ಅವರಿಂದ ಅನುಮಾನಗಳನ್ನು ಹೊರಡಿಸಲಿಕ್ಕೂ ನಿರ್ಣಯಗಳನ್ನು ಹೇಳಿಸಲಿಕ್ಕೂ ಅನುಕೂಲವಾಗುವುದು. ಹುಡುಗರು ಶಿಕ್ಷಕನ ಇಚ್ಛೆಯ ಪ್ರಕಾರ ತಮ್ಮ ಕಲ್ಪನೆಗಳಿಂದ ಮನಸ್ಸನ್ನು ಸಿದ್ಧಪಡಿಸಿಕೊಳ್ಳುವರು; ಸಾರಾಂಶ : ಇಂಥ ಪ್ರಶ್ನಗಳಿಂದ ಹುಡುಗರ ಮನಸ್ಸು ವಿಕಾಸಹೊಂದುವುದು. ಈ ಪ್ರಶ್ನಗಳು ಹುಡುಗರಲ್ಲಿ ವಿಚಾರಶಕ್ತಿಯನ್ನು ಉತ್ಪನ್ನಮಾಡುವ ಸಾಧನಗಳಾಗಿರುವುವೆಂಬ ಮಾತನ್ನು ಶಿಕ್ಷಕರು ಲಕ್ಷದಲ್ಲಿಟ್ಟು ಇಂಥ ಪ್ರಶ್ನಗಳನ್ನು ರಚಿಸಿಕೊಳ್ಳತಕ್ಕದ್ದು.

ಯಾವ ಪ್ರಶ್ನಗಳಿಂದ ಹುಡುಗರ ಮಾನಸಿಕ ಪ್ರಯತ್ನಕ್ಕೆ ಸಹಾಯ್ಯವಾಗುವದೋ ಅವೇ ಶಿಕ್ಷಣದ ಪ್ರಶ್ನೆಗಳೆಂದು ಹೇಳಬಹುದು. **ಆ ಪ್ರಶ್ನಗಳಲ್ಲಿ ಮುಖ್ಯವಾಗಿ ನಾಲ್ಕು ಗುಣಗಳು** ಇರತಕ್ಕದ್ದು.

**೧ನೇಯದು**—ಇಂಥ ಪ್ರಶ್ನಗಳು ಸ್ಪಷ್ಟವಾಗಿರತಕ್ಕದ್ದು. ನೀವು ಏನು ಕೇಳುತ್ತೀರೆಂಬುದು ಹುಡುಗರಿಗೆ ಸ್ಪಷ್ಟವಾಗಿ ತಿಳಿಯಲಿಕ್ಕೆಬೇಕು.

ಮತ್ತು ಪ್ರಶ್ನದ ಭಾಷೆಯಿಂದ ಹುಡುಗರಿಗೆ ಇಂಥದೊಂದು ನಿಶ್ಚಿತವಾದ ಮಾತನ್ನೇ ಕೇಳಿದರೆಂಬುದು ಗೊತ್ತಾಗಲಿಕ್ಕೆ ಬೇಕು. ಅದರಿಂದ ಸ್ಪಷ್ಟವಾದ ಉತ್ತರವು ಹೊರಡುವುದು. ಉದಾಹರಣಾರ್ಥವಾಗಿ "ಬೆಕ್ಕು" ಈ ಉತ್ತರವು ಬೇಕಾದಾಗ "ಜನರು ತಮ್ಮ ಮನೆಯಲ್ಲಿ ಏನೇನು ಸಾಕುತ್ತಾರೆ?" ಈ ಪ್ರಶ್ನವನ್ನು ಕೇಳಬಾರದು. ಯಾಕಂದರೆ, ಈ ಪ್ರಶ್ನಕ್ಕೆ ನಾಯಿ, ಗಿಳಿ, ಕೋಳಿ ಎಮ್ಮೆ, ಆಕಳು ಈ ಮುಂತಾದ ಪ್ರಾಣಿಗಳನ್ನು ಸಾಕುತ್ತಾರೆಂದು ಉತ್ತರವು ಬರಬಹುದು. ಆದರೆ "ಮನೆಯಲ್ಲಿ ಇಲಿಗಳು ಹೆಚ್ಚಾದಾಗ ಜನರು ಏನನ್ನು ಸಾಕುತ್ತಾರೆ? ಈ ಪ್ರಶ್ನವನ್ನು ಕೇಳಿದರೆ "ಬೆಕ್ಕು ಸಾಕುತ್ತಾರೆ" ಇದೇ ಉತ್ತರವು ಬರುವುದು. ಇದರಿಂದ ನಿಶ್ಚಿತವಾದ ಉತ್ತರವು ಹೊರಡಬೇಕಾದರೆ ಅದಕ್ಕೆ ತಕ್ಕಂತೆ ಸ್ಪಷ್ಟವಾದ ಭಾಷೆಯನ್ನು ಉಪಯೋಗಿಸಬೇಕೆಂಬುದು ಸ್ಪಷ್ಟವಾಗುವದು. ಮತ್ತು ಒಂದು ಪ್ರಶ್ನದಲ್ಲಿ ಒಂದೇ ಸಂಗತಿಯನ್ನು ಕೇಳತಕ್ಕದ್ದು.

೨ನೇಯದು— ಪ್ರಶ್ನವು ಅಚ್ಚುಕಟ್ಟಾಗಿರತಕ್ಕದ್ದು. ಅದರಲ್ಲಿ ನಿರರ್ಥಕ ಶಬ್ದಗಳು ಇರಬಾರದು. ನಿರರ್ಥಕ ಪ್ರಶ್ನಗಳನ್ನು ಕೇಳುವುದು ಅಯೋಗ್ಯ ಶಿಕ್ಷಕನ ಲಕ್ಷಣವಾಗಿರುತ್ತದೆ. ಪ್ರಶ್ನದಲ್ಲಿ ಆದಷ್ಟು ಕಡಿಮೆ ಶಬ್ದಗಳು ಇರತಕ್ಕದ್ದು. ನಿಶ್ಚಿತವಾದ ಉತ್ತರವು ಹೊರಡಲಿಕ್ಕೆ ಆ ಶಬ್ದಗಳು ಅತ್ಯಂತ ಆವಶ್ಯಕವಾಗಿರಲಿಕ್ಕೆಬೇಕು. "ಈ ಪ್ರಶ್ನಕ್ಕೆ ಯಾರು ಉತ್ತರ ಕೊಡುವಿರಿ?" "ಈ ಪ್ರಶ್ನದ ಉತ್ತರವನ್ನು ಯಾರಾದರೂ ಹೇಳಬೇಕು" "ಈ ಪ್ರಶ್ನಕ್ಕೆ ಎಷ್ಟು ಮಂದಿ ಉತ್ತರವನ್ನು ಹೇಳುವಿರಿ?" ಇತ್ಯಾದಿ ಮಾತುಗಳನ್ನು ಪ್ರಶ್ನ ಕೇಳುವಾಗ ಉಪಯೋಗಿಸಬಾರದು. ಚಿಕ್ಕ ಬಾಲಕರ ವರ್ಗಕ್ಕೆ ಇಂಥ ಪ್ರಶ್ನಗಳು ಒಂದು ಸಮಯದಲ್ಲಿ ಉತ್ತೇಜಸಕರವಾಗಬಹುದು. ಆದರೆ ಪ್ರೌಢ ವಿದ್ಯಾರ್ಥಿಗಳಿಗೆ ಇಂಥ ಪ್ರಶ್ನಗಳು ನಿರರ್ಥಕವಾದವುಗಳು. ಯಾಕಂದರೆ ಇಂಥದೊಂದು ಪ್ರಶ್ನಕ್ಕೆ ಎಷ್ಟು ಮಂದಿ ಉತ್ತರವನ್ನು ಕೊಡುವರೆಂಬುದನ್ನು ತಿಳಕೊಳ್ಳುವ ಆವಶ್ಯಕತೆಯು ಶಿಕ್ಷಕನಿಗೆ ಇರುವುದಿಲ್ಲ.

**೩ನೇಯದು—** ಪ್ರಶ್ನೆವು ಪ್ರಸ್ತುತದಲ್ಲಿ ನಡೆದ ವಿಷಯವನ್ನು ಬಿಟ್ಟು ಹೊರಗೆ ಹೋಗಬಾರದು. ಅನುಭವವಿಲ್ಲದ ತರುಣ ಶಿಕ್ಷಕರು ವಾಡಿಕೆಯಾಗಿ ಈ ತಪ್ಪನ್ನು ಮಾಡುವರು. ಮತ್ತು ಇಂಥ ತಪ್ಪು ಬಹುಶಃ ಅವರು ಸಿದ್ಧತೆಯಿಲ್ಲದೆ ಕಲಿಸಲಿಕ್ಕೆ ನಿಲ್ಲುವುದರಿಂದ ಆಗುವುದು. ಶಿಕ್ಷಕರು ತಮ್ಮ ಪಾಠದ ಸಿದ್ಧತೆಯನ್ನು ಎಷ್ಟು ಎಚ್ಚರಪೂರ್ವಕವಾಗಿ ಮಾಡಬೇಕಾಗುವುದೋ ಅಷ್ಟೇ ಎಚ್ಚರದಿಂದ ಕೇಳತಕ್ಕ ಪ್ರಶ್ನಗಳ ಸಿದ್ಧತೆಯನ್ನು ಮಾಡಿಕೊಂಡಿರಲಿಕ್ಕೆಬೇಕು. ಕಲಿಸುವ ಪ್ರಶ್ನಗಳು ಬಹುಶಃ ಒಂದು ಸಂಗತಿಯಿಂದ ಮತ್ತೊಂದು ಸಂಗತಿಗೆ ಅಥವಾ ಒಂದು ಕಲ್ಪನೆಯಿಂದ ಮತ್ತೊಂದು ಕಲ್ಪನೆಗೆ ಸಂಬಂಧವನ್ನು ಜೋಡಿಸುವ ಸರಪಳಿಯ ಕಳಿಗೆಗಳಂತೆ ಇರುವವು. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಕಲಿಸುವ ಕಾಲಕ್ಕೆ ಪ್ರಶ್ನಗಳು ಪ್ರಸ್ತುತ ವಿಷಯವನ್ನು ಬಿಟ್ಟು ಹೋಗದಂತೆ ಎಚ್ಚರಪಡುವುದರ ಮಹತ್ವವು ಗೊತ್ತಾಗುವುದು. ಶಿಕ್ಷಕರು ಗಾಬರಿಯಾಗುವುದರಿಂದಲೂ ಈ ತಪ್ಪು ಸಂಭವಿಸುವುದು. ಇದಕ್ಕೆ ಪ್ರಶ್ನಗಳನ್ನು ಮೊದಲೇ ಸಿದ್ಧಮಾಡಿಟ್ಟುಕೊಳ್ಳುವದೊಂದೇ ಉಪಾಯವಲ್ಲದೆ ಬೇರೆ ಉಪಾಯಗಳಿಲ್ಲ. ಪಾಠದ ಯಾವ ಯಾವ ಭಾಗದಲ್ಲಿ ಯಾವ ಯಾವ ಮುಖ್ಯ ಮುಖ್ಯ ಪ್ರಶ್ನಗಳನ್ನು ಕೇಳತಕ್ಕದ್ದು, ಮತ್ತು ಅವುಗಳನ್ನು ಯಾವ ರೂಪದಲ್ಲಿ ಕೇಳತಕ್ಕದ್ದು, ಎಂಬುದನ್ನು ಮೊದಲೇ ಗೊತ್ತುಮಾಡಿಕೊಂಡಿರಲಿಕ್ಕೆ ಬೇಕು. ಯಾವದೊಂದು ಪ್ರಶ್ನಕ್ಕೆ ಹುಡುಗರಿಂದ ಏನು ಉತ್ತರವು ಬರಬಹುದೆಂಬುದನ್ನು ಚರ್ಚೆ ಮಾಡಿ ಅರಿತುಕೊಳ್ಳತಕ್ಕದ್ದು. ಒಂದುವೇಳೆ ಶಿಕ್ಷಕರು ಯಾವದೊಂದು ಕಾರಣದಿಂದ ಪ್ರಶ್ನವನ್ನಾಗಲಿ, ಪ್ರಶ್ನದ ಸ್ವರೂಪವನ್ನಾಗಲಿ ಬದಲಿಸಿದರೆ ಹುಡುಗರು ಗೊಂದಲದಲ್ಲಿ ಬೀಳುವರು, ಮೊದಲು ಒಂದು ಪ್ರಶ್ನವನ್ನು ಕೇಳುವರು; ಆ ಪ್ರಶ್ನದ ಅರ್ಥವು ಹುಡುಗರಿಗೆ ತಿಳಿದಿರಲಿಕ್ಕಿಲ್ಲೆಂಬ ಭಾವನೆಯಿಂದ ಅದರ ಅರ್ಥವನ್ನು ವಿವರಿಸಿ ಹೇಳುವರು; ಅಥವಾ, ಮುಂದೆ ಒಂದು ಪ್ರಶ್ನವನ್ನು ಕೇಳಬೇಕೆಂದು ಮನಸಿನಲ್ಲಿಟ್ಟುಕೊಂಡು ಅದಕ್ಕೆ ಪೀಠಿಕೆಯ ರೂಪವಾಗಿ ಕೆಲವು ಸಂಗತಿಗಳನ್ನು

ಕೇಳುವುದು ಅವಶ್ಯವೆಂದು ತೋರಿ ಹೇಳತೊಡಗುವರು; ಕಡೆಗೆ ಬೇರೆಯೇ ಒಂದು ಪ್ರಶ್ನವನ್ನು ಕೇಳಿಬಿಡುವರು. ಈ ಮೇರೆಗೆ ಶಿಕ್ಷಕರು ಪ್ರಸ್ತುತದ ವಿಷಯವನ್ನು ಬಿಟ್ಟು ಹೋಗುವರು. ಪೂರ್ವಸಿದ್ಧತೆಯಿಂದ ಈ ತರದ ತಪ್ಪುಗಳೆಲ್ಲ ದೂರಾಗುವವು.

**೪ನೆಯದು—ಪ್ರಶ್ನವು ಸಮಂಜಸವಾಗಿರತಕ್ಕದ್ದು.** ಅಂದರೆ ಹುಡುಗರು ಆ ಪ್ರಶ್ನವನ್ನು ತಿಳಕೊಂಡು, ಅದಕ್ಕೆ ಸರಿಯಾಗಿಯೂ ತಮ್ಮ ತಿಳುವಳಿಕೆಯ ಮೇರೆಗೆ ಸಮರ್ಪಕವಾಗಿಯೂ ಉತ್ತರವನ್ನು ಕೊಡಲಿಕ್ಕೆ ಬರುವಂತೆ ಇರತಕ್ಕದ್ದು.

ಹುಡುಗರನ್ನು ಮಾನಸಿಕ ಪ್ರಯತ್ನಕ್ಕೆ ಹಚ್ಚುವುದೇ ಕಲಿಸುವ ಪ್ರಶ್ನಗಳ ಮುಖ್ಯ ಉದ್ದೇಶವಿರುವುದು. ಈ ಉದ್ದೇಶವು ಸಫಲವಾದರೆ ಪ್ರಶ್ನದ ಸ್ವರೂಪಕ್ಕೆ ಅಷ್ಟೇನು ಮಹತ್ವವಿಲ್ಲ, ಎಂದು ಕೆಲವು ಶಿಕ್ಷಕರು ಅನ್ನಬಹುದು; ಮತ್ತು ಈ ಮಾತು ಕೆಲಮಟ್ಟಿಗೆ ನಿಜವೂ ಇರುವುದು; ಆದರೆ ಹಲಕೆಲವು ನಿರುಪಯುಕ್ತವಾದ ಪ್ರಶ್ನಗಳನ್ನು ಮೇಲೆ ಮೇಲೆ ಕೇಳುವ ಚಟವು ಬಹು ಜನ ಶಿಕ್ಷಕರಿಗೆ ಅಂಟಿಕೊಂಡಿರುವುದು. ಶಿಕ್ಷಣದ ಕಲೆಯಲ್ಲಿ ಒಳ್ಳೇ ಕುಶಲನಾದ ಶಿಕ್ಷಕನು ಕೆಲಕೆಲವು ಪ್ರಸಂಗಗಳಲ್ಲಿ ಇಂಥ ಪ್ರಶ್ನಗಳನ್ನು ಆಕಸ್ಮಿಕವಾಗಿ ಕೇಳಿ ಪ್ರಯೋಜನವನ್ನು ಮಾಡಿ ಕೊಳ್ಳುತ್ತಿರಬಹುದು. ಆದರೆ ತರುಣ ಶಿಕ್ಷಕರು ಇಂಥ ಪ್ರಶ್ನಗಳನ್ನು ಆಗಾಗ್ಗೆ ಕೇಳುವ ಚಟವನ್ನು ಪ್ರಾರಂಭದಿಂದಲೇ ಹಚ್ಚಿಕೊಳ್ಳಬಾರದು. ಅಂಥ ಮಾದರಿಯ ಕೆಲವು ಪ್ರಶ್ನಗಳನ್ನು ಇಲ್ಲಿ ಕೊಡುವೆವು.

**ಸಮ್ಮತಿಯನ್ನು ಕೇಳುವ ಪ್ರಶ್ನಗಳು**—ಅಂದರೆ ಯಾವ ಪ್ರಶ್ನ ಗಳ ಕೊನೆಗೆ "ಅಲ್ಲವೆ"? ಎಂಬ ಶಬ್ದವು ಬರುವದೋ ಅಂಥ ಪ್ರಶ್ನಗಳಿಂದ ವಿಶೇಷ ಪ್ರಯೋಜನವಾಗುವುದಿಲ್ಲ. ಶಿಕ್ಷಕರು ವಿದ್ಯಾರ್ಥಿಗಳಿಗೆ ಹೇಳುವ ಸಂಗತಿಗಳು ನಿಜವಾಗಿರುವವೋ ಇಲ್ಲವೋ ಎಂಬುದನ್ನು ಕೇಳುವ ಕಾರಣವು ಇರಬಾರದು. ಹುಡುಗರು ಪ್ರಶ್ನದ ಸ್ವರೂಪ ವನ್ನು ಶಿಕ್ಷಕರ ಧ್ವನಿಯನ್ನು ತಿಳಿದು "ಅಹುದು" ಎಂದು ಉತ್ತರವನ್ನು ಏನೂ ವಿಚಾರ ಮಾಡದೆ ಚಟ್ಟನೆ ಕೊಟ್ಟುಬಿಡುವರು. ಆದರೆ ಕ್ವಚಿತ್

ಪ್ರಸಂಗದಲ್ಲಿ ಚಿಕ್ಕ ಮಕ್ಕಳಿಗೆ ಉತ್ತೇಜನವು ದೊರೆಯುವುದಕ್ಕಾಗಿ ಇಂಥ ಪ್ರಶ್ನೆಗಳನ್ನು ಕೇಳಲಿಕ್ಕೆ ಅಡ್ಡಿಯಿಲ್ಲ.

ಎಷ್ಟೋ ಶಿಕ್ಷಕರು ಕಲಿಸುವಾಗ ಒಂದೊಂದು ಸಂಗತಿಯನ್ನು ಹೇಳಿ, ಕೂಡಲೆ ಅದೇ ಸಂಗತಿಯ ಬಗ್ಗೆ ಒಂದು ಪ್ರಶ್ನವನ್ನು ಕೇಳುವರು. ಇವುಗಳಿಗೆ "ಪ್ರತಿಧ್ವನಿಯ ಪ್ರಶ್ನಗಳೆ"ಂದು ಅನ್ನಬಹುದು. ಯಾಕಂದರೆ, ಶಿಕ್ಷಕರು ಹೇಳಿದ್ದನ್ನೇ ಹುಡುಗರು ತಿರುಗಿ ಹೇಳುವದೇ ಈ ಪ್ರಶ್ನಗಳ ಉದ್ದೇಶವಾಗಿರುವದು. ಉದಾಹರಣಾರ್ಥವಾಗಿ "ದಿಲ್ಲಿಯು ಹಿಂದುಸ್ಥಾನದ ರಾಜಧಾನಿಯಾಗಿರುತ್ತದೆ." ಈ ಮಾತನ್ನು ಹೇಳಿ, ದಿಲ್ಲಿಯು ಏನದೆ? ಎಂದು ಪ್ರಶ್ನವನ್ನು ಕೇಳುವರು. ಇಂಥ ಪ್ರಶ್ನಗಳಲ್ಲಿಯೂ ಹುಡುಗರು ವಿಚಾರಮಾಡದೆ ಸರಿಯಾದ ಉತ್ತರವನ್ನು ಕೊಡಲಿಕ್ಕೆ ಬರುವುದು. ಆದಕಾರಣ ಇಂಥ ಪ್ರಶ್ನಗಳನ್ನು ಕೇಳುವ ಚಟವು ಶಿಕ್ಷಕರಿಗೆ ಇರಬಾರದು.

ಅಹುದು ಅಥವಾ ಅಲ್ಲ ಇಷ್ಟೇ ಉತ್ತರವು ಬರುವಂಥ ಪ್ರಶ್ನಗಳನ್ನು ವಿಶೇಷವಾಗಿ ಕೇಳಬಾರದು. ಇಂಥ ಪ್ರಶ್ನಗಳಿಗೆ ಹುಡುಗರು ಸಾಧಾರಣವಾಗಿ ತರ್ಕದಿಂದ ಉತ್ತರ ಕೊಡುವರು. ಬಹುಶಃ ಪ್ರತಿಒಬ್ಬ ಶಿಕ್ಷಕನು ಇಂಥ ಪ್ರಶ್ನಗಳನ್ನು ಕೇಳಲಿಚ್ಛಿಸುವನು. ಆದರೆ ಇಂಥ ಪ್ರಶ್ನಗಳನ್ನು ಕೇಳಿ ಉತ್ತರವು ಬಂದಕೂಡಲೆ ಅದೇ ಹುಡುಗನಿಗೆ "ಯಾಕೆ?" ಎಂಬ ಪ್ರಶ್ನವನ್ನು ಕೇಳುವುದರಿಂದ ಅವನು ಕಾರಣವನ್ನು ವಿವರಿಸಿ ಹೇಳಬೇಕಾಗುವುದು. ಅದರಿಂದ ದೊಡ್ಡ ತಪ್ಪಾಗುವ ಸಂಭವವಿಲ್ಲ; ಮತ್ತು ಹುಡುಗರು ಕೇವಲ ತರ್ಕದಿಂದ ಉತ್ತರಕೊಡುವುದು ಕಟ್ಟಾಗುವುದು.

ಅರ್ಧೋಕ್ತಿಗಳನ್ನು ಪೂರ್ಣಮಾಡುವ ಪ್ರಶ್ನಗಳನ್ನೂ ಕೇಳಬಾರದೆಂದು ಸೂಚಿಸುವುದು ಅವಶ್ಯವಿರುತ್ತದೆ. ಎಷ್ಟೋ ಶಿಕ್ಷಕರು ಒಮ್ಮೊಮ್ಮೆ ತಮಗೆ ಬೇಕಾದ ಉತ್ತರದ ಶಬ್ದವನ್ನು ಹುಡುಗರು ಹೇಳಿ ಮಾತು ಮುಗಿಸುವಂಥ ಪ್ರಶ್ನಗಳನ್ನು ಬಹಳವಾಗಿ ಕೇಳುತ್ತಿರುವರು. ಉದಾಹರಣಾರ್ಥವಾಗಿ—ಲಂಡನ ಪಟ್ಟಣವು ಇಂಗ್ಲಂಡದ—ಏನಾ

ಗಿರುತ್ತದೆ? ಹಿಂದುಸ್ತಾನದ ಉತ್ತರ ಮೇರೆ ಹೊರ್ತಾಗಿ ಮೂರು ಮಗ್ಗಲು —ಏನಿರುತ್ತದೆ? ಇತ್ಯಾದಿ. ಇಂಥ ಪ್ರಶ್ನೆಗಳಿಗೆ ಉತ್ತರ ಕೊಡುವಾಗ ಹುಡುಗರು ವಿಶೇಷ ವಿಚಾರ ಮಾಡಬೇಕಾಗುವುದಿಲ್ಲ; ಈ ಪ್ರಶ್ನಗಳಲ್ಲಿ ಶಿಕ್ಷಕರ ಕೆಲಸವೇ ಬಹಳವಾಗುವುದು. ವಿದ್ಯಾರ್ಥಿಗಳು ತೀರ ಸ್ವಲ್ಪ ಕೆಲಸ ಮಾಡಬೇಕಾಗುವುದು. ಆದರೆ ಚಿಕ್ಕವರೂ, ನಾಚಿಕೆಯ ಸ್ವಭಾವವುಳ್ಳವರೂ ಆದ ವಿದ್ಯಾರ್ಥಿಗಳಿಗೆ ಇಂಥ ಪ್ರಶ್ನಗಳಿಂದ ಉತ್ತೇಜನವು ದೊರೆಯುವುದು. ಮತ್ತು ಈ ಪ್ರಶ್ನ ಗಳಿಂದ ಅವರಿಗೆ ಹೆಚ್ಚು ಶಬ್ದಗಳ ಜ್ಞಾನವೂ ಆಗುವುದು. ಗುರು ಶಿಷ್ಯರ ಪ್ರೇಮಭಾವವೂ ಬೆಳೆಯುವುದು. ಶಿಕ್ಷಣದ ಕಲೆಯಲ್ಲಿ ಹೆಚ್ಚು ಹೆಚ್ಚು ನುರಿತಂತೆ ಇಂಥ ಪ್ರಶ್ನಗಳನ್ನು ಕೇಳಬೇಕೆಂದು ಶಿಕ್ಷಕರಿಗೆ ಕಂಡು ಬರುವುದು. ಆದರೆ ಆ ಪ್ರಶ್ನಗಳನ್ನು ಪ್ರೌಢವಿದ್ಯಾರ್ಥಿಗಳಿಗೆ ಕೇಳದೆ ಚಿಕ್ಕ ಮಕ್ಕಳಿಗೆ ಮಾತ್ರ ಕೇಳುತ್ತಿರಬೇಕು. ಮತ್ತು ಹೊಸ ಶಿಕ್ಷಕರು ಕಲಿಸುವ ರೂಢಿಯನ್ನು ಇಂಥ ಪ್ರಶ್ನಗಳಿಂದ ಪ್ರಾರಂಭ ಮಾಡಕೂಡದು.

ಶಿಕ್ಷಣದಲ್ಲಿ ಪ್ರಶ್ನ ಮಾಡುವ ಕಲೆಯು ಬಹು ಮಹತ್ವದ ಸಂಗತಿ ಯಾಗಿದೆ ಎಂದು ಹಿಂದೆ ಹೇಳಿದ್ದೇವೆ. ಮತ್ತು ಶಿಕ್ಷಕರು ಶಿಕ್ಷಣ ಕಲೆಯಲ್ಲಿ ಹೆಚ್ಚು ಹೆಚ್ಚು ನುರಿತಂತೆ ಅವರಿಗೆ ಈ ಮಾತು ಹೆಚ್ಚು ಚನ್ನಾಗಿ ಮನವರಿಕೆಯಾಗುವುದು. ಪ್ರಶ್ನಗಳನ್ನು ಕೇಳದಿದ್ದರೆ ವಿದ್ಯಾರ್ಥಿಗಳ ಪ್ರಗತಿಯು ಹೆಚ್ಚಾಗಲಾರದು. ಆದರೆ ಹುಡುಗರಿಗೆ ಮಿತಿಮೀರಿ ಪ್ರಶ್ನಗಳನ್ನು ಕೇಳುವುದರಿಂದ ಅವರು ಸ್ವತಃ ವಿಚಾರ ಮಾಡಲಿಕ್ಕೂ ಸ್ವಂತ ಪ್ರಯತ್ನದಿಂದ ಉತ್ತರಗಳನ್ನು ಕೊಡಲಿಕ್ಕೂ ತಕ್ಕವರಾಗುವುದಿಲ್ಲ, ಇದಲ್ಲದೆ ಪ್ರಶ್ನ ಕೇಳಿದ ಹೊರತು ಅವರ ಮನಸಿನ ಮೇಲೆ ಯಾವ ಬಗೆಯ ಪರಿಣಾಮವೇ ಆಗುವುದಿಲ್ಲೆಂದು ಶಿಕ್ಷಕರಿಗೆ ಕಂಡುಬರುವುದು.

ಏನಾದರೂ ಪ್ರಶ್ನಗಳನ್ನು ಕೇಳಬೇಕೆಂಬ ಉದ್ದೇಶದಿಂದಲೇ ಪ್ರಶ್ನ ಗಳನ್ನು ಕೇಳುವುದೂ, ಅಸಂಬದ್ಧವಾಗಿ ಪ್ರಶ್ನಗಳನ್ನು ಕೇಳುವುದೂ

ತೀರ ತಪ್ಪು; ಶಿಕ್ಷಕರು ಇಂಥ ತಪ್ಪುಗಳನ್ನು ಒಂದು ವರ್ಣನಾತ್ಮಕ ವಾದ ಪಾಠವನ್ನು ಕಲಿಸುವಾಗ ಅಥವಾ ಒಂದು ಕಥೆಯನ್ನು ಹೇಳುವಾಗ ಅನೇಕಸಾರೆಮಾಡುವರು; ಪ್ರಶ್ನೆಗಳು ಕಾರ್ಯಕಾರಣಗಳ ನಿಯಮಕ್ಕೆ ಸಂಬಂಧಪಟ್ಟಿರಬೇಕು. ಮತ್ತು ಒಂದು ಪ್ರಶ್ನೆಕ್ಕೆ ಮತ್ತೊಂದು ಪ್ರಶ್ನೆವು ಹೊಂದಿಕೆಯಾಗಿರಬೇಕು. ಮತ್ತು ಅವು ಹೇಳಲ್ಪಟ್ಟ ಕಥೆಯಿಂದ ಸ್ವಾಭಾವಿಕವಾಗಿ ಹೊರಟಂಥವಿರಬೇಕು. ನಿಮ್ಮ ಪ್ರಶ್ನೆಗಳೂ ಹುಡುಗರ ಉತ್ತರಗಳೂ ಕಥೆಯ ಒಂದು ಭಾಗ ವನ್ನು ರಚಿಸಿಕೊಳ್ಳಲಿಕ್ಕೆ ಬರುವಂತೆ ಇರತಕ್ಕದ್ದು. ಹಾಗಿರದಿದ್ದರೆ ಹುಡುಗರಿಗೆ ಜ್ಞಾನದ ಕಟ್ಟಡವನ್ನು ಕಟ್ಟಲಿಕ್ಕೆ ನಿಮ್ಮಿಂದ ಅಡ್ಡಿಯಾಗುವುದು.

ಪ್ರಶ್ನೆಗಳನ್ನು ಚಟುವಟಿಕೆಯಿಂದ ಕೇಳಬೇಕೆಂದು ಹಿಂದೆ ಎಷ್ಟೋ ಸಾರೆ ಹೇಳಿರುತ್ತದೆ. ಪ್ರಶ್ನೆದ ಸ್ವರೂಪವನ್ನು ಚೆನ್ನಾಗಿ ಮನಸಿನಲ್ಲಿ ಆಲೋಚಿಸಿ ಅದನ್ನು ಒಮ್ಮೆಲೆ ಹುಡುಗರಿಗೆ ಹೇಳಿಬಿಡತಕ್ಕದ್ದು. ಪ್ರಶ್ನೆವನ್ನು ಹೇಳುವಾಗ ನಡುವೆ ಅವಕಾಶವನ್ನು ಕೊಡಬಾರದು. ಒಮ್ಮೊಮ್ಮೆ ಬಾಯಿಲೆಕ್ಕದ ಉದಾಹರಣೆಗಳನ್ನು ಹೇಳುತ್ತಿರುವಾಗ ಎಷ್ಟೋ ಶಿಕ್ಷಕರು ನಡುವೆ ಅವಶ್ಯವಿಲ್ಲದಷ್ಟು ಅವಕಾಶವನ್ನು ಕೊಟ್ಟು ಹೇಳುವರು. ಹೀಗೆ ಹೇಳುವಾಗ ಪ್ರಶ್ನೆದ ಕಡೆಯ ಭಾಗವನ್ನು ಹೇಳಿ ಮುಗಿಸುವದರೊಳಗಾಗಿ ಹುಡುಗರು ಪ್ರಶ್ನೆದ ಮೊದಲಿನ ಭಾಗವನ್ನು ಮರೆತುಬಿಡುವರು; ಅದರಿಂದ ಇಡೀ ಪ್ರಶ್ನೆವು ಅವರಿಗೆ ತಿಳಿಯದಂತಾ ಗುವುದು. ಮತ್ತು ಈ ನಡುವಿನ ವೇಳೆಯಲ್ಲಿ ಹುಡುಗರಿಗೆ ಎರಡನೇ ಕಡೆಗೆ ಮನಸು ಹಾಕಲು ಆಸ್ಪದವು ದೊರೆಯುವುದು.

ಒಂದೇಪ್ರಶ್ನೆವನ್ನು ಪುನಃ ಪುನಃ ಕೇಳಬಾರದು. ಗಟ್ಟಿಯಾ ಗಿಯೂ, ಸ್ಪಷ್ಟವಾಗಿಯೂ, ಎಲ್ಲ ಹುಡುಗರಿಗೆ ಕೇಳಿಸುವಂತೆಯೂ, ಒಮ್ಮೆ ಮಾತ್ರ ಪ್ರಶ್ನೆವನ್ನು ಹೇಳಬೇಕು. ಕೆಲವು ಶಿಕ್ಷಕರು ಹುಡುಗರಿಗೆ ಪ್ರಶ್ನೆವು ತಿಳಿಯಲಿಲ್ಲೆಂದು ಭಾವಿಸಿ, ಅವರು ಬೇಗನೆ ಉತ್ತರಕೊಡಬೇಕೆಂದು ಪ್ರಶ್ನೆವನ್ನು ಮೇಲೆ ಮೇಲೆ ಕೇಳುವರು.

ಆದರಿಂದ ಹುಡುಗರ ಲಕ್ಷ್ಯ ತಪ್ಪಿ, ವಿಶೇಷ ಪ್ರಯೋಜನವೇನೂ ಆಗುವುದಿಲ್ಲ.

ಪ್ರಶ್ನೆಗಳನ್ನು ಕೇಳುವ ಸಂಬಂಧದಿಂದ ಶಿಕ್ಷಕರು ಲಕ್ಷ್ಯದಲ್ಲಿಡ ತಕ್ಕ ಮುಖ್ಯ ಮುಖ್ಯ ಮಾತುಗಳನ್ನು ಹೇಳಿ ಈ ಪ್ರಕರಣವನ್ನು ಮುಗಿಸುವೆನು.

ಕಲಿಸಿದ ವಿಷಯಲ್ಲಿ ಯಾವ ಭಾಗಗಳ ಬಗ್ಗೆ ಪ್ರಶ್ನೆ ಕೇಳುವುದು ಅವಶ್ಯವೆಂದು ತೋರುವುದೋ ಆ ಭಾಗಗಳನ್ನು ಎಚ್ಚರಪೂರ್ವಕವಾಗಿ ಆರಿಸಿರಿ. ಪಾಠದ ಯಾವ ಯಾವ ಭಾಗಗಳಲ್ಲಿ ಯಾವ ಯಾವ ಮಹತ್ವದ ಪ್ರಶ್ನೆಗಳನ್ನು ಕೇಳತಕ್ಕದ್ದೆಂಬದನ್ನು ಮೊದಲೇ ನಿಶ್ಚಯಿಸಿಕೊಂಡಿರ ತಕ್ಕದ್ದು.

ಕಲಿಸುವ ಅನುಭವವಿಲ್ಲದ ತರುಣ ಶಿಕ್ಷಕರು ಪ್ರತಿ ಒಂದು ಪ್ರಶ್ನೆವನ್ನು ಯಾವ ಸ್ವರೂಪದಲ್ಲಿ ಕೇಳಬೇಕೆಂಬುದನ್ನೂ ಮೊದಲೇ ಆಲೋಚಿಸಿ ಸಿದ್ಧಪಡಿಸಿಕೊಳ್ಳಲಿಕ್ಕೆಬೇಕು.

ಈ ಮೇರೆಗೆ ಪೂರ್ವಸಿದ್ಧತೆಯನ್ನು ಮಾಡುವುದರಿಂದ ಪ್ರಶ್ನೆ ಕೇಳುವಲ್ಲಿ ಸ್ವಾಭಾವಿಕವಾದ ಜಾಣತನವು ಉತ್ಪನ್ನವಾಗುವುದು. ಮತ್ತು ಅಂಥ ಪ್ರಶ್ನೆಗಳಿಂದ ಹುಡುಗರ ಮಾನಸಿಕ ಪ್ರಯತ್ನಕ್ಕೆ ಸಹಾಯ್ಯವಾಗುವುದು.



# ೧೭ನೆಯ ಪ್ರಕರಣ

## ಶಿಕ್ಷಣದ ಸಾಧನಗಳು

## II (ಬ) ಉತ್ತರಗಳು

ಶಿಕ್ಷಣದ ಕಲೆಯಲ್ಲಿ ಪ್ರಶ್ನಮಾಡುವ ಜಾಣತನಕ್ಕೆ ಇರುವಷ್ಟೇ ಮಹತ್ವವು ಉತ್ತರಗಳನ್ನು ತೆಗೆದುಕೊಳ್ಳುವದರಲ್ಲಿಯೂ ಇರುವುದು. ಪ್ರತಿ ಒಂದು ಯೋಗ್ಯವಾದ ಪ್ರಶ್ನಕ್ಕೆ ಒಂದು ಸಮರ್ಪಕವಾದ ಉತ್ತರದ ಆವಶ್ಯಕತೆಯು ಇರಲಿಕ್ಕೆ ಬೇಕು. ಹುಡುಗರು ಕೊಡುವ ಉತ್ತರಗಳಿಂದ ಅವರ ಮನಸಿನಲ್ಲಿ ಯಾವ ವಿಚಾರಗಳು ನಡೆದಿರುವವೆಂಬುದು ಶಿಕ್ಷಕರಿಗೆ ಗೊತ್ತಾಗುವುದು. ಉತ್ತರಗಳನ್ನು ತೆಗೆದುಕೊಳ್ಳುವ ಸಂಬಂಧದಿಂದ ಮೂರು ಮಹತ್ವದ ಸಂಗತಿಗಳನ್ನು ವಿಚಾರ ಮಾಡತಕ್ಕದ್ದಿರುವುದು. ಅವು ಯಾವವೆಂದರೆ:—

**೧. ಉತ್ತರಗಳನ್ನು ಯಾರಿಂದ ತೆಗೆದುಕೊಳ್ಳಬೇಕು?**

**೨. ಉತ್ತರವು ಯಾವ ಸ್ವರೂಪದಲ್ಲಿ ಇರತಕ್ಕದ್ದು?**

**೩. ಹುಡುಗರು ಕೊಟ್ಟ ಉತ್ತರಗಳನ್ನು ವಿಶೇಷವಾಗಿ ತಪ್ಪು ಉತ್ತರಗಳನ್ನು ಹೇಗೆ ತಿದ್ದತಕ್ಕದ್ದು?**

ಇವುಗಳಲ್ಲಿ ಮೊದಲನೆಯ ಪ್ರಶ್ನವು, ಉತ್ತರಗಳನ್ನು ಯಾರಿಂದ ತೆಗೆದುಕೊಳ್ಳತಕ್ಕದ್ದು? ಈ ಪ್ರಶ್ನಕ್ಕೆ ಸ್ವಾಭಾವಿಕವಾಗಿ "ಯಾವ ಹುಡುಗನಿಗೆ ಪ್ರಶ್ನವನ್ನು ಕೇಳಿರುವೆವೋ ಆ ಒಬ್ಬ ಹುಡುಗನಿಂದ ಉತ್ತರವನ್ನು ತೆಗೆದುಕೊಳ್ಳತಕ್ಕದ್ದೆಂದು" ಉತ್ತರವನ್ನು ಹೇಳಬಹುದು; ಆದರೆ ನಾವು ಇಡೀ ವರ್ಗಕ್ಕೆ ಕಲಿಸಬೇಕಾಗಿದೆ ಎಂಬ ಮಾತನ್ನು ಮರೆಯಕೂಡದು. ಅಂದಮೇಲೆ ಪ್ರಶ್ನವನ್ನು ಇಡೀ ವರ್ಗಕ್ಕೆ ಮಾಡತಕ್ಕದ್ದೋ? ಅಥವಾ ವರ್ಗದೊಳಗಿನ ಒಬ್ಬ ಹುಡುಗನಿಗೆ ಮಾಡ

ತಕ್ಕದ್ದೋ? ಕೆಲವು ಸಾರೆ ಒಬ್ಬ ಹುಡುಗನ ಸಲುವಾಗಿ ಇಡೀ ವರ್ಗದ ಹಾನಿಯನ್ನು ಮಾಡಬೇಕಾಗುವುದು. ಮತ್ತು ಕೆಲವು ಸಾರೆ ಇಡೀ ವರ್ಗದ ಸಲುವಾಗಿ ಒಬ್ಬ ಹುಡುಗನಿಗೆ ಆಗುವ ಹಾನಿಯನ್ನು ದುರ್ಲಕ್ಷಿಸಬೇಕಾಗುವುದು. ಶಿಕ್ಷಕನು ಇಡೀ ವರ್ಗಕ್ಕೆ ಕಲಿಸುವುದಿದ್ದಾಗ್ಯೂ ವರ್ಗದೊಳಗಿನ ಪ್ರತಿಒಬ್ಬ ಹುಡುಗನ ಕಲ್ಯಾಣವನ್ನು ಚಿಂತಿಸುವುದು ಆವನ ಕರ್ತವ್ಯವೆಂಬ ಮಾತನ್ನು ಮರೆಯಲಾಗದು. ಇದರಿಂದ ಕೆಲ ಕೆಲವು ಸಾರೆ ವರ್ಗದೊಳಗಿನ ಒಬ್ಬ ಹುಡುಗನಿಗೆ ಪ್ರಶ್ನವನ್ನು ಕೇಳುವುದು ಎಷ್ಟು ಮಹತ್ವದ ಸಂಗತಿಯಾಗಿದೆ ಎಂಬುದು ಗೊತ್ತಾಗುವುದು. ವರ್ಗದೊಳಗಿನ ಯಾವನೊಬ್ಬ ಹುಡುಗನು ನೀವು ಇಚ್ಛಿಸಿದ ಹಾದಿಯಿಂದ ವಿಚಾರಮಾಡಲಿಕ್ಕೆ ಕಲಿಯುವತನಕ ಅವನಿಗೆ ಆ ವಿಷಯದ ಬಗ್ಗೆ ಮೇಲೆ ಮೇಲೆ ಪ್ರಶ್ನ ಕೇಳುವುದನ್ನು ಬಿಡಬಾರದು. ಹೀಗೆ ಮಾಡುತ್ತಿರುವಾಗ ವರ್ಗದೊಳಗಿನ ಬೇರೆ ಹುಡುಗರು ಆ ಪ್ರಶ್ನಗಳನ್ನು ಚಿತ್ತಗೊಟ್ಟು ಕೇಳುತ್ತಿರುವರೋ ಇಲ್ಲವೋ ಎಂಬ ಬಗ್ಗೆ ಶಿಕ್ಷಕರು ಎಚ್ಚರಪಡಲಿಕ್ಕೆ ಬೇಕು. ಅಂದರೆ ಆ ಪ್ರಶ್ನದ ಬಗ್ಗೆ ಅವರೂ ವಿಚಾರ ಮಾಡತಕ್ಕದ್ದು; ಮತ್ತು ಅದರಿಂದಾಗುವ ಪ್ರಯೋಜನವನ್ನು ತಾವೂ ಮಾಡಿಕೊಳ್ಳಬೇಕು. ಇದನ್ನು ಸಾಧಿಸುವುದು ಸ್ವಲ್ಪ ಕಠಿಣವಾಗಬಹುದು. ಆದರೆ ವರ್ಗದ ಎಲ್ಲ ಹುಡುಗರ ಲಕ್ಷವು ಒಬ್ಬ ಹುಡುಗನ ಕೂಡ ನಡೆದ ಪ್ರಶ್ನೋತ್ತರಗಳ ಕಡೆಗೆ ಇರಲಿಕ್ಕೆ ಬೇಕು. ಇಲ್ಲದಿದ್ದರೆ ಬಹಳ ಹುಡುಗರ ವೇಳೆಯು ವ್ಯರ್ಥವಾಗಿ ಹೋಗುವುದು.

ಪ್ರಶ್ನವನ್ನು ವಾಡಿಕೆಯಾಗಿ ಇಡೀ ವರ್ಗಕ್ಕೆ ಕೇಳಬೇಕು; ಮತ್ತು ಉತ್ತರವನ್ನು ಹೇಳಲು ಅಪೇಕ್ಷೆಯುಳ್ಳವರು ತಮ್ಮ ಕೈಗಳನ್ನು ಮುಂದೆ ಮಾಡಿ ತೋರಿಸಲಿಕ್ಕೆ ಹೇಳುವುದು. ಶಿಕ್ಷಕರು ಬೇಕಾದಷ್ಟು ತೀವ್ರವಾಗಿ ಪ್ರಶ್ನಗಳನ್ನು ಕೇಳಿದಾಗ್ಯೂ ಹುಡುಗರು ಒಂದು ಗೊತ್ತಾದ ಪದ್ಧತಿಯಿಂದ ಅಷ್ಟೇ ತೀವ್ರವಾಗಿ ತಮ್ಮ ಕೈಗಳನ್ನು ಮುಂದೆ ಮಾಡಿ ತೋರಿಸುವರು. ಏನೂ ತೊಂದರೆಯಿಲ್ಲದೆ ಈ ಕ್ರಮವು ಸಾಗುವುದು. ಒಂದು ಪ್ರಶ್ನವನ್ನು ಕೇಳಿದರೆ ಒಮ್ಮೆಲೇ ಅನೇಕ

ಹುಡುಗರು ತಮ್ಮ ಕೈ ಮುಂದೆ ಮಾಡಿ ತೋರಿಸುವರು. ಅವರಲ್ಲಿ ಪ್ರಶ್ನದ ಉತ್ತರವನ್ನು ಹೇಳಲಿಕ್ಕೆ ಯಾರನ್ನು ಆರಿಸತಕ್ಕದ್ದು? ಈ ವಿಷಯವಾಗಿ ಖಂಡಿತವಾದ ಒಂದು ನಿಯಮವನ್ನು ಹೇಳಲು ಶಕ್ಯವಿಲ್ಲ. ಯಾವಾಗಲೂ ಕೈಗಳನ್ನು ಮೇಲೆ ಎತ್ತಿದವರಿಗೇ ಉತ್ತರವನ್ನು ಹೇಳಲಿಕ್ಕೆ ಆರಿಸಿದರೆ ಎದ್ದು ನಿಂತು ಉತ್ತರವನ್ನು ಹೇಳುವ ಅಪೇಕ್ಷೆಯಿಲ್ಲದ ಸೋಮಾರಿಗಳು ತಮ್ಮ ಕೈಗಳನ್ನು ಎಂದೂ ಎತ್ತುವುದಿಲ್ಲ; ಕೈ ಎತ್ತಿದ್ದವರಿಗೆ ಮೇಲೆ ಮೇಲೆ ಆರಿಸಿದರೆ ಕೈ ಎತ್ತಿ ತೋರಿಸುವ ಹುಡುಗರು ನಿರುತ್ಸಾಹಿಗಳಾಗುವ ಸಂಭವವಿರುವುದು.

ಕೆಲಕೆಲವು ಸಾರೆ ಹುಡುಗರೇ ಪ್ರಶ್ನ ಕೇಳುವವರಾಗತಕ್ಕದ್ದು; ಶಿಕ್ಷಕರು ಉತ್ತರಕೊಡುವವರಾಗಬೇಕು. ಅಥವಾ ಹುಡುಗರಿಗೆ ತಮ್ಮ ತಮ್ಮೊಳಗೇ ಪ್ರಶ್ನಗಳನ್ನು ಕೇಳಿಯಾಡಲಿಕ್ಕೆ ಹೇಳಬೇಕು. ನಿಬಂಧ ಅಥವಾ ವಾಕ್ಯರಚನೆಯ ಪಾಠವನ್ನು ಪ್ರಶ್ನೋತ್ತರರೂಪದಿಂದ ಸಾಗಿಸುತ್ತಿರುವಾಗ್ಗೆ ಈ ರೀತಿಯಿಂದ ಬಹಳ ಪ್ರಯೋಜನವಾವಾಗುವುದು. ನಿಯಮಿತವಾದ ಉತ್ತರವು ಬರಬೇಕಾದರೆ ಪ್ರಶ್ನಗಳನ್ನು ಹೇಗೆ ರಚಿಸಬೇಕು, ಅದಕ್ಕೆ ಸಮಂಜಸವಾದ ಉತ್ತರವು ಯಾವುದು? ಈ ಮುಂತಾದ ಸಂಗತಿಗಳು ಹುಡುಗರಿಗೆ ಚೆನ್ನಾಗಿ ತಿಳಿಯುವುವು. ಆದರೆ ಹುಡುಗರು ಮಾಡುವ ಈ ಕೆಲಸವನ್ನು ಶಿಕ್ಷಕರು ಲಕ್ಷ್ಯಪೂರ್ವಕವಾಗಿ ನಿರೀಕ್ಷಣೆ ಮಾಡಲಿಕ್ಕೆಬೇಕು. ಅನುಭವವಿಲ್ಲದ ತರುಣ ಶಿಕ್ಷಕರು ಈ ತರದ ಪ್ರಶ್ನೋತ್ತರಗಳನ್ನು ಮಾಡಿಸಕೂಡದು; ಯಾಕಂದರೆ ಈ ಕ್ರಮವನ್ನು ವ್ಯವಸ್ಥೆಯಿಂದ ಸಾಗಿಸುವುದು ಕಠಿಣವಾಗುವುದು. ಹುಡುಗರಿಗೆ ತಮ್ಮ ತಮ್ಮೊಳಗೆ ಪ್ರಶ್ನಗಳನ್ನು ಕೇಳಲಿಕ್ಕೆ ಹೇಳುವುದಕ್ಕಿಂತ ಮುಂಚೆ, ಶಿಕ್ಷಕರಿಗೆ ತಮ್ಮ ಹುಡುಗರ ಯೋಗ್ಯತೆಯು ಚೆನ್ನಾಗಿ ಗೊತ್ತಿರಲಿಕ್ಕೆಬೇಕು. ಇಲ್ಲದಿದ್ದರೆ ಎಲ್ಲವೂ ಗಲಿಬಿಲಿಯಾಗಿ ಹೋಗುವುದು.

ಹುಡುಗರು ಕೊಡುವ ಉತ್ತರಗಳು ಪೂರ್ಣವಾಗಿರಬೇಕು; ಕ್ವಚಿತ್ತಾಗಿ ಅದು ಒಂದೇ ಶಬ್ದದಿಂದ ಮರ್ಯಾದಿತವಾಗಿರಬೇಕಾಗು

ವುದು. ಹುಡುಗರು ತಾವು ಕೊಡಬೇಕಾದ ಉತ್ತರವನ್ನು ಪೂರ್ಣವಾದ ವಾಕ್ಯದಿಂದಲೇ ಕೊಡತಕ್ಕದ್ದೆಂಬ ಸಾಮಾನ್ಯ ನಿಯಮವನ್ನು ಅನುಸರಿಸುವುದು ಒಳ್ಳೆಯದು. ಆದರೆ ಯಾವಾಗಲು ಈ ನಿಯಮವನ್ನೇ ಬಿಡದೆ ಪಾಲಿಸುವ ನಿರ್ಧಾರವಿರಬಾರದು. ಈ ಅಭಿಪ್ರಾಯವನ್ನೇ ಸಮರ್ಥನ ಮಾಡುವ ಒಬ್ಬ ಮನುಷ್ಯನಿಗೆ "ಉತ್ತರಗಳು ಯಾವಾಗಲು ಪೂರ್ಣ ವಾಕ್ಯಗಳಲ್ಲಿಯೇ ಇರಬೇಕೆಂದು ನಿಮ್ಮ ಅಭಿಪ್ರಾಯವಿರುವುದೋ ಹೇಗೆ" ಎಂದು ಕೇಳಿದರೆ ಅವನು "ಅಹುದು" ಎಂದು ಉತ್ತರವನ್ನು ಕೊಡುವನು. ಆದರೆ ಅವನು ಇಲ್ಲಿ ಮಾತಾಡಿದಂತೆ ನಡೆದಂತಾಗಲಿಲ್ಲ. ಎಷ್ಟೋ ಪ್ರಸಂಗಗಳಲ್ಲಿ ಇಚ್ಛಿತ ಉತ್ತರವನ್ನು ಹೇಳಲಿಕ್ಕೆ ಒಂದು ಅಥವಾ ಎರಡು ಶಬ್ದಗಳು ಸಾಕಾಗುವವು. ಹೆಚ್ಚು ಶಬ್ದಗಳನ್ನು ಉಪಯೋಗಿಸುವ ಆವಶ್ಯಕತೆ ಇರುವುದಿಲ್ಲ. ಆದರೆ ವಿಶೇಷವಾಗಿ ತೀರ ಚಿಕ್ಕಮಕ್ಕಳು ಪೂರ್ಣವಾದ ವಾಕ್ಯದಿಂದಲೇ ಉತ್ತರವನ್ನು ಕೊಡಬೇಕೆಂಬ ಸಾಮಾನ್ಯ ನಿಯಮವನ್ನು ಅನುಸರಿಸುವುದು ಉತ್ತಮವು. ಈ ನಿಯಮವನ್ನು ಅನುಸರಿಸದಿದ್ದರೆ, ಹುಡುಗರಲ್ಲಿ ಉತ್ತರಗಳನ್ನು ವಿವರವಾಗಿ ಹೇಳುವ ಶಕ್ತಿಯನ್ನು ತಿಳಿಸುವ ಉದ್ದೇಶವು ಪೂರ್ಣವಾಗಿ ಸಫಲವಾಗುವುದಿಲ್ಲ.

ಹುಡುಗರು ಕೊಟ್ಟ ಉತ್ತಗಳು ಸರಿಯಾಗಿರದಿದ್ದರೆ ಅವುಗಳಲ್ಲಿರುವ ತಪ್ಪುಗಳನ್ನು ಕೂಡಲೆ ತಿದ್ದತಕ್ಕದ್ದು. ಇದಕ್ಕಾಗಿ ಹೆಚ್ಚು ವೇಳೆಯು ಹಿಡಿಯಬಹುದು. ಆದರೆ ಆ ವೇಳೆಯು ವ್ಯರ್ಥವಾಗಿ ಹೋಯಿತೆಂದು ತಿಳಿಯಬಾರದು. ಹುಡುಗರಿಂದಾದ ತಪ್ಪನ್ನು ಕೂಡಲೆ ಅಳಿಸಿ ಸರಿಯಾದದ್ದನ್ನು ಅವರ ಮನಸಿನಲ್ಲಿ ಬಿಂಬಿಸತಕ್ಕದ್ದು. ಈ ಕೆಲಸವು ವಿದ್ಯಾರ್ಥಿಗಳಿಗೂ ಶಿಕ್ಷಕರಿಗೂ ಎಷ್ಟು ಬೇಸರವೆನಿಸಿದರೂ ಅದನ್ನು ಮಾಡಿಯೇ ತೀರಲಿಕ್ಕೆ ಬೇಕು. ಶಿಕ್ಷಕರು ವಿದ್ಯಾರ್ಥಿಗಳಿಗೆ ಕೆಲವು ಸಂಗತಿಗಳನ್ನು ಹೇಳಿ ಅವರ ವಿಚಾರವನ್ನು ಕೇಳಿಕೊಂಡರೆ ಕಲಿಸುವ ಕೆಲಸವು ಮುಗಿಯಲಿಲ್ಲ. ಆದರೆ ಹುಡುಗರು ತಾವು ಹೇಳತಕ್ಕ ವಿಚಾರಗಳನ್ನು ಯೋಗ್ಯವಾದ ಶಬ್ದಗಳನ್ನು ಉಪಯೋಗಿಸಿ ಪರರಿಗೆ

ತಿಳಿಯುವಂತೆ ವಿವರಿಸಿ ಹೇಳುವ ಶಕ್ತಿಯನ್ನು ಬೆಳಿಸಿಕೊಳ್ಳತಕ್ಕದ್ದು. ಶಿಕ್ಷಣದಲ್ಲಿ ಇದೇನು ಕಡಿಮೆ ಬೆಲೆಯುಳ್ಳ ಸಂಗತಿಯಲ್ಲ.

ಹುಡುಗರು ಕೊಡುವ ಉತ್ತರವು ಪೂರ್ಣವಾಕ್ಯದ ರೂಪದಲ್ಲಿ ಇರಬೇಕೆಂಬದಿಷ್ಟೇ ಅಲ್ಲ. ಅದರ ಭಾಷೆಯು ವ್ಯಾಕರಣ ದೃಷ್ಟಿಯಿಂದ ಶುದ್ಧವಾದದ್ದಿರಲಿಕ್ಕೆ ಬೇಕು. ಮತ್ತು ಅದು ಎರಡನೆಯವರಿಗೆ ತಿಳಿಯುವಂತೆಯೂ, ಸ್ಪಷ್ಟವಾಗಿ ಕೇಳಿಸುವಂತೆಯೂ ಇರತಕ್ಕದ್ದು. ಹುಡುಗರು ತಮಗೆ ತಿಳಿದಂತೆ ಕೊಟ್ಟ ಉತ್ತರವು ಪರರಿಗೆ ತಿಳಿಯಲಿಕ್ಕಿಲ್ಲೆಂದು ಶಿಕ್ಷಕರು ಅದನ್ನು ತಾವೇ ತಿದ್ದಿ ಹೇಳುವುದು ಶಿಕ್ಷಣದ ದೃಷ್ಟಿಯಿಂದ ಬಹು ದೊಡ್ಡ ತಪ್ಪಾಗುವುದು. ಇದರಿಂದ ಹುಡುಗರು ಉತ್ತರದ ಸ್ವರೂಪಕ್ಕೆ ಅಷ್ಟೇನು ಮಹತ್ವವಿಲ್ಲೆಂದು ತಿಳಕೊಳ್ಳುವರು. ಅದರ ಪರಿಣಾಮವು ಹುಡುಗರಲ್ಲಿ ಆಲಸ್ಯವನ್ನು ಹುಟ್ಟಿಸುವುದು. ಅವರು ಕೊಟ್ಟ ಸರಾಸರಿ ಸಮವಾದ ಉತ್ತರವನ್ನು ಅವರಿಂದಲೇ ತಿದ್ದಿಸಿ ಸರಿಯಾಗಿ ಮಾಡಲಿಕ್ಕೆ ಶಿಕ್ಷಕರು ಸಹಾಯ್ಯವಾಡತಕ್ಕದ್ದು. ಆದರೆ ಹುಡುಗರ ಸಲುವಾಗಿ ಈ ಎಲ್ಲ ಕೆಲಸಗಳನ್ನು ಶಿಕ್ಷಕರು ತಾವೇ ಮಾಡತಕ್ಕದ್ದಲ್ಲ.

ಉತ್ತರವು ಇಡೀವರ್ಗಕ್ಕೆ ಕೇಳಿಸುವಂತೆ ಇರತಕ್ಕದ್ದು ; ಹುಡುಗರು ಕೊಟ್ಟ ಉತ್ತರಗಳು ಪಾಠದ ಒಂದು ಭಾಗವಾಗಿರತಕ್ಕದ್ದು. ಮತ್ತು ಹುಡುಗರು ಶಿಕ್ಷಕನ ವಿವರಣೆಯನ್ನು ಯಾವ ರೀತಿಯಿಂದ ಲಕ್ಷ್ಯಪೂರ್ವಕವಾಗಿ ಕೇಳುವರೋ ಅದೇ ಪ್ರಕಾರ ಒಬ್ಬ ಹುಡುಗನು ಕೊಟ್ಟ ಉತ್ತರವನ್ನು ಇತರ ಹುಡುಗರು ಮನಸುಗೊಟ್ಟು ಕೇಳುವ ರೂಢಿಯನ್ನು ಮಾಡಿಸಲಿಕ್ಕೆಬೇಕು. ಕೆಲವು ಶಿಕ್ಷಕರಿಗೆ ಹುಡುಗರು ಕೊಟ್ಟ ಉತ್ತರಗಳನ್ನು ಮೇಲೆ ಮೇಲೆ ಎನ್ನುವ ಕೆಟ್ಟ ಚಟವು ಇರುವುದು. ಅದರಿಂದ ಹುಡುಗರ ಲಕ್ಷವು ಶಿಕ್ಷಕರ ಕಡೆಗೆ ಹತ್ತುವುದಿಲ್ಲ. ಗಾಬರಿಯ ಸ್ವಭಾವದ ಒಬ್ಬ ಹುಡುಗನು ಕೊಟ್ಟ ಉತ್ತರವು ವರ್ಗದೊಳಗಿನ ಉಳಿದ ಹುಡುಗರಿಗೆ ಕೇಳಿಸಲಿಲ್ಲೆಂದು ನಿಮಗೆ ಗೊತ್ತಾದಾಗ ಆ ಹುಡುಗನಿಂದ ಆ ಉತ್ತರವನ್ನು ಮತ್ತೊಂದು ಸಾರೆ ಹೇಳಿಸುವುದು


ಯೋಗ್ಯವಾಗುವುದು. ಹುಡುಗನು ಕೊಟ್ಟ ಉತ್ತರದಲ್ಲಿ ಮಹತ್ವದ ಮಾತು ಏನಾದರೂ ಇದ್ದರೆ ಅದರ ಮೇಲೆ ಜೋರುಕೊಟ್ಟು ಹೇಳು ವುದರ ಸಲುವಾಗಿ ಆ ಉತ್ತರವನ್ನು ಶಿಕ್ಷಕರು ಮತ್ತೊಮ್ಮೆ ಉಚ್ಚರಿಸ ಲಿಕ್ಕೂ ಅಡ್ಡಿಯಿಲ್ಲ. ಆದರೆ ಸಾಮಾನ್ಯವಾಗಿ ಹುಡುಗರ ಉತ್ತರಗಳನ್ನು ಮೇಲೆ ಮೇಲೆ ಎನ್ನುವ ಚಟವು ಒಳ್ಳೆಯದಲ್ಲ. ಅದರಿಂದ ವೇಳೆಯು ವ್ಯರ್ಥವಾಗಿ ಹೋಗುವುದು. ವರ್ಗದೊಳಗಿನ ಕೆಲವು ದುರ್ಲಕ್ಷ್ಯ ಮಾಡುವ ಹುಡುಗರು (ಅಂಥ ಕೆಲವು ಹುಡುಗರು ವರ್ಗದಲ್ಲಿ ಯಾವಾ ಗಲು ಇದ್ದೇ ಇರುವರು) ಶಿಕ್ಷಕರು ಉತ್ತರವನ್ನು ತಿರುಗಿ ಹೇಳುವ ಹಾದಿಯನ್ನೇ ನೋಡುತ್ತಿರುವರು.

ಹುಡುಗರು ಕೊಟ್ಟ ಉತ್ತರಗಳು ಸರಿ ಇರುವವೋ ತಪ್ಪಿರುವವೋ ಎಂಬುದನ್ನು ಬೇಗನೆ ಕಂಡು ಹಿಡಿಯಲಿಕ್ಕೆ ಶಿಕ್ಷಕರು ಬುದ್ಧಿವಂತರೂ ಸಾರಾಸಾರ ವಿಚಾರವುಳ್ಳವರೂ ಆಗಿರತಕ್ಕದ್ದು. ಹುಡುಗರು ಕೊಟ್ಟ ಉತ್ತರಗಳಲ್ಲಿರುವ ದೋಷಗಳನ್ನು ತತ್ಕಾಲಕ್ಕೇ ತಿದ್ದಬೇಕಾಗುವುದು. ಈ ಕೆಲಸದಲ್ಲಿ ಸಿಟ್ಟು ಕೆಲಸದ್ದಲ್ಲ. ಹುಡುಗರ ತಪ್ಪುಗಳನ್ನು ಕಂಡು ಶಿಕ್ಷಕರು ಮೇಲೆ ಮೇಲೆ ಸಿಟ್ಟಾದರೆ ಹುಡುಗರು ಉತ್ತರ ಕೊಡುವು ದನ್ನೇ ಬಿಟ್ಟು ಬಿಡುವರು. ಇದು ಸರಿಯಲ್ಲ. ಉತ್ತರಗಳನ್ನು ಕೊಡು ವುದಕ್ಕಾಗಿ ಸಹಾನುಭೂತಿಪೂರ್ವಕವಾದ ಉತ್ತೇಜನವು ಅತ್ಯವಶ್ಯ ವಾದದ್ದು. ಆದರೆ ಉತ್ತರವನ್ನು ಕೊಟ್ಟ ಬಗ್ಗೆ ಹುಡುಗರನ್ನು ಮೇಲೆ ಮೇಲೆ ಹೊಗಳುವುದು ಸರಿಯಲ್ಲ. "ಒಳ್ಳೆ ಸಮರ್ಪಕ ಉತ್ತರವನ್ನು ಕೊಟ್ಟಿ" "ಭಲೆ" "ಶಾಬಾಸ" ಎಂಬ ಸ್ತುತಿವಾಚಕ ಶಬ್ದಗಳು ಮೊದಮೊದಲು ಉತ್ತೇಜನಕರವಾದವುಗಳೆಂದು, ಕಂಡುಬಂದರೂ ಅವುಗಳ ಒಳ್ಳೇ ಪರಿಣಾಮವು ಬೇಗನೆ ಕಡಿಮೆಯಾಗುವುದು. ಆದಕಾರಣ ಇಂಥ ಸ್ತುತಿವಾಚಕ ಶಬ್ದಗಳನ್ನು ಮೇಲೆ ಮೇಲೆ ಉಪಯೋಗಿಸ ಕೂಡದು. ಹುಡುಗರು ಕೊಟ್ಟ ತಪ್ಪು ಉತ್ತರಗಳನ್ನು ಒಮ್ಮೆಲೆ ನಿರಾ ಕರಿಸಬಾರದೆಂದು ಸಾಮಾನ್ಯ ನಿಯಮವನ್ನು ಹೇಳಬಹುದು. ಮತ್ತು ತಪ್ಪು ಉತ್ತರವನ್ನು ಕೊಟ್ಟ ಹುಡುಗನನ್ನು "ನೀನು ದಡ್ಡನು" "ನೀನು

ಮೂರ್ಖನು" ಇತ್ಯಾದಿ ಶಬ್ದಗಳಿಂದ ತಿರಸ್ಕರಿಸಿ ಅವನ ಉತ್ಸಾಹವನ್ನು ಕುಗ್ಗಿಸುವುದು ಸರಿಯಲ್ಲ. ಇಂಥಪ್ರಸಂಗದಲ್ಲಿ ಶಿಕ್ಷಕರು ಸಾರಾಸಾರ ವಿಚಾರ ಶಕ್ತಿಯನ್ನು ಉಪಯೋಗಿಸಿ ಸಮಾಧಾನದಿಂದಲೂ, ಚಾತುರ್ಯದಿಂದಲೂ ನಡೆಯತಕ್ಕದ್ದು. ಒಬ್ಬ ಹುಡುಗನು ಒಂದು ತಪ್ಪು ಉತ್ತರವನ್ನು ಕೊಟ್ಟನೆಂದರೆ ಅವನ ತಿಳುವಳಿಕೆಯಲ್ಲಿ ಏನು ತಪ್ಪಾಗಿದೆ ಎಂಬುದನ್ನು ಅವನಿಗೇ ಬೇರೆ ಪ್ರಶ್ನೆಗಳನ್ನು ಮಾಡಿ ಅರಿತುಕೊಳ್ಳಬೇಕು. ಅವನಿಗೆ ಎಲ್ಲಿ ತೊಂದರೆಯು ತಟ್ಟಿರುವದೆಂಬುದನ್ನು ಗೊತ್ತು ಹಿಡಿಯಲಿಕ್ಕೆ ಪ್ರಯತ್ನಮಾಡತಕ್ಕದ್ದು. ಈ ರೀತಿಯಿಂದ ಅವನ ತಪ್ಪು ಅವನಿಗೇ ತಿಳಿಯುವಂತೆ ಮಾಡತಕ್ಕದ್ದು. ಇಲ್ಲಿ ಮತ್ತೊಂದು ತೊಂದರೆಯು ಸಂಭವಿಸುವುದು. ತಪ್ಪು ಉತ್ತರವನ್ನು ಕೊಟ್ಟವನಿಗೆ ತಪ್ಪಿನ ಉಗಮವನ್ನು ಗೊತ್ತುಹಚ್ಚುವುದಕ್ಕಾಗಿ ಎಲ್ಲಿಯವರೆಗೆ ಪ್ರಶ್ನೆಗಳನ್ನು ಕೇಳುತ್ತ ಹೋಗಬೇಕು ? ಈ ಪ್ರಕಾರ ಪ್ರಶ್ನೆಗಳನ್ನು ಕೇಳುತ್ತಾ ಸಾಗುವುದರಿಂದ ಒಮ್ಮೊಮ್ಮೆ ವಿಷಯಾಂತರವಾಗುವ ಸಂಭವವುಂಟು. ಪ್ರಶ್ನೆ ಕೇಳುವದನ್ನು ಬಿಟ್ಟುಬಿಟ್ಟರೆ ಹುಡುಗರ ವಿಚಾರಕ್ಕೆ ಆಸ್ಪದವಿಲ್ಲದಂತಾಗುವುದು. ಸಂಪೂರ್ಣವಾಗಿ ಶೋಧಮಾಡತೊಡಗಿದರೆ ಹೆಚ್ಚು ಹೆಚ್ಚು ತೊಂದರೆಗಳು ಒದಗುವ ಸಂಭವವುಂಟು. ಇಂಥ ಪ್ರಸಂಗದಲ್ಲಿ ಶಿಕ್ಷಕರು ತಮ್ಮ ಸಾರಾಸಾರ ವಿಚಾರಶಕ್ತಿಯನ್ನು ಉಪಯೋಗಿಸಿ ಮಧ್ಯಮಾರ್ಗವನ್ನು ಅನುಸರಿಸತಕ್ಕದ್ದು. ಹುಡುಗನು ತೀರ ಮಂದನಾಗಿದ್ದರೆ ವರ್ಗದೊಳಗಿನ ಉಳಿದ ಹುಡುಗರ ವೇಳೆಯು ವ್ಯರ್ಥವಾಗಿ ಹೋಗಬಾರದೆಂದು ಅವನಿಗೆ ಆದಷ್ಟು ಕಡಿಮೆ ಪ್ರಶ್ನೆಗಳನ್ನು ಕೇಳಿ ಮುಂದೆ ಸಾಗಬೇಕು. ಉತ್ತರಗಳನ್ನು ವಿವರಿಸಿ ಹೇಳುವ ವಿಷಯಗಳು ನಡೆದಾಗ ಶಿಕ್ಷಕರು ನಡುನಡುವೆ ಪ್ರಶ್ನೆಗಳನ್ನು ಕೇಳುವುದರಿಂದ ಹುಡುಗರು ಉತ್ತರವನ್ನು ಪ್ರವಾಹರೂಪದಿಂದ ಹೇಳುವುದು ಕಷ್ಟಾಗುವುದು. ಹಿಂದು ಮುಂದಿನ ಸಂದರ್ಭವು ತಪ್ಪಿ ಹೋಗುವುದು. ಇಂಥ ಪ್ರಸಂಗಗಳಲ್ಲಿ ನಡುನಡುವೆ ಪ್ರಶ್ನೆಗಳನ್ನು ಮಾಡಲೇಬಾರದು.

ಸಾರಾಂಶ, ಹುಡುಗರ ತಪ್ಪು ಉತ್ತರಗಳನ್ನು ಒಂದೇ ಮಾತಿನಿಂದ ನಿರಾಕರಿಸಬಾರದು. ಅವರನ್ನು ವಿಚಾರಕ್ಕೆ ಹಚ್ಚಿ ಅವರ ತಪ್ಪು ಅವರಿಗೇ ತಿಳಿಯುವಂತೆ ಯತ್ನಮಾಡತಕ್ಕದ್ದು.

ತಪ್ಪು ಉತ್ತರಕ್ಕೆ ಯಾವಾಗಲು ವಿದ್ಯಾರ್ಥಿಯ ತಪ್ಪೇ ಕಾರಣವೆಂದು ತಿಳಿಯತಕ್ಕದ್ದಲ್ಲ. ಒಮ್ಮೊಮ್ಮೆ ಶಿಕ್ಷಕರ ತಪ್ಪಿನಿಂದಲೂ ತಪ್ಪು ಉತ್ತರವು ಬರಬಹುದು; ಯಾಕಂದರೆ ಎಷ್ಟೋ ಸಾರೆ ಶಿಕ್ಷಕರು ಕೇಳುವ ಪ್ರಶ್ನದ ಸ್ವರೂಪದಿಂದಲೂ, ಹುಡುಗರು ತಪ್ಪು ಉತ್ತರಗಳನ್ನು ಕೊಡುವರು. ತಪ್ಪು ಉತ್ತರಗಳ ಸಂಬಂಧದಿಂದ ಶಿಕ್ಷಕರು ಯಾವಾಗಲು ಲಕ್ಷ್ಯದಲ್ಲಿಡತಕ್ಕ ಸಂಗತಿಯು ಯಾವದೆಂದರೆ; ತಪ್ಪಿನ ಮೂಲಕಾರಣವನ್ನು ಅರಿತುಕೊಂಡ ಹೊರತು ಅವರು ಎಂದೂ ಸಮಾಧಾನವನ್ನು ಹೊಂದಬಾರದು. ತಪ್ಪು ಉತ್ತರಗಳ ಕಾರಣಗಳನ್ನು ಗೊತ್ತುಹಚ್ಚಿ ಆ ಕಾರಣಗಳು ಸಂಭವಿಸದಂತೆ ಮಾಡುತ್ತ ಹೋಗುವದರಿಂದ ಸತ್‌ಶಿಕ್ಷಕರೆಂಬ ಸಂಬಂಧದಿಂದ ಅವರ ಯೋಗ್ಯತೆಯು ದಿನದಿನಕ್ಕೆ ಹೆಚ್ಚುತ್ತ ಹೋಗುವುದು.



## ೧೮ನೆಯ ಪ್ರಕರಣ

### ಶಿಕ್ಷಣದ ಸಾಧನಗಳು

### III ಕಪ್ಪು ಹಲಗೆಯ ಉಪಯೋಗ

ಕಪ್ಪು ಹಲಗೆಯು ಶಿಕ್ಷಕರ ಅತ್ಯುತ್ತಮವಾದ ಸ್ನೇಹಿತನಂತೆ ಇರುವುದೆಂದು ಹೇಳುವುದು ಅತಿಶಯೋಕ್ತಿಯ ಮಾತಲ್ಲ. ಆದರೆ ಅದನ್ನು ಸರಿಯಾಗಿ ಉಪಯೋಗಿಸದಿದ್ದರೆ ಅದೇ ಅವರ ಕೆಲಸಕ್ಕೆ ತೊಂದರೆಯನ್ನುಂಟು ಮಾಡುವ ಬಲವಾದ ಸಾಧನವಾಗಬಹುದು. ಕಪ್ಪು ಹಲಗೆಯನ್ನು ತಕ್ಕ ವೇಳೆಯಲ್ಲಿ ಯೋಗ್ಯರೀತಿಯಿಂದ ಉಪಯೋಗಿಸಿದರೆ, ಅದರಿಂದ ಶಿಕ್ಷಕರು ವರ್ಗದಲ್ಲಿ ಮಾತನಾಡುವ ಎಲ್ಲ ಮಾತುಗಳು ಕೇವಲ ಹವೆಯಲ್ಲಿ ಬೆರೆತುಹೋಗದೆ, ಆ ಮಾತುಗಳಿಗೆ ಮೂರ್ತಸ್ವರೂಪವು ಉಂಟಾಗುವುದಲ್ಲದೆ ಬಹಳ ಸಹಾಯ್ಯವಾಗುವದು.

**ಶ್ರವಣೇಂದ್ರಿಯಕ್ಕೆ ಸಹಾಯ್ಯವಾಗಿ ಚಕ್ಷುರಿಂದ್ರಿಯವನ್ನು ಉಪಯೋಗಿಸಿಕೊಳ್ಳುವಂತೆ ಅನುಕೂಲ ಮಾಡಿಕೊಳ್ಳುವುದು ಶಿಕ್ಷಣಶಾಸ್ತ್ರದ ಒಂದು ಸಾಮಾನ್ಯ ನಿಯಮವಾಗಿರುತ್ತದೆ.** ಹೀಗೆ ಮಾಡುವುದರಿಂದ ಒಂದು ಇಂದ್ರಿಯಕ್ಕೆ ಬದಲಾಗಿ ಎರಡು ಇಂದ್ರಿಯಗಳನ್ನು ಉಪಯೋಗಕ್ಕೆ ಹಚ್ಚಿದಂತೆ ಆಗುವುದು. ಮತ್ತು ಅದರಿಂದ ಜ್ಞಾನವು ಹೆಚ್ಚು ಸ್ಪಷ್ಟವಾಗಿ ಆಗುವುದು. ಮನುಷ್ಯನಿಗೆ ಎಲ್ಲ ಪ್ರಕಾರದ ಜ್ಞಾನವು ಇಂದ್ರಿಯಗಳ ಉಪಯೋಗದಿಂದಲೇ ಆಗುವುದು; ಮತ್ತು ಆದಷ್ಟು ಹೆಚ್ಚು ಇಂದ್ರಿಯಗಳನ್ನು ಉಪಯೋಗಿಸುವುದರಿಂದ ಜ್ಞಾನವು ನಿಃಸಂದೇಹವಾದದ್ದಾಗುವುದು. ಮತ್ತು ಆ ಜ್ಞಾನವು ಹುಡುಗರ ಮನಸಿನಲ್ಲಿ ಸ್ಥಿರವಾಗಿ ನೆಲೆಗೊಳ್ಳುವುದು.

**ಕಪ್ಪು ಹಲಗೆಯ ಮೇಲೆ ಬರೆಯುವುದು ಬಹುದಿವಸದ ರೂಢಿಯಿಂದ ಬರತಕ್ಕದ್ದಾಗಿರುವುದು.** ಎಷ್ಟೋ ಶಿಕ್ಷಕರು ಈ

ಕೆಲಸವು ಸುಲಭವಾದದ್ದಲ್ಲೆಂದು ಮನಗಂಡಿರುವರು; ಕಪ್ಪು ಹಲಗೆಯ ಮೇಲೆ ಬರೆಯುವುದು, ಲೆಕ್ಕಣಿಕೆಯಿಂದ ಕಾಗದದ ಮೇಲೆ ಬರೆಯುವುದರಿಂದ ತೀರ ಭಿನ್ನವಾಗಿರುವುದು. ಖಡುವನ್ನು ಕೈಯಲ್ಲಿ ಸ್ವಾಭಾವಿಕವಾಗಿಯೂ ಗಟ್ಟಿಯಾಗಿಯೂ ಹಿಡಿದು ಬರೆಯಬೇಕು. ಕಪ್ಪು ಹಲಗೆಯ ಮೇಲೆ ಬರೆಯುವಾಗ ಅದಕ್ಕೆ ಹೊಂದಿಕೊಂಡು ನಿಲ್ಲಬಾರದು. ತಾವು ಬರೆದದ್ದೆಲ್ಲ ತಮಗೇ ಸ್ಪಷ್ಟವಾಗಿ ಕಾಣಿಸುವಷ್ಟು ದೂರದಲ್ಲಿ ನಿಂತುಕೊಳ್ಳಬೇಕು. ಮತ್ತು ವರ್ಗದಲ್ಲಿ ತೀರ ಹಿಂದೆ ಕುಳಿತ ಹುಡುಗರು ಸಹ ಕಪ್ಪು ಹಲಗೆಯ ಮೇಲೆ ಬರೆದದ್ದನ್ನು ಓದಬೇಕಾಗಿದೆ ಎಂಬುದನ್ನು ನೆನಪಿನಲ್ಲಿಟ್ಟು, ತೀರ ಸಣ್ಣ ಅಕ್ಷರಗಳನ್ನು ಶಬ್ದವಿಂಗಡಿಸದೆ ಸಾಲುಗಳು ಬಹಳ ಹತ್ತಿಯಾಗುವಂತೆ ಬರೆಯಬಾರದು. ಕಪ್ಪು ಹಲಗೆಯ ಮೇಲೆ ಬರೆಯುವಾಗ ಅಷ್ಟರಪೂರ್ತಿ ಪಾಠವನ್ನು ನಿಲ್ಲಿಸಬೇಕಾಗುವುದರಿಂದ ಅದಷ್ಟು ತೀವ್ರವಾಗಿಯೂ, ಸುವಾಚ್ಯವಾಗಿಯೂ ಬರೆಯಲಿಕ್ಕೆ ರೂಢಿ ಮಾಡುವುದು ಅವಶ್ಯವು.

**ಕಪ್ಪು ಹಲಗೆಯ ಮೇಲೆ ತತ್ಕಾಲಕ್ಕೆ ಚಿತ್ರಗಳನ್ನು ತೆಗೆಯುವ ವಿಶೇಷತರದ ರೂಢಿಯು ಶಿಕ್ಷಕರಿಗೆ ಅವಶ್ಯವಾದದ್ದು.** ಎಷ್ಟೋ ತರುಣ ಶಿಕ್ಷಕರು ವರ್ಗದ ಮುಂದೆ ನಿಂತು ಕಪ್ಪು ಹಲಗೆಯ ಮೇಲೆ ಚಿತ್ರಗಳನ್ನು ತೆಗೆಯಲಿಕ್ಕೆ ಹೆದರುವರು. ಹೀಗೆ ಹೆದರುವ ಕಾರಣವಿಲ್ಲ. ಮೊದಲೇ ಸಿದ್ಧಮಾಡಿಟ್ಟ ಚಿತ್ರಗಳನ್ನು ಉಪಯೋಗಿಸಬಾರದು. ಕಪ್ಪು ಹಲಗೆಯ ಮೇಲೆ ಉಬ್ಬು ತಗ್ಗು ಮಿಟ್ಟಿ ಮುಂತಾದ ಭಾಗಗಳನ್ನು ಯಾಥಾರ್ಥವಾಗಿ ಆಗಿಂದಾಗಲೇ ತೀವ್ರವಾಗಿ ಗೆರೆಗಳಿಂದ ತೆಗೆದು ತೋರಿಸುತ್ತ ಚಿತ್ರವನ್ನು ಪೂರ್ಣಮಾಡಬೇಕು. ಶಿಕ್ಷಕರ ಕೈಗಳು ಅವರ ತಲೆಗೆ (ಮನಸ್ಸಿನೊಳಗಿನ ಕಲ್ಪನೆಗಳಿಗೂ ವಿಚಾರಗಳಿಗೂ) ಸಹಾಯ್ಯಮಾಡುವಂತೆ ಸಿದ್ಧತೆ ಮಾಡಿಕೊಳ್ಳದೆ ಯಾವ ಶಿಕ್ಷಕರೂ ವರ್ಗದಲ್ಲಿ ಕಾಲಿಡಕೂಡದು. ಅಂದರೆ ಹುಡುಗರ ಕಣ್ಣಮುಂದೆ ಕಟ್ಟುವಂತೆ ತೋರಿಸಲಿಕ್ಕೆ ತಕ್ಕವುಗಳಾದ ಪ್ರತಿ ಒಂದು ಸಂಗತಿಯ ಸಾದಾ ಡ್ರಾಯಿಂಗಿನ ಚಿತ್ರ ( Sketches ) ಗಳನ್ನು ಕಪ್ಪು ಹಲಗೆಯ ಮೇಲೆ

ತೀವ್ರವಾಗಿ ತೆಗೆದು ತೋರಿಸತಕ್ಕದ್ದು. ವರ್ಣನಾತ್ಮಕ ದೃಷ್ಟಾಂತಗಳಿಗೆ ಸಹಾಯ್ಯವಾಗುವಂತೆ ಕಪ್ಪು ಹಲಗೆಯ ಮೇಲಿನ ಚಿತ್ರಗಳು ಇರತಕ್ಕದ್ದು. ಬಾರ್ನೆಟನೆಂಬ ಶಿಕ್ಷಣ ಶಾಸ್ತ್ರಜ್ಞನು ಅನ್ನುವುದೇನಂದರೆ, ಬಾಯಿಶಿಕ್ಷಣದ ಪ್ರಸಂಗದಲ್ಲಿ ಕಪ್ಪು ಹಲಗೆಯ ಮೇಲೆ ತೆಗೆದ ಚಿತ್ರಗಳು ಒಳ್ಳೇ ಪ್ರಯೋಜನಕರವಾದವುಗಳು. ಅವುಗಳನ್ನ ತೀವ್ರವಾಗಿಯೂ, ಆಕಸ್ಮಿಕವಾಗಿಯೂ ತತ್ಕಾಲಕ್ಕೆ ತೆಗೆದಂತೆ ಅವುಗಳಿಂದ ಪ್ರಯೋಜನವು ಹೆಚ್ಚು ಹೆಚ್ಚು ಪ್ರಮಾಣದಿಂದ ಆಗುವುದು. ಶಿಕ್ಷಣವು ಪ್ರಾರಂಭವಾಗುವುದಕ್ಕಿಂತ ಮುಂಚಿತವಾಗಿ ಕಪ್ಪು ಹಲಗೆಯ ಮೇಲೆ ಚಿತ್ರಗಳನ್ನು ತೆಗೆದು ಪೂರ್ಣಮಾಡಿಟ್ಟು ಶಿಕ್ಷಣದ ಕಾಲಕ್ಕೆ ಅದನ್ನು ವಿವರಿಸಿ ಹೇಳುವುದರಿಂದ ಆಗತಕ್ಕಷ್ಟು ಪ್ರಯೋಜನವಾಗುವುದಿಲ್ಲ. ಶಿಕ್ಷಣವು ನಡೆದಾಗ ಆಗಿಂದಾಗಲೇ ಚಿತ್ರದ ಒಂದೊಂದೇ ಭಾಗವನ್ನು ತೆಗೆಯುತ್ತ ವಿವರಿಸಿ ಹೇಳುತ್ತ ಹುಡುಗರ ಮುಂದೆಯೇ ಆ ಚಿತ್ರವನ್ನು ಪೂರ್ಣಮಾಡಿದರೆ ಹುಡುಗರ ಮನಸಿನಮೇಲೆ ವಿಶೇಷ ಪರಿಣಾಮವಾಗುವುದಿಷ್ಟೇ ಅಲ್ಲ, ಚಿತ್ರದಂತೆ ಆ ವಸ್ತುವು ಇರಬಹುದೆಂಬ ನಂಬಿಗೆಯು ಹುಡುಗರ ಮನಸಿನಲ್ಲಿ ಹುಟ್ಟುವುದು. ತತ್ಕಾಲಕ್ಕೆ ತೆಗೆದ ಚಿತ್ರಗಳಿಂದ ಪ್ರತ್ಯಕ್ಷ ವಸ್ತುಗಳಂತೆ ಉಪಯೋಗವಾಗುವುದು; ಮೊದಲೇ ತೆಗೆದಿಟ್ಟ ಚಿತ್ರಗಳಿಂದ ವಸ್ತುಗಳ ಸಾಮಾನ್ಯ ಕಲ್ಪನೆಯನ್ನು ಮಾಡಿಕೊಟ್ಟಂತೆ ಆಗುವುದು.

**ಕಪ್ಪು ಹಲಗೆಯನ್ನು ಒಂದುತರದ ಗೋಲಬಾಹ್ಯಕನ್ನಡಿ** ( Lens ) **ಯಂತೆ ಉಪಯೋಗಿಸಿಕೊಳ್ಳುವುದು.** ಮೊದಲನೆಯ ಹಾಗು ಮಹತ್ವದ ಸಂಗತಿಯಾಗಿರುತ್ತದೆ. ಅಂಥ ಕನ್ನಡಿಯಿಂದ ಸಣ್ಣ ಪದಾರ್ಥಗಳು ದೊಡ್ಡವಾಗಿ ಕಾಣುವುವು. ಸೂಕ್ಷ್ಮಸಂಗತಿಗಳು ವಿವರವಾಗಿ ಕಾಣುವುವು. ಅದೇಪ್ರಕಾರ ಪಾಠದೊಳಗಿನ ಯಾವದೊಂದು ಸಂಗತಿಯನ್ನು ವಿವರವಾಗಿ ತಿಳಿಸಿಕೊಡುವುದಕ್ಕಾಗಿ ಆಕೃತಿಯನ್ನು ಅಥವಾ ಚಿತ್ರವನ್ನು ದೊಡ್ಡ ಸ್ಕೇಲಿನಿಂದ ತೆಗೆದು ತೋರಿಸಬಹುದು. ಗೋಡೆಯಮೇಲೆ ತೂಗಹಾಕಿದ ನಕಾಶದ ಒಂದು ಭಾಗವನ್ನು ದೊಡ್ಡ

ಸ್ಕೇಲಿನಿಂದ ಕಪ್ಪು ಹಲಗೆಯ ಮೇಲೆ ತೆಗೆದು ತೋರಿಸಬಹುದು; ನಕಾಶದ ಯಾವದೊಂದು ಭಾಗವನ್ನು ಹೆಚ್ಚು ವಿವರವಾಗಿ ಪರೀಕ್ಷಣೆ ಮಾಡುವುದಕ್ಕಾಗಿ ಅದರ ಸೂಕ್ಷ್ಮ ಭಾಗಗಳನ್ನು ವಿವರವಾಗಿ ತೆಗೆದು ತೋರಿಸಬಹುದು. ಈ ರೀತಿಯಿಂದ ಕಪ್ಪು ಹಲಗೆಯು ಮಧ್ಯವರ್ತಿ ಬಿಂದುವಾಗಿ ವರ್ಗದೊಳಗಿನ ಎಲ್ಲ ಹುಡುಗರ ಲಕ್ಷ್ಯದ ತೇಜಃಕೇಂದ್ರ ಬಿಂದುವಾಗುವುದು. ಆ ಬಿಂದುವು ಎಲ್ಲ ಹುಡುಗರ ಲಕ್ಷವನ್ನು ಹಿಡಿಯುವದಲ್ಲದೆ ಕಪ್ಪು ಹಲಗೆಯ ಮೇಲೆ ಬರೆದುದು ಹುಡುಗರ ಕಣ್ಣಲ್ಲಿ ಮೂಡುವುದು. ಕಪ್ಪು ಹಲಗೆಯನ್ನು ಈ ರೀತಿಯಿಂದ ಉಪಯೋಗಿಸುವ ರೂಢಿಯನ್ನು ಶಿಕ್ಷಕರು ಸಂಪಾದಿಸತಕ್ಕದ್ದು; ಯಾಕೆಂದರೆ ಕಪ್ಪು ಹಲಗೆಯನ್ನು ಉಪಯೋಗಿಸುವ ಕೌಶಲ್ಯವು ಉತ್ತಮ ಶಿಕ್ಷಕರ ಒಂದು ಲಕ್ಷಣವಾಗಿದೆ.

ಇನ್ನು ಈ ಕಪ್ಪು ಹಲಗೆಯನ್ನು ಯಾವ ಯಾವ ವಿಷಯಗಳಲ್ಲಿ ಯಾವ ಯಾವ ಬಗೆಯಿಂದ ಉಪಯೋಗಿಸಿಕೊಳ್ಳಬೇಕೆಂಬುದನ್ನು ಆಲೋಚಿಸುವ.

**ಅಂಕಗಣಿತದ ಪಾಠಗಳಲ್ಲಿ** ಮಾದರಿಯ ಉದಾಹರಣೆಗಳನ್ನು ಕಪ್ಪು ಹಲಗೆಯ ಮೇಲೆ ಮಾಡಿತೋರಿಸಬೇಕಾಗುವುದು. ಇಂಥ ಉದಾಹರಣೆಗಳು ವರ್ಗದ ಹುಡುಗರಿಗೆ ನಕಲುಮಾಡಿಕೊಳ್ಳಲಿಕ್ಕೆ ತಕ್ಕವುಗಳಾಗುವಂತೆ ಉತ್ಕೃಷ್ಟವಾದ ಮಾದರಿಗಳಾಗುವಂತೆ ಪ್ರಯತ್ನ ಮಾಡಲಿಕ್ಕೆ ಬೇಕು. ಅಂಕೆಗಳನ್ನು ದುಂಡಗಾಗಿಯೂ ವ್ಯವಸ್ಥೆಯಿಂದಲೂ ಬರೆಯಬೇಕು. ಗಣಿತದ ಚಿಹ್ನಗಳನ್ನು ಎಚ್ಚರದಿಂದ ಒಡೆದು ಕಾಣುವಂತೆ ಉಪಯೋಗಿಸತಕ್ಕದ್ದು. ಮತ್ತು ರೀತಿಯು ವಿವರಣವು ವಿಚಾರಸರಣಿಗೆ ಅನುಸರಿಸಿ ಪದ್ಧತಿಗೆ ಸರಿಯಾಗಿ ವ್ಯವಸ್ಥೆಯಿಂದ ಬರೆಯಲ್ಪಟ್ಟಿರಬೇಕು. ನಿಮ್ಮ ವಿದ್ಯಾರ್ಥಿಗಳು ಅಂಕಗಣಿತದ ಉದಾಹರಣೆಯನ್ನು ತಪ್ಪದೆ ತೀವ್ರವಾಗಿ ಬಿಡಿಸಲಿಕ್ಕೆ ಸಮರ್ಥರಾಗ ತಕ್ಕದ್ದು. ಆದರೆ ರೀತಿಯ ಸ್ವಚ್ಛತೆ ಹಾಗು ಅಚ್ಚುಕಟ್ಟುತನ ಇವುಗಳ ಕಡೆಗೆ ದುರ್ಲಕ್ಷ ಮಾಡತಕ್ಕದ್ದಲ್ಲ. ಯಾವದೊಂದು ಉದಾಹರಣೆ

ಯನ್ನು ಹುಡುಗರು ವ್ಯವಸ್ಥೆಯಿಂದಲೂ, ಅಚ್ಚುಕಟ್ಟುತನದಿಂದಲೂ ಬಿಡಿಸಿ ಬರೆದರೆ ಅದರಿಂದ ಮುಂದೆ ಎಷ್ಟೋ ಪ್ರಯೋಜನವಾಗುವುದು. ಒಂದು ವೇಳೆ ಆ ಉದಾಹರಣೆಯು ಉತ್ತರದಲ್ಲಿ ಅಥವಾ ವಿಚಾರ ಸರಣಿಯಲ್ಲಿ ತಪ್ಪಿದರೂ ಅಡ್ಡಿಯಿಲ್ಲ. ವಿದ್ಯಾರ್ಥಿಗಳು ತಮ್ಮ ಎಕ್ಸರಸಾಯಿಜ ಬುಕ್ಕಿನಲ್ಲಿ ಉದಾಹರಣೆಗಳನ್ನು ವ್ಯವಸ್ಥೆಯಿಂದ ಬಿಡಿಸಿ ಬರೆಯಬೇಕೆಂದು ಶಿಕ್ಷಕರು ಇಚ್ಛಿಸುತ್ತಿದ್ದರೆ ತಾವು **ಕಪ್ಪು ಹಲಗೆಯ ಮೇಲೆ ಮಾಡುವ ಕೆಲಸವು ಹುಡುಗರಿಗೆ ಒಳ್ಳೇ ಮಾದರಿಯಾಗುವಂತೆ ಇರಲಿಕ್ಕೆ ಬೇಕೆಂಬುದನ್ನು** ಅವರು ಮರೆಯತಕ್ಕದ್ದಲ್ಲ.

**ವಾಚನ ಪಾಠಗಳಲ್ಲಿ** ಕಪ್ಪು ಹಲಗೆಯ ಮೇಲೆ, ವಿದ್ಯಾರ್ಥಿಗಳು ಅಶುದ್ಧವಾಗಿ ಉಚ್ಚರಿಸುವ ಶಬ್ದಗಳನ್ನೂ ಅವರಿಗೆ ಅಪರಿಚಿತವಾದ ಶಬ್ದಗಳನ್ನೂ ಬರೆಯತಕ್ಕದ್ದು. ಆ ಶಬ್ದಗಳನ್ನು ಸುವಾಚ್ಯವಾಗಿಯೂ, ಸ್ಪಷ್ಟವಾಗಿಯೂ ಸುಲಭವಾಗಿಯೂ ಬರೆಯತಕ್ಕದ್ದು. ಆದರೆ ವಿದ್ಯಾರ್ಥಿಯು ಓದುತ್ತಿರುವಾಗ ಬರೆಯಬಾರದು. ಅವನ ಓದೋಣವು ಮುಗಿದ ಬಳಿಕ ಎಲ್ಲ ಹುಡುಗರ ಲಕ್ಷ್ಯವನ್ನು ಕಪ್ಪು ಹಲಗೆಯ ಕಡೆಗೆ ಎಳಕೊಂಡು ಬರೆಯಬೇಕು. ಬರೆಯುತಕ್ಕ ಶಬ್ದದಲ್ಲಿ ಏನಾದರೂ ವೈಲಕ್ಷಣ್ಯವಿದ್ದರೆ ಅದನ್ನು ಹುಡುಗರಿಗೆ ಚೆನ್ನಾಗಿ ತಿಳಿಸಿಕೊಡಬೇಕು. ವ್ಯಾಕರಣದ ಪಾಠಗಳಲ್ಲಿ ಉದಾಹರಣೆಗಳ ಸಲುವಾಗಿ ತೆಗೆದುಕೊಂಡ ವಾಕ್ಯಗಳನ್ನೂ ಕಪ್ಪು ಹಲಗೆಯ ಮೇಲೆ ಬರೆಯಬೇಕು.

**ಡ್ರಾಯಿಂಗದ ಪಾಠಗಳಲ್ಲಿ** ಕಪ್ಪು ಹಲಗೆಯ ಉಪಯೋಗವನ್ನು ಕೆಲವು ಪ್ರಸಂಗಗಳಲ್ಲಿ ಮಾಡಬಹುದು. ಬೇರೆ ಕೆಲವು ಪ್ರಸಂಗಗಳಲ್ಲಿ ಬಿಡಬಹುದು. ಪ್ರತ್ಯಕ್ಷವಸ್ತುಗಳನ್ನು ಮುಂದೆ ಇಟ್ಟುಕೊಂಡು ಅವನ್ನು ನೋಡಿ ಡ್ರಾಯಿಂಗ ತೆಗೆಯುತ್ತಿದ್ದರೆ (ಯಾವಾಗಲೂ ಹಾಗೆಯೇ ತೆಗೆಯತಕ್ಕದ್ದು.) ಶಿಕ್ಷಕರು ಕಪ್ಪು ಹಲಗೆಯನ್ನು ಉಪಯೋಗಿಸಬಹುದು. ಆದರೆ ಹುಡುಗರು ಚಿತ್ರಗಳನ್ನು ತೆಗೆಯಲಿಕ್ಕೆ ಪ್ರಾರಂಭಿಸುವ ಮೊದಲು ತಾವು ಕಪ್ಪು ಹಲಗೆಯ ಮೇಲೆ ತೆಗೆದ ಚಿತ್ರವನ್ನು ಅಳಿಸಿಬಿಡಲಿಕ್ಕೆ ಮರೆಯಬಾರದು. ಇಲ್ಲದಿದ್ದರೆ ಹುಡುಗರು, ಶಿಕ್ಷಕರು

ತೆಗೆದ ಚಿತ್ರದ ಕಾಪಿ ಮಾಡಿದಂತೆ ಆಗುವುದೇ ಹೊರತು ಪ್ರತ್ಯಕ್ಷ ವಸ್ತು ವನ್ನು ನೋಡಿ ತೆಗೆದಂತೆ ಆಗುವುದಿಲ್ಲ.

**ಭೂಗೋಲ, ಇತಿಹಾಸ, ಆರೋಗ್ಯ ಮುಂತಾದ ಸಂಭಾಷಣ ರೂಪದಿಂದ ಸಾಗುವ ಪಾಠಗಳಲ್ಲಿ** ಕಪ್ಪು ಹಲಗೆಯ ಮೇಲೆ ಬರೆಯ ತಕ್ಕ ಸಂಕ್ಷಿಪ್ತ ಟಿಪ್ಪಣಿಯನ್ನು ಮೊದಲೇ ಸಿದ್ಧಮಾಡಿಕೊಂಡಿರತಕ್ಕದ್ದು. ಈ ಸಂಕ್ಷಿಪ್ತ ಟಿಪ್ಪಣಿಯು ಬಹಳ ಮಹತ್ವವಾದದ್ದು. ಯಾವದೊಂದು ಪಾಠದಲ್ಲಿ ಕಪ್ಪು ಹಲಗೆಯ ಮೇಲೆ ಯಾವ ಯಾವ ಸಂಗತಿಗಳನ್ನು ಬರೆಯತಕ್ಕದ್ದು; ಯಾವ ಸಂಗತಿಗಳನ್ನು ಬರೆಯುವ ಅವಶ್ಯಕತೆಯು ಇರುವದಿಲ್ಲೆಂಬುದನ್ನು ನಿರ್ಣಯಿಸುವುದಕ್ಕೆ ಶಿಕ್ಷಕರಿಗೆ ಬಹಳ ಅನುಭವವು ಬೇಕು. ಕಲಿಸಿದ ಪಾಠವು ಸಾಧಾರಣತರದ್ದಾದರೂ ಕಪ್ಪು ಹಲಗೆಯ ಮೇಲಿನ ಟಿಪ್ಪಣಿಯು ಉತ್ಕೃಷ್ಟವಾದದ್ದಿದ್ದರೆ ಆ ಪಾಠದಿಂದ ಎಷ್ಟೋಮಟ್ಟಿಗೆ ಪ್ರಯೋಜನವಾಗಬಹುದು. ಆದರೆ ಸಾಮಾನ್ಯವಾಗಿ ಹೇಳತಕ್ಕದ್ದೇನಂದರೆ, ಉತ್ಕೃಷ್ಟವಾದ ಪಾಠವು ಸಾಗಿದಂತೆ ಕಪ್ಪು ಹಲಗೆಯ ಮೇಲೆ ಉತ್ಕೃಷ್ಟವಾದ ಟಿಪ್ಪಣಿಯನ್ನು ಬರೆಯುತ್ತ ಸಾಗಬೇಕು.

ಇಲ್ಲಿ ಸಂಕ್ಷಿಪ್ತ ಟಿಪ್ಪಣಿಯನ್ನು ಕುರಿತು ನಾಲ್ಕು ಮಾತುಗಳನ್ನು ಹೇಳುವದು ಅವಶ್ಯ ಕಾಣುತ್ತದೆ. ಇಂಥ ಸಂಕ್ಷಿಪ್ತ ಟಿಪ್ಪಣಿಗಳನ್ನು ಕಪ್ಪು ಹಲಗೆಯ ಮೇಲೆ ಬರೆಯುವ ಮುಖ್ಯ ಉದ್ದೇಶವೇನಂದರೆ:– ಕಲಿಸಿದ ಪಾಠದೊಳಗಿನ ವಿಷಯವೂ ಅದರ ಭಾಗ-ಪ್ರಭಾಗಗಳೂ ಸಂಪೂರ್ಣ ವಾಗಿ ಹುಡುಗರ ಕಣ್ಣು ಮುಂದೆ ಕಟ್ಟಬೇಕೆಂಬುದು. ಈ ಟಿಪ್ಪಣಿ ಯನ್ನು ನೋಡಿದ ಕೂಡಲೆ ಆ ಪಾಠದ ಬೇರೆ ಬೇರೆ ಭಾಗಗಳಿಗೆ ಇರುವ ಸಂಬಂಧವನ್ನೂ ಇಡೀ ಪಾಠಕ್ಕೂ ಅದರ ಒಂದೊಂದು ಭಾಗಕ್ಕೂ ಇರುವ ಸಂಬಂಧವನ್ನೂ ಒಟ್ಟಾಗಿ ಅರಿತುಕೊಳ್ಳಲಿಕ್ಕೆ ಹುಡುಗರು ಸಮರ್ಥರಾಗುವರು. ಆದರಿಂದ ಕಲಿಸಿದ ಎಲ್ಲ ವಿಷಯಗಳು ಅವರ ಮನಸಿನ ಮೇಲೆ ಬಿಂಬಿಸುವುವು. ಮತ್ತು ಇಡೀ ಪಾಠದ ಒಂದು ಕಲ್ಪನಾಚಿತ್ರವು ಅವರ ಮನಸಿನಲ್ಲಿ ಮೂಡುವುದು. ಈ ಕಾರಣದ

ಸಲುವಾಗಿ ಪಾಠದಲ್ಲಿ ಒಳ್ಳೇ ಮಹತ್ವದ ಸಂಗತಿಗಳನ್ನಷ್ಟೇ ಆಯ್ದುಕೊಂಡು ಅವುಗಳನ್ನು ಕಲಿಸಿದ ಅನುಕ್ರಮಕ್ಕೆ ಸರಿಯಾಗಿ ಹೊಂದಿಕೆ ಮಾಡಿ ಕಪ್ಪು ಹಲಗೆಯ ಮೇಲೆ ಬರೆಯುವ ಟಿಪ್ಪಣಿಯನ್ನು ಸಿದ್ಧಮಾಡತಕ್ಕದ್ದು. ಆದರೆ ಈ ಟಿಪ್ಪಣಿಯನ್ನು ಪಾಠವು ಸಂಪೂರ್ಣವಾಗಿ ಮುಗಿಯುವ ತನಕ ಬರೆಯದೆ ಬಿಟ್ಟು ಪಾಠವು ಮುಗಿದ ಮೇಲೆ ಒಮ್ಮೆಲೆ ಎಲ್ಲ ಟಿಪ್ಪಣಿಯನ್ನು ಬರೆಯುವುದು ಸರಿಯಲ್ಲ. ಪಾಠವು ಸಾಗಿದಂತೆ ಕಪ್ಪು ಹಲಗೆಯ ಮೇಲಿನ ಟಿಪ್ಪಣಿಯೂ ಸಾವಕಾಶವಾಗಿ ಸಾಗಲಿಕ್ಕೆ ಬೇಕು. ಒಂದೊಂದೇ ಸಂಗತಿಯನ್ನು ಕಲಿಸುವುದು, ಆ ಸಂಗತಿಯನ್ನು ಕಪ್ಪು ಹಲಗೆಯ ಮೇಲೆ ಬರೆಯುವುದು. ಹೀಗೆ ಮಾಡದೆ ಕಟ್ಟಕಡೆಗೆ ಬರೆಯಬೇಕೆಂದು ಬಿಟ್ಟರೆ ಇಚ್ಛೆಯ ಮೇರೆಗೆ ಎಲ್ಲ ಸಂಗತಿಗಳನ್ನು ಬರೆಯುವ ಅವಕಾಶವೇ ದೊರೆಯುವುದಿಲ್ಲ. ಹಾಗು ಟಿಪ್ಪಣಿಯು ವ್ಯವಸ್ಥೆಯುಳ್ಳದ್ದಾಗುವುದಿಲ್ಲ.

ಎಷ್ಟೋ ಶಿಕ್ಷಕರು ಕಲಿಸುವಾಗ ಕಪ್ಪು ಹಲಗೆಯ ಮೇಲೆ ಬರೆಯಲಿಕ್ಕೆ ಬಹಳ ಹಾತೊರೆಯುವರು. ಹಾಗೆ ಮಾಡುವುದರಿಂದ ಅವರ ಕಲಿಸೋಣವು ಒಳ್ಳೇ ಮಹತ್ವದ ವೇಳೆಯಲ್ಲಿಯೆ ಕೇವಲ ಕಪ್ಪು ಹಲಗೆಯ ಮೇಲೆ ಬರೆಯುವ ಉದ್ದೇಶದಿಂದ ನಿಲ್ಲಿಸಲ್ಪಡುವುದು. ಅದರಿಂದ ರಸಭಂಗವಾಗಿ ಹೋಗುವುದು. ಬುದ್ಧಿವಂತನಾದ ಒಳ್ಳೇ ಶಿಕ್ಷಕನು ಕೂಡ ಕಪ್ಪು ಹಲಗೆಯ ಮೇಲೆ ಬರೆಯುವಾಗ ಅವನು ತನ್ನ ಕಲಿಸೋಣವನ್ನು ತುಸು ಹೊತ್ತು ನಿಲ್ಲಿಸಬೇಕಾಗುವುದು. ಮತ್ತು ಆ ವೇಳೆಯಲ್ಲಿ ಹುಡುಗರ ಲಕ್ಷವನ್ನು ಪಾಠದ ಕಡೆಗೆ ಕಾಯ್ದುಕೊಳ್ಳುವುದು ಬಹು ಕಠಿಣವಾದ ಸಂಗತಿಯಾಗಿದೆ. ಶಿಕ್ಷಕರು ಯಾವದಾದರೊಂದು ಮನೋರಂಜಕವಾದ ಸಂಗತಿಯನ್ನು ಕುರಿತು ಹುಡುಗರ ಸಂಗಡ ಮಾತನಾಡುತ್ತಿದ್ದರೆ ಅದನ್ನು ಅವರು ಒಳ್ಳೇ ಚಿತ್ತಗೊಟ್ಟು ಕೇಳುತ್ತಿರುವರು. ಆದರೆ ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬರೆಯಹತ್ತಿದ ಕೂಡಲೆ ಹುಡುಗರ ಲಕ್ಷವು ಪಾಠದಿಂದ ತಪ್ಪಿಹೋಗುವುದು. ಮತ್ತು ಸ್ವಾಭಾವಿಕವಾಗಿಯೇ ಚಂಚಲವಾದ ಅವರ ಮನಸ್ಸು ಬೇರೆ

ವಿಷಯದಲ್ಲಿ ತೊಡಗಲಿಕ್ಕೆ ಇದೇ ತಕ್ಕ ಸಮಯವೆಂದು ಅವರು ತಿಳಿಯು ವರು. ಇದನ್ನು ಪ್ರತಿಬಂಧಿಸಬೇಕಾದರೆ **ಕಪ್ಪು ಹಲಗೆಯ ಮೇಲೆ ಬರೆಯುತಕ್ಕಷ್ಟಕ್ಕಿಂತ ಹೆಚ್ಚು ಬರೆಯಲಿಕ್ಕೆ ಅಪೇಕ್ಷಿಸಬಾರದು.** ಮುಖ್ಯ ಮುಖ್ಯ ಸಂಗತಿಗಳನ್ನಷ್ಟೇ ಬರೆಯಬೇಕು. ಮತ್ತು ಆ ಸಂಗತಿಗಳನ್ನು ಹೆಚ್ಚಿಗೆ ಬೆಳಿಸಿ ಬರೆಯಬಾರದು. ಹಾಗು ಕಪ್ಪು ಹಲಗೆಯ ಮೇಲೆ ಬರೆಯುವುದರಲ್ಲಿ ಒಂದೇ ಸರತಿಗೆ ಬಹಳ ಹೊತ್ತಿನ ವರೆಗೆ ತೊಡಗಬಾರದು.

ಕಪ್ಪು ಹಲಗೆಯ ಮೇಲೆ ಬರೆಯುವಾಗ ಹುಡುಗರ ಲಕ್ಷ್ಯವನ್ನು ಹಿಡಿದಿಟ್ಟುಕೊಳ್ಳುವುದಕ್ಕಾಗಿ, ಮಾತನಾಡುವದರಿಂದಾಗಲಿ, ಬೇರೆ ಉಪಾಯದಿಂದಾಗಲಿ ಪ್ರಯತ್ನವನ್ನು ಮಾಡತಕ್ಕದ್ದೆಂದು ಈ ಮೊದಲೇ ಹೇಳಿರುತ್ತದೆ. ಈ ಬಗೆಯ ಪ್ರಯತ್ನವನ್ನು ಮಾಡುವಾಗ, ಹುಡುಗರ ವಿಚಾರಸರಣಿಗೆ ಅಡ್ಡಿಯಾಗದಂತೆ ಅಥವಾ ಒಮ್ಮೆಲೆ ಅವರ ಲಕ್ಷ್ಯವು ಪಾಠದಿಂದ ತಪ್ಪಿಹೋಗದಂತೆ ಎಚ್ಚರಪಡತಕ್ಕದ್ದು.

ಇತಿಹಾಸ, ಭೂಗೋಲ, ಆರೋಗ್ಯ ಮುಂತಾದ ಸಂಭಾಷಣ ಪಾಠಗಳು ನಡೆದಾಗ ಕಪ್ಪು ಹಲಗೆಯ ಮೇಲೆ ಬರೆಯತಕ್ಕ ಟಿಪ್ಪಣಿಗಳು ಯಾವ ಸ್ವರೂಪದಲ್ಲಿರತಕ್ಕದ್ದೆಂಬ ಬಗ್ಗೆ ಸಾಮಾನ್ಯ ನಿಯಮವು ಯಾವದೆಂದರೆ.– **ಕಪ್ಪುಹಲಗೆಯ ಮೇಲೆ ಬರೆಯತಕ್ಕ ಟಿಪ್ಪಣಿಯು ಹುಡುಗರ ಕಣ್ಣಿನಲ್ಲಿ ಹೆಚ್ಚು ಸ್ಪಷ್ಟವಾಗಿ ಮೂಡುವ ಸ್ವರೂಪದಲ್ಲಿ ಇರತಕ್ಕದ್ದು. ಮತ್ತು ಆ ಟಿಪ್ಪಣಿಯ ವ್ಯವಸ್ಥೆಯೂ ಅಚ್ಚು ಕಟ್ಟತನವೂ ನೋಡುವವರಿಗೆ ಇಡೀ ಪಾಠದ ಸಾರಾಂಶವನ್ನು ಚಿತ್ರರೂಪದಿಂದ ಬರೆದು ತೋರಿಸಿದಂತೆ ಆಗಿರಲಿಕ್ಕೆಬೇಕು.** ಟಿಪ್ಪಣಿಯೊಳಗಿನ ಮುಖ್ಯ ಮುಖ್ಯ ಸಂಗತಿಗಳು ಒಡೆದು ಕಾಣುವಂತೆ ವ್ಯವಸ್ಥೆಯು ಇರಬೇಕು. ಅವುಗಳೊಳಗಿನ ಮುಖ್ಯ ಶಬ್ದಗಳನ್ನು ದೊಡ್ಡ ಅಕ್ಷರಗಳಿಂದ ಬರೆಯಬೇಕು. ಆ ಶಬ್ದಗಳನ್ನು ನೋಡಿದ ಕೂಡಲೆ, ಒಂದು ಸಂಗತಿಯು ಹುಡುಗರ ಮನಸ್ಸಿನಲ್ಲಿ ಬಿಂಬಿ ಸುತ್ತಿರುವಂಥ ಶಬ್ದಗಳನ್ನೇ ಆರಿಸಿ ಯೋಜನೆ ಮಾಡಬೇಕು. ಕೆಲವು

ಶಬ್ದಗಳ ಬುಡದಲ್ಲಿ ಒಂದು ಗೆರೆಯನ್ನು ಅಥವಾ ಜೋಡುಗೆರೆಯನ್ನು ಎಳೆದು ಇಲ್ಲವೆ ಬಣ್ಣದ ಖಡುಗಳನ್ನು ಉಪಯೋಗಿಸಿ ಅವುಗಳ ಮಹತ್ವ ವನ್ನೂ ಭಾಗ-ಪ್ರಭಾಗಗಳ ಭೇದವನ್ನೂ ತೋರಿಸಿಕೊಡಲಿಕ್ಕೆ ಬರುವುದು. ಮುಂಚಿತವಾಗಿಯೇ ತುಸು ಆಲೋಚನೆ ಮಾಡುವುದ ರಿಂದಲೂ ಸಿದ್ಧಮಾಡಿಟ್ಟುಕೊಳ್ಳುವ ರೂಢಿಯಿಂದಲೂ ಹುಡುಗರ ಮನಸಿನ ಮೇಲೆ ಪರಿಣಾಮ ಮಾಡುವಂಥ ಅನೇಕ ಪ್ರಕಾರದ ಹಂಚಿಕೆ ಗಳು ಬರಬರುತ್ತ ತೋಚಹತ್ತುವುವು.

ಬಣ್ಣದ ಖಡುಗಳನ್ನು ಉಯೋಗಿಸುವುದನ್ನು ಕುರಿತು ಇಲ್ಲಿ ನಾಲ್ಕು ಮಾತುಗಳನ್ನು ಹೇಳುವುದು ಅವಶ್ಯ ಕಾಣುತ್ತದೆ. ಬಣ್ಣದ ಖಡುಗಳು ಅತ್ಯಂತ ಉಪಯುಕ್ತವಾದವುಗಳೂ ಹುಡುಗರ ಮನಸಿನ ಮೇಲೆ ಪರಿಣಾಮವನ್ನುಂಟುಮಾಡುವಂಥವುಗಳೂ ಆಗಿರುವುವು. ಆದರೆ ಸಾಧಾರಣವಾಗಿ ಬಿಳಿಯ ಖಡುವಿನಿಂದ ಬರೆದರೆ ಹುಡುಗರ ಮನಸಿನ ಮೇಲೆ ಒಳ್ಳೇ ಪರಿಣಾಮವಾಗುತ್ತಿದ್ದರೆ, ಬಣ್ಣದ ಖಡುವನ್ನು ಉಪಯೋಗಿಸುವ ಆವಶ್ಯಕತೆಯು ಇರುವುದಿಲ್ಲೆಂಬುದನ್ನು ಲಕ್ಷ್ಯದಲ್ಲಿಡ ತಕ್ಕದ್ದು. ಬಣ್ಣದ ಖಡುಗಳನ್ನು ಆರಿಸುವದರಲ್ಲಿಯೂ ತುಸು ಆಲೋಚನೆ ಮಾಡತಕ್ಕದ್ದು. ಹುಡುಗರು ಕಪ್ಪು ಹಲಗೆಯ ಮೇಲೆ ಹಲವು ಬಣ್ಣಗಳಿಂದ ಬರೆದ ಚಿತ್ರವಿಚಿತ್ರವಾದ ಅಕ್ಷರಗಳನ್ನು ನೋಡಿ ಆಶ್ಚರ್ಯಪಡುವಂತೆ ಮಾಡುವುದು ಶಿಕ್ಷಕರ ಉದ್ದೇಶವಿರುವುದಿಲ್ಲ. ಬಣ್ಣದ ಖಡುವನ್ನು ಉಪಯೋಗಿಸುವ ಉದ್ದೇಶವನ್ನು ಲಕ್ಷ್ಯದಲ್ಲಿಡ ತಕ್ಕದ್ದು. **ಕಪ್ಪು ಹಲಗೆಯ ಮೇಲೆ ಬರೆಯತಕ್ಕ ಟಿಪ್ಪಣೆಯನ್ನು ಯಾವಾಗಲೂ ಅಚ್ಚ ಬಿಳಿಯ ಖಡುವಿನಿಂದಲೇ ಬರೆಯುವುದು ಒಳ್ಳೇದು.** ಬಣ್ಣದ ಖಡುಗಳನ್ನು ಮಹತ್ವದ ಶಬ್ದಗಳ ಕೆಳಗೆ ಗೆರೆ ಹೊಡೆಯುವದಕ್ಕಾಗಿಯೂ ಚಿತ್ರಗಳನ್ನು ತೆಗೆಯುವದಕ್ಕಾಗಿಯೂ, ಉಪಯೋಗಿಸತಕ್ಕದ್ದು. ಶಕ್ಯವಿದ್ದರೆ ಯಾವದೊಂದು ಶಬ್ದದ ಅರ್ಥ ವನ್ನು ಒಣ್ಣದಿಂದ ಸೂಚಿಸಲಿಕ್ಕೆ ಬರುವಂತಿದ್ದರೆ ಹಾಗೆ ಮಾಡ ಬಹುದು. ಬರ್ಫದ ಬಗ್ಗೆ ಪಾಠವನ್ನು ಕಲಿಸುತ್ತಿರುವಾಗ ಬರ್ಫ ಈ

ಶಬ್ದವನ್ನು ನೀಲೀ ಬಣ್ಣದ ಖಡುವಿನಿಂದ ಎಂದೂ ಬರೆಯಬಾರದು. ಕಪ್ಪು ಹಲಗೆಯ ಮೇಲೆ ಬರೆಯತಕ್ಕ ಟಿಪ್ಪಣಿಯು ಬೇರೆ ಬೇರೆ ಬಣ್ಣದಿಂದ ಚಂದಕಾಣಬೇಕೆಂದು ಒಂದು ಶಬ್ದವನ್ನು ಒಂದು ಬಣ್ಣದಿಂದ ಮತ್ತೊಂದು ಶಬ್ದವನ್ನು ಮತ್ತೊಂದು ಬಣ್ಣದಿಂದ ಬರೆಯುವದು ಎಷ್ಟು ಮಾತ್ರಕ್ಕೂ ಸರಿಯಲ್ಲ. ಹುಡುಗರ ಲಕ್ಷವನ್ನು ಸ್ಥಿರಪಡಿಸಲಿಕ್ಕೆ ಸಹಾಯವಾಗುವಂತೆ ಬಣ್ಣವನ್ನು ಉಪಯೋಗಿಸತಕ್ಕದ್ದು. ಆದರೆ ಬಣ್ಣದಿಂದ ಹುಡುಗರ ಮನಸ್ಸು ಚಂಚಲವಾಗಕೂಡದು. ಹುಡುಗರ ಲಕ್ಷವು ಶಬ್ದದ ಕಡೆಗೆ ಇರಬೇಕಲ್ಲದೆ ಬಣ್ಣದ ಕಡೆಗೆ ಇರಕೂಡದು.

ಕಪ್ಪು ಹಲಗೆಯ ಮೇಲೆ ಬರೆಯುವ ಟಿಪ್ಪಣಿಯ ಸ್ವರೂಪವು ಹುಡುಗರ ವಯಸ್ಸಿಗನುಸರಿಸಿಯೂ, ಕಲಿಸತಕ್ಕ ವಿಷಯಕ್ಕನುಗುಣವಾಗಿಯೂ ಬದಲಾಗತಕ್ಕದ್ದೆಂಬುದನ್ನು ಶಿಕ್ಷಕರು ಕೂಡಲೆ ಅರಿತುಕೊಳ್ಳತಕ್ಕದ್ದು. ಚಿಕ್ಕ ಮಕ್ಕಳಿಗೆ ಕಲಿಸುವುದಿದ್ದಾಗ ಕಪ್ಪು ಹಲಗೆಯ ಮೇಲಿನ ಟಿಪ್ಪಣಿಯು ಪೂರ್ಣ ವಾಕ್ಯಗಳಿಂದ ವಿಸ್ತಾರವಾಗಿ ಬರೆದದ್ದಾಗಿರಬೇಕು. ಯಾಕಂದರೆ ಇಂಥ ಹುಡುಗರಲ್ಲಿ ಸಂಕ್ಷಿಪ್ತ ಟಿಪ್ಪಣಿಯನ್ನು ಅರಿತು ಗ್ರಹಣಮಾಡುವ ಸಾಮರ್ಥ್ಯವು ಇರುವುದಿಲ್ಲ. ಆದರೆ ಪ್ರೌಢ ಹುಡುಗರ ಸಲುವಾಗಿ ಬರೆಯತಕ್ಕ ಟಿಪ್ಪಣಿಯು ಸಂಕ್ಷಿಪ್ತವಾದದ್ದಿರಬೇಕು. ಎಷ್ಟೋ ಪ್ರಸಂಗಗಳಲ್ಲಿ ಅದು ಕೇವಲ ವಿಷಯದ ಅಸ್ಥಿಪಂಜರದ ಸ್ವರೂಪದ ಬಾಹ್ಯರೇಷೆಯಾಗಿರತಕ್ಕದ್ದು. ಪಾಠದ ಅಂತರ್ಭಾಗಗಳನ್ನು ಸಮಯೋಚಿತವಾದ ಕೇವಲ ಒಂದೊಂದು ಶಬ್ದಗಳನ್ನು ವ್ಯವಸ್ಥೆಯಿಂದ ಉಪಯೋಗಿಸಿ ತೋರಿಸಬಹುದು. ಸಾಲೆಯೊಳಗಿನ ಮಧ್ಯವಯಸ್ಸಿನ ಹುಡುಗರ ಸಲುವಾಗಿ ಮೇಲೆ ಹೇಳಿದ ಎರಡೂ ಉಪಾಯಗಳನ್ನು ಯೋಗ್ಯಕಂಡ ಮೇರೆಗೆ ಉಪಯೋಗಮಾಡಿಕೊಳ್ಳಬಹುದು.

ಮೇಲೆ ಹೇಳಿದಂತೆ ಕಪ್ಪು ಹಲಗೆಯ ಮೇಲೆ ಬರೆಯತಕ್ಕ ಟಿಪ್ಪಣಿಯು ಪಾಠದ ವಿಷಯವನ್ನೂ ಅವಲಂಬಿಸಬೇಕಾಗು

ವುದು. ಕೆಲವು ವಿಷಯಗಳಲ್ಲಿ ಕಲಿಸಿದ ವಿಷಯಗಳ ಸ್ಪಷ್ಟವಾದ ಸಾರಾಂಶವು ತನ್ನಷ್ಟಕ್ಕೆ ತಾನೇ ಅತಿ ಸುಲಭವಾಗಿ ಹುಡುಗರಿಗೆ ತಿಳಿಯುವಂತೆ ಹೊರಡುವುದು. ಅದನ್ನೇ ಕಪ್ಪು ಹಲಗೆಯ ಮೇಲೆ ಬರೆದರೆ ತೀರಿತು. ಇತಿಹಾಸ ಭೂಗೋಲ ಆರೋಗ್ಯ ಮುಂತಾದ ವಿಷಯಗಳಲ್ಲಿ ಅಷ್ಟು ಸುಲಭವಾಗಿ ಹೊರಡುವುದಿಲ್ಲ. ಕಪ್ಪು ಹಲಗೆಯ ಟಿಪ್ಪಣಿಯನ್ನು ಸಿದ್ಧಪಡಿಸುವುದು, ಸಂಭಾಷಣದಿಂದ ಕಲಿಸತಕ್ಕ ಕೆಲಕೆಲವು ವಿಷಯಗಳಿಗೆ ಅಶಕ್ಯವಿರುವುದು. ಅಂಥ ಪಾಠಗಳು ತೀರ ಸ್ವಲ್ಪ ಇರುವವು. ಅಂಥ ವಿಷಯಗಳನ್ನು ಕಲಿಸುವಾಗ ಕಪ್ಪು ಹಲಗೆಯ ಮೇಲೆ ಏನಾದರೂ ಬರೆಯಲಿಕ್ಕೇಬೇಕೆಂದು ತಿಳಿಯಬಾರದು; ಯಾವ ವಿಷಯದಲ್ಲಿ ಕಪ್ಪುಹಲಗೆಯ ಮೇಲಿನ ಟಿಪ್ಪಣಿಯ ಆವಶ್ಯಕತೆಯು ಇಲ್ಲವೋ ಅಂಥಲ್ಲಿ ಏನೂ ಬರೆಯಕೂಡದು.

ಕಪ್ಪು ಹಲಗೆಯ ಮೇಲೆ ಬರೆಯತಕ್ಕ ಟಿಪ್ಪಣಿಯು ಶಿಕ್ಷಕರು ತಾವೇ ಸ್ವತಃ ಸಿದ್ಧಮಾಡಿಕೊಂಡದ್ದಾಗಿರಬೇಕು. ಕೆಲವು ಶಿಕ್ಷಕರು ಕಪ್ಪು ಹಲಗೆಯ ಮೇಲೆ ಬರೆಯತಕ್ಕ ಟಿಪ್ಪಣಿಯನ್ನು ಮೊದಲು ಸಿದ್ಧಮಾಡಿಕೊಂಡು ಅದಕ್ಕನುಸಾರವಾಗಿ ತಮ್ಮ ಪಾಠದ ರಚನೆಯನ್ನು ಮಾಡಿಕೊಳ್ಳುವುದು ತಕ್ಕದ್ದೆಂದು ತಿಳಿಯುವರು. ಬೇರೆ ಕೆಲವರು ಮೊದಲು ಕಲಿಸತಕ್ಕ ಪಾಠದ ಸಿದ್ಧತೆಯನ್ನುಮಾಡುವರು. ಆ ಬಳಿಕ ಆ ಪಾಠದಿಂದ ಹೊರಡುವ ಸಂಗತಿಗಳನ್ನು ಗೊತ್ತುಮಾಡಿ ಕಪ್ಪು ಹಲಗೆಯ ಮೇಲಿನ ಟಿಪ್ಪಣಿಯನ್ನು ರಚಿಸಿಕೊಳ್ಳುವರು. ಇವೆರಡೂ ಪದ್ಧತಿಗಳು ಯೋಗ್ಯವಾಗಿರುವುವು. ಯಾವ ಪದ್ಧತಿಯನ್ನು ಅನುಸರಿಸಿದರೂ ಅಡ್ಡಿಯಿಲ್ಲ. ಆದರೆ, ಯಾವ ಪದ್ಧತಿಯಿಂದ ಪಾಠದ ಉದ್ದೇಶವು ಸಫಲವಾಗುವದೆಂಬುದನ್ನು ಶಿಕ್ಷಕರು ಆಲೋಚನೆ ಮಾಡತಕ್ಕದ್ದು. ಹಿಂದೆ "ಪಾಠದ ಸಿದ್ಧತೆ" ಎಂಬ ಪ್ರಕರಣದಲ್ಲಿ ಹೇಳಿದ ತತ್ವಗಳಿಗನುಸರಿಸಿ ಶಿಕ್ಷಕರು ತಮ್ಮ ಪಾಠದ ಸಿದ್ಧತೆಯನ್ನು ಮಾಡಿಕೊಳ್ಳುವುದಕ್ಕಿಂತ ಮುಂಚೆ ಆ ಪಾಠದಲ್ಲಿ ಕಲಿಸತಕ್ಕ ಮುಖ್ಯ ಸಂಗತಿಗಳನ್ನು ಮೊದಲು ನಿಶ್ಚಯವಾಗಿ ಗೊತ್ತುಮಾಡಿಕೊಳ್ಳಲಿಕ್ಕೆಬೇಕು. ಮತ್ತು

ಆ ಸಂಗತಿಗಳಲ್ಲಿ ಶುದ್ಧವಾದ ತರ್ಕಪದ್ಧತಿಗೆ ಅನುಸಾರವಾಗಿ ಹೊಂದಿಕೆ ಮಾಡಿಕೊಂಡು ಕಲಿಸಬೇಕಾಗುವುದು. ಈ ಮುಖ್ಯ ಸಂಗತಿಗಳನ್ನೇ ಅವುಗಳ ಸ್ವಾಭಾವಿಕ ಅನುಕ್ರಮಕ್ಕನುಸರಿಸಿ ಬರೆಯುವುದರಿಂದ ಕಪ್ಪು ಹಲಗೆಯ ಮೇಲೆ ಬರೆಯುವ ಟಿಪ್ಪಣಿಯ ಮುಖ್ಯ ಭಾಗವು ಸಿದ್ಧವಾಗುವುದು. ಈ ವಿಚಾರದಿಂದ ಕಪ್ಪು ಹಲಗೆಯ ಮೇಲಿನ ಟಿಪ್ಪಣಿಯನ್ನು ಸಿದ್ಧಮಾಡುವ ಎರಡು ಪದ್ಧತಿಗಳಲ್ಲಿ ಮೊದಲನೆಯ ಪದ್ಧತಿಯಿಂದಲೇ ಹೆಚ್ಚು ಒಳ್ಳೇ ಪರಿಣಾಮವಾಗುವದೆಂದು ಸಿದ್ಧವಾಗುತ್ತದೆ.

ಕಪ್ಪು ಹಲಗೆಯ ಮೇಲಿನ ಟಿಪ್ಪಣಿಯೊಳಗಿನ ಒಂದೊಂದೇ ಸಂಗತಿಯನ್ನು ಪಾಠವು ಸಾಗಿದಂತೆ ಆಗಿಂದಾಗಲೇ ಬರೆಯಬೇಕೆಂದು ಹಿಂದೆ ಹೇಳಿದ್ದೇವೆ. ಮತ್ತು ಹೀಗೆ ಬರೆದ ಟಿಪ್ಪಣಿಯು ಪಾಠವು ಮುಗಿಯುವ ತನಕ ವರ್ಗದ ಮುಂದೆ ಉಳಿಯಲಿಕ್ಕೆ ಬೇಕೆಂಬುದು ಸ್ಪಷ್ಟವು. ಆದರೆ ಕೆಲಕೆಲವು ಪ್ರಸಂಗಗಳಲ್ಲಿ ಕಪ್ಪು ಹಲಗೆಯು ಬೇರೆ ಆಕಸ್ಮಿಕವಾದ ಚಿತ್ರಗಳನ್ನಾಗಲಿ, ಆಕೃತಿಗಳನ್ನಾಗಲಿ ಬೇರೆ ಸಂಗತಿಗಳನ್ನಾಗಲಿ ಬರೆಯಲಿಕ್ಕೆ ಬೇಕಾಗುವ ಸಂಭವವುಂಟು. ಇಂಥ ಪ್ರಸಂಗಗಳಲ್ಲಿ ಕಪ್ಪು ಹಲಗೆಯ ಮೇಲೆ ಬರೆದ ಮುಖ್ಯ ಟಿಪ್ಪಣಿಯು ಆಕಸ್ಮಿಕವಾಗಿ ಬರೆದ ಸಂಗತಿಯ ಸಾಮೀಪ್ಯದಿಂದ ಸಂದೇಹವುಳ್ಳದ್ದಾಗದಂತೆ ಎಚ್ಚರಪಡಲಿಕ್ಕೆಬೇಕು. ಇದಕ್ಕಾಗಿ ಕಪ್ಪುಹಲಗೆಯ ಮಧ್ಯದಲ್ಲಿ ಒಂದು ಉದ್ದವಾದ ಗೆರೆಯನ್ನು ಎಳೆದು ಒಂದು ಭಾಗವನ್ನು ಮುಖ್ಯ ಟಿಪ್ಪಣಿಯನ್ನು ಬರೆಯುವುದಕ್ಕೂ ಮತ್ತೊಂದು ಭಾಗವನ್ನು ಆಕಸ್ಮಿಕ ಸಂಗತಿಗಳನ್ನು ಬರೆಯಲಿಕ್ಕೂ ಉಪಯೋಗಿಸಬಹುದು. ಶಕ್ಯವಿದ್ದರೆ ಈ ಎರಡು ಬೇರೆ ಬೇರೆ ಕೆಲಸಗಳ ಸಲುವಾಗಿ ಬೇರೆ ಬೇರೆ ಎರಡು ಬೋರ್ಡುಗಳನ್ನು ಉಪಯೋಗಿಸಿದರೂ ಚಿಂತೆಯಿಲ್ಲ. ಅಷ್ಟರಪೂರ್ತೆ ಬರೆದ ಟಿಪ್ಪಣಿಯನ್ನು ಅದರ ಕೆಲಸವು ಮುಗಿದ ಕೂಡಲೆ ಸ್ವಚ್ಛವಾಗಿ ಅಳಿಸಿಬಿಡತಕ್ಕದ್ದು. ಮುಖ್ಯ ಟಿಪ್ಪಣಿಯು ಮಾತ್ರ ಪಾಠವು ಮುಗಿಯುವವರೆಗೆ ವರ್ಗದ ಮುಂದೆ ಇರಲಿಕ್ಕೆಬೇಕು.

ಕಪ್ಪು ಹಲಗೆಯ ಮೇಲೆ ಬರೆಯತಕ್ಕ ಟಿಪ್ಪಣಿಯು ಬಹಳ

**ಉದ್ದವಾಗದಂತೆ ಎಚ್ಚರಪಡಲಿಕ್ಕೆ ಬೇಕು :—** ಉದ್ದವಾದ ಟಿಪ್ಪಣಿಯನ್ನು ಬರೆಯುವ ದೋಷವು ಅನುಭವವಿಲ್ಲದ ತರುಣ ಶಿಕ್ಷಕರಲ್ಲಿ ಸಾಮಾನ್ಯವಾಗಿ ಕಂಡುಬರುವುದು. ಬಹುತರವಾಗಿ ಮೊದಲನೆಯ ಸಾರೆ ಬರೆದ ಟಿಪ್ಪಣಿಯು ಬಹಳ ಉದ್ದವಾಗಬಹುದು. ಹಾಗಿದ್ದರೆ ಅದನ್ನು ಮತ್ತೊಮ್ಮೆ ಓದಿ ಅದರಲ್ಲಿ ಪರಸ್ಪರ ಸಂಬಂಧವು ತಪ್ಪದಂತೆ ಅಮುಖ್ಯವಾದ ಭಾಗಗಳನ್ನು ತೆಗೆದುಹಾಕಿ ಸಾರಾಂಶವನ್ನು ತೆಗೆಯುಲಿಕ್ಕೆ ಯತ್ನ ಮಾಡಬೇಕು. ಇದೇ ಪ್ರಕಾರ ೨ನೆಯ ಸಾರೆ ಅಥವಾ ಅವಶ್ಯವಿದ್ದರೆ ೩ನೆಯ ಸಾರೆ ಸಾರಾಂಶವನ್ನು ತೆಗೆದು ಬೇರೆ ಬರೆಯುಬೇಕು. ಹೀಗೆ ಎರಡು ಸಾರೆ ಇಲ್ಲವೆ ೩ ಸಾರೆ ಸಾರಾಂಶವನ್ನು ತೆಗೆದು ಬರೆಯುಲಿಕ್ಕೆ ವೇಳೆಯೂ ವಿಶೇಷವಾಗಿ ಹಿಡಿಯುವುದು. ಈ ಎಲ್ಲ ಕೆಲಸವು ಮೊದಮೊದಲು ಶಿಕ್ಷಕರಿಗೆ ಬಹಳ ತೊಂದರೆಯುಳ್ಳದ್ದೆಂದು ಎನಿಸಬಹುದು. ಆದರೆ ರೂಢಿಯಿಂದ ಕೌಶಲ್ಯವೂ ಗತಿಯೂ ಹೆಚ್ಚಾಗುವವು. ಕಷ್ಟಕ್ಕೆ ಹೆದರಿ ಪ್ರಯತ್ನವನ್ನೇ ಬಿಡಕೂಡದು. ಸಚ್ಛಿಕ್ಷಕನಾಗಬೇಕೆಂಬ ಲವಲವಿಕೆಯಿಂದ ಸತತವಾಗಿ ಪ್ರಯತ್ನ ಮಾಡುವುದರಿಂದ ಮುಂದೆ ಮುಂದೆ ಎಲ್ಲ ಚಿಂತೆಗಳೂ ತೊಂದರೆಗಳೂ ದೂರಾಗುವವು.

**ಕಪ್ಪು ಹಲಗೆಯ ಮೇಲೆ ಟಿಪ್ಪಣಿಯನ್ನು ಬರೆದು ಮುಗಿಸುವುದರಿಂದ ವಿಷಯದ ಶಿಕ್ಷಣವು ಮುಗಿಯುವುದಿಲ್ಲ :—** ಆ ಬರೆದ ಟಿಪ್ಪಣಿಯು ಯಾವ ಯಾವ ವಿಚಾರಗಳಿಂದ ಸಂಗ್ರಹಿಸಿ ಬರೆಯಲ್ಪಟ್ಟಿರುವುದೋ ಅದಕ್ಕನುಸಾರವಾಗಿ ಅದರ ಉಪಯೋಗವನ್ನು ಮಾಡಿಕೊಳ್ಳಲಿಕ್ಕೆ ಬೇಕು. ಕಲಿಸುವಾಗ ಕಪ್ಪು ಹಲಗೆಯ ಮೇಲಿನ ಟಿಪ್ಪಣಿಯ ಒಂದೊಂದೇಭಾಗದ ಮಹತ್ವವನ್ನೂ ಇಡೀ ವಿಷಯಕ್ಕೆ ಅದರ ಸಂಬಂಧವನ್ನೂ ಆಗಾಗ್ಗೆ ತಿಳಿಸಿ ಹೇಳುತ್ತ ಆ ಟಿಪ್ಪಣಿಯು ಮುಗಿಸಲ್ಪಟ್ಟಿರುವುದು. ಪಾಠವು ಮುಗಿದ ಮೇಲೆ ಮತ್ತೊಮ್ಮೆ ಈ ಟಿಪ್ಪಣಿಯ ಎಲ್ಲ ಭಾಗಗಳಕಡೆಗೆ ಹುಡುಗರಿಗೆ ಲಕ್ಷ್ಯಕೊಡಲಿಕ್ಕೆ ಹೇಳಬೇಕು. ಆದರೆ ಈ ಭಾಗಗಳಲ್ಲಿ ಯಾವದು ಮಹತ್ವವಾದದ್ದೆಂಬುದನ್ನು ಇಡೀ ಟಿಪ್ಪಣಿಯನ್ನೆಲ್ಲ ವಿವೇಚಿಸಿ ಗೊತ್ತು ಮಾಡಬೇಕು. ಮತ್ತು ಟಿಪ್ಪಣಿಯ ಒಂದು

ಭಾಗಕ್ಕೂ ಮತ್ತೊಂದು ಭಾಗಕ್ಕೂ ಇರುವ ಸಂಬಂಧವನ್ನು ಆಲೋಚಿಸುವುದು ಒಳ್ಳೇ ಮಹತ್ವದ ಸಂಗತಿಯಾಗಿರುತ್ತದೆ. ಈ ಎಲ್ಲ ವಿವೇಚನವು ಸಂಕ್ಷೇಪವಾಗಿ ಆಗಲು, ಹುಡುಗರ ಮನಸಿನಲ್ಲಿ ಕಲಿಸಿದ ಪಾಠವು ದೃಢವಾಗಿ ನಿಲ್ಲುವುದು. ಸಾರಾಂಶ: — ಕಪ್ಪು ಹಲಗೆಯ ಮೇಲೆ ಬರೆದ ಟಿಪ್ಪಣಿಯನ್ನು ಈ ರೀತಿಯಿಂದ ಉಪಯೋಗಿಸುವುದರಿಂದ ಪಾಠದ ಸಂಯುಕ್ತ ಸ್ವರೂಪವನ್ನು ಹುಡುಗರು ತಮ್ಮ ಮನಸಿನಲ್ಲಿ ತಂದುಕೊಂಡು ಕಲಿಸಿದ ಎಲ್ಲ ಸಂಗತಿಗಳನ್ನು ಒಂದಕ್ಕೊಂದು ತಳಕು ಹಾಕಿಕೊಂಡು ಒಟ್ಟುಗೂಡಿಸಿ ಲಕ್ಷ್ಯದಲ್ಲಿಟ್ಟುಕೊಳ್ಳುವರು.

ಯಾವದೊಂದು ಪಾಠವನ್ನು ತಿಳಿಸಿ ಹೇಳಲಿಕ್ಕೆ ಅನೇಕ ತರದ ದೃಷ್ಟಾಂತಗಳೂ ಬೇಕಾಗುವವು. ಅವುಗಳಲ್ಲಿ ಪ್ರತ್ಯಕ್ಷ ವಸ್ತುಗಳೂ ಚಿತ್ರಗಳೂ ನಕಾಶಗಳೂ, ಆಕೃತಿಗಳೂ, ಮಾದರಿಗಳೂ ಮುಖ್ಯವಾಗಿರುವವು. ಎಷ್ಟೋ ಪ್ರಸಂಗಗಳಲ್ಲಿ ವಾಕ್ಯರೂಪವಾದ ದೃಷ್ಟಾಂತಗಳೂ ಒಳ್ಳೇ ಉಪಯೋಗವಾಗುವವು. ಅವುಗಳನ್ನು ಹಿಂದೆ ವಿವರಿಸಿದೆ. ಈ ಪ್ರಕರಣದಲ್ಲಿ ಕೇವಲ ಕಪ್ಪು ಹಲಗೆ ಎಂಬ ಮಹತ್ವದ ಸಾಧನವನ್ನು ಕುರಿತು ವಿವೇಚನೆ ಮಾಡತಕ್ಕದ್ದಿತ್ತು. ಪ್ರಿಯ ಶಿಕ್ಷಕ ಶಿಕ್ಷಿಕೆಯರೇ, ಈ ಅತ್ಯಂತ ಪ್ರೀತಿಯ ಗೆಳೆಯನಿಗೆ ಎಂದೂ ಅನಾದರವನ್ನು ಮಾಡಬೇಡಿರಿ.



# ೧೯ನೆಯ ಪ್ರಕರಣ

## ಪಾಶ್ಚಾತ್ಯ ಶಿಕ್ಷಣ ಶಾಸ್ತ್ರಜ್ಞರ ಕೆಲವು ಪದ್ಧತಿಗಳೂ ವರ್ಧಾ ಶಿಕ್ಷಣ ಯೋಜನೆಯೂ

ಈ ಪ್ರಕರಣದಲ್ಲಿ ಪಾಶ್ಚಾತ್ಯ ಶಿಕ್ಷಣ ಶಾಸ್ತ್ರಜ್ಞರಲ್ಲಿ ಪ್ರಮುಖರಾದವರ ಕೆಲವು ಶಿಕ್ಷಣ ಪದ್ಧತಿಗಳನ್ನು ಕುರಿತು ವಿವರಿಸಲಾಗಿದೆ. ಈ ಪ್ರತಿಯೊಂದು ಪದ್ಧತಿಯೂ ಯಾವ ಶಾಸ್ತ್ರೀಯ ತತ್ವವನ್ನವಲಂಬಿಸಿ ರಚಿಸಲ್ಪಟ್ಟಿದೆಯೆಂಬುದು ಇಲ್ಲಿ ಮಾಡಿದ ವಿವೇಚನದಿಂದ ತಿಳಿಯುವುದು. ಪ್ರತಿಒಂದು ಪದ್ಧತಿಯೊಳಗಿನ ಕೆಲಕೆಲವು ಭಾಗವನ್ನು ನಮ್ಮ ಸದ್ಯದ ಪರಿಸ್ಥಿತಿಯಲ್ಲಿ ಸಾಲೆಯಲ್ಲಿ ಉಪಯೋಗಿಸಿಕೊಳ್ಳಬಹುದು.

### ಬಾಲೋದ್ಯಾನಪದ್ಧತಿ

**ಫ್ರೆಡ್ರಿಕ ಫ್ರೋಬೆಲ:—** ಬಾಲೋದ್ಯಾನ ಪದ್ಧತಿಯ ಜನಕನಾದ ಫ್ರೋಬೆಲನು ಜರ್ಮನಿಯ ಒಂದು ಹಳ್ಳಿಯಲ್ಲಿ ೧೭೮೨ ರಲ್ಲಿ ಜನ್ಮತಾಳಿದನು. ಇವನು ೯ ತಿಂಗಳದವನಿರುವಾಗಲೆ ಈತನ ತಾಯಿಯು ತೀರಿದಳು. ಆದುದರಿಂದ ಇವನ ತಂದೆಯು ಇವನನ್ನು ಹೇಗಾದರೂ ದೊಡ್ಡವನನ್ನು ಮಾಡಿದನು. ಹನ್ನೊಂದು ವರ್ಷದವನಾದ ಮೇಲೆ ಇವನ ಸೋದರ ಮಾವನು ಇವನನ್ನು ತನ್ನ ಊರಿಗೆ ಕರಕೊಂಡು ಹೋಗಿ ಇವನನ್ನು ಶಾಲೆಗೆ ಹಾಕಿದನು. ಶಾಲೆಯಲ್ಲಿಯ ಅಭ್ಯಾಸವು ಇವನಿಗೆ ಸೇರದ್ದರಿಂದ ಇವನು ದಡ್ಡನೆಂದು ತಿಳಿದುಕೊಂಡರು. ೧೫ ವರ್ಷದವನಾದಮೇಲೆ ಇವನಿಗೆ ಅರಣ್ಯ ಖಾತೆಯಲ್ಲಿ ಒಂದು ಸಣ್ಣ ಕೆಲಸವನ್ನು ಕೊಡಿಸಿದರು. ಎರಡು ವರ್ಷಗಳವರೆಗೆ ಇವನು ಅಡವಿಯಲ್ಲಿ ತಿರುಗುತ್ತ ನಿರೀಕ್ಷಣ ಸಾಮರ್ಥ್ಯವನ್ನು ಬೆಳಿಸಿಕೊಂಡನು. ಈ ಕೆಲಸವನ್ನು ಬಿಟ್ಟಮೇಲೆ 'ಜೆನ್ನಾ'ದ ವಿಶ್ವವಿದ್ಯಾಲಯದಲ್ಲಿ ಕೆಲವು ಕಾಲ ಅಭ್ಯಾಸಮಾಡಿದನು. ಮುಂದೆ **ಫ್ರಾಂಕಫರ್ಟ** ( ಜರ್ಮನಿ ) ಎಂಬಲ್ಲಿ

ಒಂದು ಶಾಲೆಯನ್ನು ತೆಗೆದನು. ಅಲ್ಲಿ ಎರಡುವರ್ಷ ಕೆಲಸಮಾಡಿದ ಮೇಲೆ ಸರಿಯಾದ ಶಿಕ್ಷಣವನ್ನು ಕೊಡಲಿಕ್ಕೆ ತನ್ನಲ್ಲಿ ಹೆಚ್ಚಿನ ಯೋಗ್ಯತೆ ಯುಂಟಾಗಬೇಕೆಂದು ತಿಳಿದು **ವ್ಹರಡೂನ** (ಸ್ವಿತ್ಸರ್ಲಂಡ)ಕ್ಕೆ ಹೋಗಿ **ಪೆಸ್ಟಲಾಜಿ** ( ೧೭೪೬–೧೮೨೭ )ಯ ಶಾಲೆಯಲ್ಲಿ ಉಪಶಿಕ್ಷಕನಾದನು.

ಪೆಸ್ಟಲಾಜಿಯು ಶಿಕ್ಷಣವನ್ನು ಲೋಕಪ್ರಿಯವಾಗುವಂತೆ ಆಸ್ಥೆಯಿಂದ ಪ್ರಯತ್ನ ಮಾಡಿದವರಲ್ಲಿ ಮೊದಲನೆಯವನು. ವಿದ್ಯಾರ್ಥಿಗಳು ತಮ್ಮ ಅನುಭವದಿಂದ ಹೊಸ ಸಂಗತಿಗಳನ್ನು ಕಲಿಯಬೇಕೆಂಬ ತತ್ವವು ಇವನಿಗೆ ಮಾನ್ಯವಾಗಿತ್ತು. ಮತ್ತು ಶಿಕ್ಷಣದ ಧ್ಯೇಯವು ಎಲ್ಲ ಮಾನವ ಶಕ್ತಿಗಳ ಸುಸಂಬದ್ಧವಾದ ಮತ್ತು ಏಕಕಾಲೀನವಾದ ಪ್ರಗತಿಯು, ಎಂದು ಈತನು ಸಾರುತ್ತಿದ್ದನು. ಈತನ ಶಾಲೆಯಲ್ಲಿ ೨೦೦ ವಿದ್ಯಾರ್ಥಿಗಳಿದ್ದರು. ಬೇರೆ ಬೇರೆ ದೇಶಗಳಿಂದ ಅನೇಕ ಶಿಕ್ಷಕರೂ ಪ್ರೇಕ್ಷಕರೂ ಈ ಶಾಲೆಯನ್ನು ನೋಡಲಿಕ್ಕೆ ಬರುತ್ತಿದ್ದರು.

ಈ ಶಾಲೆಯಲ್ಲಿ ಫ್ರೋಬೆಲನು ೧೮೦೭ರಿಂದ ೧೮೧೧ರ ವರೆಗೆ ಕೆಲಸ ಮಾಡಿ ಮತ್ತೆ ಹೆಚ್ಚಿನ ಅಭ್ಯಾಸಕ್ಕಾಗಿ ಗಾಂಟಿಜನ ಮತ್ತು ಬರ್ಲಿನ ಪಟ್ಟಣಗಳಿಗೆ ಹೋದನು. ೧೮೧೬ರಲ್ಲಿ ' **ಗ್ರೀಶಮ** ' ಎಂಬಲ್ಲಿ ಒಂದು ಶಾಲೆಯನ್ನು ಸ್ಥಾಪಿಸಿದನು. ಸ್ವಲ್ಪ ದಿವಸಗಳಲ್ಲಿ ಈ ಶಾಲೆಯನ್ನು ' **ಕಿಲೋ** ' ಪಟ್ಟಣಕ್ಕೆ ಒಯ್ದನು. ಅಲ್ಲಿ ೧೫ ವರ್ಷಗಳವರೆಗೆ ತನ್ನ ಹೊಸ ಪದ್ಧತಿಯಂತೆ ಬಾಲಕರಿಗೆ ಶಿಕ್ಷಣವನ್ನು ಕೊಟ್ಟನು. ಅವನ ಪ್ರಯೋಗದ ಯಶಸ್ವಿತೆಯನ್ನು ಆ ದೇಶದಲ್ಲಿಯ ಜನರು ಕೇಳಿ ಇವನ ಶಾಲೆಯನ್ನು ನೋಡಲಿಕ್ಕೆ ಬರಹತ್ತಿದರು. ೧೮೨೬ರಲ್ಲಿ ಇವನು ' ಎಜ್ಯುಕೇಶನ್ ಆಫ ಮ್ಯಾನ 'ಎಂಬ ಪುಸ್ತಕವನ್ನು ಬರೆದನು. ಅದರಲ್ಲಿ ಎಲ್ಲ ಮಾನಸಿಕ ಶಕ್ತಿಗಳನ್ನು ಏಕಕಾಲಕ್ಕೆ ಅಭಿವೃದ್ಧಿಗೊಳಿಸುವುದೇ ಶಿಕ್ಷಣದ ಮುಖ್ಯ ಕಾರ್ಯವು, ಎಂದು ಪ್ರತಿಪಾದಿಸಿದನು. ಮುಂದೆ ಕಿಲೋದಲ್ಲಿ ನಡೆದ ಶಾಲೆಯ ಉಪಶಾಖೆಗಳನ್ನು ಸುತ್ತಲಿನ ನಾಲ್ಕು ಸ್ಥಳಗಳಲ್ಲಿ ಆರಂಭಿಸಬೇಕೆಂದು ಪ್ರಯತ್ನಮಾಡಿದನು. ವಿಶ್ರಾಂತಿಗಾಗಿ ಇವನು ಸ್ವಿತ್ಸರ್ಲಂಡದಲ್ಲಿ ಕೆಲವು ಕಾಲ ಕಳೆದು ೧೮೩೭ರಲ್ಲಿ ಕೀಲೋದ

ಹತ್ತಿರ ಬ್ಲಾಕೆನ್‌ಬರ್ಗದಲ್ಲಿ ತನ್ನ ಮೊದಲನೆಯ ಕಿಂಡರಗಾರ್ಟನ ಶಾಲೆಯನ್ನು ಪ್ರಾರಂಭಿಸಿದನು. ಮತ್ತು ತನ್ನ ಶಿಕ್ಷಣದ ತತ್ವಗಳನ್ನು ಜನರಿಗೆ ತಿಳಿಸುವುದಕ್ಕಾಗಿ ಒಂದು ಸಾಪ್ತಾಹಿಕ ಪತ್ರವನ್ನು ಪ್ರಸಿದ್ಧ ಮಾಡಲಾರಂಭಿಸಿದನು. ಮತ್ತು ಜರ್ಮನಿಯ ದೊಡ್ಡ ದೊಡ್ಡ ಪಟ್ಟಣಗಳಲ್ಲಿ ವ್ಯಾಖ್ಯಾನಗಳನ್ನು ಕೊಡಹತ್ತಿದನು. ಶಿಕ್ಷಕರ ಸಲುವಾಗಿ "ಬ್ಲ್ಯಾಕನ್‌ಬರ್ಗ"ದಲ್ಲಿ ಒಂದು ಹೊಸ ವರ್ಗವನ್ನು ಪ್ರಾರಂಭಿಸಿದನು. ಆದರೆ ಹಣದ ಕೊರತೆಯ ಮೂಲಕ ಇವನ ಸಂಸ್ಥೆಗಳು ೮ ವರ್ಷಗಳವರೆಗೆ ಮಾತ್ರ ನಡೆದವು. ೧೮೪೮ರಲ್ಲಿ **ಮಾನಿಂಜನದ "ಡಚ್‌ಸಗಳು"** (ದೇಸಾಯಿಣಿಯರು) ಇವನನ್ನು ಕರೆದು ಬಾಲೋದ್ಯಾನ ಶಾಲೆಯನ್ನು ಸ್ಥಾಪಿಸಲಿಕ್ಕೆ ಉತ್ತೇಜನಕೊಟ್ಟರು. ಇಲ್ಲಿ ಅವನಿಗೆ ಮತ್ತೊಬ್ಬ **"ಬ್ಯಾರೊಸೆಸ್ ಮ್ಯಾರಿನ್ ಹೊಲ್ಜಬುಲೋ"** ಎಂಬ ಪ್ರಸಿದ್ಧ ಹೆಣ್ಣುಮಗಳ ಪರಿಚಯವಾಯಿತು. ಅವಳು ಫ್ರೊಬೆಲನ ಚರಿತ್ರವನ್ನು ಬರೆದಿಟ್ಟಿದ್ದಾಳೆ. ಈ ಚರಿತ್ರದಿಂದ ಫ್ರೊಬೆಲನ ವಿಷಯಕ್ಕೂ ಅವನ ಪದ್ಧತಿಯ ವಿಷಯಕ್ಕೂ ಅನೇಕ ಸಂಗತಿಗಳು ಗೊತ್ತಾಗಿವೆ. ಇವನ ಶಾಲೆಗಳಲ್ಲಿ ನಡೆದ ಶಿಕ್ಷಣ ಪದ್ಧತಿಯು ಜರ್ಮನ ಸರಕಾರದವರಿಗೆ ಸೇರದ್ದರಿಂದ ಇಂಥ ಶಾಲೆಗಳನ್ನು ತೆಗೆಯಬಾರದೆಂದು ಕಟ್ಟಪ್ಪಣೆ ಮಾಡಿದರು. ಇವನ ಶಾಲೆಯಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳಿಗೆ ಇವನು ಸ್ವಾತಂತ್ರ್ಯವನ್ನು ಕೊಡುತ್ತಿದ್ದುದು ಅವರು ದೊಡ್ಡವರಾದಮೇಲೆ ಏನಾದರೂ ಕೇಡಿಗೆ ಕಾರಣವಾಗಬಹುದೆಂದು ತಿಳಿದು ಸರಕಾರದವರು ಈ ತರದ ಅಪ್ಪಣೆಮಾಡಿದಂತೆ ತೋರುತ್ತದೆ. ತಾನು ಇಷ್ಟು ಕಷ್ಟಪಟ್ಟು ನಡಿಸಿದಂಥ ಸಂಸ್ಥೆಗಳನ್ನು ಸರಕಾರದವರ ಅಪ್ಪಣೆಯಮೇರೆಗೆ ಬಂದು ಮಾಡಬೇಕೆಂಬುದು ಫ್ರೊಬೆಲ್ಲನಿಗೆ ಪರಮಾವಧಿ ದುಃಖವನ್ನುಂಟು ಮಾಡಿತು. ಇವನು ಇದರಿಂದಲೇ ಎದೆಯೊಡಕೊಂಡು ೧೮೫೨ನೆಯ ಇಸವಿಯ ಜೂನ ೨೧ನೆಯ ತಾರೀಖಿನ ದಿವಸ ತೀರಿಕೊಂಡನು. ಇವನ ಗೋರಿಯ ಮೇಲೆ ಇವನ ೨ನೆಯ ಗಿಫ್ಟಿನ ಚಿನ್ಹಗಳಾದ ಘನ, ಸಿಲಿಂದರ, ಗೋಲ, ಇವು ಇವನ ಪದ್ಧತಿಯ ಸ್ಮಾರಕಕ್ಕಾಗಿ ಇಡಲ್ಪಟ್ಟಿವೆ.

## ಶಿಕ್ಷಣ ವಿಷಯವಾಗಿ ಫ್ರೊಬೆಲ್ಲನ ಕಲ್ಪನೆಗಳು ಯಾವವೆಂದರೆ:—

೧. ಪ್ರತಿ ಒಬ್ಬ ಮನುಷ್ಯನಲ್ಲಿ ದೇವರ ಅಂಶವಿರುತ್ತದೆ. ಶಿಕ್ಷಣದಿಂದ ಮನುಷ್ಯನಲ್ಲಿ ಹುಟ್ಟು ಬೀಜರೂಪದಿಂದ ಇರುವ ಶಾರೀರಿಕ ಮಾನಸಿಕ ಶಕ್ತಿಗಳ ವಿಕಾಸವಾಗಲಿಕ್ಕೆಬೇಕು. ಆತನಲ್ಲಿರುವ ದೇವರ ಅಂಶವು ವ್ಯಕ್ತವಾಗಲಿಕ್ಕೆಬೇಕು.

೨. ಮಕ್ಕಳ ವಿಕಾಸವು ಅವರು ಹುಟ್ಟಿದಂದಿನಿಂದ ಪ್ರಾರಂಭವಾಗುತ್ತದೆ. ಆದುದರಿಂದ ಮಕ್ಕಳ ಶಿಕ್ಷಣವಾದರೂ ಅವರು ಹುಟ್ಟಿದಂದಿನಿಂದಲೇ ಆರಂಭವಾಗತಕ್ಕದ್ದು.

೩. ಮಕ್ಕಳ ಚಲನವಲನಗಳು ಅವರ ಸ್ವಾಭಾವಿಕ ಪ್ರವೃತ್ತಿಗನುಸರಿಸಿ ಆಗುತ್ತಿರುತ್ತವೆ. ಅವರ ಶಿಕ್ಷಣದಲ್ಲಿ ಈ ಚಲನವಲನಗಳನ್ನು ಉಪಯೋಗಿಸಿಕೊಳ್ಳತಕ್ಕದ್ದು. ಮಕ್ಕಳು ತಮ್ಮ ಕೃತಿಗಳಿಂದಲೂ ಜ್ಞಾನೇಂದ್ರಿಯಗಳ ಸಹಾಯ್ಯದಿಂದಲೂ ಜ್ಞಾನವನ್ನು ಸಂಪಾದಿಸತಕ್ಕದ್ದು. ಪರರು ಅವರ ತಲೆಯಲ್ಲಿ ಅನೇಕ ಸಂಗತಿಗಳನ್ನು ತುಂಬುವುದರಿಂದ ಅವರಿಗೆ ಬಹಳ ಹಾನಿಯಾಗುತ್ತದೆ.

೪. ಹುಡುಗರು ಸಮಾಜದಲ್ಲಿ ಕೂಡಿಕೊಂಡು ನಡೆಯಲಿಕ್ಕೆಬೇಕು. ಅದರಿಂದ ಅವರ ಸಹಾನುಭೂತಿ ಮೊದಲಾದ ಭಾವನೆಗಳು ವಿಕಾಸ ಹೊಂದುವುವು.

೫. ಹುಡುಗರ ಸುತ್ತುಮುತ್ತಲಿನ ವಾತಾವರಣವು ಪ್ರೇಮದ್ದಿರಬೇಕು.

೬. ಚಿಕ್ಕಂದಿನ ಶಿಕ್ಷಣದಿಂದಲೇ ಮನುಷ್ಯನ ಜೀವನ ಕ್ರಮಕ್ಕೆ ಯೋಗ್ಯ ಮಾರ್ಗವು ಹತ್ತುವುದು. ಆದಕಾರಣ ಚಿಕ್ಕಂದಿನ ಶಿಕ್ಷಣವು ಬಹಳ ಮಹತ್ವವಾದದ್ದು.

೭. ಹುಡುಗರ ಪೂರ್ಣವಾದ ಶಾರೀರಿಕ ಮಾನಸಿಕ ವಿಕಾಸದ ಸಲುವಾಗಿ ಅವರಿಗೆ ಸ್ವಾತಂತ್ರ್ಯವನ್ನು ಕೊಡುವುದು ಆವಶ್ಯಕವಿರುತ್ತದೆ.

ಫ್ರೋಬೆಲ್ಲನು ತನ್ನ ಪದ್ಧತಿಗೆ 'ಬಾಲೋದ್ಯಾನ' ವೆಂಬ ಮಧುರವಾದ ಹೆಸರನ್ನು ಕೊಟ್ಟಿದ್ದಾನೆ. ಬಾಲೋದ್ಯಾನ ಸಾಲೆಯಲ್ಲಿ ೩ ರಿಂದ ೭ ವರ್ಷದ ಹುಡುಗರು ಬರುತ್ತಾರೆ. ಈ ಶಾಲೆಯಲ್ಲಿ ಲೇಖನವಾಚನ ಗಣಿತ ಮುಂತಾದ ವಿಷಯುಗಳನ್ನು ಕಲಿಸುವುದಿಲ್ಲ. ಈ ಶಾಲೆಗಳು ಮುಂದಿನ ಅಭ್ಯಾಸದ ಸಲುವಾಗಿ ಹುಡುಗರನ್ನು ಸಿದ್ಧಪಡಿಸುತ್ತವೆ. ಈ ಶಾಲೆಯಲ್ಲಿ ಆಟ, ಹಾಡು, ಕಥೆ, ಸೃಷ್ಟಿನಿರೀಕ್ಷಣ ಹಾಗು ತೋಟದ ಕೆಲಸ, ಕೈಕೆಲಸ ಮುಂತಾದ ವ್ಯವಸಾಯುಗಳನ್ನು ಕಲಿಸುತ್ತಾರೆ. ಕಥೆಗೆ ಸಂಬಂಧಿಸಿ ಈ ವಿಷಯುಗಳನ್ನು ಕಲಿಸುವರು. ಪ್ರತಿ ಒಂದು ವಿಷಯವನ್ನು ಬಿಡಿಬಿಡಿಯಾಗಿ ಸ್ವತಂತ್ರ ರೀತಿಯಿಂದ ಕಲಿಸುವುದಿಲ್ಲ. ಆಟಗಳಿಂದ ಹುಡುಗರ ಅನುಮಾನ, ಕಲ್ಪನಾ, ರಚನಾಚಾತುರ್ಯ, ಈಮೊದಲಾದವುಗಳು ಬೆಳೆಯುವಂತೆ ಯೋಜನೆಯು ಮಾಡಲ್ಪಟ್ಟಿರುವುದು. ಫ್ರೋಬೆಲ್ಲನ ಪದ್ಧತಿಯಲ್ಲಿ ಗಿಫ್ಟಗಳಿಗೂ, ವ್ಯವಸಾಯುಗಳಿಗೂ ಬಹಳ ಮಹತ್ವವಿರುತ್ತದೆ. ತ್ರಿಕೋನ, ಚೌಕೋನ, ಚೌರಸ, ಘನ, ಚಿತಿ, (ಇಟ್ಟಂಗಿ)ವರ್ತುಳ, ಗೋಲ, ಉಳಕ, ಮೊದಲಾದ ಆಕೃತಿಗಳನ್ನು ಅರಿತುಕೊಳ್ಳಲಿಕ್ಕೆ ಈ ಗಿಫ್ಟಗಳು ಬಹಳ ಉಪಯೋಗವಾಗುತ್ತವೆ. ನೂಲುವುದು, ಕತ್ತರಿಸುವುದು, ಹೆಣೆಯುವುದು, ಚಿತ್ರ ತೆಗೆಯುವುದು, ಪಶುಪಕ್ಷಿಗಳನ್ನು ಜೋಪಾನ ಮಾಡುವುದು. ಈ ಮುಂತಾದ ಅನೇಕ ವ್ಯವಸಾಯುಗಳನ್ನು ಈ ಸಾಲೆಯ ಹುಡುಗರು ಮಾಡುತ್ತಾರೆ.

## ಬಾಲೋದ್ಯಾನ ಪದ್ಧತಿಯಿಂದಾಗುವ ಲಾಭಗಳು

**ಮಾನಸಿಕ:—**ಬಾಲಕರ ಬುದ್ಧಿಶಕ್ತಿಯು ವಿಕಾಸವಾಗುವದು. ಮುಂದೆ ಅಭ್ಯಾಸ ಮಾಡುವ ಲವಲವಿಕೆಯು ಬೆಳೆಯುವುದು.

**ನೈತಿಕ:—**ವ್ಯವಸ್ಥೆ, ಅಚ್ಚುಕಟ್ಟುತನ, ವಿಧೇಯತ್ವ, ಸಹಾನುಭೂತಿ ಮೊದಲಾದ ಸದ್ಗುಣಗಳು ಹುಟ್ಟುವುವು.

**ಶಾರೀರಿಕ:—**ಬಾಲಕರ ಸ್ವಾಭಾವಿಕ ಚಟುವಟಿಕೆಗಳನ್ನು ಹೆಚ್ಚಿಸುವುದು. ಅವಯುವಗಳ ಬೆಳವಣಿಗೆಯು ಚೆನ್ನಾಗಿ ಆಗುವುದು.

## ೨ ಮಾಂಟೆಸರಿ ಪದ್ಧತಿ

**ಜೀವನಚರಿತ್ರೆ :—** ಚಿಕ್ಕಮಕ್ಕಳ ಶಿಕ್ಷಣದ ವಿಷಯದಲ್ಲಿ ಇತ್ತಲಾಗಿ ಬಹಳ ಪ್ರಸಿದ್ಧಿಯನ್ನೂ ಗೌರವವನ್ನೂ ಪಡೆದ ಮಾಂಟೆಸರಿಯು ಇಟಾಲಿಯೊಳಗೆ ಒಂದು ಬಡಕುಟುಂಬದಲ್ಲಿ ಇ. ಸ. ೧೮೭೦ ರಲ್ಲಿ ಜನಿಸಿದಳು. ಇವಳು ತನ್ನ ಪ್ರಾಥಮಿಕ ಶಿಕ್ಷಣವನ್ನು ಮುಗಿಸಿದ ಮೇಲೆ ವೈದ್ಯಶಾಸ್ತ್ರದ, ಅದರಲ್ಲಿಯೂ ಮುಖ್ಯವಾಗಿ ಚಿಕ್ಕ ಮಕ್ಕಳ ರೋಗಗಳ ಚಿಕಿತ್ಸೆಯ ಅಭ್ಯಾಸವನ್ನು ಕೈಕೊಂಡು ಚೆನ್ನಾಗಿ ಪರಿಶ್ರಮ ಮಾಡಿ 'ಡಾಕ್ಟರ' ಎಂಬ ಬಹುಮಾನದ ಪದವಿಯನ್ನು ಹೊಂದಿದಳು. ರೋಮದ ವಿಶ್ವವಿದ್ಯಾಲಯದಿಂದ ಈ ಪದವಿಯನ್ನು ಹೊಂದಿದ ಸ್ತ್ರೀಯರಲ್ಲಿ ಇವಳೇ ಮೊದಲನೆಯವಳು. ಇಟಾಲಿಯಲ್ಲಿ ಪೂರ್ಣ ಹುಚ್ಚರನ್ನೂ ಅರೆಹುಚ್ಚರನ್ನೂ ದುರ್ಬಲ ಮನಸ್ಸಿನವರನ್ನೂ ಒಂದೇ ಚಿಕಿತ್ಸಾಲಯದಲ್ಲಿಟ್ಟು ಉಪಚರಿಸುವ ಪರಿಪಾಠವುಂಟು. ಮಾಂಟೆಸರಿಯು ಮೊದಲು ಇಂಥದೊಂದು ಚಿಕಿತ್ಸಾಲಯದಲ್ಲಿ ಮುಖ್ಯ ಡಾಕ್ಟರನಿಗೆ ಸಹಾಯ್ಯಕಳಾಗಿ ನಿಯಮಿಸಲ್ಪಟ್ಟಳು. ಅಲ್ಲಿ ಇವಳು ಎಷ್ಟೋ ರೋಗಿಗಳ ಮಿದುಳಿನ ರೋಗಗಳನ್ನು ಒಂದು ವಿಶಿಷ್ಟವಾದ ಉಪಚಾರದಿಂದ ನೆಟ್ಟಗೆ ಮಾಡಿದಳು. ಹೀಗೆ ತನಗೆ ದೊರೆತ ಅನುಭವವನ್ನು ಚಿಕ್ಕಮಕ್ಕಳ ಶಿಕ್ಷಣದಲ್ಲಿ ಉಪಯೋಗಿಸಿ ನೋಡಬೇಕೆಂಬ ಕುತೂಹಲವು ಅವಳಲ್ಲಿ ಉತ್ಪನ್ನವಾಗಿ ಚಿಕಿತ್ಸಾಲಯದೊಳಗಿನ ಹುಡುಗರಿಗೆ ಕಲಿಸಿ ಪ್ರಯೋಗ ಮಾಡತೊಡಗಿದಳು. ಈ ಕಾರ್ಯದಲ್ಲಿ ತನಗೆ ನಿಶ್ಚಯವಾಗಿ ಯಶಸ್ಸು ದೊರೆಯುವುದೆಂದು ಮನವರಿಕೆಯಾಗಲು ಇವಳು ಇದುವರೆಗೆ ತಾನು ಮಾಡುತ್ತಬಂದಿದ್ದ ರೋಗ ಚಿಕಿತ್ಸೆಯ ಕೆಲಸವನ್ನು ಬಿಟ್ಟು ಬಾಲಕರ ಶಿಕ್ಷಣದಲ್ಲಿ ಸಂಪೂರ್ಣವಾಗಿ ಮನಸ್ಸು ಹಾಕಿ ಅವರಿಗಾಗಿ ಒಂದು ಶಾಲೆಯನ್ನು ಸ್ಥಾಪಿಸಿದಳು. ಅದರಲ್ಲಿ ೩ ರಿಂದ ೬ ವರ್ಷದ ವಯಸ್ಸಿನ ಚಿಕ್ಕ ಬಾಲಕರನ್ನು ಸೇರಿಸಿಕೊಂಡು ತಾನು ಕಂಡುಹಿಡಿದ ಸ್ವಯಂ ಶಿಕ್ಷಣತತ್ವದ ಮೇರೆಗೆ ಶಿಕ್ಷಣವನ್ನು ಕೊಡಲಾರಂಭಿಸಿದಳು.

ಸ್ವಲ್ಪ ದಿವಸಗಳಲ್ಲಿಯೇ ಈ ಸಾಲೆಯ ಒಬ್ಬ ವಿದ್ಯಾರ್ಥಿಯು ಪರೀಕ್ಷೆಯಲ್ಲಿ ಎಲ್ಲರಿಗಿಂತ ಹೆಚ್ಚು ಗುಣಗಳನ್ನು ಪಡೆದು ಮೊದಲನೆಯ ನಂಬರು ಪಡೆದನು. ಮತ್ತು ಈ ಕ್ರಮವು ಹೀಗೆಯೇ ಮುಂದೆ ನಡೆಯಿತು. ಅದರಿಂದ ವಿದ್ವಾಂಸರಿಗೆ ಮಾಂಟೆಸರಿಯ ಶಿಕ್ಷಣಪದ್ಧತಿಯಲ್ಲಿರುವ ಮಹತ್ವವು ತಿಳಿಯಲಾರಂಭಿಸಿತು. ವಿದ್ಯಾರ್ಥಿಗಳ ಸಂಖ್ಯೆಯು ದಿನದಿನಕ್ಕೆ ಬೆಳೆಯತೊಡಗಿತು. ಇದರಿಂದ ಇವಳು ಒಂದು ವರ್ಷದೊಳಗಾಗಿಯೇ ಬೇರೊಂದು ಶಾಲೆಯನ್ನು ಸ್ಥಾಪಿಸಬೇಕಾಯಿತು. ಸ್ವದೇಶದಲ್ಲಿಯೂ ಪರದೇಶಗಳಲ್ಲಿಯೂ ಇವಳ ಕೀರ್ತಿಯು ಹಬ್ಬಿತು. ಇವಳ ಶಿಕ್ಷಣಪದ್ಧತಿಯನ್ನು ನೋಡುವ ಸಲುವಾಗಿ ಬೇರೆಬೇರೆ ದೇಶಗಳಿಂದ ಎಷ್ಟೋ ಶಿಕ್ಷಕರೂ ಬೇರೆ ಸದ್ಗೃಹಸ್ಥರೂ ಬರಲಾರಂಭಿಸಿದರು.

ಇಷ್ಟಾದ ಬಳಿಕ ಮಾಂಟೆಸರಿಯು ೯ ವರ್ಷದ ವರೆಗಿನ ಬಾಲಕರ ಶಿಕ್ಷಣವನ್ನು ಕೈಕೊಂಡು ಅದಕ್ಕಾಗಿ ಮತ್ತೆ ಮಾನಸಶಾಸ್ತ್ರದ ಅಧ್ಯಯನವನ್ನು ಮಾಡತೊಡಗಿದಳು. ಶಿಕ್ಷಣ ಶಾಸ್ತ್ರದ ಎಲ್ಲ ಗ್ರಂಥಗಳನ್ನು ಓದಿದಳು. ಸ್ವಾವಲಂಬನದ ತತ್ವವನ್ನು ಹೇಗೆ ಬಳಕೆಯಲ್ಲಿ ತರಬೇಕೆಂಬುದನ್ನು ಚೆನ್ನಾಗಿ ಮನನ ಮಾಡಿಕೊಂಡಳು. ಆದರೆ ಮುಂದೆ ಜನಸಹಾಯ್ಯ ಧನಸಾಹಾಯ್ಯಗಳು ದೊರೆಯದ್ದರಿಂದ ಈಕೆಯು ತನ್ನ ಶಾಲೆಯನ್ನು ತನ್ನ ಐವರು ಶಿಷ್ಯರಿಗೆ ಒಪ್ಪಿಸಿದಳು. ಈ ಶಿಷ್ಯರಾದರೂ ಇವಳ ಶಿಕ್ಷಣ ತತ್ವಗಳನ್ನು ಅಕ್ಷರಶಃ ಬಳಿಕೆಯಲ್ಲಿ ತರಲಿಕ್ಕೆ ತ್ರಿಕರಣಪೂರ್ವಕವಾಗಿ ಪ್ರಯತ್ನಿಸಿದರು. ಮಾಂಟೆಸರಿಯು ಈಗ ಶಿಕ್ಷಣದ ಕೆಲಸವನ್ನು ಬಿಟ್ಟು ಶಿಕ್ಷಣದ ಹೊಸತತ್ವಗಳ ಶೋಧನದ ಕೆಲಸವನ್ನು ಕೈಕೊಂಡಿರುವಳು. ಸುಧಾರಿಸಿದ ರಾಷ್ಟ್ರಗಳಲ್ಲೆಲ್ಲ ಇವಳ ಹೊಸ ತತ್ವಗಳೂ ಪದ್ಧತಿಯೂ ಮನ್ನಣೆಯನ್ನು ಪಡೆಯುತ್ತಲಿರುವುವು.

## ಮಾಂಟೆಸರಿ ಪದ್ಧತಿಯ ಮುಖ್ಯ ತತ್ವಗಳು

೧. ಮಕ್ಕಳ ಸ್ವಾಭಾವಿಕ ಶಕ್ತಿಗಳ ಪೂರ್ಣ ಬೆಳವಣಿಗೆಯನ್ನು ಮಾಡುವುದೇ ಶಿಕ್ಷಣದ ಧ್ಯೇಯವು. ಇದಕ್ಕಾಗಿ ಶಿಕ್ಷಕನು ಯೋಗ್ಯ ಪರಿಸ್ಥಿತಿಯನ್ನು ನಿರ್ಮಾಣಮಾಡತಕ್ಕದ್ದು.

೨. ಈ ಯೋಗ್ಯ ಪರಿಸ್ಥಿತಿಯನ್ನು ನಿರ್ಮಾಣಮಾಡುವುದೆಂದರೆ ಡಾ. ಮಾಂಟಿಸರಿಯ ಮತದ ಪ್ರಕಾರ ಕೆಳಗೆ ಕೊಟ್ಟ ಸಂಗತಿಗಳನ್ನು ಮಾಡುವುದು ಅವಶ್ಯವು.

(ಅ) ಮಕ್ಕಳು ಸ್ವತಃ ಜ್ಞಾನ ಸಂಪಾದಿಸಲಿಕ್ಕೆ ತಕ್ಕುವುಗಳಾದ ಸಾಧನಗಳನ್ನು ಶಿಕ್ಷಕರು ಅವರಿಗೆ ಒದಗಿಸಿಕೊಡತಕ್ಕದ್ದು.

(ಬ) ಈ ಸಾಧನಗಳ ಸಹಾಯ್ಯದಿಂದ ಮಕ್ಕಳು ಸ್ವತಃ ಜ್ಞಾನ ಸಂಪಾದಿಸಲಿಕ್ಕೆ ಅವರಿಗೆ ಸ್ವಾತಂತ್ರ್ಯವನ್ನು ಕೊಡಬೇಕು. ಇಂಥದೊಂದು ಸ್ಥಳದಲ್ಲಿ ಹೀಗೆಯೇ ಕುಳಿತುಕೊಂಡು ಇಷ್ಟು ಹೊತ್ತಿನ ವರೆಗೆ ಇಂಥ ವಿಷಯದ ಜ್ಞಾನವನ್ನು ಸಂಪಾದಿಸತಕ್ಕದ್ದು, ಇತ್ಯಾದಿ ನಿರ್ಬಂಧಗಳಿರಬಾರದು. ಈ ವಿಷಯದಲ್ಲಿ ಮಕ್ಕಳಿಗೆ ಪೂರ್ಣ ಸ್ವಾತಂತ್ರ್ಯವಿರಬೇಕು.

(ಕ) ಆಗಾಗ್ಗೆ ಮಕ್ಕಳನ್ನು ವೈದ್ಯರಿಂದ ಪರೀಕ್ಷೆ ಮಾಡಿಸಿ ಅವರಲ್ಲಿ ಶಾರೀರಿಕ ಮಾನಸಿಕ ದೋಷಗಳೇನಾದರೂ ಇದ್ದರೆ ಅವುಗಳನ್ನು ದೂರಮಾಡುವ ಪ್ರಯತ್ನಮಾಡತಕ್ಕದ್ದು. ಅವರ ಪ್ರಕೃತಿಯು ಯಾವಾಗಲು ನಿರೋಗಿಯಾಗಿರತಕ್ಕದ್ದು.

(ಡ) ಮೋರೆಯನ್ನು ತೊಳಕೊಳ್ಳುವುದು, ಸ್ನಾನಮಾಡುವುದು, ಊಟಮಾಡುವುದು, ತಮ್ಮ ಸ್ವಂತದ ಸ್ಥಳವನ್ನೂ ಅರಿವೆ-ಅಂಚಡಿಗಳನ್ನೂ ಸ್ವಚ್ಛವಾಗಿಟ್ಟುಕೊಳ್ಳುವುದು, ವಸ್ತ್ರಗಳನ್ನು ಧರಿಸುವುದು ಈ ಮೊದಲಾದ ಕೆಲಸಗಳನ್ನು ಸ್ವತಃ ಮಾಡಿಕೊಳ್ಳಲಿಕ್ಕೆ ಅವರಿಗೆ ಶಿಕ್ಷಣ ಕೊಟ್ಟು ಅವರು ಸ್ವಾವಲಂಬನವುಳ್ಳವರಾಗುವಂತೆ ಯತ್ನಮಾಡತಕ್ಕದ್ದು. ಮಕ್ಕಳಿಗೆ ಬೇಕಾಗುವ ಎಲ್ಲ ಪದಾರ್ಥಗಳು,—ಖುರ್ಚಿ, ಮೇಜು, ತಾಟು, ಒಟ್ಟಲು, ಕಪಾಟು, ಮುಂತಾದವುಗಳು— ಅವರಿಗೆ ತಕ್ಕಷ್ಟೇ ಅಳತೆಯವಿರಬೇಕು. ಅಂದರೆ ಅವುಗಳನ್ನು ಉಪಯೋಗಿಸಲಿಕ್ಕೆ ಅವರಿಗೆ ಅನುಕೂಲವಾಗುವುದು.

(ಇ) ಹೆಣ್ಣುಮಕ್ಕಳೂ ಗಂಡುಮಕ್ಕಳೂ ಒಂದೇ ವರ್ಗದಲ್ಲಿ ಕಲಿಯಬೇಕು. ಬೇರೆ ಬೇರೆ ವಯಸ್ಸಿನವರೂ ಒತ್ತಟ್ಟಿಗೆ ಇರಬೇಕು.

ತೋಟದ ಕೆಲಸ, ಕೈಕೆಲಸ ಮುಂತಾದವುಗಳಲ್ಲಿ ಒಬ್ಬರಿಗೊಬ್ಬರು ಸಹಾಯ್ಯ ಮಾಡುವ, ಹಾಗು ತಮ್ಮ ವಯೋಮಾನದಂತೆ ಕಾರ್ಯಗಳನ್ನು ನೆರವೇರಿಸುವ ರೂಢಿಯು ಹುಡುಗರಿಗೆ ಇರತಕ್ಕದ್ದು. ಈ ರೀತಿಯಾಗಿ ಮನೆಗೂ ಸಾಲೆಗೂ ವಿಶೇಷ ಭೇದವೇನೂ ಇರಬಾರದು.

೩. ಚಿಕ್ಕಮಕ್ಕಳು ಪ್ರತ್ಯಕ್ಷವಾಗಿ ಇಂದ್ರಿಯಗಳಿಂದ ಜ್ಞಾನವನ್ನು ಸಂಪಾದಿಸತಕ್ಕದ್ದು. ಲೇಖನ, ವಾಚನ, ಅಂಕೆ ಇತ್ಯಾದಿ ವಿಷಯಗಳ ಜ್ಞಾನ ಮಾಡಿಕೊಡುವಾಗ ಶಿಕ್ಷಕನು ಮಕ್ಕಳ ಜ್ಞಾನೇಂದ್ರಿಯಗಳ ಸಹಾಯ್ಯವನ್ನು ತಕ್ಕೊಳ್ಳತಕ್ಕದ್ದು.

೪. ಮಕ್ಕಳ ಶಿಕ್ಷಣದಲ್ಲಿ ಶಿಕ್ಷಕನ ಕೆಲಸವು ಎರಡನೆಯದಾಗಿರುವುದು ; ಮೊದಲನೆಯ ಕೆಲಸವು ವಿದ್ಯಾರ್ಥಿಗಳದು. ಮಕ್ಕಳು ಕಲಿಯುತ್ತಿರುವಾಗ ಶಿಕ್ಷಕನು ಅವರ ಮನಸಿನ ವಿಕಾಸವು ಹೇಗೆ ಆಗುತ್ತಿರುವುದೆಂಬುದನ್ನು ಅವಲೋಕನ ಮಾಡಿ ಅವರಿಗೆ ತಕ್ಕ ಸಹಾಯ್ಯ ಮಾಡತಕ್ಕದ್ದು; ಅವರಿಗೆ ತಟ್ಟುವ ತೊಂದರೆಗಳನ್ನು ದೂರ ಮಾಡಬೇಕು. ಸಾಲೆಯಲ್ಲಿ ಮಕ್ಕಳಿಗೇ ಮುಖ್ಯತ್ವವು. ಶಿಕ್ಷಕರಿಗೆ ಗೌಣತ್ವವು.

**ಇಂದ್ರಿಯಗಳ ಶಿಕ್ಷಣ :—** ಈ ಪದ್ಧತಿಯಲ್ಲಿ ಇಂದ್ರಿಯ ಶಿಕ್ಷಣಕ್ಕೆ ಬಹಳ ಮಹತ್ವವು ಕೊಡಲ್ಪಟ್ಟಿರುವುದು. ಡಾ. ಮಾಂಟಿಸರಿಯು ಬೇರೆ ಬೇರೆ ಇಂದ್ರಿಯಗಳಿಗೆ ಶಿಕ್ಷಣವನ್ನು ಕೊಡುವುದಕ್ಕಾಗಿ ಬೇರೆ ಬೇರೆ ಉಪಕರಣಗಳ ಯೋಜನೆಯನ್ನು ಮಾಡಿದ್ದಾಳೆ. ಆ ಉಪಕರಣಗಳಲ್ಲಿ ಒಂದು ವೈಶಿಷ್ಟ್ಯ ಉಂಟು. ಮಕ್ಕಳು ಅವುಗಳನ್ನು ಉಪಯೋಗಿಸುತ್ತಿರುವಾಗ ಏನಾದರೂ ತಪ್ಪು ಮಾಡಿದರೆ ಆ ತಪ್ಪು ಅವರಿಗೆ ತಾನಾಗಿಯೇ ತಿಳಿದು ಅವರು ಆ ತಪ್ಪನ್ನು ತಾವೇ ತಿದ್ದಿಕೊಳ್ಳುವ ಪ್ರಯತ್ನ ಮಾಡುವಂತೆ ಆ ಉಪಕರಣದಲ್ಲಿಯೇ ವ್ಯವಸ್ಥೆ ಇರುವುದು. ಈ ಬೇರೆ ಬೇರೆ ಪ್ರಕಾರದ ಉಪಕರಣಗಳ ಸಹಾಯ್ಯದಿಂದ ವಸ್ತುಗಳ ಎಣಿಕೆ ಅವುಗಳ ಬೇರೀಜು, ವಜಾಬಾಕಿ, ಪಟ್ಟು ಪಾಲುಗಳು,

ತ್ರಿಕೋಣ, ಚೌಕೋನ, ಗೋಲ ಮುಂತಾದ ಆಕೃತಿಗಳ ಜ್ಞಾನವು ಸರಿಯಾಗಿ ಆಗುವುದು.

ಒಂದು ಕಟ್ಟಿಗೆಯ ಮಣೆಯಲ್ಲಿ ಅರ್ಧ ಭಾಗಕ್ಕೆ ಉಸುಬಿನ ಕಾಗದವನ್ನು ಅಂಟಿಸಿ ಉಳಿದ ಅರ್ಧ ಭಾಗವನ್ನು ಚೆನ್ನಾಗಿ ನುಣುಪು ಮಾಡುವರು. ವಿದ್ಯಾರ್ಥಿಗಳು ಈ ಎರಡೂ ಭಾಗಗಳ ಮೇಲೆ ಕೈ ಯಾಡಿಸಿ ನುಣುಪು ಹುರಬರಕುಗಳ ಜ್ಞಾನಮಾಡಿಕೊಳ್ಳುವರು. ಈ ವ್ಯವಸಾಯದ ರೂಢಿಯು ತಕ್ಕಷ್ಟು ಆದ ಮೇಲೆ ಉಸುಬಿನ ಕಾಗದ ವನ್ನು ಅಂಟಿಸಿದ ಒಂದು ಭಾಗ, ಆ ಬಳಿಕ ಒಂದು ನುಣುಪಾದ ಭಾಗ ಹೀಗೆ ಅನುಕ್ರಮವಾಗಿ ಅನೇಕ ಭಾಗಗಳುಳ್ಳ ಬೇರೊಂದು ಮಣೆಯನ್ನು ವಿದ್ಯಾರ್ಥಿಯ ಮುಂದೆ ಇಡುವರು. ಅವನು ಕಣ್ಣು ಮುಚ್ಚಿಕೊಂಡು ಕೈಯಾಡಿಸಿ ನುಣುಪು, ಹುರಬರಕುಗಳನ್ನು ಹೇಳುವನು. ಇಂಥ ಅನೇಕ ಪ್ರಕಾರದ ಉಪಕರಣಗಳ ಯೋಜನೆಯಿಂದ ಬಾಲಕರ ಸ್ಪರ್ಶೇಂದ್ರಿಯದ ಶಕ್ತಿಯು ಸುಲಭವಾಗಿ ಬೆಳೆಯುವುದು.

ವಿದ್ಯಾರ್ಥಿಗಳು ತಾವೇ ತೂಕಮಾಡಿ ಪದಾರ್ಥಗಳ ತೂಕವನ್ನೂ ಆಕಾರವನ್ನೂ ತಿಳಿಯಲು ಸಮರ್ಥರಾಗುವಂತೆ ಪಾಠಗಳ ಏರ್ಪಾಡು ಮಾಡುವರು. ಸರಿಯಾದ ಎತ್ತರದ, ಕ್ರಮವಾಗಿ ಕಡಿಮೆ ಅಗಲುಳ್ಳ ೧೦ ಸಿಲಿಂದರಗಳನ್ನು ಒಂದು ಕಟ್ಟಿಗೆಯಲ್ಲಿ ಕೂಡಿಸಿರುತ್ತಾರೆ. ವಿದ್ಯಾರ್ಥಿಗಳಿಗೆ ಅವುಗಳನ್ನು ಸುಲಭವಾಗಿ ತಕ್ಕೊಳ್ಳಲಿಕ್ಕೂ ಪುನಃ ಇಡಲಿಕ್ಕೂ ಬರುವಂತೆ ಅವುಗಳಿಗೆ ಹಿಡಿಕೆಗಳಿರುತ್ತವೆ. ಇವೆಲ್ಲ ತುಂಡು ಗಳನ್ನು ತೆಗೆದು ಒಟ್ಟುಗೂಡಿಸಿ ಎಲ್ಲಕ್ಕೂ ಹೆಚ್ಚು ತೂಕದ ಸಿಲಿಂದರವು ಯಾವದು? ಎಲ್ಲಕ್ಕೂ ಸಣ್ಣ ಸಿಲಿಂದರವು ಯಾವದು? ಇತ್ಯಾದಿ ತರ ತರದ ಪ್ರಶ್ನಗಳನ್ನು ಕೇಳಿ ವಿದ್ಯಾರ್ಥಿಗಳನ್ನು ಶೋಧ ಮಾಡಹಚ್ಚುವರು. ಸಿಲಿಂದರಗಳ ಬದಲಾಗಿ ಘನಗಳನ್ನು ಸಹ ಉಪಯೋಗಿಸುವುದುಂಟು. ಕೇವಲ ತೂಕದ ಪಾಠವನ್ನೇ ಕಲಿಸುವಾಗ ಒಂದೇ ಆಕಾರದ ಬೇರೆ ಬೇರೆ ತೂಕದ ಭಿನ್ನ ಭಿನ್ನ ಜಾತಿಯ ಕಟ್ಟಿಗೆಯ ಸಣ್ಣ ಸಣ್ಣ ಹಲಗೆಗಳನ್ನು ವಿದ್ಯಾರ್ಥಿಗಳಿಗೆ ಕೊಟ್ಟು ತೂಕ ಹಚ್ಚುವರು. ಅವರು ಅವುಗಳನ್ನು

ತೂಗಿ ತೂಕದ ಮಾನದಂತೆ ಕ್ರಮಗೊಳಿಸುವರು; ಹೀಗೆ ಆಕಾರ ತೂಕಗಳ ಜ್ಞಾನವನ್ನು ಮಾಡಿಕೊಡುವರು.

ಬಣ್ಣದ ಆಕೃತಿಗಳ ಪೆಟ್ಟಿಗೆಯ ಸಹಾಯ್ಯದಿಂದ ಬಣ್ಣಗಳ ಜ್ಞಾನ ಮಾಡಿಕೊಡುವರು. ಬಣ್ಣದಲ್ಲಿ ೮ ಮುಖ್ಯ ಭಾಗಗಳಿದ್ದು ಒಂದೊಂದು ಭಾಗದಲ್ಲಿ ೮ ಉಪಭಾಗಗಳಿರುತ್ತವೆ. ಅಂತು ಒಂದು ಪೆಟ್ಟಿಗೆಯಲ್ಲಿ ೬೪ ಆಕೃತಿಗಳಿರುತ್ತವೆ. ಇವೆಲ್ಲವನ್ನು ಒಟ್ಟುಗೂಡಿಸಿ ಒಂದೊಂದು ಜಾತಿಯ ಬಣ್ಣಗಳನ್ನು ಬೇರೆ ಬೇರೆ ಕ್ರಮಗೊಳಿಸಲಿಕ್ಕೆ ಹಚ್ಚುವರು. ವಿದ್ಯಾರ್ಥಿಗಳು ಒಂದೊಂದು ಬಣ್ಣದೊಳಗಿನ ಎಲ್ಲಕ್ಕೂ ಹೆಚ್ಚು ದಟ್ಟ ಬಣ್ಣವಿದ್ದ ಆಕೃತಿಯನ್ನು ಎಲ್ಲಕ್ಕೂ ಮೊದಲು, ಅನಂತರ ಅದಕ್ಕೂ ಕಡಿಮೆ ದಪ್ಪ ಬಣ್ಣವಿದ್ದ ಆಕೃತಿ, ಈ ಪ್ರಕಾರ ಕ್ರಮಗೊಳಿಸುವರು. ಬೇರೆ ಬೇರೆ ಹೂಗಳ ಸಹಾಯ್ಯದಿಂದ ಘ್ರಾಣೇಂದ್ರಿಯದ ಶಿಕ್ಷಣವಾದರೂ ಕೊಡಲ್ಪಡುವುದು.

**ನೈತಿಕ ಶಿಕ್ಷಣವು :—** ಮಾಂಟೆಸರಿಯ ಪದ್ಧತಿಯ ಶಾಲೆಗಳಲ್ಲಿ ತೋಟ, ಪ್ರಾಣಿಸಂಗ್ರಹಾಲಯಗಳಿರುತ್ತವೆ. ವಿದ್ಯಾರ್ಥಿಗಳು ಈ ಪ್ರಾಣಿ ವನಸ್ಪತಿಗಳ ಹಿತಾಹಿತಗಳನ್ನು ನೋಡಬೇಕಾಗುವುದು. ವಿದ್ಯಾರ್ಥಿಗಳ ಆಸಕ್ತಿಯೂ ನಿರೀಕ್ಷಣಶಕ್ತಿಯೂ ಬೆಳೆದಂತೆ ಅವುಗಳ ಮೇಲಿನ ಪ್ರೇಮವೂ ಸಹಜವಾಗಿ ಬೆಳೆಯುವುದು. ಅದರಂತೆಯೇ ಶಿಕ್ಷಕನು ತಮ್ಮ ವಿಷಯವಾಗಿ ತೋರಿಸುವ ಪ್ರೀತಿಯ ಸಲುವಾಗಿ ವಿದ್ಯಾರ್ಥಿಗಳಲ್ಲಿ ಅವನ ಬಗ್ಗೆ ಸದ್ಭಾವನೆಯುಂಟಾಗುವುದು.

ಈ ಪದ್ಧತಿಯಲ್ಲಿ ಯಾವ ಉಪಕರಣಗಳ ಉಪಯೋಗವನ್ನು ಹೇಗೆ ಮಾಡುವರೆಂಬುದನ್ನು ತಿಳಿದುಕೊಂಡು ನಮ್ಮಲ್ಲಿಯ ಪ್ರಾಥಮಿಕ ಶಿಕ್ಷಕರು ಅವುಗಳ ಉಪಯೋಗವನ್ನು ಮಾಡಿದರೆ ಬಾಲಕರಿಗೆ ಇಂದ್ರಿಯ ಶಿಕ್ಷಣವು ದೊರೆತು ಸಾಮಾನ್ಯಜ್ಞಾನವೂ ಉಂಟಾಗುವುದು.

## ೩ ಡಾಲ್ಟನ್ ಪದ್ಧತಿ

**ಪೂರ್ವೇತಿಹಾಸ :—** ಡಾಲ್ಟನ್ ಎಂಬುದು ಅಮೇರಿಕೆಯೊಳಗಿನ ದೊಂದು ಪಟ್ಟಣವು. ಅಲ್ಲಿಯ ಹಾಯಸ್ಕೂಲಿನ ಶಿಕ್ಷಿಕೆಯಾದ ಕುಮಾರಿ

ಹೆಲೆನ್ ಪಾರ್ಕ ಹಸ್ರ್ಟ ಎಂಬವಳು ಈ ಪದ್ಧತಿಯ ಉತ್ಪಾದಕಳು. ಇತ್ತಲಾಗಿ ಶಿಕ್ಷಣಶಾಸ್ತ್ರಜ್ಞರು ಇಡೀ ವರ್ಗದ ಶಿಕ್ಷಣಕ್ಕಿಂತ ವ್ಯಕ್ತಿಯ ಶಿಕ್ಷಣವು ಮಹತ್ವವಾದದ್ದೆಂದು ಅಭಿಪ್ರಾಯ ಪಡಹತ್ತಿದ್ದಾರೆ. ಆದರೆ ಕುಮಾರಿ ಪಾರ್ಕಹಸ್ರ್ಟಳು ತನ್ನ ಪದ್ಧತಿಯಲ್ಲಿ ಈ ಎರಡೂ ಪದ್ಧತಿಗಳನ್ನು ಅನುಕೂಲವಾದ ರೀತಿಯಿಂದ ಏಕೀಕರಿಸಲು ಪ್ರಯತ್ನಿಸಿದ್ದಾಳೆ. ಇವಳು ಮೊದಲು ಇ.ಸ. ೧೯೨೦ ರಲ್ಲಿ ೮ ರಿಂದ ೧೨ ವರ್ಷಗಳ ವಯಸ್ಸಿನ ಹುಡುಗರಿಗೆ ಈ ಪದ್ಧತಿಯಿಂದ ಶಿಕ್ಷಣ ಕೊಟ್ಟು ಇದರ ಉಪಯುಕ್ತತೆಯನ್ನು ಕಂಡುಹಿಡಿದಳು. ಬಳಿಕ ಆ ಶಾಲೆಯ ಮುಖ್ಯಾಧ್ಯಾಪಕನಿಗೆ ತನ್ನ ಪದ್ಧತಿಯ ತತ್ವಗಳನ್ನೂ ಗುಣ ವಿಶೇಷಗಳನ್ನೂ ಚೆನ್ನಾಗಿ ತಿಳಿಸಿದಳು. ಅವನಾದರೂ ಇದರ ಉಪಯುಕ್ತತೆಯನ್ನು ಮನಗಂಡು ವರಿಷ್ಠರಿಂದ ಅಪ್ಪಣೆಯನ್ನು ಪಡೆದು ತನ್ನ ಸಾಲೆಯಲ್ಲಿ ಈ ಪದ್ಧತಿಯಿಂದ ಶಿಕ್ಷಣ ಕೊಡುವುದಕ್ಕೆ ಪ್ರಾರಂಭಿಸಿದನು. ಆದರೆ ಈ ಹೊಸ ಪದ್ಧತಿಯ ವಿಷಯಕ್ಕೆ ಜನರಲ್ಲಿ ಸಂಪೂರ್ಣವಾದ ನಂಬಿಗೆಯು ಮಾತ್ರ ಹುಟ್ಟಲಿಲ್ಲ. ಮುಂದೆ ನ್ಯೂಯಾರ್ಕದ ಚಿಕ್ಕಮಕ್ಕಳ ವಿಶ್ವವಿದ್ಯಾಲಯದಲ್ಲಿಯೂ ಈ ಪದ್ಧತಿಯ ತತ್ವದಂತೆ ಪ್ರಯೋಗ ಮಾಡಿ ನೋಡಿದರು. ಅದರ ಪರಿಣಾಮವು ಕೊನೆಯಲ್ಲಿ ಅತ್ಯಂತ ಸ್ಫೂರ್ತಿದಾಯಕವೆಂದು ಕಂಡುಬಂದುದರಿಂದ ಕುಮಾರಿ ಪಾರ್ಕಹಸ್ರ್ಟ ಇವಳ ಹೆಸರು ಶಿಕ್ಷಣ ಸುಧಾರಕರ ಮಾಲಿಕೆಯಲ್ಲಿ ಸೇರಿಸಲ್ಪಟ್ಟಿತು.

**ಸಾಮಾನ್ಯ ವರ್ಣನೆ:—** ಈ ಪದ್ಧತಿಯಲ್ಲಿ ಹುಡುಗರನ್ನು ಕೋಣೆಯೊಳಗೆ ಕೂಡ್ರಿಸಿಕೊಂಡು ಕಲಿಸುವುದು ಕಡಿಮೆ. ವಿದ್ಯಾರ್ಥಿಗಳನ್ನು ಬೇರೆ ಬೇರೆ ತರಗತಿಯುವರನ್ನಾಗಿ ವಿಭಾಗಿಸುವರು. ಆದರೆ ಒಂದೇ ತರಗತಿಯ ಹುಡುಗರೆಲ್ಲರು ಒಂದೇ ಕೋಣೆಯಲ್ಲಿ ಕುಳಿತು ಶಿಕ್ಷಕನು ಹೇಳಿದಂತೆ ಕಲಿಯಬೇಕೆಂಬ ನಿರ್ಬಂಧವಿರುವುದಿಲ್ಲ. ವರ್ಗದ ಶಿಕ್ಷಣದಿಂದಲೇ ಚೆನ್ನಾಗಿ ಸಾಗುವಂತಹ ವಿಷಯಗಳ ಶಿಕ್ಷಣಕ್ಕಾಗಿ ಮಾತ್ರ ಒಂದೇ ತರಗತಿಯುವರು ಒಂದೆಡೆಯಲ್ಲಿ ಸೇರಬೇಕಾಗುವುದು. ಉಳಿದ ಶಿಕ್ಷಣಕ್ಕೆ ಹುಡುಗರು ತಮತಮಗೆ ಇಷ್ಟವಾದ ಕೋಣೆಗಳಿಗೆ

ಹೋಗುವರು. ಈ ಕೋಣೆಗಳಿಗೆಲ್ಲ ಪ್ರಯೋಗಶಾಲೆಗಳೆಂಬ ಹೆಸರು. ಬೇರೆ ಬೇರೆ ವಿಷಯಗಳಿಗೆ ಸಂಬಂಧಪಟ್ಟ ಎಲ್ಲತರದ ಜ್ಞಾನಾರ್ಜನೆಯ ಸಾಧನಗಳು ಈ ಪ್ರಯೋಗಶಾಲೆಗಳಲ್ಲಿ ವ್ಯವಸ್ಥಿತವಾಗಿ ಇಡಲ್ಪಟ್ಟಿರುತ್ತವೆ. ಉದಾಹರಣಾರ್ಥವಾಗಿ ಭಾಷಾವಿಷಯಕ ಪ್ರಯೋಗಶಾಲೆಯಲ್ಲಿ ಅನೇಕ ಪ್ರಕಾರದ ಶಬ್ದಕೋಶಗಳೂ ಜ್ಞಾನಕೋಶಗಳೂ ಗದ್ಯ ಪುಸ್ತಕಗಳೂ ಭಾಷಾಶಾಸ್ತ್ರಜ್ಞರ ಭಾವಪಟಗಳೂ ಇವೇ ಮುಂತಾದ ಸಾಮಗ್ರಿಗಳಿರುವವು. ಇದರಂತೆಯೇ ಇತಿಹಾಸದ ಪ್ರಯೋಗಶಾಲೆಯಲ್ಲಿ ಅನೇಕ ಐತಿಹಾಸಿಕ ಗ್ರಂಥಗಳೂ ನಕಾಶಗಳೂ ಕಥಾರೂಪದ ಇತಿಹಾಸ ಪುಸ್ತಕಗಳೂ ಮುಂತಾದ ಎಲ್ಲ ಸಾಧನಗಳಿರುವುವು. ಒಂದೇ ವಿಷಯವನ್ನು ಕಲಿಯತಕ್ಕ ವಿದ್ಯಾರ್ಥಿಗಳು ಬೇರೆ ಬೇರೆ ತರಗತಿಯವರಿದ್ದರೂ ಅವರು ಆಯಾ ವಿಷಯದ ಪ್ರಯೋಗಶಾಲೆಯಲ್ಲಿಯೇ ಕುಳಿತುಕೊಳ್ಳುವರು.

ಪ್ರತಿಯೊಂದು ಪ್ರಯೋಗಶಾಲೆಗೆ ಆಯಾ ವಿಷಯದಲ್ಲಿ ನಿಪುಣನಾದ ಒಬ್ಬ ಶಿಕ್ಷಕನಿರುತ್ತಾನೆ. ಅವನು ಅವಶ್ಯವಿದ್ದಲ್ಲಿ ಮಾತ್ರ ಹುಡುಗರಿಗೆ ತಕ್ಕ ಸಹಾಯ್ಯವನ್ನು ಮಾಡುವನು. ಆದರೆ ಹುಡುಗರಿಗೆ ತಿಳಿಯದೆ ಇದ್ದ ವಿಷಯದ ಸಂಪೂರ್ಣ ಭಾಗವನ್ನು ಸ್ಪಷ್ಟವಾಗಿ ತಾನೇ ತಿಳಿಸುವನು. ಮತ್ತು ಪ್ರಯೋಗಶಾಲೆಯೊಳಗಿನ ಸಾಧನಗಳ ಯೋಗ್ಯವಾದ ಉಪಯೋಗವನ್ನು ಮಾಡಿಕೊಳ್ಳುವ ರೀತಿ ಪದ್ಧತಿಗಳನ್ನು ಗೊತ್ತುಮಾಡಿ ಕೊಡುವನು. ಪರಸ್ಪರರಿಗೆ ತೊಂದರೆಯಾಗದಂತೆ ಹುಡುಗರೆಲ್ಲರು ತಮ್ಮ ತಮ್ಮ ಮನಸ್ಸಿಗೆ ಬಂದ ಕಾರ್ಯದಲ್ಲಿ ತೊಡಗುವಂತೆ ವ್ಯವಸ್ಥೆಯನ್ನಿಡುವರು. ಯಾವನಾದರೊಬ್ಬ ಹುಡುಗನು ತನ್ನ ವಿಷಯದಲ್ಲಿ ಬಹಳೇ ಹಿಂದುಳಿಯ ಹತ್ತಿದರೆ ಅವನಿಗೆ ಸೌಮ್ಯ ರೀತಿಯಿಂದ ಉಪದೇಶ ಮಾಡುವನು. ಆದರೆ ಈ ತರದ ಉಪದೇಶವನ್ನು ಕೇಳುವ ಇಲ್ಲವೆ ಕೇಳದಿರುವ ಸಂಪೂರ್ಣ ಸ್ವಾತಂತ್ರ್ಯವು ಹುಡುಗನಿಗಿರುತ್ತದೆ.

ಹುಡುಗರು ತಮಗೆ ಇಷ್ಟವಾದ ಒಂದೇ ಪ್ರಯೋಗಸಾಲೆಯಲ್ಲಿ

೨–೩ ತಾಸು ಒಂದೇ ಸಮನಾಗಿ ಕಳೆಯಬಹುದು. ಇಲ್ಲವೆ ಪ್ರತಿ ಅರ್ಧ ತಾಸಿಗೂ ಬೇರೆ ಬೇರೆ ಕೋಣೆಗಳಿಗೆ ಹೋಗಬಹುದು. ಪ್ರತಿಯೊಬ್ಬ ವಿದ್ಯಾರ್ಥಿಗೆ ಪ್ರತಿ ಒಂದು ವಿಷಯದ ಕೆಲವೊಂದು ಭಾಗವು ನಿಯಮಿಸಿ ಕೊಡಲ್ಪಡುತ್ತದೆ. ಅದಕ್ಕನುಸರಿಸಿ ಅವನು ಒಂದು ತಿಂಗಳಲ್ಲಿ ಕೆಲವು ಪಾಠಗಳನ್ನು ಕಲಿಯಬೇಕಾಗುವುದು. ಮತ್ತು ಪ್ರತಿಒಬ್ಬ ಹುಡುಗನು ಪ್ರತಿ ದಿವಸದಲ್ಲಾದ ತನ್ನ ಅಭ್ಯಾಸದ ಪ್ರಗತಿಯನ್ನು ಬರೆದಿಡಬೇಕಾಗುವುದು. ವಿದ್ಯಾರ್ಥಿಯು ತನ್ನ ನಿಯಮಿತವಾದ ಅಭ್ಯಾಸವನ್ನು ಪ್ರಥಮಪಕ್ಷದಲ್ಲಿಯೇ ಮುಗಿಸಿ ಮುಂದಿನ ಎಲ್ಲ ದಿವಸಗಳನ್ನು ವಿಶ್ರಾಂತಿಯಲ್ಲಿ ಕಳೆಯಬಹುದು. ಇಲ್ಲವೆ ಮೊದಲಿನ ದಿವಸಗಳನ್ನು ವ್ಯರ್ಥವಾಗಿ ಕಳೆದು ತಿಂಗಳ ಕೊನೆಯ ಭಾಗದಲ್ಲಿ ತನ್ನ ಕೆಲಸವನ್ನು ಪೂರ್ಣ ಮಾಡಬಹುದು. ಅಥವಾ ದಿನಾಲು ಸಾವಕಾಶವಾಗಿ ಕೆಲವು ಭಾಗವನ್ನು ಮಾಡುತ್ತ ತಿಂಗಳ ಕಡೆಯಲ್ಲಿ ಸರಿಯಾಗಿ ತನ್ನ ಪಾಠವನ್ನು ಮುಗಿಸಬಹುದು. ಆದರೆ ಅವನು ತನ್ನ ಮೊದಲಿನ ಪಾಠಗಳನ್ನು ಚೆನ್ನಾಗಿ ಮುಗಿಸಿ ಅದರಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಕೊಟ್ಟಹೊರತು ಮುಂದಿನ ಪಾಠಗಳನ್ನು ಕಲಿಯಲಿಕ್ಕೆ ಅವನಿಗೆ ಅಪ್ಪಣೆಯು ದೊರೆಯಲಾರದು. ಈ ಪದ್ಧತಿಯಲ್ಲಿ ವಿದ್ಯಾರ್ಥಿಗಳಿಗಿರತಕ್ಕ ನಿರ್ಬಂಧವೆಂದರೆ ಇದೊಂದೇ.

## ೪ ಯೋಜನಾಪದ್ಧತಿ ಅಥವಾ ವ್ಯವಸಾಯಪದ್ಧತಿ

ಈ ಪದ್ಧತಿಯು ಅಮೇರಿಕಾ ಖಂಡದಲ್ಲಿ ನ್ಯೂಯಾರ್ಕಪಟ್ಟಣದ ಲಿಂಕನ್ ಸ್ಕೂಲಿನಲ್ಲಿ ಪ್ರಯೋಗ ಮಾಡಲ್ಪಟ್ಟಿತು.

ಶಾಲೆಯಲ್ಲಿ ನಡೆಯುವ ಅಭ್ಯಾಸಕ್ರಮದ ಉದ್ದೇಶವು ಹುಡುಗರಿಗೆ ತಿಳಿಯುವುದಿಲ್ಲ. ಆ ಅಭ್ಯಾಸಕ್ರಮಕ್ಕೂ ಅವರ ಆಯುಷ್ಯಕ್ರಮಕ್ಕೂ ಸುತ್ತುಮುತ್ತಲಿನ ಪರಿಸ್ಥಿತಿಗೂ ವಿಶೇಷ ಸಂಬಂಧವಿರುವುದಿಲ್ಲ. ಮತ್ತು ಹುಡುಗರು ಸಾಲೆಯಲ್ಲಿ ಮಾಡುವ ಶ್ರಮದ ದೃಶ್ಯಫಲವು ಅವರ ಕಣ್ಣುಮುಂದೆ ಇರುವುದಿಲ್ಲ. ಈ ಕಾರಣಗಳ ಮೂಲಕ

ವಾಗಿ ಸಾಲೆಯೊಳಗಿನ ಅಭ್ಯಾಸಕ್ರಮವು ಮಕ್ಕಳಿಗೆ ನೀರಸವಾದದ್ದೂ ಬೇಸರಿಕೆಯನ್ನುಂಟುಮಾಡುವಂಥಾದ್ದೂ ಆಗುವುದು.

ಯೋಜನಾಪದ್ಧತಿಯಲ್ಲಿ ಹುಡುಗರು ಮನೆಕಟ್ಟುವ ಯೋಜನೆ, ಇಲ್ಲವೆ ವ್ಯಾಪಾರ ಮಾಡುವ ಯೋಜನೆ, ಇಂಥ ಯಾವುದೊಂದು ಯೋಜನೆಯನ್ನು ಮಾಡಬೇಕೆಂದು ನಿರ್ಣಯಿಸಿಕೊಳ್ಳುತ್ತಾರೆ, ಆ ಯೋಜನೆಯನ್ನು ನೆರವೇರಿಸಲಿಕ್ಕೆ ಬೇಕಾಗುವ ಜ್ಞಾನವನ್ನೂ ಕೌಶಲ್ಯವನ್ನೂ ಹುಡುಗರು ಬಹಳ ಉತ್ಸಾಹದಿಂದ ಸಂಪಾದಿಸುವರು. ಶಿಕ್ಷಕನು ಈ ಎಲ್ಲ ಕೆಲಸಗಳಲ್ಲಿ ಮಾರ್ಗದರ್ಶಕನಾಗುತ್ತಾನೆ. ಹುಡುಗರು ಈ ಯೋಜನೆಯನ್ನು ತಾವೇ ಗೊತ್ತುಮಾಡಿಕೊಂಡದ್ದರಿಂದ ಈ ಯೋಜನೆಯ ಉದ್ದೇಶವು ಅವರಿಗೆ ಪೂರ್ಣವಾಗಿ ಗೊತ್ತಿರುತ್ತದೆ. ಅದರಿಂದ ಆಗತಕ್ಕ ಫಲದ ಕಲ್ಪನೆಯು ಹುಡುಗರಿಗೆ ಚೆನ್ನಾಗಿ ಇರುವುದು.

ಅದರಿಂದ ಹುಡುಗರು ಆ ಯೋಜನೆಯನ್ನು ಕೊನೆಗಾಣಿಸಲು ಮನಃಪೂರ್ವಕವಾಗಿ ಪ್ರಯತ್ನಮಾಡುತ್ತಾರೆ. ಈ ಯೋಜನೆಗೆ ಸಂಬಂಧಿಸಿದ ಜ್ಞಾನವನ್ನು ದೊರಕಿಸುತ್ತಿರುವಾಗಲೇ ಸಾಲೆಯ ಅಭ್ಯಾಸಕ್ರಮದೊಳಗಿನ ಎಷ್ಟೋ ವಿಷಯಗಳ ಅಭ್ಯಾಸವೂ ಆಗುತ್ತದೆ. ಈ ವಿಷಯಗಳ ಜ್ಞಾನವನ್ನು ಹುಡುಗರು ಸ್ವಂತ ಶ್ರಮದಿಂದಲೂ ಪ್ರಯತ್ನದಿಂದಲೂ ದೊರಕಿಸುತ್ತಾರೆ. ಮತ್ತು ಆ ಜ್ಞಾನವನ್ನು ಪ್ರತ್ಯಕ್ಷ ಉಪಯೋಗಮಾಡುವ ಸಾಕಷ್ಟು ಅನುಕೂಲತೆಗಳು ದೊರೆಯುವುವು. ಅದರಿಂದ ಆ ಜ್ಞಾನವನ್ನು ಹುಡುಗರು ಎಂದೂ ಮರೆಯುವುದಿಲ್ಲ. ಶಾಲೆಯಲ್ಲಿ ಪಾಠಮಾಡಿ ಅಥವಾ ಶಿಕ್ಷಕರ ಬಾಯಿಂದ ಕೇಳಿ ದೊರಕುವ ಜ್ಞಾನಸಕ್ಕಿಂತ ಈ ಯೋಜನಾಪದ್ಧತಿಯಲ್ಲಿ ದೊರಕುವ ಅನುಭವಜನ್ಯ ಜ್ಞಾನದ ಮಹತ್ವವು ಹೆಚ್ಚಿರುವದೆಂಬುದು ಸ್ಪಷ್ಟವಿರುತ್ತದೆ. ಈ ಪದ್ಧತಿಯಲ್ಲಿ ಮಕ್ಕಳು ಶಿಕ್ಷಕನ ಸಹಾಯ್ಯವನ್ನೂ ಮಾರ್ಗದರ್ಶಿತ್ವವನ್ನೂ ಆಗಾಗ್ಗೆ ಅಪೇಕ್ಷಿಸಬೇಕಾಗುತ್ತದೆ. ಅದರಿಂದ ಗುರುಶಿಷ್ಯರಲ್ಲಿ ಪ್ರೇಮದ ಬಳಿಕೆಯು ಬೆಳೆದು ವರ್ಗದೊಳಗಿನ ಕೃತ್ರಿಮ

ವಾತಾವರಣವು ಇಲ್ಲದಂತಾಗುವುದು. ಯೋಜನಾಪದ್ಧತಿಯ ಸ್ವರೂಪವು ಚೆನ್ನಾಗಿ ತಿಳಿಯುವುದಕ್ಕಾಗಿ ಒಂದು ಉದಾಹರಣೆಯನ್ನು ತಕ್ಕೊಳ್ಳುವ. 'ಮನೆಕಟ್ಟುವುದು' ಎಂಬ ಒಂದು ಯೋಜನೆಯನ್ನು ವರ್ಗದ ಹುಡುಗರು ಒಪ್ಪಿಕೊಂಡು ನಿರ್ಣಯಿಸಿರುವರೆಂದು ತಿಳಿಯುವ. ಈ ಯೋಜನೆಯನ್ನು ಕೊನೆಗಾಣಿಸುವುದಕ್ಕಾಗಿ ಯಾವ ಯಾವ ವಿಷಯಗಳ ಅಭ್ಯಾಸವನ್ನು ಮಾಡಬೇಕಾಗುವುದು, ಮತ್ತು ಯಾವ ಯಾವ ಕೈಕೆಲಸಗಳನ್ನು ಮಾಡಬೇಕಾಗುವುದೆಂಬುದನ್ನು ಆಲೋಚಿಸುವ.

ಮನೆಯನ್ನು ಕಟ್ಟಲಿಕ್ಕೆ ಸ್ಥಳವನ್ನು ಆರಿಸುವುದಕ್ಕಾಗಿ ಅವರು ಆರೋಗ್ಯಶಾಸ್ತ್ರ ದೃಷ್ಟಿಯಿಂದ ವಿಚಾರ ಮಾಡಬೇಕಾಗುವುದು; ಊರಲ್ಲಿ ಯಾವ ಯಾವ ಭಾಗಗಳಿರುವವು; ಯಾವ ಭಾಗದಲ್ಲಿ ದಟ್ಟಾದ ಜನವಸತಿ ಇರುವುದು, ವಿರಲವಾದ ಜನವಸತಿ ಇದ್ದಲ್ಲಿ ಹವೆಯು ಯಾವ ತರದ್ದಿರುವುದು, ಇತ್ಯಾದಿ ಜ್ಞಾನವನ್ನು ದೊರಕಿಸುವಾಗ ಊರ ಭೂಗೋಲ ಜ್ಞಾನವು ಹುಡುಗರಿಗೆ ಸಹಜವಾಗಿ ಆಗುವುದು. ಎಂಥ ಮನೆಯನ್ನು ಕಟ್ಟಿಸಬೇಕು ಎಂಬುದನ್ನು ನಿರ್ಣಯಿಸುವಾಗ ಮನೆಗಳ ಬೇರೆ ಬೇರೆ ಮಾದರಿಗಳನ್ನು ನೋಡಿ ಅವುಗಳ ಡ್ರಾಯಿಂಗಗಳನ್ನು ತೆಗೆಯಬೇಕಾಗುವುದು. ಇಮಾರತಿಗೆ ಎಷ್ಟು ಚೌರಸಫೂಟ ಸ್ಥಳ ಬೇಕಾಗುವುದು; ಅಂಗಳದಲ್ಲಿಯೂ ಹಿತ್ತಲದಲ್ಲಿಯೂ ಉದ್ಯಾನವನ್ನು ರಚಿಸಲಿಕ್ಕೆ ಎಷ್ಟು ಸ್ಥಳವು ಬೇಕಾದೀತು; ಕಟ್ಟುವ ಸ್ಥಳವು ಯಾವ ದರದಿಂದ ದೊರೆಯುತ್ತದೆ ಇತ್ಯಾದಿ ಸಂಗತಿಗಳನ್ನು ನಿರ್ಣಯಿಸುವಾಗ ಕ್ಷೇತ್ರಫಲವೆಂದರೇನು; ಅದನ್ನು ತೆಗೆಯುವ ರೀತಿಯು ಯಾವದು; ಎಂಬುದನ್ನು ಕಲಿಯಬೇಕಾಗುವುದು; ಮನೆಗೆ ಅಸ್ತಿವಾರವನ್ನು ಹಾಕಲಿಕ್ಕೆ ಎಷ್ಟು ಫೂಟು ಅಗಲ, ಎಷ್ಟು ಫೂಟು ತಗ್ಗು, ಎಷ್ಟು ಫೂಟು ಉದ್ದ, ಅಗಿಯಬೇಕಾದೀತು; ಅದಕ್ಕೆ ಗಚ್ಚು ಕಲ್ಲು ಗುಣಿಗಲ್ಲು ಮುಂತಾದವುಗಳು ಎಷ್ಟು ಹಿಡಿಯುವುವು ಈ ಸಂಗತಿಯನ್ನು ನಿರ್ಣಯಿಸುವಾಗ ಅವರು ಘನಫಲವನ್ನು ಕಲಿಯಬೇಕಾಗುತ್ತದೆ. ಸಿಮೆಂಟದ ಕೆಲಸಗಳನ್ನು ಮಾಡಿಸುವಾಗ ಹಿಂದುಸ್ಥಾನದೊಳ-

ಗಿನ ಸಿಮೆಂಟದ ಕಾರಖಾನೆಗಳ ಜ್ಞಾನವಾಗುವುದು. ಗೊತ್ತು ಮಾಡಿದ ದರದಿಂದ ಮೇಲೆ ಹೇಳಿದ ಸಾಮಾನುಗಳ ಬೆಲೆಯನ್ನು ತೆಗೆಯು ವಾಗ ಮಕ್ಕಳು ಅನೇಕ ಘನಫಲದ ಉದಾಹರಣೆಗಳನ್ನು ಮಾಡ ಬೇಕಾಗುವುದು. ಮನೆಯ ಗೋಡೆಗಳ ಘನಫಲ ನೆಲದ ಕ್ಷೇತ್ರಫಲ ತೊಲೆ ಜಂತಿಗಳ ಘನಫಲ ಇವೆಲ್ಲವುಗಳ ಲೆಕ್ಕವನ್ನು ಮಾಡಬೇಕಾಗು ವುದು. ಮತ್ತು ಬಡಿಗ, ಕೂಲಿಕಾರ, ಕೊರೆಯುವವರು, ಕಟ್ಟುವವರು, ಮೊದಲಾದವರ ಕೂಲಿಯ ಲೆಕ್ಕವನ್ನು ಹುಡುಗರು ಮಾಡಬೇಕಾಗು ವುದು. ಕಬ್ಬಿಣ, ಕಟ್ಟಿಗೆ ಇಂಜಿಸ್ಸು, ಚಿಲಕ, ಕೊಂಡೆ, ಕಿಡಿಕೆಯ ಕನ್ನಡಿ ಈ ವಸ್ತುಗಳನ್ನು ಕೊಂಡು ತರುವಾಗ ಇವು ಎಲ್ಲಿ ದೊರೆಯು ವವು; ಅಲ್ಲಿಯೇ ಯಾಕೆ ದೊರೆಯುವವು. ಇತ್ಯಾದಿ ಜ್ಞಾನವು ಹುಡುಗ ರಿಗೆ ಆಗಿ ಭೂಗೋಲದ ಅಭ್ಯಾಸಕ್ಕೆ ಸಹಾಯ್ಯವಾಗುವುದು. ಬೇರೆ ಬೇರೆ ಮಾದರಿಯ ಮನೆಗಳನ್ನು ಕಾಗದದ ರಟ್ಟಿನಿಂದ ಸಿದ್ಧಪಡಿಸು ವಾಗ ಕೈಕೆಲಸದ ಶಿಕ್ಷಣವು ದೊರೆಯುವುದು. ಇದಲ್ಲದೆ ಎಷ್ಟೋ ಜ್ಞಾನವನ್ನು ಸಂಪಾದಿಸುವುದಕ್ಕಾಗಿ ಪುಸ್ತಕಗಳನ್ನು ಓದಬೇಕಾಗು ವುದರಿಂದ ಅವರಿಗೆ ಭಾಷೆಯ ಅಭ್ಯಾಸವಾಗುವುದು. ವ್ಯಾಪಾರಸ್ಥರಿಗೆ ಪತ್ರಗಳನ್ನು ಬರೆಯುವಾಗಲೂ ದೊರಕಿಸಿದ ಜ್ಞಾನದ ಟಿಪ್ಪಣೆಯನ್ನು ಕೊಡುವಾಗಲೂ ನಿಬಂಧ ಲೇಖನದ ಜ್ಞಾನವಾಗುವುದು. ಈ ಮೇರೆಗೆ ಮನೆಕಟ್ಟುವ ಒಂದು ಯೋಜನೆಯನ್ನು ನೆರವೇರಿಸುತ್ತಿರುವಾಗ ಹುಡು ಗರಿಗೆ ಆರೋಗ್ಯಶಾಸ್ತ್ರ, ಭೂಗೋಲ, ಭೂಮಿತಿ, ಮಹತ್ವಮಾಪನ, ಡ್ರಾಯಿಂಗ, ಹಸ್ತವ್ಯವಸಾಯ, ಇತ್ಯಾದಿ ವಿಷಯುಗಳ ಅಭ್ಯಾಸವನ್ನು ಮಾಡಬೇಕಾಗುವುದು; ಮತ್ತು ವಾಚನ ಲೇಖನ ಕಾರ್ಯಗಳನ್ನು ಮಾಡಲಿಕ್ಕೂ ಸಾಕಷ್ಟು ಅವಕಾಶವು ದೊರಕುವುದು.

ಯೋಜನಾಪದ್ಧತಿಯಲ್ಲಿ ಗೊತ್ತುಮಾಡತಕ್ಕ ಯೋಜನೆಯು ಮಕ್ಕಳ ವಯಸ್ಸನ್ನೂ ಅವರ ಬುದ್ಧಿಯ ವಿಕಾಸವನ್ನೂ ಅವಲಂಬಿಸಿರು ವುದು. ಕೆಳಗಿನ ವರ್ಗದಲ್ಲಿ ಗೊಂಬೆಯ ಮನೆಯನ್ನು ಕಟ್ಟುವುದು, ಸರ್ಕಸಿನ ಡೇರೆಯನ್ನು ಹೊಡೆಯುವುದು, ಕುದುರೆ, ಆನೆ, ಸಿಂಹ

ಮೊಲಾದವುಗಳನ್ನು ಸಿದ್ಧಪಡಿಸುವುದು ಇತ್ಯಾದಿ ಯೋಜನೆಗಳು ಗೊತ್ತುಮಾಡಲ್ಪಡುವುವು. ಯೋಜನಾಪದ್ಧತಿಯಿಂದ ಕಲಿಸುವ ಶಿಕ್ಷಕನು ಒಳ್ಳೆ ಬುದ್ಧಿವಂತನೂ ದಕ್ಷನೂ ಇರಬೇಕಾಗುತ್ತದೆ; ಎಲ್ಲ ಹುಡುಗರೂ ಕಾಲವನ್ನು ವ್ಯರ್ಥವಾಗಿ ಕಳೆಯದೆ ವ್ಯವಸ್ಥೆಯಿಂದ ಕೆಲಸಮಾಡುತ್ತಾರೋ ಇಲ್ಲವೊ, ಎಂಬುದನ್ನು ನೋಡಬೇಕಾಗುತ್ತದೆ; ಹುಡುಗರು ಮಾಡಿದ ಜ್ಞಾನಸಂಗ್ರಹಕ್ಕೆ ವ್ಯವಸ್ಥಿತಸ್ವರೂಪವನ್ನು ಕೊಡಬೇಕಾಗುತ್ತದೆ; ಹುಡುಗರ ಬರೆಹ, ಗಣಿತ, ಲೆಕ್ಕ ಮುಂತಾದ ಕೆಲಸಗಳನ್ನು ಎಚ್ಚರಿಕೆಯಿಂದ ನೋಡಿ ತಪ್ಪುಗಳನ್ನು ತಿದ್ದಿಕೊಡಬೇಕಾಗುತ್ತದೆ; ಶಿಕ್ಷಕರು ಹುಡುಗರ ಕೆಲಸದಲ್ಲಿ ಪ್ರತ್ಯಕ್ಷವಾಗಿ ಏನೂ ಹೆಚ್ಚುಕಡಿಮೆಯನ್ನುಮಾಡದೆ ಅವರಿಗೆ ಸ್ವಾತಂತ್ರ್ಯವನ್ನು ಕೊಟ್ಟು ಯೋಗ್ಯಮಾರ್ಗವನ್ನು ತೋರಿಸಿ ಅನೇಕ ಕೆಲಸಗಳನ್ನು ಮಾಡಿಸಿಕೊಳ್ಳಬೇಕಾಗುವುದು.

## ೫ ಕ್ರೀಡನ ಪದ್ಧತಿ

ಆಟವು ಮನುಷ್ಯರ ಸ್ವಾಭಾವಿಕ ವೃತ್ತಿಯು. ಶಿಕ್ಷಣದ ದೃಷ್ಟಿಯಿಂದ ಆಟದ ಮಹತ್ವವು ಎಷ್ಟಿರುವುದೆಂಬುದನ್ನೂ ಆಟಗಳಿಂದ ಮಕ್ಕಳಿಗೆ ಮೂರೂ ಪ್ರಕಾರದ ಶಿಕ್ಷಣವು ಹೇಗೆ ದೊರೆಯುವುದೆಂಬುದನ್ನೂ ಹಿಂದೆ ಕೃತಿಪ್ರೇಮ, ಆಟಗಳು, ಶಾರೀರಿಕ ಶಿಕ್ಷಣ, ನೈತಿಕ ಶಿಕ್ಷಣ ಈ ಪ್ರಕರಣಗಳಲ್ಲಿ ವಿವೇಚನೆಯು ಮಾಡಲ್ಪಟ್ಟಿರುವುದು.

ಕ್ರೀಡನ ಪದ್ಧತಿ ಅಂದರೆ ಆಟದ ದ್ವಾರದಿಂದ ಮಕ್ಕಳಿಗೆ ಬೇರೆ ಬೇರೆ ವಿಷಯಗಳ ಶಿಕ್ಷಣವನ್ನು ಕೊಡುವ ಪದ್ಧತಿಯು. ಈ ಪದ್ಧತಿಯಿಂದ ನಡೆಯಿಸಲ್ಪಡುವ ಶಾಲೆಗಳಲ್ಲಿ ಹುಡುಗರು ಶ್ರಮಬಟ್ಟು ಹೊಸ ಜ್ಞಾನವನ್ನು ಗಳಿಸುವರು. ಆಗ ಅವರು ಮಾಡುವ ಕೆಲಸಗಳು ಆವಶ್ಯಕವಾಗಿರುವುದರಿಂದ ಅವು ಬೇಸರ ಬರುವಂತಹವೂ ಅನೇಕ ತೊಂದರೆಯುಳ್ಳಂತಹವೂ ಆಗಿದ್ದರೂ ಅವುಗಳನ್ನು ಅವರು ಸಂತೋಷದಿಂದ ಮಾಡುತ್ತಾರೆ. ಹುಡುಗರು ಸ್ವಸಂತೋಷದಿಂದ ಮೊದಲು ಯಾವದಾದರೊಂದು ಆಟವನ್ನು ಆರಿಸುವರು. ಈ ಆಟಕ್ಕೆ ಬೇಕಾಗುವ

ಸಾಹಿತ್ಯಗಳನ್ನು ಸಿದ್ಧಮಾಡುವುದಕ್ಕಾಗಿ ಅವರು ವಿಶೇಷ ಶ್ರಮ ಪಡ ಬೇಕಾಗುವುದು. ಹಾಗು ಹೊಸ ಹೊಸ ವಿಷಯಗಳ ಜ್ಞಾನವನ್ನೂ ಸಂಪಾದಿಸಬೇಕಾಗುವುದು. ಆದರೆ ಈ ಆಟವನ್ನು ಅವರು ಉದ್ದೇಶ ಪೂರ್ವಕವಾಗಿ ತಾವಾಗಿಯೇ ಆರಿಸಿಕೊಂಡದ್ದರಿಂದ ಅವರಿಗೆ ಆಗುವ ಶ್ರಮವು ಶ್ರಮವೆನಿಸುವುದಿಲ್ಲ.

ಈ ಪದ್ಧತಿಯಿಂದ ನಡೆಯಿಸಿದ ಶಾಲೆಗಳಲ್ಲಿ ಕವಿತಾ, ಹಾಡು, ನಾಟಕ, ಸಂಭಾಷಣ ಬಗೆಬಗೆಯ ಆಟಗಳು, ಕಥೆಗಳು, ಉಪನ್ಯಾಸ ಗಳು (ಹುಡುಗರಿಂದ) ಈ ಮುಂತಾದವುಗಳ ಸಹಾಯ್ಯದಿಂದ ಮಕ್ಕಳಿಗೆ ಶಿಕ್ಷಣವು ಕೊಡಲ್ಪಡುತ್ತದೆ. ಅವರು ಉಸುಬಿನದೊಂದು ಪಟ್ಟಣವನ್ನು ಕಟ್ಟುತ್ತಾರೆ. ಅದರಲ್ಲಿ ಕಾಗದದ ಮನೆಗಳನ್ನು ಕಟ್ಟುತ್ತಾರೆ. ಇದೇ ಪ್ರಕಾರ ಕೋಟೆಗಳನ್ನೂ ಅಡವಿಗಳನ್ನೂ ಕೆರೆ ಗಳನ್ನೂ ಕಾರಖಾನೆಗಳನ್ನೂ ಹುಡುಗರು ಸಿದ್ಧಮಾಡುತ್ತಾರೆ. ಹುಡುಗರು ಒಂದು ಕಥೆಯನ್ನು ರಚಿಸುತ್ತಾರೆ. ಆ ಕಥೆಯೊಳಗಿನ ವರ್ಣನೆಯಂತೆ ನಕಾಶಗಳನ್ನು ಸಿದ್ಧಮಾಡುತ್ತಾರೆ. ಸಣ್ಣ ಸಣ್ಣ ಹಾಡುಗಳನ್ನು ರಚಿಸುತ್ತಾರೆ. ಈ ಆಟಗಳನ್ನು ಆಡುತ್ತಿರುವಾಗ ಭಾಷಾ, ಇತಿಹಾಸ, ಭೂಗೋಲ, ಆರೋಗ್ಯ, ಗಣಿತ, ಭೂಮಿತಿ ಮುಂತಾದ ವಿಷಯಗಳ ಜ್ಞಾನವನ್ನು ಸಂಪಾದಿಸುತ್ತಾರೆ. ಹಸ್ತ ಕೌಶಲ್ಯದಲ್ಲಿಯೂ ಅವರ ಪ್ರಗತಿಯಾಗುತ್ತದೆ. ಈ ಮೇರೆಗೆ ಕ್ರೀಡನ ಪದ್ಧತಿಯಿಂದ ಕಲಿಯುವ ಹುಡುಗರ ಅಭ್ಯಾಸವು ಬೇರೆ ಶಾಲೆಗಳ ಹುಡುಗರಿಗಿಂತಲೂ ಕಡಿಮೆಯಾಗುವುದಿಲ್ಲ. ಮತ್ತು ಸ್ವಾವಲಂಬನ, ತಿದ್ದುವಿಕೆ, ಸ್ಥಿರತೆ, ಸಹಕಾರ್ಯ, ಉದ್ಯೋಗ ಪ್ರೀತಿ, ಆತ್ಮಸಂಯಮನ ಅಚ್ಚುಕಟ್ಟುತನ, ಸೌಂದರ್ಯಾಭಿರುಚಿ ಈ ಮೊದಲಾದ ಗುಣಗಳಲ್ಲಿ ಈ ಹುಡುಗರು ಇತರ ಶಾಲೆಯ ಹುಡುಗರಿಗಿಂತ ಮಿಗಿಲಾಗಿರುತ್ತಾರೆ.

ಕ್ರೀಡನ ಪದ್ಧತಿಯಿಂದ ಶಾಲೆಯನ್ನು ನಡೆಯಿಸುವುದು ಬಳ್ಳೇ ಕೌಶಲ್ಯದ ಕೆಲಸವಾಗಿದೆ. ಈ ಪದ್ಧತಿಯಿಂದ ನಡೆಯಿಸಿದ ಶಾಲೆಗಳು ತೀರ ಕಡಿಮೆ ಇರುತ್ತವೆ. ಆದಾಗ್ಯೂ ಈ ಪದ್ಧತಿಯ ಮೂಲತತ್ವಗಳು

ಶಿಕ್ಷಣ ಶಾಸ್ತ್ರಜ್ಞರಿಗೆ ಒಪ್ಪಿಗೆಯಾದುದರಿಂದ ಉತ್ತಮ ಶಿಕ್ಷಕರಾದವರು ತಮ್ಮ ತಮ್ಮ ಶಾಲೆಗಳಲ್ಲಿ ಆ ತತ್ವಗಳನ್ನು ಉಪಯೋಗಿಸಿಕೊಳ್ಳುವ ಯತ್ನಮಾಡತಕ್ಕದ್ದು. ಈ ಪದ್ಧಯ ಮುಖ್ಯ ತತ್ವಗಳು ಕೆಳಗೆ ಕೊಡಲ್ಪಟ್ಟಿವೆ.

## ಕ್ರೀಡನ ಪದ್ಧತಿಯ ತತ್ವಗಳು

ಮಕ್ಕಳಿಗೆ ಹೆಚ್ಚು ಅಭಿರುಚಿ ಇರುವ ಕೆಲಸವನ್ನು ಅವರು ಮನಃಪೂರ್ವಕವಾಗಿ ಮಾಡುವರು. ಆದಕಾರಣ ಸಾಲೆಯ ಅಭ್ಯಾಸಕ್ರಮವು ಹುಡುಗರಿಗೆ ಅಭಿರುಚಿಯು ಉತ್ಪನ್ನವಾಗುವಂತೆ ಇರತಕ್ಕದ್ದು.

ಮಕ್ಕಳು ಮಾಡತಕ, ಕೆಲಸದ ಉದ್ದೇಶವು ಅವರಿಗೆ ತಿಳಿದಿರತಕ್ಕದ್ದು. ಅವರು ಯಾವದೊಂದು ಉದ್ದೇಶದಿಂದಲೂ ಆತ್ಮಸಂತೋಷದಿಂದಲೂ ಮಾಡಿದ ಕೆಲಸವು ಯಾವಾಗಲು ಚೆನ್ನಾಗಿ ಆಗುವುದು. ಅದನ್ನು ಮಾಡುವಾಗ ಬೇಕಾದಷ್ಟು ಶ್ರಮವಾದರೂ ಅವರಿಗೆ ಏನೂ ಎನಿಸುವುದಿಲ್ಲ.

ಆಟಗಳು ಮಕ್ಕಳಿಗೆ ಶಾರೀರಿಕ, ನೈತಿಕ, ಬೌದ್ಧಿಕ ಶಿಕ್ಷಣವನ್ನು ಕೊಡುವ ಬಹು ದೊಡ್ಡ ಸಾಧನಗಳಾಗಿವೆ. ಇವುಗಳ ಉಪಯೋಗವನ್ನು ಪಾಲಕರೂ ಶಿಕ್ಷಕರೂ ಹೆಚ್ಚಾಗಿ ಮಾಡಿಕೊಳ್ಳತಕ್ಕದ್ದು; ಸಾಲೆಯ ಹುಡುಗರ ಅಭ್ಯಾಸಕ್ರಮವು ಆಟದ ರೂಪದಿಂದ ಇರತಕ್ಕದ್ದು.

ಮಕ್ಕಳ ಸುತ್ತುಮುತ್ತಲಿನ ವಾತಾವರಣವು ಯಾವಾಗಲು ಸ್ವತಂತ್ರತೆಯುದಿದ್ದ ಹೊರತು ನಿಜವಾದ ಶಿದ್ದುವಿಕೆಯು ಅವರಲ್ಲಿ ಉತ್ಪನ್ನವಾಗುವುದಿಲ್ಲ. ಸ್ವಾತಂತ್ರ್ಯವಿದ್ದರೆ ಮಾತ್ರ ಮಕ್ಕಳಿಗೆ ತಿದ್ದುವಿಕೆಯ ಮಹತ್ವವು ಗೊತ್ತಾಗುವುದು; ಮತ್ತು ತಿದ್ದುವಿಕೆಯ ನಿಯಮಗಳನ್ನು ಪಾಲಿಸುವ ಅವಶ್ಯಕತೆಗೆ ಅವರು ಒಪ್ಪುವರು. ಈ ಮೇರೆಗೆ ಅವರಿಗೆ ಆತ್ಮಸಂಯಮನದ ರೂಢಿಯು ಹತ್ತುವುದು.

ಮಕ್ಕಳು ಸ್ವಂತಕೃತಿಯಿಂದ ಜ್ಞಾನ ಸಂಪಾದಿಸತಕ್ಕದ್ದು; ಮತ್ತು ಆ ಜ್ಞಾನವು ದೃಢವಾಗಬೇಕಾದರೆ, ಅವನ್ನು ಉಪಯೋಗದಲ್ಲಿ ತರತಕ್ಕದ್ದು. ಈ ಸಂಗತಿಯು ಶಿಕ್ಷಣದ ತಳಹದಿಯಾಗಿದೆ.

## ೬ ವರ್ಧಾ ಶಿಕ್ಷಣದ ಯೋಜನೆಯ ಸಂಕ್ಷಿಪ್ತ ಸಾರ

( ಜಯಕರ್ನಾಟಕದ ಶಿಕ್ಷಣಾಂಕದಿಂದ )

೧. ನಮ್ಮಲ್ಲಿ ಈಗ ಪ್ರಚಾರದಲ್ಲಿರುವ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮವು ಅನೇಕ ರೀತಿಯಿಂದ ಸಮರ್ಪಕವಾಗಿಲ್ಲ. ಅದರಲ್ಲಿ ಸ್ವಾವಲಂಬನ ಪ್ರಯತ್ನ, ಸ್ವಾತಂತ್ರ್ಯಾಪೇಕ್ಷೆ ಇಲ್ಲ. ಈ ವಿದ್ಯಾಭ್ಯಾಸ ಕ್ರಮದ ಬದಲು, ಬಲಿಷ್ಠರೂ ಸ್ವಾವಲಂಬಿಗಳೂ ಸತ್ಯಕಾಮರೂ, ಅಹಿಂಸಾ ನಿಷ್ಠರೂ ಆದ ಪ್ರಜೆಗಳನ್ನು ಸಿದ್ಧಪಡಿಸುವ ಒಂದು ಹೊಸ ಶಿಕ್ಷಣ ಕ್ರಮವನ್ನು ಏರ್ಪಡಿಸುವುದೇ ವರ್ಧಾ ಶಿಕ್ಷಣ ಯೋಜನೆಯ ಉದ್ದೇಶವು.

೨. ಯಾವದಾದರೊಂದು ಕಸಬನ್ನೇ ವಿದ್ಯಾಭ್ಯಾಸದ ಮೂಲವಾಗಿಟ್ಟುಕೊಂಡು ಅದರ ಮೂಲಕವಾಗಿ ವಿದ್ಯೆಯನ್ನು ಕಲಿಸುವುದು ಈ ಶಿಕ್ಷಣದ ಯೋಜನೆಯ ಮುಖ್ಯ ವೈಶಿಷ್ಟ್ಯವು. ನೂಲುವುದು, ನೇಯುವುದು, ಬಡಿಗತನ, ಬೇಸಾಯ, ತೋಟದ ಕೆಲಸ, ಚರ್ಮದ ಕೆಲಸ ಇತ್ಯಾದಿ ಕಸಬುಗಳಲ್ಲಿ ಯಾವದಾದರೊಂದನ್ನು ಪ್ರತಿ ಒಬ್ಬ ವಿದ್ಯಾರ್ಥಿಯು ಏಳು ವರ್ಷ ಅವಶ್ಯವಾಗಿ ಕಲಿಯತಕ್ಕದ್ದು. ಆ ಕಸಬನ್ನು ಕಲಿಯುತ್ತಿರುವಾಗಲೇ ಅದಕ್ಕೆ ಸಂಬಂಧಪಡಿಸಿ ಗಣಿತ, ಸಮಾಜ ವಿಜ್ಞಾನ, ಪ್ರಕೃತಿ ವಿಜ್ಞಾನ, ಭಾಷೆ, ಚರಿತ್ರೆ, ಚಿತ್ರಕಲೆ, ಸಂಗೀತ ಮುಂತಾದ ವಿದ್ಯೆಗಳನ್ನೂ ಕಲೆಗಳನ್ನೂ ಕಲಿಯಬೇಕು. ಹೀಗೆ ವಿದ್ಯಾರ್ಥಿಯು ಏಳು ವರ್ಷ ವಿದ್ಯೆಯನ್ನು ಕಲಿತು ಮುಂದಿನ ಜೀವನೋಪಾಯಕ್ಕೆ ಒಂದು ಮಾರ್ಗವನ್ನು ಮಾಡಿಕೊಳ್ಳತಕ್ಕದ್ದು. ಸದ್ಯದ ಮ್ಯಾಟ್ರಿಕ್ಯೂಲೇಶನ ಪರೀಕ್ಷೆಯವರಷ್ಟು ಯೋಗ್ಯತೆಯನ್ನು ಪಡೆಯತಕ್ಕದ್ದು.

ವರ್ಧಾ ಶಿಕ್ಷಣದ ಯೋಜನೆಯ ಪ್ರಕಾರ ಪ್ರತಿ ಒಬ್ಬ ವಿದ್ಯಾರ್ಥಿಯು ಮಾತೃಭಾಷೆ, ರಾಷ್ಟ್ರಭಾಷೆಯಾದ ಹಿಂದೀ ಈ ಎರಡು ಭಾಷೆಗಳನ್ನು ಕಲಿಯಲಿಕ್ಕೆಬೇಕು. ಹಿಂದಿಯನ್ನು ಕೊನೆಯ ಎರಡು ವರ್ಷಗಳ ಮಟ್ಟಿಗೆ ಕಲಿತರೆ ಸಾಕು.

೪. ಮೊದಲಿನ ಐಯ್ದು ವರ್ಷಗಳವರೆಗೆ ಬಾಲಕ ಬಾಲಿಕೆಯರಿಗೆ ಒಂದೇ ಶಿಕ್ಷಣ. ಅದು ಮಕ್ಕಳ ೭ನೆಯ ವರ್ಷದ ವಯಸ್ಸಿನಿಂದ ಪ್ರಾರಂಭವಾಗುವುದು. ಐಯ್ದು ವರ್ಷದ ಶಿಕ್ಷಣದ ತರುವಾಯ ಹುಡುಗೆಯರು ಗೃಹಕಾರ್ಯವನ್ನು ಕಲಿಯಬಹುದು. ಹುಡುಗನು ಮುಂದೆ ಎರಡು ವರ್ಷಗಳವರೆಗೆ ತಾನು ಕೈಕೊಂಡ ಉದ್ಯೋಗವನ್ನೂ ಅದಕ್ಕೆ ಸಂಬಂಧಪಟ್ಟ ಇತರ ವಿಷಯಗಳನ್ನೂ ಕಲಿಯಲಿಕ್ಕೆ ಬೇಕು.

೫. ಒಂದು ವರ್ಷದಲ್ಲಿ ಪಾಠಶಾಲೆಯು ಸುಮಾರು ೨೪೦ ದಿನ ನಡೆಯತಕ್ಕದ್ದು. ಪ್ರತಿ ದಿವಸ ಸಾಲೆಯ ಕೆಲಸವು ೫ ತಾಸು ೨೦ ನಿಮಿಷ ನಡೆಯುವುದು. ಅದರಲ್ಲಿ ಮೂಲ ಕಸಬಿಗೆ ೩ ತಾಸು ೨೦ ನಿಮಿಷ, ಸಂಗೀತ, ಚರಿತ್ರೆ, ಗಣಿತ ಈ ಮೂರು ವಿಷಯಗಳಿಗೆ ೪೦ ನಿಮಿಷ, ಮಾತೃಭಾಷೆ ೪೦ ನಿಮಿಷ, ಸಮಾಜ ವಿಜ್ಞಾನ ಪ್ರಕೃತಿ ವಿಜ್ಞಾನ ಈ ವಿಷಯಗಳಿಗೆ ೩೦ ನಿಮಿಷ, ವ್ಯಾಯಾಮ, ವಿಶ್ರಾಂತಿಗಳಿಗೆ ಹತ್ತು ಹತ್ತು ನಿಮಿಷ, ಈ ಪ್ರಕಾರ ಕಾಲವನ್ನು ವಿಭಾಗಿಸಲಾಗಿದೆ.

೬. ಈ ಶಿಕ್ಷಣ ಯೋಜನೆಯಲ್ಲಿ ಪರೀಕ್ಷೆಗಳಿಲ್ಲ; ಆದರೆ ಪ್ರತಿ ದಿನವೂ ಹುಡುಗನು ಮಾಡಿದ ಕೆಲಸ ಹಾಗು ಕಲಿತ ವಿಷಯ ಇವುಗಳನ್ನು ಬರೆದಿಟ್ಟು, ಅದರ ಆಧಾರದ ಮೇಲೆ ಅವನ ಯೋಗ್ಯತೆಯನ್ನು ಗೊತ್ತು ಮಾಡುವರು. ಹೀಗೆ ಗೊತ್ತು ಮಾಡುವ ಅಧಿಕಾರವನ್ನು ವರ್ಧಾ ಶಿಕ್ಷಣ ಸಮಿತಿಯವರು ಶಾಲಾಮಂಡಲಕ್ಕೆ ಒಪ್ಪಿಸಿರುತ್ತಾರೆ.

೭. ವರ್ಧಾಶಿಕ್ಷಣದ ಯೋಜನೆಯು ಬರಿಯ ವಿದ್ಯಾರ್ಥಿಗಳ ಶಿಕ್ಷಣವಷ್ಟೇ ಅಲ್ಲ; ಅದಕ್ಕೆ ಸಾಧನವಾಗಿ ಶಿಕ್ಷಕರ ಶಿಕ್ಷಣವೂ, ಮೇಲ್ವಿಚಾರಕರ ಶಿಕ್ಷಣವೂ ಅದರಲ್ಲಿ ಸೇರಿವೆ. ಪ್ರತಿ ಒಬ್ಬ ಶಿಕ್ಷಕನು ಒಂದು ಕಸಬು, ಮತ್ತು ಶಿಕ್ಷಣದ ಇತರ ವಿಷಯಗಳು ಇವುಗಳಲ್ಲಿ ಮೂರು ವರ್ಷ ಶಿಕ್ಷಣ ಪಡೆಯಬೇಕು. ಅವನು ಮೇಲ್ವಿಚಾರಕನಾಗ ಬೇಕಾದರೆ ಈ ಶಿಕ್ಷಣವನ್ನು ಪಡೆಯುವುದಲ್ಲದೆ ಎರಡು ವರ್ಷ ಸಾಲೆಯ ಕೆಲಸಗಳನ್ನು ದಕ್ಷತೆಯಿಂದ ನಿರ್ವಹಿಸಿರಬೇಕು.

# ೩೦ನೆಯ ಪ್ರಕರಣ

## ಉಪಸಂಹಾರ

ಯಾವದೊಂದು ಉದ್ಯೋಗವನ್ನು ಮಾಡಿ ಅದರಲ್ಲಿ ಹೆಸರು ಪಡೆಯಬೇಕಾದರೆ ಮೊದಲು ಆ ಉದ್ಯೋಗದ ಜ್ಞಾನವನ್ನು ಸಂಪಾದಿಸ ತಕ್ಕದ್ದು. ತರುವಾಯ, ಆ ಉದ್ಯೋಗವನ್ನು ಮಾಡಿ ಅನುಭವವನ್ನು ಪಡೆದಂಥವರ ಕೈಕೆಳಗೆ ಕೆಲವು ವರ್ಷ ಕೆಲಸ ಮಾಡಿ ಯೋಗ್ಯತೆಯನ್ನು ಸಂಪಾದಿಸಿಕೊಳ್ಳತಕ್ಕದ್ದು. ಅಂದರೆ ಮಾತ್ರ ಅದರಲ್ಲಿ ಯಶ ಪಡೆಯುವ ಸಂಭವವುಂಟು. ವಕೀಲರು, ಡಾಕ್ಟರರು, ಇಂಜನೀಯರರು ಇದೇ ಕ್ರಮವನ್ನು ಅನುಸರಿಸುತ್ತಾರೆ. ಶಿಕ್ಷಕನ ಉದ್ಯೋಗವಾದರೂ ವಕೀಲ ಮೊದಲಾದವರ ಉದ್ಯೋಗಕ್ಕಿಂತ ಕಡಿಮೆ ಮಹತ್ವದ್ದೆಂದು ಹೇಳಲಾಗುವುದಿಲ್ಲ. ಮತ್ತು ಶಿಕ್ಷಕನ ಉದ್ಯೋಗ ಮಾಡುವವರಿಗೆ ಬುದ್ಧಿಯು ಕಡಿಮೆಯಿದ್ದರೂ ಸಾಗುವುದೆಂಬಂತಿಲ್ಲ. ಅಂದ ಮೇಲೆ ವಕೀಲರು ಮೊದಲಾದವರು ತಮ್ಮ ಉದ್ಯೋಗದ ಜ್ಞಾನವನ್ನು ಸಂಪಾದಿಸುವಂತೆಯೂ ಅನುಭವಿಕರಾದ ಉದ್ಯೋಗಸ್ಥರ ಕೈಕೆಳಗೆ ಕೆಲವು ದಿವಸ ದುಡಿದು ಆ ಉದ್ಯೋಗದ ಪಾತ್ರತೆಯನ್ನು ಸಂಪಾದಿಸುವಂತೆಯೂ ಶಿಕ್ಷಕರೂ ತಮ್ಮ ಉದ್ಯೋಗದ ಜ್ಞಾನವನ್ನೂ ಆ ಉದ್ಯೋಗ ಮಾಡುವ ಪಾತ್ರತೆಯನ್ನೂ ಸಂಪಾದಿಸುವುದು ಅವಶ್ಯವಿರುತ್ತದೆ. ಹೀಗಿದ್ದರೂ ಎಷ್ಟೋ ಜನರು ತಪ್ಪು ತಿಳುವಳಿಕೆಯಿಂದ ಶಿಕ್ಷಕರ ಉದ್ಯೋಗ ಮಾಡುವವರು ತಮ್ಮ ಉದ್ಯೋಗದ ಜ್ಞಾನವನ್ನು ಸಂಪಾದಿಸುವ ಅವಶ್ಯಕತೆಯು ಇಲ್ಲೆಂತಲೂ, ಕಲಿಸತಕ್ಕ ವಿಷಯದ ಜ್ಞಾನವಿದ್ದರೆ ಸಾಕು, ಆ ವಿಷಯವನ್ನು ಸಹಜವಾಗಿ ಕಲಿಸಬಹುದೆಂದು ತಿಳಿಯುತ್ತಾರೆ. ಶಿಕ್ಷಣಶಾಸ್ತ್ರದ ಅಲ್ಪ ಸ್ವಲ್ಪ ಜ್ಞಾನವಿದ್ದವರು ಹೀಗೆ ಎಂದೂ ತಿಳಿಯಲಾರರು. ವಿಷಯ ಜ್ಞಾನವೂ ವಿಷಯವನ್ನು

ಕಲಿಸುವ ಜ್ಞಾನವೂ ಬೇರೆ ಬೇರೆಯಾಗಿರುವವು. ಇದಲ್ಲದೆ ಚಿಕ್ಕ ಮಕ್ಕಳಿಗೆ ಬೇರೆ ಬೇರೆ ವಿಷಯುಗಳನ್ನು ಕಲಿಸುವುದಿಷ್ಟೇ ಶಿಕ್ಷಕನ ಕೆಲಸವಲ್ಲ; ಅವರ ಶಾರೀರಿಕ ಮಾನಸಿಕ ಶಕ್ತಿಗಳನ್ನು ವಿಕಾಸಪಡಿಸುವುದೂ ಅವರು ವ್ಯವಹಾರಕ್ಕೆ ತಕ್ಕವರಾಗುವಂತೆ ಮಾಡುವುದೂ ಅವರಲ್ಲಿ ಒಳ್ಳೇ ಶೀಲವನ್ನುಂಟುಮಾಡುವುದೂ. ಅವರು ತಮ್ಮ ಮುಂದಿನ ಆಯುಷ್ಯದಲ್ಲಿ ಮಾಡತಕ್ಕ ವಿವಿಧ ಕರ್ತವ್ಯಗಳನ್ನು ಸರಿಯಾಗಿ ಜರಗಿಸಲಿಕ್ಕೆ ತಕ್ಕವರನ್ನು ಮಾಡುವುದೂ ಇತ್ಯಾದಿ ಕರ್ತವ್ಯಗಳು ಶಿಕ್ಷಕನ ಕೆಲಸದಲ್ಲಿ ಸಮಾವೇಶವಾಗುವುವು. ಈ ಮಹತ್ವದ ಕರ್ತವ್ಯಗಳನ್ನು ಜರಗಿಸಲಿಕ್ಕೆ ಶಿಕ್ಷಕನು ತನ್ನ ಉದ್ಯೋಗದ ಶಾಸ್ತ್ರೀಯ ಜ್ಞಾನವನ್ನೂ ಸಂಪಾದಿಸುವುದಲ್ಲದೆ ಅನುಭವಿಕರಾದ ಶಿಕ್ಷಕರ ಮೇಲ್ವಿಚಾರಣೆಯ ಕೆಳಗೆ ಕೆಲಸ ಮಾಡಿ ಪಾತ್ರತೆಯನ್ನು ಸಂಪಾದಿಸಿಕೊಳ್ಳತಕ್ಕದ್ದು. ಅಂದರೆ ಮಾತ್ರ ಆವರಿಂದ ಈ ಹೊಣೆಗಾರಿಕೆಯ ಕೆಲಸವನ್ನು ಒಳ್ಳೇ ರೀತಿಯಿಂದ ನಿರ್ವಹಿಸಲಿಕ್ಕೆ ಶಕ್ಯವಾಗುವುದು. ಇದಕ್ಕಾಗಿಯೇ ಸರಕಾರದವರು ಶಿಕ್ಷಕ ಶಿಕ್ಷಣಾಲಯುಗಳನ್ನು ಸ್ಥಾಪಿಸಿರುವರು.

ಮೇಲಿನ ವಿಚಾರದಿಂದ ಸ್ಪಷ್ಟವಾಗುವುದೇನಂದರೆ: ಶಿಕ್ಷಕನು ತನ್ನ ಉದ್ಯೋಗದ ಶಾಸ್ತ್ರೀಯ ಜ್ಞಾನವನ್ನೂ ಪ್ರಯೋಗ ಜ್ಞಾನವನ್ನೂ ಸಂಪಾದಿಸಲಿಕ್ಕೆಬೇಕು. ಕೇವಲ ಶಾಸ್ತ್ರೀಯ ಜ್ಞಾನವನ್ನು ಸಂಪಾದಿಸಿದ ಶಿಕ್ಷಕನು ವಿದ್ಯಾರ್ಥಿಗಳಿಗೆ ಯಾವದೊಂದು ವಿಷಯುವನ್ನು ಮನೋರಂಜಕವಾಗುವಂತೆ ಕಲಿಸಲಾರನು. ಮತ್ತು ಪ್ರಯೋಗ ಜ್ಞಾನವನ್ನು ಮಾತ್ರ ಸಂಪಾದಿಸಿದಂಥ ಅಂದರೆ ಬಹುಕಾಲದ ವರೆಗೆ ಶಾಸ್ತ್ರೀಯ ಜ್ಞಾನವಿಲ್ಲದೆ ಕೇವಲ ಕಲಿಸುವ ಕೆಲಸವನ್ನೇ ಮಾಡಿದ ಶಿಕ್ಷಕನಿಗೆ ತನ್ನ ಕೆಲಸದಲ್ಲಿ ಒಂದು ವೇಳೆ ಲೌಕಿಕ ಯಶವು ದೊರಕುತ್ತಿದ್ದರೂ ತನ್ನಿಂದ ಆಗುತ್ತಿರುವ ತಪ್ಪುಗಳು ಗೊತ್ತಾಗುವುದಿಲ್ಲ. ಅಲ್ಪ ಶ್ರಮದಿಂದ ಬಹು ಫಲ ಪಡೆದುಕೊಳ್ಳುವ ಚಾತುರ್ಯವು ತಿಳಿಯುವುದಿಲ್ಲ. ಇದಲ್ಲದೆ ಶಿಕ್ಷಣಶಾಸ್ತ್ರಜ್ಞರು ಬಹುಕಾಲದಿಂದ ಶ್ರಮಬಟ್ಟು ಕಂಡು ಹಿಡಿದ ಹೊಸ ಹೊಸ ಶಿಕ್ಷಣದ ಪದ್ಧತಿಗಳ ಜ್ಞಾನವು ಆತನಿಗೆ ಇರುವು

ದಿಲ್ಲಾದ ಕಾರಣ ಅವನ ಕೆಲಸವು ಗುಡ್ಡಕ್ಕೆ ಕಲ್ಲು ಹೊತ್ತಂತೆ ಆಗುವುದು. ಆ ಶಿಕ್ಷಕನು ಶಿಕ್ಷಣದ ನಿಜವಾದ ಧ್ಯೇಯವನ್ನು ಕೊನೆಗಾಣಿಸಲಾರನು. ಸಾರಾಂಶ ಶಿಕ್ಷಣದ ಹೋರೆಯನ್ನು ಕೈಕೊಳ್ಳುವ ಶಿಕ್ಷಕರು ಶಿಕ್ಷಣದ ಮೂಲತತ್ವಗಳ ಶಾಸ್ತ್ರೀಯ ಜ್ಞಾನವನ್ನು ಆ ಮೂಲತತ್ವಗಳಿಗನುಸರಿಸಿ ಬೇರೆ ಬೇರೆ ವಿಷಯಗಳನ್ನು ಕಲಿಸುವ ಜ್ಞಾನವನ್ನೂ ಅವಶ್ಯವಾಗಿ ಸಂಪಾದಿಸಲಿಕ್ಕೆ ಬೇಕು. ಈ ಎರಡೂ ಬಗೆಯ ಜ್ಞಾನವನ್ನು ಸಂಪಾದಿಸಲಿಕ್ಕೆ ಶಿಕ್ಷಕರಿಗೆ ಈ ಪುಸ್ತಕದಿಂದ ತಕ್ಕ ಸಹಾಯ್ಯವಾಗುವುದು.

ಕಡೆಗೆ ಶಿಕ್ಷಕರಿಗೂ ಪಾಲಕರಿಗೂ ಒಂದು ಮಹತ್ವದ ವಿಜ್ಞಾಪನೆಯನ್ನು ಮಾಡಿಕೊಂಡು ಅವರ ಅಪ್ಪಣೆಯನ್ನು ಪಡೆಯುತ್ತೇನೆ.

ಮಕ್ಕಳ ಶಿಕ್ಷಣದ ಕಾರ್ಯವು ಬಹಳ ಪವಿತ್ರವಾದದ್ದೂ ಹೊಣೆಗಾರಿಕೆಯುಳ್ಳದ್ದೂ ಆಗಿದೆ. ಶಿಕ್ಷಕರು ಇದನ್ನು ಒಳ್ಳೇ ಮನಮುಟ್ಟಿ ಮಾಡತಕ್ಕದ್ದು. ಮುಖ್ಯವಾಗಿ ಸಾಲೆಯಲ್ಲಿಯೂ ಮನೆಯಲ್ಲಿಯೂ ಮಕ್ಕಳ ಸುತ್ತುಮುತ್ತಲಿನ ವಾತಾವರಣವು ಸ್ವಾತಂತ್ರ್ಯವುಳ್ಳದ್ದಿರಬೇಕು; ತಿದ್ದುವಿಕೆಯು ಪ್ರೇಮವುಳ್ಳದ್ದಿರಬೇಕು. ಶಿಕ್ಷಣವು ಅವರ ಸಹಜಪ್ರವೃತ್ತಿಗಳಿಗನುಸರಿಸಿ ಸಾಗುತ್ತಿರಬೇಕು; ಇಂಥ ಪರಿಸ್ಥಿತಿಯಲ್ಲಿ ದೊರೆಯುವ ಶಿಕ್ಷಣವು ನಿಜವಾದ ಶಿಕ್ಷಣವೆಂದು ಹೇಳಬಹುದು. ಈ ಪುಸ್ತಕದಲ್ಲಿ ಅಲ್ಲಲ್ಲಿ ಮಾಡಿದ ವಿವೇಚನೆಗಳಲ್ಲಿ ಮುಖ್ಯವಾಗಿ ಇದೇ ಸಂಗತಿಯು ಆಗಾಗ್ಗೆ ವಿವರಿಸಲ್ಪಟ್ಟಿದೆ. ಅವುಗಳನ್ನು ತರುಣ ಶಿಕ್ಷಕರು ಮನಮುಟ್ಟಿ ಓದಿ ಮನನ ಮಾಡಿಕೊಂಡು ತಮ್ಮ ನಿತ್ಯದ ಕೆಲಸದಲ್ಲಿ ಉಪಯೋಗಿಸಿಕೊಂಡರೆ ನನ್ನ ಶ್ರಮವು ಸಫಲವಾಗುವುದೆಂದು ತಿಳಿಯುತ್ತೇನೆ.

“ ಕ್ಲೇಶಃ ಫಲೇನ ಹಿ ಪುನರ್ನವತಾಂ ವಿಧತ್ತೇ. ”